# ಸುವಾರ್ತೆ ಪ್ರಸಂಗಗಳು

# GOSPEL SERMONNETTES

(KANNADA)

*Author:*

J.C. CHOATE

*Translator:*

RATHNAKAR

World Literature Publications

Satya Vani P.O.Box. 80, Kakinada, A.P.-533 001

# ಪರಿಚಯ

ಸುವಾರ್ತೆ ಪ್ರಸಂಗಗಳು ಎಂಬ ಈ ಪುಸ್ತಕವನ್ನು J.C. CHOATE ರವರು ಐವತ್ತು ವರ್ಷಗಳ ಹಿಂದೆ ಆಂಗ್ಲ ಭಾಷೆಯಲ್ಲಿ ಬರೆದರು. ಪ್ರಪಂಚದ ಅನೇಕ ದೇಶಗಳಲ್ಲಿ ಇದು ಆಂಗ್ಲ ಭಾಷೆಯಲ್ಲಿಯೂ, ನಂತರ ಆಯಾ ದೇಶ ಭಾಷೆಗಳಲ್ಲಿ ಭಾಷಾಂತರ ಮಾಡಿ ಕೊಡಲ್ಪಟ್ಟಿದೆ.

ಇದನ್ನು ಜಾಷುವಾ ಗೂಟಂ ರವರು ನಲವತ್ತು ವರ್ಷಗಳ ಹಿಂದೆ ತೆಲುಗಿನಲ್ಲಿ ಮುದ್ರಿಸಿದರು. ನಂತರ ಇದು ಪುನರ್ ಮುದ್ರಿಸಲಾಯಿತು. ಇಪ್ಪತ್ತು ವರ್ಷಗಳ ಹಿಂದೆ ಕನ್ನಡ ಭಾಷೆಯಲ್ಲಿ ಪ್ರಕಟಿಸುವದಕ್ಕೆ ಮಾಡಿದ ಪ್ರಯತ್ನವು ಸೈತಾನನಿಂದ ಭಂಗಪಟ್ಟಿತು. ಆದರೆ ಈಗ ಸಹೋದರ ರತ್ನಕರ್ ಮತ್ತು ಅವರ ವೃಂದದವರು ಸೇರಿ ಕನ್ನಡಕ್ಕೆ ಇದನ್ನು ಭಾಷಾಂತರ ಮಾಡಿದಾಗ ಜಾಷೂವಾ ಗೂಟಂ ರವರು ಇದನ್ನು ಮುದ್ರಿಸಿ ನಿಮಗೆ ಒದಗಿಸಲಾಯಿತು. ತೆಲುಗಿನಿಂದ ಕನ್ನಡಕ್ಕೆ ಭಾಷಾಂತರ ಮಾಡಿದ ಸಹೋದರರಿಗೆ ನನ್ನ ವಂದನೆಗಳು.

ಸುವಾರ್ತೆ ಪ್ರಸಂಗಗಳು ಎಂಬ ಈ ಪುಸ್ತಕವು ಸತ್ಯವನ್ನು ತಿಳಿದುಕೊಳ್ಳುವುದಕ್ಕೆ ನಿಮಗೆ ತಪ್ಪದೇ ಸಹಾಯ ಮಾಡುತ್ತದೆ.

ನಿಮಗೆ ಸತ್ಯವೇದವನ್ನು ಕುರಿತು ಹೆಚ್ಚಾಗಿ ತಿಳಿದುಕೊಳ್ಳಲು ಮತ್ತು ಅದ್ಯಾಯನ ಮಾಡಲು ಕನ್ನಡ ಭಾಷೆಯಲ್ಲಿ ನಾವು ಒದಗಿಸುವ "ಸತ್ಯವೇದ ಅದ್ಯಾಯನ ಪಾಠಗಳನ್ನು" ಪೋಸ್ಟ್ ಮೂಲಕ ಪಡೆಯಲು ನಮ್ಮ ವಿಳಾಸವನ್ನು ಸಂಪರ್ಕಿಸಿ.

| | |
|---|---|
| ಸತ್ಯ ವಾಣಿ | ಜಾಷುವಾ ಗೂಟಂ |
| ಕಾಕಿನಾಡ | ನವಂಬರ್2017 |

# ವಿಷಯಗಳು


| | | Page |
|---|---|---|
| 1. | ಬೈಬಲ್ ದೇವರ ವಾಕ್ಯವೆಂದು ನೀನು ಹೇಗೆ ನಂಬಬೇಕು | 1 |
| 2. | ಯೇಸು ಕ್ರಿಸ್ತನು ದೇವರ ಮಗನೆಂದು ನೀನು ಹೇಗೆ ನಂಬಬೇಕು | 4 |
| 3. | ದೇವರ ಮಗನು | 7 |
| 4. | ವಿಗ್ರಹಾರಾಧನೆ ಪಾಪ | 11 |
| 5. | ಯೇಸು ಕ್ರಿಸ್ತನ ರಕ್ತ | 14 |
| 6. | ಯೇಸು ಕ್ರಿಸ್ತನು ಹೇಗೆ ಮರಣ ಹೊಂದಿದನು | 18 |
| 7. | ಕ್ರಿಸ್ತನ ಸಭೆಯನ್ನು ಕುರಿತು ನೀನು ಎಂದಾದರೊ ಕೇಳಿದ್ದೀಯಾ? | 21 |
| 8. | ಕ್ರಿಸ್ತನ ಸಭೆ ಅಂದರೇನು? | 24 |
| 9. | ಹೊಸ ಒಡಂಬಡಿಕೆಯ ಸಭೆ | 27 |
| 10. | ಕ್ರಿಸ್ತನ ಸಭೆ ಭಾರತದಲ್ಲಿ ಎಷ್ಟು ಕಾಲ ನಿಲ್ಲುತ್ತದೆ | 30 |
| 11. | ನಾಲ್ಕು ಬೈಬಲ್ ಪ್ರಶ್ನೆಗಳು | 33 |
| 12. | ಕ್ರಿಸ್ತನ ಸಭೆಯನ್ನು ನಿಮ್ಮ ಪಟ್ಟಣದಲ್ಲಿ ಅಥವಾ ನಿಮ್ಮ ಊರಿನಲ್ಲಿ ಹೇಗೆ ಸ್ಥಾಪಿಸಬಹುದು ? | 36 |
| 13. | ಕ್ರಿಸ್ತನ ಹೆಸರು | 39 |
| 14. | ನೀನೊಬ್ಬ ಕ್ರೈಸ್ತವನಾಗಿ ಮಾತ್ರ ಇರಬಹುದು | 41 |
| 15. | ಕ್ರೈಸ್ತತ್ವ ನಿನಗೇನು ಮಾಡಬಹುದು | 44 |
| 16. | ಕ್ರೈಸ್ತವರಲ್ಲಿ ಕೆಲವರು | 47 |
| 17. | ರಕ್ಷಣೆ ಹೊಂದುವದು ಹೇಗೆ ? | 50 |
| 18. | ರಕ್ಷಣೆಯ ಮಾರ್ಗ | 54 |
| 19. | ಕ್ರಿಸ್ತನಲ್ಲಿಗೆ ಹೆಜ್ಜೆ | 57 |
| 20. | ಹೊಸದಾಗಿ ಹುಟ್ಟುವದು | 60 |
| 21. | ಹೊಸ ಒಡಂಬಡಿಕೆಯ ದೀಕ್ಷಾಸ್ನಾನ | 63 |

| | | |
|---|---|---|
| 22. | ದೀಕ್ಷಾಸ್ನಾನದ ಪ್ರಯೋಜನ | 66 |
| 23. | ಶಿಲುಬೆಯ ಮೇಲಿದ್ದ ಕಳ್ಳ | 70 |
| 24. | ಚಿಕ್ಕ ಮಕ್ಕಳ ದೀಕ್ಷಾಸ್ನಾನ | 73 |
| 25. | ಒಬ್ಬನು ಮತ್ತೊಂದು ಸಾರಿ ದೀಕ್ಷಾಸ್ನಾನ ಮಾಡಿಸಿ ಕೊಳ್ಳಬಹುದಾ....! | 76 |
| 26. | ನಂಬಿಕೆಯಿಂದ ಉಂಟಾಗುವ ರಕ್ಷಣೆ | 78 |
| 27. | ಹೊಸ ಒಡಂಬಡಿಕೆಯ ಐಕ್ಯತೆ | 82 |
| 28. | ಹೊಸ ಒಡಂಬಡಿಕೆಯ ಆರಾಧನೆ | 85 |
| 29. | ವಾರದ ಮೊದಲನೆ ದಿನ | 88 |
| 30. | ಜಾರಿಯಲ್ಲಿರುವ ನಿಬಂಧನೆ ಯಾವುದು | 91 |
| 31. | ಪವಿತ್ರಾತ್ಮ ವರಗಳ ಅಳತೆಗಳು | 94 |
| 32. | ಅನ್ಯಭಾಷೆಗಳು | 97 |
| 33. | ಮತ ಸಂಬಂದವಾದ ನಾಮಗಳು/ಹೆಸರುಗಳು | 100 |
| 34. | ಸ್ವತಂತ್ರ ಭೋದಕರು ಮತ್ತು ಸಭೆಗಳು | 103 |
| 35. | ಕ್ರಿಸ್ತನ 2ನೇ ಬರೋಹಣ | 106 |

# 1. ಬೈಬಲ್ ದೇವರ ವಾಕ್ಯವೆಂದು ನೀನು ಹೇಗೆ ನಂಬಬೇಕು. ?
## ( Why you should Believe the Bible to be the Word of God )

ಪ್ರಪಂಚದಲ್ಲಿ ಕೋಟ್ಯಾನು ಕೋಟಿ ಪ್ರಜೆಗಳು ಬೈಬಲ್ ಅನ್ನು ದೇವರ ವಾಕ್ಯವೆಂದು ನಂಬುವರು. ಇದು ಒಂದು ದೊಡ್ಡ ಸತ್ಯವೆಂದು ಅವರು ಅಂಗೀಕರಿಸುವರು ಆದರೆ ಕೆಲವರು ಅದನ್ನು ಶಂಕಿಸುತ್ತಾರೆ. ಕೆಲವರು ಹುಟ್ಟಿದಾಗಿನಿಂದ ಬೋರೊಂದು ಮಾರ್ಗದಲ್ಲಿ ನಡೆಯುತ್ತಿರುವವರು ಬೈಬಲನ್ನು ತಿರಸ್ಕರಿಸುವರು. ನೀನು ಮೇಲೆ ಹೇಳಿದ ಎರಡು ಗುಂಪಿನಲ್ಲಿ ಯಾವುದಾದರು ಒಂದಕ್ಕೆ ಸರಿ ಹೊಂದುವವನಾದರೆ ನೀನು ಬೈಬಲ್ ದೇವರ ವಾಕ್ಯವೆಂದು ಹೇಗೆ ನಂಬಬಹುದು ಎಂದು ಸಂಕ್ಷೇಪ್ತವಾಗಿ ಇಲ್ಲಿ ವಿವರಿಸಲಾಗಿದೆ.

1. ಬೈಬಲ್ ದೇವರ ವಾಕ್ಯವೆಂದು ಹೇಳಿಕೊಳ್ಳುತ್ತದೆ. ಅದು ಯೆಹೋವನ ವಾಕ್ಯವೆಂದು ಹೇಳಲ್ಪಡುತ್ತದೆ (ಯೆಶಾಯ14:1). ಮನುಷ್ಯರು ಪವಿತ್ರಾತ್ಮನ ಪ್ರೇರಿತರಾಗಿ ದೇವರಿಂದ ಹೊಂದಿದ್ದನ್ನೇ ಮಾತಾಡಿದರು. ಎಂದು ಅಪೊಸ್ತಲನಾದ ಪೇತ್ರನು ಹೇಳಿದ್ದಾನೆ (2ಪೇತ್ರ1:21). ಕ್ರಿಸ್ತನು ಹಳೆ ಒಡಂಬಡಿಕೆಯಲ್ಲಿರುವ ವಚನಗಳನ್ನು ದೇವರ ಮಾತುಗಳೆಂದು ಎತ್ತಿ ತೋರಿಸಿದ್ದಾನೆ (ಯೋಹಾನ10:35). ಪ್ರತಿಯೊಂದು ಶಾಸ್ತ್ರವು ದೈವ ಪ್ರೇರಿತವಾದದ್ದು ಎಂದು ಅಪೊಸ್ತಲನಾದ ಪೌಲನು ಹೇಳಿದ್ದಾನೆ (2ತಿಮೊಥೆ 3:16,17).

2. ಬೈಬಲ್ ಪುರಾತತ್ವ ಶಾಸ್ತ್ರ ಪರಿಶೋಧನೆಗಳಿಂದ ಸತ್ಯವಾದದೆಂದು ನಿರೂಪಿಸಲ್ಪಟ್ಟಿದೆ. ಈ ಪರಿಶೋಧನೆಗಳಿಂದಾಗಿ ಕ್ರಿ.ಪೂ.ಸಾವಿರಾರು ವರ್ಷಗಳಿಂದ ನಡೆದ ಸಂಗತಿಗಳನ್ನು ಕುರಿತು ಬೈಬಲ್ ಹೇಳಿದ್ದು ಸತ್ಯವಾದದೆಂದು ರುಜುವಾತಾಗಿದೆ, ಬೈಬಲ್ ಹೇಳಿವ ಜಲಪ್ರಳಯದಂತಹ ಚರಿತ್ರೆಯನ್ನು ಸಂದೇಹ ಪಡುವವರು ಕೆಲವರಿದ್ದಾರೆ. ಆದರೆ 1872ರಲ್ಲಿ ಜಾರ್ಜ್‌ಸ್ಮಿತ್ ಎಂಬಾತನು ಕಂಡುಹಿಡಿದ ಬಾಬೇಲಿನ ಕಲ್ಲಿನ ಶಿಲಾ ಶಾಸನಗಳು ಸಹ ಈ ಮಹಾ ಜಲಪ್ರಳಯವನ್ನು ಕುರಿತು ಹೇಳುತ್ತವೆ ಇಂತಹ ಅನೇಕ ಉದಾಹರಣೆಗಳನ್ನು ನಾವು ಕೊಡಬಹುದು.

3. ಬೈಬಲ್ ಬೋಗೋಳ ಶಾಸ್ತ್ರದೊಂದಿಗೆ ಏಕೀಭವಿಸುತ್ತದೆ. ಅನೇಕ ಪರ್ವತಗಳು, ನದಿಗಳು, ಪಟ್ಟಣಗಳು, ಯಾವ ಯಾವ ಹೆಸರುಗಳಿಂದ ಕರೆಯಲ್ಪಡುತ್ತಿದೆಯೊ ಅದೇ ಹೆಸರುಗಳನ್ನು ಬೈಬಲ್‌ನಲ್ಲಿ ಸಹ ಕಂಡು ಬರುತ್ತವೆ. ಇದರಿಂದ ಬೈಬಲ್‌ನಲ್ಲಿರುವುದು ಕಲ್ಪಿಪಿತ ಪ್ರದೇಶಗಳಿಲ್ಲವೆಂದು ಗ್ರಹಿಸಬಹುದು.

4. ಬೈಬಲ್ ಸಾಮಾನ್ಯ ಚರಿತ್ರೆ (ಇತಿಹಾಸ) ಈ ಎರಡು ಒಂದು ಮತ್ತೊಂದನ್ನು

ನಿರೂಪಿಸುತ್ತದೆ. ಬೈಬಲ್‌ನಲ್ಲಿರುವ ಅನೇಕ ಚರಿತ್ರಾತ್ಮಕ ಸಂಗತಿಗಳನ್ನು ಕುರಿತು ಇಂದು ನಾವು ಸಾಮಾನ್ಯ ಚರಿತ್ರೆ (ನಮ್ಮ ಇತಿಹಾಸ ಪುಸ್ತಕದಲ್ಲಿ) ವಿವರಿಸಲ್ಪಡುವುದನ್ನು ನೋಡಬಹುದು. ಆದ್ದರಿಂದ ಬೈಬಲ್ ಸುಳ್ಳು ಕಥೆಗಳ ಗ್ರಂಥವಾಗಿದ್ದರೆ ಅದು ಸತ್ಯ ಸಂಗತಿಗಳನ್ನು ಹೇಗೆ ಹೆಸರಿಸಲ್ಪಡುತ್ತದೆ.?

5. ಬೈಬಲ್‌ನಲ್ಲಿರುವ ಅನೇಕ ಸಂಗತಿಗಳು ಮಾನವನ ಜ್ಞಾನಕ್ಕೆ ಮೀರಿದ್ದರಿಂದ ಇದು ಮಾನವನ ಬುದ್ಧಿಯಿಂದ ಬರೆಯಲ್ಪಟ್ಟಿಲ್ಲ ಅದನ್ನು ಮನುಷ್ಯರು ಮಾತ್ರವೇ ಬರೆದರೆ ಅದಕ್ಕಿಂತಲೂ ಶ್ರೇಷ್ಟವಾದ ಗ್ರಂಥವು ಇನ್ನೂ ಯಾಕೆ ಬರೆಯಲ್ಪಡಲಿಲ್ಲ. ನಿಜಕ್ಕೊ ಒಂದು ವೇಳೆ ಮನುಷ್ಯರೇ ಬರೆದಿದ್ದೇ ಆದರೆ ಅದಕ್ಕಿಂತಲೂ ಶ್ರೇಷ್ಟವಾದ ಮತ್ತೊಂದು ಗ್ರಂಥವನ್ನು ಇಷ್ಟರೊಳಗೆ ಯಾರೊ ಒಬ್ಬರು ಖಂಡಿತವಾಗಿಯೂ ಬರೆಯಬಹುದಾಗಿತ್ತು. ಅಲ್ಲವೆ ?

6. ಬೈಬಲ್ ಅನೇಕ ಭಾಗಗಳ ಗ್ರಂಥ. ಇದನ್ನು ಸುಮಾರು 40 ಜನರು ಬೇರೆ ವೃತ್ತಿಯುಳ್ಳ ಲೇಖಕರು ಬೇರೆ, ಬೇರೆ ಪ್ರಾಂತ್ಯದಿಂದ ಸುಮಾರು 1600 ವರ್ಷಗಳ ಅವಧಿಯಲ್ಲಿ ಬರೆದರು. ಅದೆಲ್ಲವೂ ಒಂದು ಸಂಪೂರ್ಣವಾಗಿ ಗ್ರಂಥದ ರೀತಿಯಲ್ಲಿ ಸೇರಿಸಲ್ಪಟ್ಟಿದೆ. ಪ್ರತಿಯೊಬ್ಬ ಲೇಖಕನನ್ನು ದೇವರು ಪ್ರೇರೆಪಿಸದಿದ್ದರೆ ಇದು ಹೇಗೆ ಸಾಧ್ಯವಾಗುತ್ತದೆ?.

7. ಬೈಬಲ್‌ನಲ್ಲಿ ಅನೇಕ ಪ್ರವಾದನೆಗಳಿರುವದರಿಂದಲೇ ಅವುಗಳ ನೆರವೇರುವಿಕೆ ಸಹ ನಡೆದಿದೆ. ಉದಾ: ಯೋವೇಲ2:28,29ರಲ್ಲಿ ಅಂತ್ಯದಿನಗಳಲ್ಲಿ ಕರ್ತನು ತನ್ನ ಆತ್ಮವನ್ನು ಸುರಿಸುವ ದಿನವನ್ನು ಕುರಿತು ಬರೆಯಲ್ಲಪಟ್ಟಿದೆ. ಅದು ಅ.ಕೃ.2ನೇ ಅಧ್ಯಾಯದಲ್ಲಿ ನಡೆದ ಸಂಘಟನೆಯ ಮೂಲಕ ನೇರವೇರಿದೆ. ಯೋವೇಲನ ಮೂಲಕ ಮೊದಲೇ ಪ್ರವಾದಿಸಲ್ಪಟ್ಟಿತು ಎಂದು ಪೇತ್ರನು ಹೇಳಿದ್ದಾನೆ. ಹಳೆ ಒಡಂಬಡಿಕೆಯಲ್ಲಿ ಕ್ರಿಸ್ತನನ್ನು ಕುರಿತು ಅನೇಕ ಪ್ರಾವಾದನೆಗಳು ಹೊಸ ಒಡಂಬಡಿಕೆಯಲ್ಲಿ ನೆರವೇರಿವೆ. ಯೆಶಾಯ 53:5, ಮತ್ತು ಲೂಕ 22:63,64ನ್ನು ಓದಿ.

8. ಬೈಬಲ್ ತನ್ನ ಅನೇಕ ಶತ್ರುಗಳನ್ನು ಜಯಿಸಿದ್ದರಿಂದ ಇದು ದೇವರ ವಾಕ್ಯವೆಂದು ನಿರೂಪಿಸಲ್ಪಟ್ಟಿದೆ. ಅದಕ್ಕೆ ಇದ್ದ ಎಲ್ಲಾ ಶತ್ರುಗಳನ್ನು ಜಯಿಸಿ, ಅನೇಕ ಶತಮಾನಗಳಿಂದ ಭದ್ರವಾಗಿ ಕಾಪಾಡಲ್ಪಟ್ಟಿದೆ. ನಮ್ಮ ಭಾಷೆಯಲ್ಲಿ ಅನುವಾದಿಸಲ್ಪಟ್ಟ ಬೈಬಲ್‌ನ್ನು ಪ್ರಾಚೀನ ಪ್ರತಿಗಳೊಂದಿಗೆ ಹೋಲಿಸಿ ನೋಡಿ ಅದು ಬದಲಾವಣೆ ಯಾಗಿಲ್ಲವೆಂದು ಸಾಬೀತು ಮಾಡಲ್ಪಟ್ಟಿದೆ.

9. ಮಾನವನ ಅನೇಕ ಸಮಸ್ಯಗಳಿಗೆ ಬೈಬಲ್ ಉತ್ತರಿಸುತ್ತದೆ. ಮನುಷ್ಯನು ಎಲ್ಲಿಂದ ಬಂದನು, ಅವನ ಜೀವಿತಾವಧಿ ಏನು, ತಿರುಗಿ ಅವನು ಎಲ್ಲಿಗೆ ಹೋಗತ್ತಾನೆ.

ಎಂಬ ಪ್ರಶ್ನೆಗೆ ಬೈಬಲ್ ಮಾತ್ರವೇ ಸರಿಯಾದ ಉತ್ತರ ಕೊಡುತ್ತದೆ. ಮನುಷ್ಯನು ದೇವರಿಂದ ಉಂಟುಮಾಟಲ್ಪಟ್ಟನು (ಆದಿ 1:26,27). ತನ್ನ ಸೃಷ್ಟಿ ಕರ್ತನನ್ನು ಮಹಿಮೆ ಪಡಿಸುವುದೇ ಮಾನವನ ಜೀವಿತದ ವಿಧಿ(ಪ್ರಸಂಗಿ 12:1;1ಪೇತ್ರ 4:11). ಅವನು ತನ್ನ ನಿತ್ಯ ಜೀವಿತವನ್ನು ಒಂದು ಕಡೆ ಖಂಡಿತವಾಗಿ ವಾಸ ಮಾಡುವನು(ಮತ್ತಾಯ25:46).

10. ಮನುಷ್ಯರ ಮೇಲೆ ಎಲ್ಲಾ ಗ್ರಂಥಗಳಿಗಿಂತ ಬೈಬಲ್‌ನ ಪ್ರಭಾವ ಅತಿ ಹೆಚ್ಚಾಗಿದೆ ಈ ಲೋಕವೆಲ್ಲಾ ಕೆಟ್ಟದ್ದಾಗಿದ್ದರೂ ಬೈಬಲ್ ಇರುವದರಿಂದ ಮನುಷ್ಯನು ಒಳ್ಳೆಯವನಾಗುತ್ತಿದ್ದಾನೆ.

11. ಬೈಬಲ್ ಎಂದಿಗೂ ಗತಿಸಿಹೋಗುವುದಿಲ್ಲವೆಂದು ಯೇಸು ಕ್ರಿಸ್ತನು ಯೋಹಾನ 12:48 ರಲ್ಲಿ ಹೇಳಿದ್ದಾನೆ.

ಆದ್ದರಿಂದ ಬೈಬಲ್ ನಿಜಕ್ಕೂ ದೇವರ ವಾಕ್ಯವಾಗಿದೆ ಅದು ದೇವರಿಂದ ಮನುಷ್ಯನಿಗೆ ಕೊಡಲ್ಪಟ್ಟಿದೆ. ಅದು ಸತ್ಯವಾದುದ್ದಾಗಿದೆ. ಇಹಲೋಕದಿಂದ ಪರಲೋಕಕ್ಕೆ ನಡೆಸುವ ಮಾರ್ಗಸೂಚಕವಾಗಿದೆ.(ಮಾರ್ಗದರ್ಶಕ) ಅದನ್ನು ನಂಬಿ ಅದರ ಬೋಧನೆಗೆ ವಿಧೇಯನಾಗಿ ಅದರಲ್ಲಿನ ವಾಗ್ದಾನಗಳಿಂದ ಆಶೀರ್ವಾದಿಸಲ್ಪಡುವಿ. ಈಗ ನೀನು ಸಹ ಬೈಬಲ್ ದೇವರ ವಾಕ್ಯವೆಂದು ನಂಬುತ್ತಿಯ ಅಲ್ವ.....!

## ೨. ಯೇಸು ದೇವರ ಮಗನೆಂದು ನೀನು ಯಾಕೆ ನಂಬಬೇಕು. ?

## (Why you should Believe that Jesus Christ is the son of God)

ಯೇಸು ಕ್ರಿಸ್ತನು ದೇವರ ಮಗನೆಂದು ನೀನು ನಂಬದಿದ್ದರೆ ಈ ಮಾತುಗಳು ನಿನಗಾಗಿ ಬರೆಯಲ್ಪಟ್ಟಿದೆ. ಯೇಸು ಸಾಮಾನ್ಯ ಮನುಷ್ಯರಿಗಿಂತಲೂ, ಪ್ರವಾದಿಗಳಿಗಿಂತಲೂ ಶ್ರೇಷ್ಟನೆಂದು ಸೂಚಿಸಲು ಅನೇಕ ಸಾಕ್ಷಿಗಳಿವೆ. ಅಷ್ಟು ಮಾತ್ರವಲ್ಲದೆ ಎಲ್ಲಾ ವಿಷಯದಲ್ಲಿಯೂ ದೇವರ ಮಗನಾಗಿದ್ದನು. ಆತನನ್ನು ನೀನು ಈ ರೀತಿಯಾಗಿ ಅಂಗೀಕರಿಸುವುದಕ್ಕೆ ಈ ಕೆಳಗಿನ ಅನೇಕ ಕಾರಣಗಳು ಕೊಡಲ್ಪಟ್ಟಿವೆ.

1. ಯೇಸು ಆದಿಯಿಂದಲೂ ದೇವರೊಂದಿಗೆ ಇದ್ದನು. ಆದಿ1:26 ರಲ್ಲಿ ಈ ರೀತಿಯಾಗಿದೆ "ದೇವರು ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟುಮಾಡೋಣ" ಆದಿಯಲ್ಲಿ ವಾಕ್ಯವಿತ್ತು; ಆ ವಾಕ್ಯವು ದೇವರ ಬಳಿಯಲ್ಲಿತ್ತು; ಆ ವಾಕ್ಯವು ದೇವರಾಗಿತ್ತು" ಎಂದು ಯೋಹಾನ 1:1 ರಲ್ಲಿ ಬರೆಯಲ್ಪಟ್ಟಿದೆ. ಆ ವಾಕ್ಯವೇ ಯೇಸು ಕ್ರಿಸ್ತನೆಂದು ಸೂಚಿಸಲ್ಪಟ್ಟಿದೆ (ಯೋಹಾನ 1:14).

2. ಯೇಸುವನ್ನು ಕುರಿತು ಪ್ರವಾದನೆಗಳಲ್ಲಿ ಹೇಳಲ್ಪಟ್ಟಿದೆ. ಯೆಶಾಯ53ರಲ್ಲಿ ಕ್ರಿಸ್ತನನ್ನು ಕುರಿತು ವಿವರವಾಗಿ ಪ್ರವಾದಿಯು ವಿವರಿಸಿದ್ದಾನೆ. ಅ.ಕೃ.8ನೇ ಅಧ್ಯಾಯದಲ್ಲಿ ಕಂಚುಕಿಯು ಯೆಶಾಯನ53ನೇ ಅಧ್ಯಾಯವನ್ನು ಓದುತ್ತಿರುವುದನ್ನು ಗಮನಿಸಿದ ಫಿಲಿಪ್ಪನು ಅದೇ ವಚನವನ್ನು ಆಧಾರಮಾಡಿಕೊಂಡು ಕಂಚುಕಿಗೆ ಯೇಸುವನ್ನು ಕುರಿತು ಸುವಾರ್ತೆ ಪ್ರಕಟಿಸಿದನು. ಇದರಿಂದಾಗಿ ಯೆಶಾಯನು ಮೊದಲೇ ಕ್ರಿಸ್ತನನ್ನು ಕುರಿತು ಪ್ರವಾದಿಸಿದನೆಂದು ತಿಳಿಯುತ್ತದೆ. ಅಂತಹ ಪ್ರವಾದನೆಗಳು ಹಳೆ ಒಡಂಬಡಿಕೆಯಲ್ಲಿ ಅನೇಕವಿವೆ.

3. ಯೇಸು ಒಬ್ಬ ಕನ್ನಿಕೆಯಲ್ಲಿ ಜನಿಸಿದನು. ಆದುದರಿಂದ ಯೇಸುವಿಗೆ ಭೂ ಸಂಭಂದವಾದ ತಂದೆ ಇಲ್ಲ. ಆದರೆ ಆತನಿಗೆ ದೇವರೇ ತಂದೆ. ಪರಲೋಕದಲ್ಲಿರುವ ತನ್ನ ತಂದೆಯನ್ನು ಬಿಟ್ಟು ಮನುಷ್ಯರೂಪವನ್ನು ತಾಳಿ, ತನ್ನನ್ನು ತಾನು ತಗ್ಗಿಸಿಕೊಂಡು ಒಬ್ಬ ಕನ್ನಿಕೆಯ ಗರ್ಭದಲ್ಲಿ ಅದ್ಭುತವಾಗಿ ಜನಿಸಿದನು. ಇದು ಸಹ ಆತನನ್ನು ಕುರಿತು ಹೇಳಿದ ಪ್ರವಾದನೆಗಳ ನೆರವೇರಿಕೆ (ಮತ್ತಾಯ 1:18–25, ಯೆಶಾಯ 7:14).

4. ಯೇಸು ಒಬ್ಬ ಪರಿಪೂರ್ಣ ಮನುಷ್ಯನು. ಯಾವ ಪಾಪವಿಲ್ಲದ ಅಥವಾ ಪವಿತ್ರ ಜೀವಿತವನ್ನು ಜೀವಿಸಿದ ಏಕೈಕ ವ್ಯಕ್ತಿ ಆತನೇ. ಕ್ರಿಸ್ತನ ಹೆಜ್ಜೆ ಜಾಡಿನಲ್ಲಿ ನಾವು ನಡೆಯಬೇಕು. ಆತನು ಯಾವ ಪಾಪವನ್ನು ಮಾಡಲಿಲ್ಲ ಆತನ ಬಾಯಲ್ಲಿ ಯಾವ ವಂಚನೆಯು (ಕಪಟವು) ಸಿಗಲಿಲ್ಲವೆಂದು ಪೇತ್ರನು ಹೇಳುತ್ತಾನೆ (1ಪೇತ್ರ 2:21,22). ಪಾಪವಿಲ್ಲದ ಜೀವಿತದಿಂದಾಗಿ ಪಾಪಗಳಿಗೆ ಆತನು ಬಲಿಯಾಗಿ ಈ ಲೋಕಕ್ಕೆ ನಿರೀಕ್ಷಣೆ ಉಂಡುಮಾಡಿದ್ದಾನೆ.

5. ಪ್ರವಾದನೆಗಳನ್ನು ನೆರವೇರಿಸುವುದಕ್ಕೆ ಯೇಸು ಬಂದನು"ಮೋಶೆಯ ಧರ್ಮಶಾಸ್ತ್ರವನ್ನಾಗಲಿ ಪ್ರವಾದನೆಗಳನ್ನಾಗಲಿ ವಚನಗಳನ್ನಾಗಲಿ ತೆಗೆದು ಹಾಕುವುದಕ್ಕೆ ನಾನು ಬಂದೆನೆಂದು ನೆನಸಬೇಡಿರಿ, ತೆಗೆದು ಹಾಕುವುದಕ್ಕೆ ಬಂದಿಲ್ಲ; ನೆರವೇರಿಸುವುಕ್ಕೆ ಬಂದಿದ್ದೇನೆ ಎಂದು ಯೇಸು ಹೇಳಿದ್ದಾನೆ (ಮತ್ತಾಯ 5:17).

6. ಯೇಸು ಅನೇಕ ವಿಧವಾದ ಅದ್ಭುತಗಳನ್ನು ಮಾಡಿದನು. ಆತನು ರೋಗಿಗಳನ್ನು ಸ್ವಸ್ಥ ಮಾಡಿದನು, ಕಿವುಡರನ್ನು ಕೆಳುವಂತೆ, ಮೂಕರು ಮಾತನಾಡುವಂತೆ, ಕುಂಟರು ನಡೆಯುವಂತೆ, ಸತ್ತವರು ಎದ್ದು ಬರುವಂತೆ ಆತನು ಮಾಡಿದನು. ಆತನು ಎಲ್ಲಾ ವಿಧವಾದ ರೋಗಗಳನ್ನು ಗುಣಪಡಿಸಿದನು. ನೀರಿನ ಮೇಲೆ ನಡೆದನು, ಅನೇಕರು ಆತನು ಮಾಡಿದ ಸೂಚಕ ಕ್ರಿಯೆಗಳನ್ನು ನೋಡಿ ಆತನ ಹೆಸರಿನಲ್ಲಿ ನಂಬಿಕೆಯನ್ನಿಟ್ಟರು (ಯೋಹಾನ 1:23).

ಯೇಸು ದೇವರ ಮಗನೆಂದು ಆತನ ಶಿಷ್ಯರು ಒಪ್ಪಿಕೊಂಡರು "ನೀನು ಬರಬೇಕಾಗಿರುವ ಕ್ರಿಸ್ತನು, ಜೀವ ಸ್ವರೂಪನಾದ ದೇವರ ಕುಮಾರನು" ಎಂದು ಪೇತ್ರನು ಆತನನ್ನು ಕುರಿತು ಒಪ್ಪಿಕೊಂಡನು"(ಮತ್ತಾಯ 16:16). ಅನೇಕರು ಆತನನ್ನು ಒಪ್ಪಿಕೊಂಡರು.

8. ಯೇಸು ದೇವರ ಮಗನೆಂದು ದೆವ್ವಗಳು ಸಹ ಒಪ್ಪಿಕೊಂಡವು. ದೆವ್ವಗಳು ನೀನು ದೇವರ ಕುಮಾರನೆಂದು ಅಬ್ಬರಿಸಿ ಅನೇಕರನ್ನು ಬಿಟ್ಟು ಹೋದವು. ಆತನು ಕ್ರಿಸ್ತನೆಂದು ಅವುಗಳಿಗೆ ತಿಳಿದಿತ್ತು. ಆದ್ದರಿಂದ ಆತನು ಅವುಗಳನ್ನು ಮಾತಾಡದಂತೆ ಗದರಿಸಿದನು (ಲೂಕ 4:14).

9. ಅನೇಕರು ಯೇಸುವನ್ನು ದೇವರ ಮಗನೆಂದು ಹೇಳಿದರು "ತಂದೆಯು ಪ್ರತಿಷ್ಠೆ ಮಾಡಿ ಲೋಕಕ್ಕೆ ಕಳುಹಿಸಿಕೊಟ್ಟವನಾದ ನಾನು ದೇವರ ಮಗನಾಗಿದ್ದೇನೆಂದು ಹೇಳಿದ್ದಕ್ಕೆ ನೀನು ದೇವ ದೂಷಣೆ ಮಾಡುತ್ತೀ ಅನ್ನುತ್ತೀರೋ?(ಯೋಹಾನ 10:36).

10. ಯೇಸು ದೇವರ ಮಗನೆಂದು ರುಜುವಾತು ಪಡಿಸಲಾಯಿತು. ದೇವರ ಮಗನು

ಮಹಿಮೆ ಹೊಂದುವಂತೆ ಆತನು ಸತ್ತು ಹೋದ ಲಾಜರನನ್ನು ಬದುಕಿಸಿದನು (ಯೋಹಾನ 11:44).

11. ಯೇಸು ತನ್ನ ಪ್ರಿಯ ಮಗನೆಂದು ದೇವರೇ ಒಪ್ಪಿಕೊಂಡನು. "ಈತನು ಪ್ರಿಯನಾಗಿರುವ ನನ್ನ ಮಗನು; ಈತನನ್ನು ನಾನು ಮೆಚ್ಚಿದ್ದೇನೆ; ಈತನ ಮಾತುಗಳನ್ನು ಕೇಳಿರಿ" (ಮತ್ತಾಯ 17:5).

12. ಯೇಸು ಸತ್ತವರೊಳಗಿಂದ ಪುನರುತ್ಥಾನನಾದನು. ಆತನು ಸತ್ತವರೊಳಗಿಂದ ಪುನರುತ್ಥಾನವಾಗಿದ್ದರಿಂದ ಪವಿತ್ರವಾದ ಆತ್ಮವುಳ್ಳವನಾಗಿದ್ದು ಸತ್ತ ಮೇಲೆ ಜೀವಿತನಾಗಿ ಎದ್ದು ಬಂದು ಮಹತ್ಕಾರ್ಯದಿಂದ ದೇವರ ಕುಮಾರನೆಂದು ನಿರ್ಣಯಿಸಲ್ಪಟ್ಟವನೂ ಆಗಿದ್ದಾನೆ (ರೋಮಾ 1:4).

13. ಯೇಸುವಿನಲ್ಲಿ ನಂಬಿಕೆ ಇಟ್ಟವರಿಗೆ ಆತನು ಜೀವವನ್ನು ಕೊಟ್ಟನು. "ಯೇಸು ದೇವಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ, ನಂಬಿ ಆತನ ಹೆಸರಿನ ಮೂಲಕವಾಗಿ ಜೀವವನ್ನು ಪಡೆದುಕೊಳ್ಳವಂತೆಯೂ ಇಷ್ಟೇಲ್ಲಾ ಬರೆದದೆ (ಯೋಹಾನ 20:31).

14. ಯೇಸು ಮತ್ತೆ ತಿರಿಗಿ ಬರುವವನಾಗಿದ್ದಾನೆ. "ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ಧಮಾಡಿದ ಮೇಲೆ ತಿರಿಗಿ ಬಂದು ನಿಮ್ಮನ್ನು ಕರೆದು ಕೊಂಡು ಹೋಗಿ ನನ್ನ ಬಳಿಗೆ ಸೇರಿಸಿಕೊಳ್ಳುವೆನು" (ಯೋಹಾನ 14:3).

15. ಯೇಸು ದೇವರ ಮಗನೆಂದು ಸಾಮಾನ್ಯ ಚರಿತ್ರೆಯು ಸಹ ನಿರೂಪಿಸುತ್ತದೆ.

16. ಯೇಸು ನಿನ್ನೆ, ಇಂದು, ನಿತರಂತರವಾಗಿ ಜೀವಿಸುವವನಾಗಿದ್ದಾನೆ. ಯೇಸುವನ್ನು ಕುರಿತು ಅನೇಕ ರುಜುವುಗಳು ಇಲ್ಲಿ ಬರೆಯುವುದಕ್ಕೆ ನಿಜಕ್ಕೂ ಸ್ಥಳ ಸಾಲದು, ಆದರೆ ಮೇಲೆ ಹೇಳಿದಂತವುಗಳನ್ನು ನೀನು ಪರಿಶೀಲಿಸು. ಯೇಸು ಕ್ರಿಸ್ತನು ದೇವರ ಮಗನೆಂದು ನೀನು ನಂಬುತ್ತಿದ್ದೀಯಾ......? ಹಾಗಾದರೆ ಆತನನ್ನು ಒಪ್ಪಿಕೊ (ಮತ್ತಾಯ 10:32). ಆತನು ನಿನ್ನ ರಕ್ಷಕನಾಗುವಂತೆ, ಆತನಿಗೆ ನೀನು ವಿಧೇಯನಾಗು (ಅ.ಕೃ. 2:38; ಮಾರ್ಕ 16;16; ಕೊಲೊಸ್ಸೆ 1:27).

## ೩. ದೇವರ ಮಗನು.

## (The Son of God)

ಯೇಸು ಕ್ರಿಸ್ತನು ದೇವರ ಮಗನೆಂದು ಬೈಬಲ್ ವಿವರವಾಗಿ ಬೋಧಿಸುತ್ತದೆ. ಆದರೆ ಕೆಲವರು ಅಂಗೀಕರಿಸುವುದಿಲ್ಲ ಎಂದು ಭಾವಿಸುತ್ತಾರೆ. ಅದನ್ನು ಪ್ರಶ್ನಿಸಿ ಅಲ್ಲವೆನ್ನುತ್ತಾರೆ, ಆದರೆ ಇದನ್ನು ಮನುಷ್ಯನ ಬುದ್ಧಿಯಿಂದ ಪ್ರಶ್ನಿಸುವುದರಲ್ಲಿ ಅವರು ಕೆಲವು ಪ್ರಶ್ನೆಗಳನ್ನು ಎದುರಿಸುವರು. "ದೇವರಿಗೆ ಮಗನು ಯಾವ ರೀತಿಯಲ್ಲಿ ಇರುವನು"? ಎಂದು ಕೇಳುವರು. "ದೇವರಿಗೆ ಮಗನಿರುವುದಾದರೆ, ಆತನಿಗೆ ಹೆಂಡತಿಯು ಸಹ ಇರುವಳೆಂದು" ಅವರು ಆಲೋಚಿಸುತ್ತಾರೆ. ಇದೆಲ್ಲವೂ ಸಂಭಾವಿತ ಘಟನೆಯೆಂದು ಅವರು ಸೂಕ್ಷ್ಮವಾಗಿ ನೋಡಿ ಬಿಟ್ಟುಬಿಡುವರು. ಆದರೆ ಈ ಸಂಗತಿಯನ್ನು ತಿರುಗಿ ತೆಗೆದು ನೋಡಿ ಅದರಲ್ಲಿರುವ ವಾಸ್ತವಗಳನ್ನು ನೋಡಿಕೊಳ್ಳೋಣ.

ದೇವರ ಮಗನು ಎಂಬ ಭಾವವನ್ನು ಬೈಬಲ್ ಎಂತಹ ಸಂದರ್ಭಗಳಲ್ಲಿ ವ್ಯಕ್ತಪಡಿಸುತ್ತದೋ, ಒಂದು ಸಾರಿ ಪರಿಶೀಲಿಸೋಣ.

1. ದೇವರು ಮನುಷ್ಯನನ್ನು ಉಂಟುಮಾಡಿದ್ದರಿಂದ ಭೌತಿಕವಾಗಿ ಎಲ್ಲರು ದೇವರ ಮಕ್ಕಳೇ. ಇದನ್ನು ಆದಿಕಾಂಡ6:2 ವ್ಯಕ್ತಪಡಿಸುತ್ತದೆ. ಮನುಷ್ಯರು ದೇವರ ಸಂತಾನವಾಗಿದ್ದಾರೆ. (ಅ.ಕೃ.17:8). ಆದ್ದರಿಂದ ಒಬ್ಬನು ಒಳ್ಳೆಯವನಾದರೂ, ಕೆಟ್ಟವನಾದರೂ, ದೇವರನ್ನು ಸೇವಿಸಿದರೂ, ಸೇವಿಸದೇ ಇದ್ದರೂ ಅವನು ದೇವರ ಸೃಷ್ಟಿಯಾಗಿರುವುದರಿಂದ ಈ ಲೋಕದಲ್ಲಿ ಅವನು ದೇವರ ಮಗನೇ. ಆದರೆ ಪಾಪವನ್ನು ಮಾಡುವುದರಿಂದ ತನ್ನ ಸೃಷ್ಟಿಕರ್ತನಿಂದ ದೂರವಾಗಿರುವ ಸ್ಥಿತಿಯಲ್ಲಿರುವುದರಿಂದ ಅವನು ವಿಮೋಚಿಸಲ್ಪಟ್ಟು ತಿರುಗಿ ಬರಬೇಕು. (ಎಫೆಸ 2:16; ಕೊಲೊಸ್ಸೆ 1:19).

2. ಇಸ್ರಾಯೇಲ್ ಜನಾಂಗವು ತನ್ನ ಮಗನೆಂದು ಹೇಳಿದ್ದಾನೆ. ಇದು ನಿಜವೇ, ಹೇಗೆಂದರೆ, ಭೌತಿಕವಾಗಿಯೂ, ಆತ್ಮೀಕವಾಗಿಯೂ ಏರ್ಪಡಿಸಲ್ಪಟ್ಟ ಪ್ರಜೆಗಳು. "ನೀನು ಫರೋಹನಿಗೆ– ಇಸ್ರಾಯೇಲ್ ಜನವು ನನಗೆ ಚೊಚ್ಚಲ ಮಗನಂತೆ ಇದೆ ಎಂದು ತಿಳುಕೋ; ನನ್ನ ಮಗನು ನಿನ್ನ ದೇಶದಿಂದ ಹೊರಟು ನನ್ನನ್ನು ಆರಾಧಿಸುವುದಕ್ಕೆ ಅವನಿಗೆ ಅಪ್ಪಣೆ ಕೊಡಬೇಕು; ನೀನು ಒಪ್ಪದೇ ಹೋದರೆ ನಾನು ನಿನಗಿರುವ ಚೊಚ್ಚಲ ಮಗನ್ನು ಸಾಯಿಸುವೆನೆಂದು ಯೆಹೋವನು ಹೇಳುತ್ತಾನೆಂದು ತಿಳಿಸಬೇಕು" (ವಿಮೋ 4:22–23).

3. ದೈವಾಜ್ಞೆಗೆ ಒಳಗಾಗುವುದರ ಮೂಲಕ ಒಬ್ಬನು ಆತ್ಮೀಯವಾಗಿ ದೇವರಿಗೆ ಮಗನಾಗುವನು. "ಯಾರಾರು ದೇವರ ಆತ್ಮನಿಂದ ನಡೆಸಿಕೊಳ್ಳುತ್ತಾರೋ ಅವರು

ದೇವರ ಮಕ್ಕಳು"(ರೋಮಾ8:14). "ಆದರೆ ನಾನು ಹೇಳುವದೇನೆಂದರೆ ಬಾಧ್ಯನು ತಾನು ಆಸ್ಥಿಗೆಲ್ಲಾ ಧನಿಯಾಗಿದ್ದರೂ ಬಾಲಕನಾಗಿರುವ ತನಕ ದಾಸನಂತೆ ಇರುವನೇ ಹೊರತು ಬೇರೆಯಿಲ್ಲ. ತಂದೆಯು ನೇಮಿಸಿದ ದಿನಗಳವರೆಗೂ ಪಾಲಕರ ಮತ್ತು ಮನೆವಾರ್ತೆಯವರ ಕೈಕೆಳಗಿರುವನು. ಹಾಗೆಯೇ ನಾವು ಸಹ ಬಾಲಕರಾಗಿದ್ದಾಗ ಲೋಕದವರ ಬಾಲಬೋಧನೆಗೆ ಅಧೀನರಾಗಿದ್ದೆವು. ಆದರೆ ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು. ಧರ್ಮಶಾಸ್ತ್ರಾಧೀನರಾದವರನ್ನು ವಿಮೋಚಿಸಬೇಕೆಂತಲೂ ಪುತ್ರ ಪದವಿಯನ್ನು ದೊರಕಿಸಬೇಕೆಂತಲೂ ಆತನು ಸ್ತ್ರೀಯಲ್ಲಿ ಹುಟ್ಟಿದವನಾಗಿಯೂ ಧರ್ಮಶಾಸ್ತ್ರಾಧೀನನಾಗಿಯೂ ಬಂದನು. ನೀವು ಪುತ್ರರಾಗಿರುವುದರಿಂದ ದೇವರು ಅಪ್ಪಾ, ತಂದೆಯೇ ಎಂದು ಕೂಗುವ ತನ್ನ ಮಗನ ಆತ್ಮನನ್ನು ನಮ್ಮ ಹೃದಯಗಳಲ್ಲಿ ಕಳುಹಿಸಿಕೊಟ್ಟನು. ಹೀಗಿರುವಲ್ಲಿ ಇನ್ನು ನೀನು ದಾಸನಲ್ಲ, ಮಗನಾಗಿದ್ದೀ. ಮಗನೆಂದ ಮೇಲೆ ದೇವರ ಮೂಲಕ ಬಾಧ್ಯನೂ ಆಗಿದ್ದೀ"(ಗಲಾತ್ಯ4:1–7). ನಾವೆಲ್ಲರೂ ದೇವರ ಮಕ್ಕಳಾಗಿದ್ದೇವೆ. ಇದನ್ನು ಕೇಳಿ "ನೀವೆಲ್ಲರು ಕ್ರಿಸ್ತಯೇಸುವಿನಲ್ಲಿಟ್ಟಿರುವ ನಂಬಿಕೆಯ ಮೂಲಕ ದೇವರಿಗೆ ಪುತ್ರರಾಗಿದ್ದೀರಿ. ಹೇಗೆಂದರೆ ಕ್ರಿಸ್ತನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರೂ ಕ್ರಿಸ್ತನನ್ನು ಧರಿಸಿಕೊಂಡಿರಿ"(ಗಲಾತ್ಯ3:26–27). "ಆದದರಿಂದ ದೇವರಿಗೆ ಪ್ರಿಯರಾದ ಮಕ್ಕಳಿಗೆ ತಕ್ಕ ಹಾಗೆ ಆತನನ್ನು ಅನುಸರಿದುವವರಾಗಿರಿ".(ಎಫೆಸ5:1). "ಇವರು ದೇವರ ಮಕ್ಕಳೆಂಬದೂ ಅವರು ಸೈತಾನನ ಮಕ್ಕಳೆಂಬದೂ ಇದರಿಂದ ವ್ಯಕ್ತವಾಗುತ್ತದೆ. ನೀತಿಯನ್ನು ಅನುಸರಿಸದವನೂ ತನ್ನ ಸಹೋದರನನ್ನು ಪ್ರೀತಿಸದವನೂ ದೇವರಿಂದ ಹುಟ್ಟಿದವರಲ್ಲ"(1ಯೋಹಾನ3:10). "ನಾವು ದೇವರ ಮಕ್ಕಳನ್ನು ಪ್ರೀತಿಸುತ್ತೇವೆಂಬದನ್ನು ದೇವರನ್ನು ಪ್ರೀತಿಸಿ ಆತನ ಆಜ್ಞೆಗಳನ್ನು ಅನುಸರಿಸುವುದರಿಂದಲೇ ತಿಳಿದುಕೊಳ್ಳುತ್ತೇವೆ" (1ಯೋಹಾನ 5:2).

4. ಯೇಸು ದೇವರ ಮಗನೆಂದು ಒಂದು ಪ್ರತ್ಯೇಕವಾದ ರೀತಿಯಲ್ಲಿ ವ್ಯಕ್ತವಾಗಿ, ತಂದೆ ಮಗನ ಸಂಭಂದವಾದ ಪ್ರಕಾರ ಹೇಳಲ್ಪಟ್ಟಿದೆ. ಮೊದಲನೆಯದಾಗಿ ದೇವರು ಕ್ರಿಸ್ತನನ್ನು ತನ್ನ ಮಗನೆಂದು ಸಾಕ್ಷಿಹೇಳಿದ್ದಾನೆ. "ಈತನು ಪ್ರಿಯನಾಗಿರುವ ನನ್ನ ಮಗನು. ಈತನನ್ನು ನಾನು ಮೆಚ್ಚಿದ್ದೇನೆ ಎಂದು ಆಕಾಶವಾಣಿಯಾಯಿತು".(ಮತ್ತಾಯ3:17). "ಈತನು ಪ್ರಿಯನಾಗಿರುವ ನನ್ನ ಮಗನು ಈತನನ್ನು ನಾನು ಮೆಚ್ಚಿದ್ದೇನೆ, ಈತನ ಮಾತನ್ನು ಕೇಳಿರಿ ಎಂದು ಮತ್ತೇ ದೇವರು ಕ್ರಿಸ್ತನನ್ನು ಕುರಿತು ಹೇಳಿದ್ದಾನೆ"(ಮತ್ತಾಯ5:17). ಯೇಸು ಕ್ರಿಸ್ತನು ಜೀವಸ್ವರೂಪನಾದ ದೇವರ ಮಗನೆಂದು ಪೇತ್ರನು ಒಪ್ಪಿಕೊಂಡನು(ಮತ್ತಾಯ

16:16). ಈ ಲೋಕದ ಪಾಪ ನಿವಾರಣೆಗಾಗಿ ದೇವರು ತನ್ನ ಸ್ವಂತ ಮಗನನ್ನು ಕಳಿಸುವೆನೆಂದು ಬೋಧಿಸಲ್ಪಟ್ಟಿತು. (ಅ.ಕೃ. 9:20).

ಆದ್ದರಿಂದ ಕ್ರಿಸ್ತನು ದೇವರ ಮಗನಾಗಿ ಹೇಗಾದನು ? ಆತನು ಆದಿಯಿಂದಲೂ ದೇವರಾಗಿದ್ದನು. "ಆದಿಯಲ್ಲಿ ವಾಕ್ಯವಿತ್ತು, ಆ ವಾಕ್ಯವು ದೇವರ ಬಳಿಯಲ್ಲಿತ್ತು; ಆ ವಾಕ್ಯವು ದೇವರಾಗಿತ್ತು"(ಯೋಹಾನ1:1–2). ಸೃಷ್ಟಿ ನಿರ್ಮಾಣದಲ್ಲಿ ಆತನು ಪಾಲುಗಾರನಾಗಿದ್ದಾನೆ. ಮನುಷ್ಯರನ್ನು ನಮ್ಮ ಸ್ವರೂಪದಲ್ಲಿ ಉಂಟುಮಾಡೋಣ ಎಂದು ದೇವರು ಹೇಳಿದನು. "ದೇವರು ಈ ಅಂತ್ಯ ದಿನಗಳಲ್ಲಿ ನಮ್ಮ ಸಂಗಡ ಮಗನಮುಖಾಂತರ ಮಾತಾಡಿದ್ದಾನೆ. ಈತನನ್ನು ಎಲ್ಲಾಕ್ಕೂ ಬಾಧ್ಯನನ್ನಾಗಿ ನೇಮಿಸಿದ್ದಾನೆ. ಈತನ ಮೂಲಕವೇ ಜಗತ್ತನ್ನು ಉಂಟುಮಾಡಿದನು. (ಇಬ್ರಿಯ 1:2). "ಆತನ ಮೂಲಕ ಸಮಸ್ತವೂ ಉಂಟಾಯಿತು. ಉಂಟಾಗಿರುವ ವಸ್ತುಗಳಲ್ಲಿ ಆತನಿಲ್ಲದೇ ಒಂದಾದರೂ ಉಂಟಾಗಲಿಲ್ಲ" (ಯೋಹಾನ 1:3).

ದೈವತ್ವದಲ್ಲಿ ಯೇಸು ಕ್ರಿಸ್ತನು ಸಹ ಒಬ್ಬನಾಗಿದ್ದಾನೆ. (ತಂದೆ, ಮಗ, ಪವಿತ್ರಾತ್ಮ). (ಮತ್ತಾಯ28:20). ಕ್ರಿಸ್ತನನ್ನು ಕುರಿತು ಪೌಲನು ಹೀಗೆ ಹೇಳಿದ್ದಾನೆ, "ಕ್ರಿಸ್ತನಲ್ಲಿಯೇ ದೇವರ ಸರ್ವಸಂಪೂರ್ಣತೆಯು ಅವತರಿಸಿ ವಾಸ ಮಾಡುತ್ತದೆ. ಮತ್ತು ನೀವು ಆತನಲ್ಲಿದ್ದುಕೊಂಡೇ ಪರಿಪೂರ್ಣತೆಯನ್ನು ಹೊಂದಿದವರಾಗಿದ್ದೀರಿ. ಆತನು ಎಲ್ಲಾ ದೊರೆತನಗಳಿಗೂ, ಅಧಿಕಾರಿಗಳಿಗೂ ಶಿರಸ್ಸು". (ಕೊಲೊಸ್ಸೆ 2:9–10) ರೋಮಾ 1:20 ಓದಿರಿ.

ದೇವರು ಆತ್ಮನಾಗಿ ಹೇಗೆ ಇದ್ದಾನೋ, ಅದೇ ರೀತಿಯಾಗಿ ಕ್ರಿಸ್ತನು ಸಹ ಆತ್ಮದಲ್ಲಿ ದೇವರೊಂದಿಗೆ ಇದ್ದಾನೆ. ಕಾಲವು ಪರಿಪೂರ್ಣವಾದಾಗ ವಾಗ್ದಾನ ಮಾಡಿದ ಪ್ರಕಾರ ಆತನು ತಂದೆಯನ್ನು ಬಿಟ್ಟು ಈ ಲೋಕದಲ್ಲಿ, ಕನ್ಯೆ ಮರಿಯಳ ಗರ್ಭದಲ್ಲಿ ಮನುಷ್ಯನ ರೂಪವನ್ನು ಧರಿಸಿ ಈ ಲೋಕದ ಪಾಪಗಳಿಗಾಗಿ ಶಿಲುಬೆಯ ಮೇಲೆ ಮರಣಿಸಿ, ಸಮಾಧಿ ಮಾಡಲ್ಪಟ್ಟು ತಿರುಗಿ ಎದ್ದು ಪರಲೋಕದಲ್ಲಿರುವ ತನ್ನ ತಂದೆಯ ಬಳಿಗೆ ಹೋಗಿ ಇಂದಿಗೂ ಆತನ ಬಳಿಯಲ್ಲಿ ಕ್ರಿಸ್ತನು ಬಲಪಾರ್ಶ್ವದಲ್ಲಿ ಆಸೀನನಾಗಿದ್ದಾನೆ. (ಮತ್ತಾಯ1:21;ಯೋಹಾನ3:17;ಗಲಾತ್ಯ4:4;1ಯೋಹಾನ4:9; ಯೋಹಾನ4:41;1ಕೊರಿಂಥ15:1–4; ಅ.ಕೃ. 2ನೇ ಅಧ್ಯಾಯ).

ಆದಿಯಿಂದಲೂ ಕ್ರಿಸ್ತನು ದೇವರೊಂದಿಗೆ ಇದ್ದರೂ, ನಿತ್ಯನಾಗಿದ್ದರೂ, ದೈವತ್ವವುಳ್ಳವನಾಗಿದ್ದರೂ, ಆತನು ತಂದೆಯಾದ ದೇವರಲ್ಲ. ದೇವರು ಒಬ್ಬನೇ, ಕ್ರಿಸ್ತನು ಒಬ್ಬನೇ, ಆತ್ಮನು ಒಬ್ಬನೇ (ಎಫೆಸ 4:1–6).

ಅವರು ಒಬ್ಬೊಬ್ಬರೇ ಆಗಿದ್ದರೂ, ಮೂವರಾಗಿದ್ದಾರೆ. ಪ್ರತಿಯೊಬ್ಬರಿಗೂ ವ್ಯಕ್ತಿತ್ವವಿದೆ. ಅವರು ಮಾಡುವ ಕಾರ್ಯಗಳಿವೆ. ದೈವತ್ವದಲ್ಲಿ ಇವರು ಭಾಗಿಗಳಾಗಿದ್ದಾರೆ.

ದೇವರು ಒಬ್ಬ ಮಗನನ್ನು ಹೊಂದಿಲ್ಲ ಎಂದು ಹೇಳುವುದಾದರೆ, ದೇವರ ಶಕ್ತಿಯನ್ನು ಹಿಡಿತದಲ್ಲಿ ಇಟ್ಟಹಾಗೆ. ಇದನ್ನು ನಾವು ಮಾಡಲಾರೆವು. ಇದನ್ನು ನಾವು ಸಂಪೂರ್ಣವಾಗಿ ಗ್ರಹಿಸದೇ ಹೋಗಬಹುದು. ಆದರೆ ದೇವರನ್ನು ನಾವು ಸಂಪೂರ್ಣವಾಗಿ ಗ್ರಹಿಸಲಾರೆವು. ದೇವರು, ಆತನ ಮಗನು ದೈವತ್ವವುಳ್ಳವರು, ನಾವು ಮನುಷ್ಯರು. ನಂಬಿಕೆಯಿಂದ ಅಂಗೀಕರಿಸಬೇಕಾದವುಗಳನ್ನು ನಾವು ಗ್ರಹಿಸಲಾರೆವು. ಈ ಸಂಗತಿಗಳನ್ನು ಕುರಿತು ಊಹಿಸುವುದು ನಮ್ಮ ವಶದಲ್ಲಿ ಇಲ್ಲ. ಎಲ್ಲಾ ಸಂಗತಿಗಳು ದೇವರನ್ನು ಸೂಚಿಸುತ್ತಿವೆ. ಆತನು ತನ್ನ ವಾಕ್ಯವನ್ನು ನಮಗೆ ಕೊಟ್ಟು, ಆ ವಾಕ್ಯದಲ್ಲಿ ತನ್ನ ಮಗನನ್ನು ಬಯಲು ಪಡಿಸಿದನು. ಯೇಸು ದೇವರ ಮಗನೆಂದು ನಿರೂಪಿಸುವ ಅನೇಕ ಸತ್ಯಗಳು ಆಧಾರಗಳು ಇವೆ. ಆದ್ದರಿಂದಲೇ "ದೇವರನ್ನು ನಂಬಿರಿ, ನನ್ನನ್ನೂ ನಂಬಿರಿ" (ಯೋಹಾನ 14:1). ಎಂದು ಯೇಸು ಹೇಳಿದ್ದಾನೆ. ಹೌದು ನಾವು ಖಂಡಿತವಾಗಿ ಆತನ ಮಗನಲ್ಲಿ ನಂಬಿಕೆಯಿಡಬಹುದು, ಇಡಬೇಕು ಕೂಡ. ಇಲ್ಲದಿದ್ದರೆ ನಾವು ನಮ್ಮ ಪಾಪದಲ್ಲಿಯೇ ಇದ್ದು ಸತ್ತುಹೋಗುವೆವು (ಯೋಹಾನ 8:24).

## 4. ವಿಗ್ರಹಾರಾಧನೆ ಪಾಪ
## (The Sin of Idolatry)

ದೇವರನ್ನಾಗಲಿ, ದೇವದೂತರನ್ನಾಗಲಿ ಸೂಚಿಸುವ ಮರದ ಚಕ್ಕೆಯಿಂದಾಗಲಿ, ಕಲ್ಲಿನಿಂದಾಗಲಿ ಅಥವಾ ಯಾವುದಾದರೂ ಲೋಹದಿಂದಾಗಲಿ ಮಾಡಿದ ಪ್ರತಿಮೆ ಸ್ವರೂಪವೇ ವಿಗ್ರಹ. ಅದು ಮನುಷ್ಯನ ರೂಪದಲ್ಲಿ ಮಾಡಿಸಬಹುದು, ಇಲ್ಲವೇ ಪ್ರಕೃತಿಯಲ್ಲಿ ಯಾವುದನ್ನಾದರೂ ಸೂಚಿಸಬಹುದು. ಇಲ್ಲವೇ ಒಬ್ಬನ ಸಮಯವನ್ನು, ಪೂಜೆಯನ್ನು ಕೋರುವ ಯಾವುದಾದರೂ ಆಗಿರಬಹುದು. ವಿಗ್ರಹಾರಾಧನೆ ಪುರಾತನ ಕಾಲದಿಂದಲೂ ಎಷ್ಟು ಹಳೆಯದಾಗಿದೆಯೋ, ಆಧುನಿಕವಾಗಿ ಅಷ್ಟೇ ಹೊಸದಾಗಿ ಮಾರ್ಪಾಟು ಹೊಂದಿದೆ. ಅದು ಅನೇಕ ವಿಧವಾಗಿ ಬದಲಾಗಬಹುದು. ಆದರೂ ಅದು ಸತ್ಯ ದೇವರಿಗೆ ಮಾಡುವ ಆರಾಧನೆ ಅಲ್ಲವಾದದ್ದರಿಂದ ಅದು ಪಾಪವೆಂದೇ ಪರಿಗಣಿಸಲ್ಪಡುತ್ತದೆ.

**ವಿಗ್ರಹಗಳನ್ನು ಕುರಿತು ಬೈಬಲ್ ಈ ರೀತಿಯಾಗಿ ಹೇಳುತ್ತಿದೆ:**

"ಯಾವ ಮೂರ್ತಿಯನ್ನೂ ಮಾಡಿಕೊಳ್ಳಬಾರದು. ಆಕಾಶದಲ್ಲಾಗಲಿ ಭೂಮಿಯಲ್ಲಾಗಲಿ ಭೂಮಿಯ ಕೆಳಗಣ ನೀರಿನಲ್ಲಾಗಲಿ ಇರುವ ಯಾವುದರ ರೂಪವನ್ನೂ ಮಾಡಿಕೊಳ್ಳಬಾರದು. ಅವುಗಳಿಗೆ ಅಡ್ಡಬೀಳಲೂ ಬಾರದು. ಪೂಜೆ ಮಾಡಲೂ ಬಾರದು. ನಿನ್ನ ದೇವರಾದ ಯೆಹೋವನೆಂಬ ನಾನು" (ವಿಮೋ20:4–5). "ಆದಕಾರಣ ನೀನು ಇಸ್ರಾಯೇಲ್ ವಂಶದವರಿಗೆ ಹೀಗೆ ನುಡಿ– ನೀವು ನಿಮ್ಮ ಬೊಂಬೆಗಳನ್ನು ತೊರೆದುಬಿಟ್ಟು ಹಿಂದಿರುಗಿರಿ, ನಿಮ್ಮ ಎಲ್ಲಾ ಅಸಹ್ಯ ವಸ್ತುಗಳ ಕಡೆಗೆ ಬೆನ್ನು ಮಾಡಿರಿ" (ಯೆಹೆಜ್ಕೇಲ 14:6).

**ಹೊಸ ಒಡಂಬಡಿಕೆ ಲೇಖಕರು ಹೀಗೆ ಬರೆದರು:**

"ಹೀಗಿರಲಾಗಿ ನನ್ನ ಅಭಿಪ್ರಾಯ ಏನೆಂದರೆ–ಅನ್ಯಜನರಲ್ಲಿ ದೇವರ ಕಡೆಗೆ ತಿರುಗಿಕೊಳ್ಳುವವರನ್ನು ತೊಂದರೆಪಡಿಸಬಾರದು. ಆದರೆ ವಿಗ್ರಹಕ್ಕೆ ನೈವೇದ್ಯ ಮಾಡಿದ್ದನ್ನೂ ಹಾದರವನ್ನೂ ಕುತ್ತಿಗೆ ಹಿಸುಕಿ ಕೊಂದದ್ದನ್ನೂ ರಕ್ತವನ್ನೂ ವಿಸರ್ಜಿಸಬೇಕೆಂದು ನಾವು ಅವರಿಗೆ ಕಾಗದವನ್ನು ಬರೆದು ಅಪ್ಪಣೆ ಕೊಡೋಣ" (ಅ.ಕೃ.15:19–20). "ಪ್ರಿಯರಾದ ಮಕ್ಕಳೇ, ವಿಗ್ರಹಗಳಿಗೆ ದೂರವಾಗಿರುವಂತೆ ನಿಮ್ಮನ್ನು ಕಾಪಾಡಿಕೊಳ್ಳಿರಿ"(1ಯೋಹಾನ 5:21).

ದೈವ ಪ್ರೇರಿತರಾದ ಲೇಖಕರು ವಿಗ್ರಹಗಳನ್ನು ಕುರಿತು, ಅವುಗಳ ಆರಾಧನೆಯನ್ನು ಕುರಿತು ಇರುವ ಸಂಗತಿಗಳನ್ನು ಹೀಗೆ ಬರೆದಿದ್ದಾರೆ: "ಇವರ ದೇಶವು ವಿಗ್ರಹಗಳಿಂದಲೂ ತುಂಬಿದೆ, ತಮ್ಮ ಕೈಯಿಂದಲೇ, ತಮ್ಮ ಬೆರಳುಗಳಿಂದಲೇ ಮಾಡಿದ ಕೆಲಸಕ್ಕೆ ನಮಸ್ಕರಿಸುತ್ತಾರೆ. ಹೀಗಿರಲು ಅಧಮರಾಗಲಿ ಉತ್ತಮರಾಗಲಿ ತಗ್ಗಿಸಲ್ಪಡುವರು; (ಅವರನ್ನು ಕ್ಷಮಿಸಬೇಡ). (ಯೆಶಾಯ2:8–9). "ವಿಗ್ರಹ ಕೆತ್ತುವವರೆಲ್ಲಾ

ಮಟ್ಟಮಾಯವೇ; ಅವರ ಇಷ್ಟದ ಬೊಂಬೆಗಳು ಯಾತಕ್ಕೂ ಬಾರವು; ಬೊಂಬೆಗಳ ಪಕ್ಷದ ಸಾಕ್ಷಿಗಾರರು ನೋಡುವವರಲ್ಲ, ಗ್ರಹಿಸುವವರಲ್ಲ; ನಾಚಿಕೆಗೆ ಗುರಿಯಾಗುವರು. ದೇವತೆಯನ್ನು ರೂಪಿಸುವವರೂ ವ್ಯರ್ಥವಿಗ್ರಹವನ್ನು ಎರಕ ಹೊಯ್ಯುವವರು ಎಂಥವರು? ವಿಗ್ರಹಶರಣರೆಲ್ಲಾ ಆಶಾಭಂಗಪಡುವರು; ಅದನ್ನು ಕೆತ್ತಿದವರು ಮನುಷ್ಯಮಾತ್ರದವರೇ; ಅವರೆಲ್ಲರೂ ಕೂಡಿ ನಿಲ್ಲಲಿ, ಒಟ್ಟಿಗೆ ಹೆದರಿಕೊಂಡು ಲಜ್ಜೆ ಪಡುವರು. ಕಮ್ಮಾರನು ಮುಟ್ಟನ್ನು ತೆಗೆದುಕೊಂಡು ಕೆಂಡದಲ್ಲಿ ಕೆಲಸಮಾಡುತ್ತಾ ಚಮಟಿಕೆಗಳಿಂದ ಬಡಿದು ತೋಳಿನ ಬಲದಿಂದ ವಿಗ್ರಹವನ್ನು ರೂಪಿಸುವನು; ಅವನೂ ಹಸಿದು ಬಳಲುವನು, ನೀರಿಲ್ಲದೇ ಕಂಗೆಡುವನು. ಬಡಗಿಯು [ಮರಕ್ಕೆ] ನೂಲು ಹಾಕಿ ಮೊಳೆಯಿಂದ ಗೆರೆಯೆಳೆದು ಉಳಿಬಾಚಿಗಳಿಂದ ಕೆತ್ತಿ ಕೈವಾರದಿಂದ ಗುರುತಿಸಿ ಅದು ಮನೆಯಲ್ಲಿ ವಾಸಿಸತಕ್ಕದ್ದಾಗಲೆಂದು ಮನುಷ್ಯನ ಆಕಾರಕ್ಕೆ ತಂದು ನರನ ಅಂದದಂತೆ ರೂಪಿಸುವನು. ಅವನು ತನ್ನ ಕೆಲಸಕ್ಕಾಗಿ ದೇವದಾರುಗಳನ್ನು ಕಡಿಯುವನು, ತುರಾಯಿ ಅಲ್ಲೋನ್ ಮರಗಳನ್ನು ತೆಗೆದುಕೊಳ್ಳುವನು, ವನವೃಕ್ಷಗಳಲ್ಲಿ ಒಂದನ್ನು ತನಗೋಸ್ಕರ ಸಲಹುವನು; ಅವನು ಪೀತದಾರವನ್ನು ನೆಡಲು ಮಳೆಯು ಅದನ್ನು ಬೆಳೆಯಿಸುವುದು. ಅದು ಸೌದೆಗಾಗುವುದು; ಅವನು ಸ್ವಲ್ಪ ತೆಗೆದು ಕಾಯಿಸಿಕೊಳ್ಳುವನು, ಉರಿಸಿ ರೊಟ್ಟಿಸುಡುವನು; ಅದರಲ್ಲೇ ಒಂದು ದೇವರನ್ನು ಮಾಡಿಕೊಂಡು ಪೂಜಿಸುವನು, ಬೊಂಬೆ ಕೆತ್ತಿ ಅಡ್ಡಬೀಳುವನು. ಒಂದು ಭಾಗವನ್ನು ಬೆಂಕಿಯಲ್ಲಿ ಉರಿಸುವನು; ಅದು ಮಾಂಸಭೋಜನಕ್ಕೆ ಅನುಕೂಲಿಸುವುದು; ಬಾಡು ಸುಟ್ಟು ಹಸಿವೆ ತೀರಿಸಿಕೊಳ್ಳುವನು;

ಮತ್ತು ಕಾಯಿಸಿಕೊಳ್ಳುತ್ತಾ- ಆಹಾ, ಬೆಂಕಿ ಕಂಡೆ; ಬೆಚ್ಚಗಾಯಿತು ಅಂದುಕೊಳ್ಳುವನು. ಉಳಿದ ಭಾಗವನ್ನು ತನ್ನ ದೇವರನ್ನಾಗಿ ಬೊಂಬೆ ಕೆತ್ತಿ ಅದಕ್ಕೆ ಎರಗಿ ಅಡ್ಡಬಿದ್ದು- ನೀನೇ ನನ್ನ ದೇವರು, ನನ್ನನ್ನು ರಕ್ಷಿಸು ಎಂದು ಪ್ರಾರ್ಥಿಸುವನು. ಇಂಥವರು ಏನೂ ತಿಳಿಯದವರು, ಏನೂ ಗ್ರಹಿಸಲಾರದವರು; ಅವರ ಕಣ್ಣು ಕಾಣದಂತೆಯೂ ಹೃದಯ ಗ್ರಹಿಸದಂತೆಯೂ ಯೆಹೋವನು ಅಂಟು ಬಳಿದಿದ್ದಾನಲ್ಲಾ. ನಾನು ಒಂದು ಭಾಗವನ್ನು ಬೆಂಕಿಯಲ್ಲಿ ಉರಿಸಿದೆನು, ಹೌದು ಅದರ ಕೆಂಡದಲ್ಲಿ ರೊಟ್ಟಿ ಮಾಡಿ ಮಾಂಸ ಸುಟ್ಟು ತಿಂದೆನಲ್ಲಾ; ಮಿಕ್ಕದ್ದನ್ನು ನಾನು ಬೊಂಬೆ ಮಾಡಲೋ, ಮರದ ತುಂಡಿಗೆ ಅಡ್ಡಬೀಳಬಹುದೋ, ಅಂದುಕೊಳ್ಳುವಷ್ಟು ಜ್ಞಾನ ವಿವೇಕಗಳು ಯಾರಿಗೂ ಇಲ್ಲ. ಯಾರೂ ಇದನ್ನು ಮನಸ್ಸಿಗೆ ತಾರರು. ಅವನು ತಿನ್ನುವುದು ಬೂದಿಯೇ; ಮೋಸಕ್ಕೊಳಗಾದ ಹೃದಯವು ಅವನಿಗೆ ದಾರಿ ತಪ್ಪಿಸಿದ ಕಾರಣ ನನ್ನ ಕೈ ಸುಳ್ಳನ್ನು ಹಿಡಿದದೆಯಲ್ಲಾ ಎಂದುಕೊಳ್ಳಲೂ ಆಗದು, ತನ್ನನ್ನು ರಕ್ಷಿಸಿಕೊಳ್ಳಲೂ ಆಗದು" (ಯೆಶಾಯ 44:9–20).

ಅಂತಹವರ ಬುದ್ಧಿಹೀನತೆಯನ್ನು ಬಯಲುಪಡಿಸುತ್ತಾ ದಾವೀದ ಹೀಗೆ ಬರೆದಿದ್ದಾನೆ: "ನಮ್ಮನ್ನಲ್ಲ, ಯೆಹೋವನೇ, ನಮ್ಮನ್ನಲ್ಲ, ನಿನ್ನ ಪ್ರೀತಿ ಸತ್ಯತೆಗಳ ನಿಮಿತ್ತವಾಗಿ ನಿನ್ನ ಹೆಸರನ್ನೇ ಘನಪಡಿಸು. ಅವರ ದೇವರು ಎಲ್ಲಿದ್ದಾನೆಂದು ಅನ್ಯರು ಯಾಕೆ ಹೇಳಬೇಕು? ನಮ್ಮ ದೇವರು ಪರಲೋಕದಲ್ಲಿದ್ದಾನೆ; ಆತನು ತನಗೆ ಬೇಕಾದದ್ದನ್ನೆಲ್ಲಾ ಮಾಡುತ್ತಾನೆ. ಅವರ ವಿಗ್ರಹಗಳೋ ಬೆಳ್ಳಿಬಂಗಾರದವುಗಳೇ; ಅವು ಮನುಷ್ಯರ

ಕೈಕೆಲಸವಷ್ಟೇ. ಅವು ಬಾಯಿದ್ದರೂ ಮಾತಾಡುವುದಿಲ್ಲ; ಕಣ್ಣಿದ್ದರೂ ನೋಡುವುದಿಲ್ಲ. ಕಿವಿಯಿದ್ದರೂ ಕೇಳುವುದಿಲ್ಲ; ಮೂಗಿದ್ದರೂ ಮೂಸುವುದಿಲ್ಲ. ಕೈಯುಂಟು, ಮುಟ್ಟವುದಿಲ್ಲ; ಕಾಲುಂಟು ನಡೆಯುವುದಿಲ್ಲ. ಅವುಗಳ ಗಂಟಲಲ್ಲಿ ಶಬ್ಧವೇ ಇಲ್ಲ. ಅವುಗಳನ್ನು ಮಾಡುವವರೂ ಅವುಗಳಲ್ಲಿ ಭರವಸವಿಡುವವರೂ ಅವುಗಳಂತೆಯೇ" (ಕೀರ್ತನೆ 115:1–8).

ಹೊಸ ಒಡಂಬಡಿಕೆ ಪುಃನ ಈ ರೀತಿಯಾಗಿ ಹೇಳುತ್ತಿದೆ: "ಪೌಲನು ಅವರಿಗೋಸ್ಕರ ಅಥೇನೆಯಲ್ಲಿ ಕಾದು ಕೊಂಡಿರುವಾಗ ಆ ಪಟ್ಟಣದಲ್ಲಿ ಎಲ್ಲೆಲ್ಲಿಯೂ ವಿಗ್ರಹಗಳೇ ಇರುವುದನ್ನು ನೋಡಿ ಅವನ ಮನಸ್ಸು ಅವನೊಳಗೆ ಕುದಿಯಿತು" (ಅ.ಕೃ.17:16).

"ಪೌಲನು ಅರಿಯೋಪಾಗದ ಮಧ್ಯದಲ್ಲಿ ನಿಂತುಕೊಂಡು ಹೇಳಿದ್ದೇನೆಂದರೆ– ಅಥೇನೆಯ ಜನರೇ, ನೀವು ಎಲ್ಲಾದರಲ್ಲೂ ಅತಿ ಭಕ್ತಿವಂತರೆಂದು ನನಗೆ ತೋರುತ್ತದೆ. ನಾನು ನಿಮ್ಮ ಪಟ್ಟಣದಲ್ಲಿ ತಿರುಗಾಡುತ್ತಾ ನೀವು ಪೂಜಿಸುವ ದೇವತಾ ಪ್ರತಿಮೆಗಳನ್ನು ಚೆನ್ನಾಗಿ ನೋಡುತ್ತಾ ಇದ್ದಾಗ ಒಂದು ಬಲಿಪೀಠವು ನನ್ನ ಕಣ್ಣಿಗೆ ಬಿತ್ತು; ಅದರ ಮೇಲೆ ತಿಳಿಯದ ದೇವರಿಗೆ ಎಂದು ಬರೆದಿತ್ತು. ಆದಕಾರಣ ನೀವು ಯಾವದನ್ನು ತಿಳಿಯದೇ ಪೂಜಿಸುತ್ತೀರೋ ಅದನ್ನೇ ನಿಮಗೆ ತಿಳಿಯಪಡಿಸುತ್ತೇನೆ" (ಅ.ಕೃ.17:22–23). ಜಗತ್ತನ್ನು ಅದರಲ್ಲಿರುವ ಸಮಸ್ತವನ್ನೂ ಉಂಟುಮಾಡಿದ ದೇವರು ಕೈಯಿಂದ ಕಟ್ಟಿರುವ ಗುಡಿಗಳಲ್ಲಿ ವಾಸಮಾಡುವವನಲ್ಲ. ಕೊರತೆಯಿದ್ದವನಂತೆ ಮನುಷ್ಯರ ಕೈಗಳಿಂದ ಸೇವೆ ಹೊಂದುವವನಲ್ಲ. ಅಂತಹ ದೇವರನ್ನು ನಾನು ಆರಾಧಿಸುತ್ತಿದ್ದೇನೆಂದು ಪೌಲನು ಅವರಿಗೆ ಹೇಳಿದನು. ಮತ್ತೊಂದು ಸಂದರ್ಭದಲ್ಲಿ "ವಿಗ್ರಹಗಳಿಗೆ ನೈವೆದ್ಯ ಮಾಡಿದ ಪದಾರ್ಥಗಳನ್ನು ತಿನ್ನುವುದರ ವಿಷಯದಲ್ಲಿ ಹೇಳುವುದೇನೆಂದರೆ ಜಗತ್ತಿನಲ್ಲಿ ವಿಗ್ರಹವು ವಿಗ್ರಹವು ಏನೂ ಅಲ್ಲವೆಂದೂ ಒಬ್ಬ ದೇವರಿದ್ದಾನೆ ಹೊರತು ಬೇರೆ ದೇವರಿಲ್ಲವೆಂದೂ ಬಲ್ಲೆವು. ಅನೇಕರನ್ನು ದೇವರುಗಳೆಂದೂ, ಕರ್ತರೆಂದೂ ಪೂಜಿಸುವುದುಂಟು. ನಿಜವೇ; ಆಕಾಶದಲ್ಲಿಯಾಗಲೀ, ಭೂಮಿಯಮೇಲೆಯಾಗಲೀ ದೇವರುಗಳೆನಿಸಿ ಕೊಳ್ಳುವವರಿದ್ದಾರೆ, ನಮಗಾದರೋ ಒಬ್ಬನೇ ದೇವರಿದ್ದಾನೆ; ಆತನು ತಂದೆಯೆಂಬಾತನೇ; ಆತನು ಸಮಸ್ತಕ್ಕೂ ಮೂಲಕಾರಣನೂ; ನಾವು ಆತನಿಗಾಗಿ ಉಂಟಾದೆವು" (1ಕೊರಿಂಥ 8:4–6).

ಆದ್ದರಿಂದ ಬೈಬಲ್ ವಿಗ್ರಹಾರಾಧನೆಯನ್ನು ಖಂಡಿಸುತ್ತದೆ. ಅಷ್ಟು ಮಾತ್ರವಲ್ಲದೇ ವಿಗ್ರಹಾರಾಧಕರು, ಸುಳ್ಳುಗಾರರು ಇನ್ನೂ ಮೊದಲಾದವರನ್ನು ಅಗ್ನಿಗಂಧಕಗಳು ಉರಿಯುವ ಕೆರೆಯಲ್ಲಿ (ನರಕದಲ್ಲಿ) ದೊಬ್ಬಲ್ಪಡುವರು. ಅದೇ ಅವರಿಗೆ ಸಿಕ್ಕುವ ಪಾಲು. (ಪ್ರಕಟನೆ 21:8). ಎಂದು ಹೇಳುತ್ತದೆ. ಬೈಬಲ್ ಪ್ರಕಾರ, ಪ್ರಕೃತಿಯ ಪ್ರಕಾರ ನಮಗೆ ಕೊಡಲ್ಪಟ್ಟ ಜ್ಞಾನದ ಪ್ರಕಾರ ಒಬ್ಬನೇ ದೇವರಿದ್ದಾನೆಂದು ನಾವು ಗ್ರಹಿಸಬೇಕು (ಎಫೆಸ 4:6). ದೇವರೊಬ್ಬನೇ, ಆತ್ಮನು ಒಬ್ಬನೇ, (ಯೋಹಾನ4:24). ಆತನನ್ನು ಮಾತ್ರ ನಾವು ಸೇವಿಸಬೇಕು, ಆರಾಧಿಸಬೇಕು (1ಥೆಸಲೋನಿಕ 1:9).

## 5. ಕ್ರಿಸ್ತನ ರಕ್ತ
## (The Blood of Christ)

ಮನುಷ್ಯನು ದೇವರೊಂದಿಗೆ ಸಹವಾಸ ಮಾಡುವಲ್ಲಿ ರಕ್ತವು ಯಾವಾಗಲೂ ಒಂದು ಪ್ರಮುಖ ಪಾತ್ರವಹಿಸುತ್ತದೆ. ಹಳೆಯ ಒಡಂಬಡಿಕೆ ಕಾಲದಲ್ಲಿ ಪ್ರಾಣಿಗಳನ್ನು ಬಲಿ ಕೊಡುವುದರಲ್ಲಿ ಈ ಸಂಗತಿ ಸತ್ಯವಾಗಿದೆ. ಆದರೆ ಈ ಬಲಿಗಳು ಪಾಪವನ್ನು ಸಂಪೂರ್ಣವಾಗಿ ತೆಗೆದುಹಾಕಲಿಲ್ಲ. "ಹೋರಿಗಳ ಮತ್ತು ಹೋತಗಳ ರಕ್ತದಿಂದ ಪಾಪಗಳು ಪರಿಹಾರವಾಗುವುದು ಅಸಾಧ್ಯವಾಗಿದೆಯಲ್ಲ" ಎಂದು ಇಬ್ರಿಯ10:4ರಲ್ಲಿ ಬರೆಯಲ್ಪಟ್ಟಿದೆ. ಪ್ರಾಣಿಗಳ ರಕ್ತವು ಪಾಪಗಳನ್ನು ತೆಗೆದುಹಾಕದೇ ಹೋದಾಗ ಮನುಷ್ಯನು ರಕ್ಷಿಸಲ್ಪಡುವುದು ಹೇಗೆ? ಹೊಸ ಒಡಂಬಡಿಕೆಯಲ್ಲಿ ನಾವು ನೋಡುವುದಾದರೆ ಪ್ರತಿ ಪಾಪಿಯೂ ಕ್ರಿಸ್ತನ ರಕ್ತದಲ್ಲಿ ತೊಳೆಯಲ್ಪಟ್ಟು ರಕ್ಷಣೆಹೊಂದುವ ಹಾಗೆ ಆತನ ರಕ್ತವು ಒಂದೇ ಸಾರಿ ಸುರಿಸಲ್ಪಡಬೇಕೆಂದು ತಿಳಿಯುತ್ತದೆ. ಆದ್ದರಿಂದ ಇಂದಿನ ಪಾಠವು ಇದರಿಂದ ಆರಂಭವಾಗುತ್ತದೆ.

ಮನುಷ್ಯನು ಪಾಪಿಯಾಗಿರುವುದರಿಂದ ತನ್ನನ್ನು ತಾನು ರಕ್ಷಿಸಿಕೊಳ್ಳಲಾರನು. ಪೌಲನು ಹೀಗೆ ಹೇಳುತ್ತಿದ್ದಾನೆ: "ಆದರೆ ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣ ಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ" (ರೋಮ 5:8). 1ಕೊರಿಂಥ 15:3ರಲ್ಲಿ ಕ್ರಿಸ್ತನು ನಮ್ಮ ಪಾಪಗಳಿಗಾಗಿ ಸತ್ತನು. ಆತನು ಸತ್ತದ್ದು ಶಿಲುಬೆಯ ಮೇಲೆ (ಫಿಲಿಪ್ಪಿ 2:8). ಕ್ರಿಸ್ತನು ತನ್ನ ಮರಣದಲ್ಲಿ ರಕ್ತವನ್ನು ಸುರಿಸಿದ್ದಾನೆ. ಅದರ ಮೂಲಕ ನಾವು ಪಾಪಕ್ಷಮಾಪಣೆಯನ್ನು ಹೊಂದುತ್ತೇವೆ ಆದರೆ ಆತನು ಸುರಿಸಿದ ರಕ್ತವನ್ನು ನಾವು ಹೇಗೆ ಮುಟ್ಟಬಹುದು? ಎಂಬ ಪ್ರಶ್ನೆ ಬರಬಹುದು. ನಂಬಿಕೆಯಿಂದ ಆ ರೀತಿ ಮಾಡಬಹುದು ಎಂದು ಅನೇಕ ಭಕ್ತರು ಹೇಳುತ್ತಾರೆ. ಹೌದು, ನಂಬಿಕೆಯು ಬಹಳ ಅವಶ್ಯಕವಾಗಿದೆ. ಆದರೆ ನಂಬಿಕೆ ಮಾತ್ರ ಸಾಲದು, ಲೇಖನಗಳನ್ನು (ವಾಕ್ಯಗಳನ್ನು) ಓದುತ್ತಿದ್ದಾಗ ನಾವು ಆತನಿಗೆ ವಿಧೇಯತೆಯನ್ನು ತೋರಿಸಬೇಕೆಂದು ತಿಳಿದುಕೊಳ್ಳುತ್ತೇವೆ. (ಇಬ್ರಿಯ5:8–9). ನಾವು ವಾಕ್ಯದ ಪ್ರಕಾರ ನಡೆದುಕೊಳ್ಳುವವರಾಗಿರಬೇಕು (ಯಾಕೋಬ1:123). ಆತನ ಆಜ್ಞೆಗಳನ್ನು ಕೈಗೊಂಡು ನಡೆಯುವವರಾಗಿರಬೇಕು (ಯೋಹಾನ14:15). ಆದ್ದರಿಂದ ನಾವು ಆತನಿಗೆ ವಿಧೇಯರಾದಾಗ ಆತನ ರಕ್ತದ ಬಳಿಗೆ ಸಮೀಪಿಸುವೆವು. ಈಗ ನಾವೇನು ಮಾಡಬೇಕು ಎಂದು ಆತನು ಆಜ್ಞಾಪಿಸುತ್ತಿದ್ದಾನೆ? ಕೆಲವು ವಚನಗಳನ್ನು ಗಮನಿಸೋಣ. ಆತನು ಹೀಗೆ ಹೇಳಿದ್ದಾನೆ: "ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆಯನ್ನು ಹೊಂದುವನು.

ನಂಬದವನಿಗೆ ಶಿಕ್ಷೆಯಾಗುವುದು' (ಮಾರ್ಕ16:16). ಒಬ್ಬನು ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವುದರ ಮೂಲಕ ರಕ್ಷಣೆ ಹೊಂದುವನೆಂದು ಕ್ರಿಸ್ತನು ಹೇಳಿದ್ದರಿಂದ ಆತನಿಗೆ ಒಳಗಾಗುವುದರ ಮೂಲಕ ಅವನು ಆತನ ರಕ್ತದ ಬಳಿಗೆ ಬಂದಾಗ ತನ್ನ ಪಾಪಗಳಿಂದ ಶುದ್ಧಿಮಾಡಲ್ಪಡುವನೆಂದು ಗ್ರಹಿಸಬಹುದು. ಪಾಪಿಗಳಾದ ಜನಸಮೂಹಕ್ಕೆ ಪೇತ್ರನು ಹೀಗೆ ಹೇಳಿದ್ದಾನೆ: "ನಿಮ್ಮ ಪಾಪಗಳು ಪರಿಹಾರವಾಗುವುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬನೂ ಯೇಸುಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ. ಆಗ ನೀವು ಪವಿತ್ರಾತ್ಮನ ದಾನವನ್ನು ಹೊಂದುವಿರಿ" (ಅ.ಕೃ.2:38). ಮತ್ತೆ ಒಬ್ಬನು ಪಾಪಕ್ಷಮಾಪಣೆ ಹೊಂದಬೇಕಾದರೆ ಮಾನಸಾಂತರ ಹೊಂದಿ ದೀಕ್ಷಾಸ್ನಾನ ಹೊಂದಬೇಕು ಎಂದು ಗ್ರಹಿಸುತ್ತೇವೆ.

ಕ್ರಿಸ್ತನು ತನ್ನನ್ನು ತಾನು ಒಂದು ಪರಿಪೂರ್ಣವಾದ ಒಂದು ಬಲಿಯನ್ನಾಗಿ ಅರ್ಪಿಸಿಕೊಂಡನು. ಮನುಷ್ಯನು ಪಾಪದಿಂದ ಬಿಡುಗಡೆಯಾಗಲು ಆತನು ತನ್ನ ರಕ್ತವನ್ನು ಸುರಿಸಿದನು. ಆದ್ದರಿಂದ ಆತನು ಕೊಡುವ ಈ ಆಜ್ಞೆಗಳಿಗೆ ಒಳಗಾಗುವುದರಿಂದ ಆತನ ರಕ್ತವನ್ನು ಸಮೀಪಿಸಿದ ಮನುಷ್ಯನು ಪಾಪ ಪರಿಹಾರಹೊಂದುವನು. ಪೌಲನು ಮಾನಸಾಂತರ ಹೊಂದುವಾಗ ಆತನಿಗೆ ಕೊಡಲ್ಪಟ್ಟ ಆಜ್ಞೆ "ನೀನೇಕೆ ಸಾವಕಾಶ ಮಾಡುತ್ತಿ? ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನ ಮಾಡಿಸಿಕೊಂಡು ನಿನ್ನ ಪಾಪಗಳು ತೊಳೆದುಕೋ ಅಂದನು" (ಅ.ಕೃ. 22:16). ವಿಶೇಷತೆ ಅಥವಾ ಶಕ್ತಿ ನೀರಿನಲಿಲ್ಲ ಆತನಿಗೆ ಒಳಗಾಗುವುದರಲ್ಲಿಯೇ ಇದೆ. ಈ ರೀತಿ ಒಬ್ಬನು ಕರ್ತನಿಗೆ ವಿಧೇಯನಾಗುವುದರಿಂದ ಆತನ ರಕ್ತವು ಅವನ ಪಾಪಗಳನ್ನು ತೊಳೆದು ಪವಿತ್ರಮಾಡುವುದು. ಇದು ಬಹು ಸೂಕ್ಷ್ಮವಾದದ್ದು.

ರೋಮಾ 6:3–6ರಲ್ಲಿ ಅಪೊಸ್ತಲನಾದ ಪೌಲನು ಹೀಗೆ ಬರೆಯುತ್ತಾನೆ "ಕ್ರಿಸ್ತ ಯೇಸುವಿನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರೂ ಆತನ ಮರಣದಲ್ಲಿ ಪಾಲುಗಾರರಾಗುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೊ? ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು. ಹೇಗೆಂದರೆ ನಾವು ಆತನ ಮರಣಕ್ಕೆ ಸಾದೃಶ್ಯವಾದ

ಮರಣವನ್ನು ಹೊಂದಿ ಆತನಲ್ಲಿ ಐಕ್ಯವಾಗುವೆವು. ಪಾಪಾಧೀನ ಸ್ವಭಾವವು ನಾಶವಾಗಿ ನಾವು ಇನ್ನೂ ಪಾಪದ ವಶದಲ್ಲಿರದಂತೆ ನಮ್ಮ ಪೂರ್ವಸ್ವಭಾವವು ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಟ್ಟಿತೆಂದು ತಿಳಿದಿದ್ದೇವೆ. ಸತ್ತವನು ಪಾಪದ ವಶದಿಂದ ಬಿಡುಗಡೆ ಹೊಂದಿದ್ದಾನಷ್ಟೆ." ಈಗ ಆತನೇನು ತೋರಿಸುತ್ತಿದ್ದಾನೆ? ನಮ್ಮ ವಿಧೇಯತೆಯಿಂದ ಆತನ ಮರಣದಲ್ಲಿ ಪಾಲುಗಾರರಾಗುತ್ತೇವೆಂದು ಹೇಳುತ್ತಿದ್ದಾನೆ. ಆತನ ಮರಣದ ಮೂಲಕ ಉಂಟಾದ ಮೇಲುಗಳನ್ನು ವಿಧೇಯತೆಯ ಮೂಲಕ ಹೊಂದಬಹುದು. ನಾವು ಕ್ರಿಸ್ತನ ರಕ್ತದ ಬಳಿಗೆ ಸಮೀಪಿಸಿ ಅದರ ಮೂಲಕ ತೊಳೆದುಕೊಳ್ಳುವೆವು. ಆತನ ರಕ್ತದಿಂದ ನಮ್ಮ ಅಪರಾಧಗಳು ಕ್ಷಮಿಸಲ್ಪಡುತ್ತವೆ ಎಂದು ಎಫೆಸ1:7ರಲ್ಲಿ ಬರೆಯಲ್ಪಟ್ಟಿದೆ. ನಾವು ಪಾಪಕ್ಷಮಾಪಣೆ ಹೊಂದುವುದರ ನಿಮಿತ್ತವಾಗಿ ಆತನ ರಕ್ತವು ಸುರಿಸಲ್ಪಟ್ಟಿತೆಂದು ಯೇಸು ಕ್ರಿಸ್ತನೇ ಹೇಳಿದ್ದಾನೆ. ಮತ್ತಾಯ26:4 ಈ ವಚನದ ಮೂಲಕ ಅ.ಕೃ.2:38ರಲ್ಲಿ, ಮಾರ್ಕ 16:16ರಲ್ಲಿಯೂ ಬೋಧಿಸಲ್ಪಟ್ಟ ಪಾಪ ಕ್ಷಮಾಪಣೆ, ರಕ್ಷಣೆ ನೆನಪಿಗೆ ಬರುತ್ತದೆ. ಈ ಆಜ್ಞೆಗಳಿಗೆ ಒಳಗಾಗುವುದರ ಮೂಲಕ ನಾವು ಕ್ರಿಸ್ತನ ರಕ್ತದ ಬಳಿಗೆ ಸಮೀಪಿಸಿ ಪವಿತ್ರರಾಗುವೆವು. ಇದು ಬಿಟ್ಟರೆ ಮತ್ತೊಂದು ಮಾರ್ಗವಿಲ್ಲ.

ಕ್ರಿಸ್ತನ ರಕ್ತವನ್ನು ಕುರಿತು ಇನ್ನು ಕೆಲವು ಸಂಗತಿಗಳನ್ನು ಗಮನಿಸೋಣ.

1. ಹೊಸ ಒಡಂಬಡಿಕೆ ಕ್ರಿಸ್ತನ ರಕ್ತದಿಂದ ಸ್ಥಾಪಿತವಾಗಿದೆ (ಮತ್ತಾಯ26:28).
2. ಕ್ರಿಸ್ತನ ರಕ್ತವು ಯಹೂದ್ಯರಿಗೂ, ಅನ್ಯರಿಗೂ ಮದ್ಯೆ ಇದ್ದ ಅಡ್ಡಗೋಡೆಯನ್ನು ಕೆಡವಿ ಹಾಕಿತು (ಎಫೆಸ 2:13,15).
3. ಆತನ ರಕ್ತದ ಮೂಲಕ ನಮ್ಮ ಪಾಪಗಳು ಪರಿಹಾರವಾಗುತ್ತವೆ (ಕೊಲೊಸ್ಸೆ 1:14).
4. ಆತನ ರಕ್ತದ ಮೂಲಕ ನಾವು ನೀತಿವಂತರಾಗಿ ನಿರ್ಣಯಿಸಲ್ಪಡುತ್ತೇವೆ (ರೋಮಾ 5:14).
5. ಸಭೆಯು ಆತನ ರಕ್ತದಿಂದಲೇ ಸ್ಥಾಪಿಸಲ್ಪಟ್ಟಿತು (ಅ.ಕೃ. 20:28).
6. ಆತನ ಶಿಲುಬೆಯ ರಕ್ತದ ಮೂಲಕ ಸಮಾಧಾನ ಉಂಟಾಗುತ್ತದೆ (ಕೊಲೊಸ್ಸೆ 1:20).
7. ಆತನ ಅಮೂಲ್ಯ ರಕ್ತದಿಂದ ವಿಮೋಚಿಸಲ್ಪಡುವರು (ಕೊಲೊಸ್ಸೆ 1:18,19).
8. ಯೇಸುಕ್ರಿಸ್ತನ ರಕ್ತವು ಸಕಲ ಪಾಪವನ್ನು ನಿವಾರಣೆ ಮಾಡಿ ನಮ್ಮನ್ನು ಶುದ್ಧಿ ಮಾಡುತ್ತದೆ (1ಯೋಹಾನ 1:7).

9. ಆತನು ತನ್ನ ರಕ್ತದಿಂದ ಎಲ್ಲಾ ಜನಾಂಗದವರನ್ನು ದೇವರಿಗಾಗಿ ಕೊಂಡುಕೊಂಡನು (ಪ್ರಕಟಣೆ 5:9).

10. ಯಜ್ಞದ ಕುರಿಯಾದಾತನ ರಕ್ತದಲ್ಲಿ ನಮ್ಮ ನಿಲುವಂಗಿಗಳನ್ನು ತೊಳೆದು ಶುಭ್ರಮಾಡಿದ್ದಾರೆ (ಪ್ರಕಟಣೆ 7:14).

11. ಕರ್ತನ ಭೋಜನವನ್ನು ಮಾಡುವಾಗೆಲ್ಲಾ ಕರ್ತನ ಮರಣವನ್ನು ನಾವು ಜ್ಞಾಪಕಮಾಡಿಕೊಳ್ಳುತ್ತೇವೆ (ಮತ್ತಾಯ 26:26–28; 1ಕೊರಿಂಥ 11:25).

ಕ್ರಿಸ್ತನ ರಕ್ತವನ್ನು ಕುರಿತು ನಿನ್ನ ಉದ್ದೇಶವೇನು? ಅದರ ಬಳಿಗೆ ಸಮೀಪಿಸಲು ಕರ್ತನಿಗೆ ನೀನು ಒಳಗಾಗಿರುವೆಯಾ? ಇಲ್ಲವಾದರೆ ನೀನಿನ್ನೂ ನಿನ್ನ ಪಾಪದಲ್ಲಿಯೇ ಇದ್ದೀಯ. ನೀನು ದೇವರ ಆಜ್ಞೆಗಳಿಗೆ ಒಳಗಾಗುವುದಾದರೆ ಕ್ರಿಸ್ತನ ರಕ್ತದಿಂದ ನೀನು ರಕ್ಷಣೆ ಹೊಂದುವಿ. ಆಗ ನೀನು ಕ್ರಿಸ್ತನ ರಕ್ತದಿಂದ ಸಂಪಾದಿಸಿದ ಸಭೆಯಲ್ಲಿ ಸೇರಿಸಲ್ಪಡುವಿ. ನೀನು ಕ್ರೈಸ್ತವನಾಗಿ ಪ್ರತಿ ಭಾನುವಾರ ಕರ್ತನ ಭೋಜನದಲ್ಲಿ ಪಾಲುಗಾರನಾಗುವುದರಿಂದ ಆತನ ರಕ್ತವನ್ನು ನೆನಪಿನಲ್ಲಿಟ್ಟುಕೊಂಡು, ಆತನು ಬೆಳಕಿನಲ್ಲಿರುವಂತೆ, ನೀನು ಬೆಳಕಿನಲ್ಲಿ ನಡೆದರೆ ಆಗ ಕ್ರಿಸ್ತನ ರಕ್ತವು ಸಕಲ ಪಾಪಗಳಿಂದಲೂ, ಸಕಲ ಅನೀತಿಯನ್ನೂ ಪರಿಹರಿಸಿ ಶುದ್ಧಿಮಾಡಿ ನಿನ್ನನ್ನು ನಿತ್ಯಜೀವದ ಬಹುಮಾನಕ್ಕಾಗಿ ಭದ್ರಪಡಿಸುವನು. ನಿಜವಾಗಿಯೂ ಆತನ ರಕ್ತದಲ್ಲಿ ಶಕ್ತಿಯಿದೆ.

## ೬. ಕ್ರಿಸ್ತನು ಯಾಕೆ ಮರಣಹೊಂದಿದನು ?
## (Why Christ Died)

ಕ್ರಿಸ್ತನು ಮರಣ ಹೊಂದಿದನು. ಇದು ಸತ್ಯವೆಂದು ಬೈಬಲ್ ನಿಂದಲೂ, ಸಾಮಾನ್ಯ ಚರಿತ್ರೆಯಿಂದಲೂ ರುಜುವಾಗುತ್ತದೆ ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಕೆಲವು ಸಂಗತಿಗಳನ್ನು ಆಲೋಚಿಸೋಣ:

1 ಯೇಸುಕ್ರಿಸ್ತನ ಮರಣ ಅದು ಸಾಮಾನ್ಯವಾದ ಮರಣವಲ್ಲ. ಅನೇಕರು ಬದುಕಿ ಸತ್ತು ಹೋಗಿದ್ದಾರೆ. ಮನುಷ್ಯರೆಲ್ಲರು ಮರಣ ಹೊಂದುವರೆಂದು ವಾಕ್ಯವು ಹೇಳುತ್ತದೆ (ಇಬ್ರಿಯ9:27). ಆದರೆ ಕ್ರಿಸ್ತನು ಮರಣಹೊಂದುವುದರಲ್ಲಿನ ವಿಶೇಷತೆ ಏನು? ಅನೇಕರಂತೆ ಆತನು ಬದುಕಿ ಮರಣಹೊಂದಲಿಲ್ಲವೇ? ಹೌದು, ಆದರೆ ಆತನು ಜೀವಿಸಿದ ಜೀವನವು ಬೇರೆ. ಆತನು ಮರಣಹೊಂದಿದ ಕಾರಣವು ಸಹ ಬೇರೆ. ಆತನು ಪಾಪವಿಲ್ಲದ ಜೀವಿತವನ್ನು ಜೀವಿಸಿ ಪಾಪದಲ್ಲಿರುವ ಮನುಷ್ಯರನ್ನು ರಕ್ಷಿಸುವುದಕ್ಕಾಗಿ ಮರಣಹೊಂದಿದನು (2ಕೊರಿಂಥ 5:21).

2. ಕ್ರಿಸ್ತನ ಮರಣವನ್ನು ಕುರಿತು ಪ್ರವಾದನೆಗಳಲ್ಲಿ ಹೇಳಲ್ಪಟ್ಟಿದೆ. ಪ್ರವಾದಿಯಾದ ಯೇಶಾಯನು ಹೀಗೆ ಹೇಳಿದ್ದಾನೆ: "ನಿಜವಾಗಿಯೂ ನಮ್ಮ ಸಂಕಟಗಳನ್ನು ಆತನು ಅನುಭವಿಸಿದನು; ಅವನು ಹೊತ್ತ ಹೊರೆಯು ನಮ್ಮ ಸಂಕಟವೇ, ಹೌದು; ನಾವಾದರೋ ಅವನು ದೇವರಿಂದ ಬಾಧಿತನು, ಪೆಟ್ಟು ತಿಂದವನು, ಕುಗ್ಗಿಸಲ್ಪಟ್ಟವನು ಎಂದು ಭಾವಿಸಿಕೊಂಡೆವು. ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು, ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು; ನಮಗೆ ಸುಕ್ಷೇಮವನ್ನುಂಟು ಮಾಡುವ ದಂಡನೆಯನ್ನು ಅವನು ಅನುಭವಿಸಿದನು; ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು. ನಾವೆಲ್ಲರು ಕುರಿಗಳಂತೆ ದಾರಿತಪ್ಪಿ ತೊಳಲುತ್ತಿದ್ದೆವು, ಪ್ರತಿಯೊಬ್ಬನು ತನ್ನ ತನ್ನ ದಾರಿಯನ್ನು ಹಿಡಿಯುತ್ತಿದ್ದನು; ನಮ್ಮೆಲ್ಲರ ದೋಷಫಲವನ್ನೂ ಯೆಹೋವನು ಅವನ ಮೇಲೆ ಹಾಕಿದನು" (ಯೇಶಾಯ 53:4–6).

3. ಕ್ರಿಸ್ತನು ತನ್ನ ಮರಣವನ್ನು ಕುರಿತು ಹೇಳಿದನು. "ಯೇಸು– ಈ ದೇವಾಲಯವನ್ನು ಕೆಡವಿರಿ, ನಾನು ಮೂರು ದಿನದಲ್ಲಿ ಅದನ್ನು ಎಬ್ಬಿಸುವೆನು ಅಂದನು" (ಯೋಹಾನ 2:19). ಇಲ್ಲಿ ಆತನು ತನ್ನ ದೇಹವೆಂಬ ಆಲಯವನ್ನು ಕುರಿತು ಪುನರುತ್ಥಾನವನ್ನು ಕುರಿತು ಹೀಗೆ ಹೇಳಿದನು.

4. 'ಕ್ರಿಸ್ತನು ಮರಣ ಹೊಂದುವುದಕ್ಕಾಗಿ ದೇವರಿಂದ ಕಳುಹಿಸಲ್ಪಟ್ಟನು. "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು;

ಆತನನ್ನು ನಂಬುವ ಒಬ್ಬನಾದರೂ ನಾಶವಾಗದೇ ಎಲ್ಲಾರು ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು" (ಯೋಹಾನ 3:16).

5. ಕ್ರಿಸ್ತನು ಮರಣ ಹೊಂದುವಷ್ಟು ವಿಧೇಯನಾದನು. ಆತನು ಮರಣ ಹೊಂದುವುದು ತನ್ನ ತಂದೆಗೆ ಇಷ್ಟವಾಯಿತು. "ಹೀಗೆ ಆತನು ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡಿದ್ದಾಗ ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು" (ಫಿಲಿಪ್ಪಿ 2:8).

6. ಆತನು ಪಾಪ ರಹಿತವಾಗಿ ಮರಣ ಹೊಂದಿದನು. "ಪಾಪಗಳನ್ನು ಹೋಗಲಾಡಿಸುವುದಕ್ಕಾಗಿ ಕ್ರಿಸ್ತನು ಪ್ರತ್ಯಕ್ಷನಾದನೆಂಬದು ನಿಮಗೆ ಗೊತ್ತಾಗಿದೆ; ಆತನಲ್ಲಿ ಪಾಪವಿಲ್ಲ" (1ಯೋಹಾನ 3:5).

7. ಕ್ರಿಸ್ತನು ಪಾಪಿಗಳಿಗಾಗಿ ಮರಣಹೊಂದಿದನು. "ಆದರೆ ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ" (ರೋಮಾ 5:8). "ನಾವು ದೇವರನ್ನು ಪ್ರೀತಿಸಿದ್ದರಲ್ಲಿಯಲ್ಲ, ಆತನು ನಮ್ಮನ್ನು ಪ್ರೀತಿಸಿ ನಮ್ಮ ಪಾಪ ನಿವಾರಣಾರ್ಥವಾಗಿ ತನ್ನ ಮಗನ್ನು ಕಳುಹಿಸಿಕೊಟ್ಟದ್ದರಲ್ಲಿಯೇ ಪ್ರೀತಿಯ ನಿಜಗುಣ ತೋರಿಬರುತ್ತದೆ" (1ಯೋಹಾನ 4:10).

8. ನಾವು ಜೀವಿಸುವಂತೆ ಕ್ರಿಸ್ತನು ಸತ್ತುಹೋದನು. "ದೇವರು ತನ್ನ ಒಬ್ಬನೇ ಮಗನನ್ನು ನಾವು ಆತನ ಮೂಲಕ ಜೀವಿಸುವುದಕ್ಕಾಗಿ ಲೋಕಕ್ಕೆ ಕಳುಹಿಸಲ್ಪಟ್ಟದರಲ್ಲಿಯೇ ದೇವರ ಪ್ರೀತಿಯು ನಮ್ಮಲ್ಲಿ ಪ್ರತ್ಯಕ್ಷವಾಗಿದೆ" (1ಯೋಹಾನ 4:9).

9. ಕ್ರಿಸ್ತನು ಶಿಲುಬೆಯ ಮೇಲೆ ಮರಣ ಹೊಂದಿದನು. ಅದಕ್ಕೆ ಮೀರಿದ ಘೋರವಾದ ಮರಣ ಮತ್ತೊಂದಿಲ್ಲ. ಆದರಿಂದ ಉಂಟಾಗುವ ಬಾಧೆ ಮಾತ್ರವಲ್ಲದೇ ಆತನನ್ನು ಒಬ್ಬ ಅಪರಾಧಿಯಂತೆ ಇಬ್ಬರು ಕಳ್ಳರ ನಡುವೆ ಶಿಲುಬೆಯ ಮೇಲೆ ತೂಗಿ ಹಾಕುವುದು ಆತನು ಹೊಂದಿದ ಬಾಧೆ ಮತ್ತಷ್ಟು ಹೆಚ್ಚಾಯಿತು. ಮತ್ತಾಯ27ನೇ ಅಧ್ಯಾಯವನ್ನು ಓದಿರಿ. "ನಂಬಿಕೆಯನ್ನು ಹುಟ್ಟಿಸುವವನು ಪೂರೈಸುವವನು ಆಗಿರುವ ಯೇಸುವಿನ ಮೇಲೆ ದೃಷ್ಟಿಯಿಟ್ಟು ನಮಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಓಡೋಣ. ಆತನು ತನ್ನ ಮುಂದೆ ಇಟ್ಟಿದ್ದ ಸಂತೋಷಕ್ಕೋಸ್ಕರ ಅವಮಾನವನ್ನು ಅಲಕ್ಷ್ಯಮಾಡಿ ಶಿಲುಬೆಯ ಮರಣವನ್ನು ಸಹಿಸಿಕೊಂಡು ದೇವರ ಸಿಂಹಾಸನದ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ" (ಇಬ್ರಿಯ 12:2).

10. ಹಳೆಯ ಧರ್ಮಶಾಸ್ತ್ರವನ್ನು ತೆಗೆದುಹಾಕುವುದಕ್ಕೆ ಕ್ರಿಸ್ತನು ಮರಣಹೊಂದಿದನು. "ಆತನು ನಮ್ಮ ಅಪರಾಧಗಳನ್ನೆಲ್ಲ ಕ್ಷಮಿಸಿ ನಮ್ಮ ಮೇಲೆ ದೋಷಾರೋಪಣೆ

ಮಾಡಿದಂಥ ಆಜ್ಞಾರೂಪವಾಗಿದ್ದಂಥ ಪತ್ರವನ್ನು ಕೆಡಿಸಿ ಅದನ್ನು ಶಿಲುಬೆಗೆ ಜಡಿದು ಇಲ್ಲದಂತಾಗಮಾಡಿದನು" (ಕೊಲೊಸ್ಸೆ 2:14).

11. ಒಂದು ಹೊಸ ಕಾನೂನು ಅಥವಾ ನಿಭಂದನೆಯನ್ನು ನೀಡುವುದಕ್ಕೆ ಕ್ರಿಸ್ತನು ಮರಣಹೊಂದಿದನು. (ಮತ್ತಾಯ 26:28). "ಇಲ್ಲಿ ಹೊಸ ಒಡಂಬಡಿಕೆ ಎಂದು ಹೇಳಿದ್ದರಲ್ಲಿ ಮೊದಲಿದ್ದದನ್ನು ಹಳೆಯದಾಗಿ ಮಾಡಿದ್ದಾನೆ. ಆದರೆ ಹಳೆಯದಾಗುತ್ತಾ ಮುದಿಯಾಗುವಂಥದಕ್ಕೆ ಅಂತ್ಯವು ಸಮೀಪವಾಗಿದೆ" (ಇಬ್ರಿಯ 8:13).

12. ಕ್ರಿಸ್ತನು ಸಭೆಗಾಗಿ ಮರಣಹೊಂದಿದನು. "ಪುರುಷರೇ, ಕ್ರಿಸ್ತನು ಸಭೆಯನ್ನು ಪ್ರೀತಿಸಿದ ಪ್ರಕಾರವೇ ನಿಮ್ಮ ನಿಮ್ಮ ಹೆಂಡತಿಯರನ್ನು ಪ್ರೀತಿಸಿರಿ. ಆತನು ಅದನ್ನು ಪ್ರತಿಷ್ಠೆಪಡಿಸುವುದಕ್ಕಾಗಿ ತನ್ನನ್ನು ಒಪ್ಪಿಸಿಕೊಟ್ಟನು. ಅದನ್ನು ಕಳಂಕ ಸುಕ್ಕು ಮುಂತಾದ್ದೊಂದು ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧಮಾಡಿದನು" (ಎಫೆಸ 5:25–27).

13. ನಾವು ನಿರೀಕ್ಷೆಯಿಂದ ಇರುವುದಕ್ಕಾಗಿ ಕ್ರಿಸ್ತನು ಮರಣ ಹೊಂದಿದನು. "ಆತನ ಮೇಲೆ ಈ ನಿರೀಕ್ಷೆಯನ್ನು ಇಟ್ಟಿರುವ ಪ್ರತಿಯೊಬ್ಬನು ಕ್ರಿಸ್ತನು ಶುದ್ಧನಾಗಿರುವಂತೆಯೇ ತನ್ನನ್ನು ಶುದ್ಧಮಾಡಿಕೊಳ್ಳುತ್ತಾನೆ" (1ಯೋಹಾನ 3:3).

14. ಕ್ರಿಸ್ತನು ಮರಣ ಹೊಂದಿದನು. ಆದರೆ ಸಮಾಧಿಯಲ್ಲಿಟ್ಟನಂತರ ಪುನರುತ್ಥಾನನಾಗಿ ಪರಲೋಕದಲ್ಲಿರುವ ತಂದೆಯ ಬಳಿಗೆ ಏರಿಹೋದನು. (ಮತ್ತಾಯ28:6;ಅ.ಕೃ.1:10). ಆದ್ದರಿಂದ ಮನುಷ್ಯರೆಲ್ಲರಿಗೂ ಕ್ರಿಸ್ತನ ಪುರುತ್ಥಾನವು ನಿರೀಕ್ಷಣೆಯನ್ನು ಉಂಟುಮಾಡುತ್ತದೆ.(1ಕೊರಿಂಥ 15). ನಿಜವಾಗಿ ಕ್ರಿಸ್ತನಲ್ಲಿ ಜಯವಿದೆ. (1ಯೋಹಾನ 5: 4,5).

ಕ್ರಿಸ್ತನು ಮರಣಹೊಂದಿದ್ದಕ್ಕೆ ಕೆಲವು ಕಾರಣಗಳನ್ನು ನೋಡಿದ್ದೇವೆ. ಆತನು ಕೇವಲ ಸಾಯುವುದಕ್ಕೋಸ್ಕರ ಸಾಯಲಿಲ್ಲ. ಆತನು ಒಂದು ಪ್ರತ್ಯೇಕವಾದ ಪ್ರಯೋಜನಕ್ಕಾಗಿ ಮರಣಿಸಿದನು. ಆತನು ನನಗಾಗಿಯೂ, ನಿನಗಾಗಿಯೂ ಮರಣಿಸಿದನು. ಆತನು ಎಲ್ಲಾ ಮನುಷ್ಯರಿಗಾಗಿ ಮರಣಿಸಿದನು. ನಾವು ನಾಶವಾಗದಂತೆ ರಕ್ಷಣೆ ಹೊಂದುವುದಕ್ಕೆ ಆತನು ಮರಣಿಸಿದನು. ನಾವು ಒಳ್ಳೆಯ ಜೀವನ ಮಾರ್ಗವನ್ನು ಹೊಂದುವಂತೆಯೂ, ನಿತ್ಯರಕ್ಷಣೆ ಹೊಂದುವಂತೆಯೂ ಆತನು ಮುಖ್ಯವಾಗಿ ಮರಣ ಹೊಂದಿದನು.

ನೀನು ಜೀವಿಸುವಂತೆ ಕರ್ತನು ಮರಣಹೊಂದಿ ತನ್ನ ಪ್ರೀತಿಯನ್ನು ನಿನ್ನ ಮೇಲೆ ವ್ಯಕ್ತಪಡಿಸಿದ್ದಾನೆ. ಆತನ ಪ್ರೀತಿಗೆ ಪ್ರತಿಯಾಗಿ ನೀನು ಆತನನ್ನು ಪ್ರೀತಿಸಿ ಆತನಿಗೆ ವಿಧೇಯನಾಗು. "ನೀವು ನನ್ನನ್ನು ಪ್ರೀತಿಸುವವರಾದರೆ ನನ್ನ ಆಜ್ಞೆಗಳನ್ನು ಕೈಗೊಂಡು ನಡೆಯುವಿರಿ" (ಯೋಹಾನ 14:15).

## 7. ಕ್ರಿಸ್ತನ ಸಭೆಯನ್ನು ಕುರಿತು ನೀನು ಎಂದಾದರೂ ಕೇಳಿದ್ದೀಯ?
## (Have you Ever Heard of The Church of Christ?)

ಕ್ರಿಸ್ತನ ಸಭೆಯನ್ನು ಕುರಿತು ಕೇಳದ ಅನೇಕರು ಈ ದೇಶದಲ್ಲಿದ್ದಾರೆ ಈ ಸಭೆಯನ್ನು ಕುರಿತು ನೀನು ಎಂದಾದರು ಕೇಳಿದ್ದೀಯಾ? ಇಲ್ಲವಾದರೆ ಯಾಕೆ ಕೇಳಲಿಲ್ಲಾ? ನಿನ್ನ ಹತ್ತಿರ ಬೈಬಲ್ ಇದೆಯಾ? ಯಾವ ಸಭೆಯನ್ನು ಕುರಿತು ನೀನು ಅದರಲ್ಲಿ ಓದುತ್ತಿರುವಿ? ನೀನು ಆ ಗ್ರಂಥವನ್ನು ಮತ್ತೊಂದುಸಾರಿ ಓದಿ ನೋಡಿದರೆ ಅದರಲ್ಲಿ ಒಂದು ಸಭೆಯನ್ನು ಕುರಿತು ಮಾತ್ರ ಹೇಳಲಾಗಿದೆ. ಅದು ಕ್ರಿಸ್ತನ ಸಭೆ. ಆದ್ದರಿಂದ ನೀನು ಆ ಸಭೆಯನ್ನು ಕುರಿತು ಯಾಕೆ ಕೇಳಲಿಲ್ಲ? ಉಳಿದವರು ಕೂಡ ಯಾಕೆ ಕೇಳಲಿಲ್ಲ? ನಿಮ್ಮ ಬಳಿಯಲ್ಲಿ ಅನೇಕ ವರ್ಷಗಳಿಂದ ಬೈಬಲ್ ಇದೆಯಲ್ಲವೆ? ಈ ಪ್ರಾಂತ್ಯದಲ್ಲಿನ ಅನೇಕರು ಯಾವುದೊ ಒಂದು ಸಭೆಗೆ ಸೇರಿದವರು ಆದರೆ ಕ್ರಿಸ್ತನ ಸಭೆಯ ಸಂಗತಿಯೇನು?

ಕ್ರಿಸ್ತನ ಸಭೆಯು ಲೋಕದಲ್ಲೆಲ್ಲಾ ಇದೆ. ಅದು ಪ್ರತೀ ಊರಿನಲ್ಲಿ ಇಲ್ಲವಾದರೂ ಎಲ್ಲಿಯಾದರೂ ಮನುಷ್ಯರು ಬೈಬಲನ್ನು ಓದಿ ಬೈಬಲ್ ಪ್ರಕಾರ ನಡೆದುಕೊಳ್ಳುತ್ತಾರೊ ಅಲ್ಲಿ ನೀನು ಅದನ್ನು ಕಾಣಬಹುದು. ಈ ಸಭೆಯು ಒಂದು ಮತಶಾಖೆಯಾಗಲಿ ಅದರ ಇತರ ಶಾಖೆಯಾಗಲಿ ಮಾನವ ಕಲ್ಪಿತವಾದದ್ದಾಗಲೀ ಅಲ್ಲ. ಅದು ಕ್ಯಾಥೋಲಿಕ್ ಅಥವಾ ಪ್ರೊಟೆಸ್ಟಂಟ್ ಅಥವಾ ಯೆಹೂದ್ಯರ ಸಭೆ ಅಲ್ಲ. ಹಾಗಾದರೆ ಅದು ಯಾವುದು? ಅದು ಬೈಬಲ್‌ನಲ್ಲಿ ಇರುವ ಸಭೆಯೇ. ಕರ್ತನಿಗೆ ಒಳಗಾಗಿ ಆತನಲ್ಲಿ ನಂಬಿಕೆಯಿಂದಿರುವವರೆಲ್ಲರೂ ಆ ಸಭೆಯಲ್ಲಿ ಇರುವರು.

ಈ ಸಭೆಯ ಸ್ಥಾಪಕನು ಯೇಸು ಕ್ರಿಸ್ತ. ಈ ಸಂಗತಿಯನ್ನು ನೀನೇ ಓದಿ ಗ್ರಹಿಸಿಕೊ. ಮತ್ತಾಯ16:18ರಲ್ಲಿ ಕ್ರಿಸ್ತನು "ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು" ಎಂದು ಹೇಳಿದನು.

ಅದು ಯರೂಸಲೇಮ್ ಪಟ್ಟಣದಲ್ಲಿ ಪ್ರಾರಂಭವಾಯಿತು. ನೀನು ಲೂಕ 24, ಅ.ಕೃ. 2ನೇ ಅಧ್ಯಾಯವನ್ನು ಓದಿದಾಗ ಅದು ಸತ್ಯವೆಂದು ನೀನೆ ಗ್ರಹಿಸಿಕೊಳ್ಳುತ್ತೀ. ಅದು ಲಂಡನ್‌ನಲ್ಲಿಯಾಗಲಿ, ಜರ್ಮನಿಯಲ್ಲಾಗಲಿ, ಅಮೇರಿಕದಲ್ಲಾಗಲಿ ಪ್ರಾರಂಭಿಸಲ್ಪಡಲಿಲ್ಲ. ಆದರೆ ಯೆರೂಸಲೇಮಿನಲ್ಲಿ ಆರಂಭವಾಯಿತು.

ಕ್ರಿಸ್ತನ ಸಭೆಯು ಕ್ರಿ.ಶ 33ನೇ ವರ್ಷದಲ್ಲಿ ಸ್ಥಾಪಿಸಲ್ಪಟ್ಟಿತು. ಅಂದರೆ ಅದು

ಸರಿಸುಮಾರು ಎರಡು ಸಾವಿರ ವರ್ಷಗಳಷ್ಟು ಪುರಾತನವಾದದು. ನೀನು ಪುನಃ ಅ.ಕೃ. 2ನೇ ಅಧ್ಯಾಯವನ್ನು ಓದಿದರೆ ಸಭೆಯ ಪ್ರಾರಂಭವನ್ನು ಕುರಿತು ಮತ್ತು ಅದರ ಜನನದ ಕಾಲವನ್ನು ಕುರಿತು ಗ್ರಹಿಸಿಕೊಳ್ಳುವಿ.

ಅದನ್ನು ನಿರ್ಮಿಸಿದವನು ಕ್ರಿಸ್ತನೇ ಆದ್ದರಿಂದ ಅದು ಕ್ರಿಸ್ತನ ಹೆಸರನ್ನು ಧರಿಸಿಕೊಂಡಿದೆ. "ಕ್ರಿಸ್ತನ ಸಭೆಗಳೆಲ್ಲಾ ನಿಮ್ಮನ್ನು ವಂದಿಸುತ್ತವೆ" ಎಂದು ಬರೆಯಲ್ಪಟ್ಟಿದೆ (ರೋಮಾ16:16). ಅದರ ಸದಸ್ಯರಿಗೂ ಸಹ ಅನ್ವಯಿಸುತ್ತದೆ. "ಅಂತಿಯೋಕ್ಯದಲ್ಲಿಯೇ ಶಿಷ್ಯರಿಗೆ ಕ್ರೈಸ್ತರೆಂಬ ಹೆಸರು ಮೊದಲು ಬಂತು" (ಅ.ಕೃ.11:26). ಬೈಬಲ್ ಮಾತ್ರವೇ ಕ್ರೈಸ್ತರನ್ನು ಮಾಡುತ್ತದೆ. ಇದನ್ನು ಜ್ಞಾಪಕದಲ್ಲಿಟ್ಟುಕೊ.

ಕ್ರಿಸ್ತನು ಒಂದೇ ಒಂದು ಸಭೆಯನ್ನು ಸ್ಥಾಪಿಸಿದನು. ಎಫೆಸ4:4 ರಲ್ಲಿ ಶರೀರವು ಒಂದೇ ಎಂದು ಹೇಲ್ಪಟ್ಟಿದೆ. ಕೊಲೆಸ್ಸೆ 1:18ರಲ್ಲಿ ಆ ಶರೀರವೇ ಸಭೆಯೆಂದು ಬರೆಯಲ್ಪಟ್ಟಿದೆ ಆದ್ದರಿಂದ ಸಭೆಯು ಒಂದೆ.

ಕ್ರಿಸ್ತನು ಸಭೆಗೆ ಶಿರಸ್ಸಾಗಿದ್ದಾನೆ. "ಕ್ರಿಸ್ತನು ಸಭೆಗೆ ತಲೆಯಾಗಿರುವ ಪ್ರಕಾರವೇ ಗಂಡನು ಹೆಂಡತಿಗೆ ತಲೆಯಾಗಿದ್ದಾನೆ" (ಎಫೆಸ5:23). ಕರ್ತನ ಸಭೆಗೆ ಈ ಲೋಕದಲ್ಲಿ ಒಂದು ಪ್ರಧಾನ ಕಾರ್ಯಾಲಯ ಇಲ್ಲ. ಅದಕ್ಕೆ ಒಬ್ಬ ಭೂ ಸಂಬಂಧವಾದ ಅಧಿಕಾರಿ ಇಲ್ಲ. ಕ್ರಿಸ್ತನೇ ಆ ಅಧಿಕಾರಿ ಆತನು ಪರಲೋಕದಲ್ಲಿ ದೇವರ ಬಲಗಡೆಯಲ್ಲಿದ್ದುಕೊಂಡು ಆಳ್ವಿಕೆ ಮಾಡುತ್ತಿದ್ದಾನೆ.

ಕ್ರಿಸ್ತನು ಸಭೆಗೆ ರಕ್ಷಕನಾಗಿದ್ದಾನೆ. "ಕ್ರಿಸ್ತನು ಸಭೆಯೆಂಬ ದೇಹಕ್ಕೆ ರಕ್ಷಕನಾಗಿದ್ದಾನೆ" ಎಂದು ಎಫೆಸ5:23 ಹೇಳುತ್ತೆದೆ. ಆದ್ದರಿಂದ ಯಾವನಾದರೂ ರಕ್ಷಣೆ ಹೊಂದಬೇಕಾದರೆ ಅವನು ಕ್ರಿಸ್ತನ ಸಭೆಯ ಸದಸ್ಯನಾಗಿರಬೇಕು.

ಕ್ರಿಸ್ತನು ಸಭೆಗೋಸ್ಕರ ಮರಣಹೊಂದಿದನು (ಎಫೆಸ5:25;ಅ.ಕೃ.20;28). ಸಭೆಯನ್ನು ಆತನು ಅಷ್ಟಾಗಿ ಪ್ರೀತಿಸಿದನು. ಅದನ್ನು ಕುರಿತು ನಿನ್ನ ಅಭಿಪ್ರಾಯವೇನು?

ರಕ್ಷಿಸಲ್ಪಟ್ಟವರು ಸಭೆಯೊಂದಿಗೆ ಸೇರಿಸಲ್ಪಟ್ಟರು(ಅ.ಕೃ.2:47). ರಕ್ಷಣೆಹೊಂದಿದ ಪ್ರತಿಯೊಬ್ಬರನ್ನು ಕ್ರಿಸ್ತನು ಸರಿಯಾದ ಸಭೆಯೊಂದಿಗೆ ಅಂದರೆ ತನ್ನ ಸಭೆಯಲ್ಲಿ ಸೇರಿಸಿಕೊಳ್ಳುವನು.

ಆತನು ತನ್ನ ಸಭೆಗಾಗಿ ಪುನಃ ಬರುತ್ತಿದ್ದಾನೆ (ಎಫೆಸ 5:27). ಆತನು ತಿರುಗಿ ಬಂದಾಗ ನೀನು ಅದರಲ್ಲಿ ಸದಸ್ಯನಾಗಿರದೇ ಹೋದರೆ ನಿನ್ನ ಸಂಗತಿಯೇನು? ಅದನ್ನು ಕುರಿತು ನೀನು ಆಲೋಚಿಸು.

ಕ್ರಿಸ್ತನ ಸಭೆಯು ಈ ಪ್ರಾಂತ್ಯದಲ್ಲಿ, ಈ ಪಟ್ಟಣದಲ್ಲಿ, ಈ ಸಮಾಜದಲ್ಲಿ ಬಂದಿದೆ. ನೀನು ಕರ್ತನನ್ನು ಪ್ರೀತಿಸಿ ಆತನ ವಾಕ್ಯವನ್ನು ಕೈಗೊಂಡು ಅದರ ಬೋಧನೆಗೆ ಒಳಗಾದರೆ ನೀನು ಕೂಡ ಆ ಸಭೆಯ ಸದಸ್ಯನಾಗಬಹುದು. ಆ ರೀತಿ ಮಾಡುವುದರಿಂದ ನೀನು ದೇವರ ವಾಕ್ಯದಲ್ಲಿ, ದೇವರಲ್ಲಿ, ಆತನ ಮಗನಾದ ಕ್ರಿಸ್ತನಲ್ಲಿ ನಂಬಿಕೆ ಇಡಬಹುದು (ಇಬ್ರಿಯ 11:6; ಯೋಹಾನ 14:1–3; ರೋಮಾ 10:17). ನೀನು ನಿನ್ನ ಪಾಪಗಳನ್ನು ಬಿಟ್ಟು ಮಾನಸಾಂತರ ಹೊಂದಿ ದೇವರ ಕಡೆಗೆ ತಿರುಗಿಕೊಳ್ಳುವಿ (ಲೂಕ13:3;ಅ.ಕೃ.17:30;ಅ.ಕೃ.2:38). ಆಗ ನೀನು ಕ್ರಿಸ್ತನನ್ನು ದೇವರ ಮಗನೆಂದು ಒಪ್ಪಿಕೊಂಡು (ರೋಮಾ10:10; ಮತ್ತಾಯ 10:32) ನಿನ್ನ ಪಾಪಗಳ ಕ್ಷಮಾಪಣೆಗಾಗಿ ದೀಕ್ಷಾಸ್ನಾನ ಮಾಡಿಸಿಕೊ (ಅ.ಕೃ.2:38; ಮಾರ್ಕ 16:16; ರೊಮಾ 6:3–4; ಗಲಾತ್ಯ 3:26,27; 1ಪೇತ್ರ 3:21). ಇದರ ಫಲವಾಗಿ ಕರ್ತನು ತನ್ನ ಸಭೆಗೆ ನಿನ್ನನ್ನು ಸೇರಿಸಿಕೊಳ್ಳುವನು (ಅ.ಕೃ.2:47). ಆಗ ನೀನು ಕ್ರಿಸ್ತನ ಸಭೆಯ ಸದಸ್ಯನಾಗುವಿ. ಕರ್ತನನ್ನು ಪ್ರೀತಿಸಿ ಆತನಿಗೆ ವಿಧೇಯತೆಯಿಂದ ನಂಬಿಗಸ್ತನಾಗಿ ಜೀವಿಸುವ ಕಾಲವೆಲ್ಲಾ ಆ ಸಭೆ ನಿಲ್ಲುತ್ತದೆ. ಇದರಿಂದಾಗಿ ನೀನು ಮತ್ತೊಂದು ಸಭೆಗಾಗಲಿ, ಮತ ಶಾಖೆಗಾಗಲಿ ಸಂಭಂದ ಪಟ್ಟವನಲ್ಲ. ಹೇಗೆಂದರೆ ಕ್ರಿಸ್ತನ ಸಭೆಯು ಒಂದು ಮತ ಶಾಖೆಯಲ್ಲ.

ನೀನು ಕ್ರಿಸ್ತನ ಸಭೆಯನ್ನು ಕುರಿತು ಇನ್ನೂ ತಿಳಿದುಕೊಳ್ಳಬೇಕಾದರೆ ನಿನ್ನಲ್ಲಿರುವ ಬೈಬಲ್‌ನ್ನು ಓದು. ನೀನು ನಮ್ಮನ್ನು ಸಂಪರ್ಕಿಸಿ ನಾವು ಕೊಡುವ ಉಚಿತ ಬೈಬಲ್ ಕರೆಸ್ಪಂಡೆನ್ಸ್ ತರಗತಿಯಲ್ಲಿ ಸೇರಬೇಕೆಂದು ನಿನ್ನನ್ನು ಆಹ್ವಾನಿಸುತ್ತೇವೆ.

"ದೇವರಿಗೆ ಸಭೆಯಲ್ಲಿಯೂ ಕ್ರಿಸ್ತಯೇಸುವಿನಲ್ಲಿಯೂ ತಲತಲಾಂತರಕ್ಕೂ ಯುಗಯುಗಾಂತರಕ್ಕೂ ಸ್ತೋತ್ರ, ಆಮೆನ್" (ಎಫೆಸ 3:21).

## ೮. ಕ್ರಿಸ್ತನ ಸಭೆ ಅಂದರೆ ಏನು?
## (What is the Church of Christ?)

ಇಂದು ಲೋಕದಲ್ಲೆಲ್ಲಾ ಅನೇಕ ಸಭೆಗಳಿವೆ. ಅನೇಕ ವಿಷಯಗಳಲ್ಲಿ ಅವು ಒಂದೇ ರೀತಿಯಾಗಿವೆ ಅವು ಮನುಷ್ಯರಿಂದ ಸ್ಥಾಪಿಸ್ಪಟ್ಟಿವೆ. ಅವುಗಳಲ್ಲಿ ಸದಸ್ಯತ್ವ ಇಲ್ಲದೆಯೇ ಒಬ್ಬನು ಪರಲೋಕಕ್ಕೆ ಸೇರಬಹುದು ಎಂದು ಆ ಸಭೆಗಳ ಸದಸ್ಯರು ಹೇಳುತ್ತಾರೆ. ಆದ್ದರಿಂದ ಅವು ಅಷ್ಟು ಪ್ರಾಮುಖ್ಯವಲ್ಲ. ಅವೆಲ್ಲವೂ ಲೆಕ್ಕವಿಲ್ಲದಷ್ಟು ಮತಶಾಖೆಗಳಂತೆ ವಿಭಜಿಸಲ್ಪಟ್ಟಿವೆ ಆದರೆ ಎಲ್ಲಾ ಮತಶಾಖೆಗಳು ಒಳ್ಳೇವೆಂದು ಹೇಳುವಲ್ಲಿ ಅವರು ಐಕ್ಯವಾಗಿದ್ದಾರೆ. ಅವರು ಎಲ್ಲಾ ವಿಧವಾದ ಬಿರುದುಗಳನ್ನು ಹೆಸರುಗಳನ್ನು ಧರಿಸುತ್ತಾರೆ, ಅವರಲ್ಲಿ ಪ್ರತಿಯೊಬ್ಬರಿಗೂ ಒಂದೊಂದು ಕಾರ್ಯ ಚಟುವಟಿಕೆ ಪುಸ್ತಕ ಅಥವಾ ವಿಶ್ವಾಸ ಪ್ರಮಾಣ ಸೂತ್ರದ ಪುಸ್ತಕ ಇರುತ್ತದೆ. ಆದರೆ ಇಂತ ಮತಶಾಖೆಗಳೊಂದಿಗೆ ಹೊಂದಿಕೆ ಇಲ್ಲದೆ ಒಂದು ಸಭೆಯುಂಟು. ಅದು ಉಳಿದ ಎಲ್ಲವುಗಳಿಗಿಂತಲೂ ಪ್ರತ್ಯೇಕವಾಗಿದೆ. ಅದುವೇ ಕ್ರಿಸ್ತನ ಸಭೆ.

ಕ್ರಿಸ್ತನ ಸಭೆ ಒಂದು ಡಿನಾಮಿನೇಷನ್(ಮತಶಾಖೆ)ಅಲ್ಲ. ಅಂದರೆ ವಿಭಾಗಿಸಲ್ಪಟ್ಟ ಮತ್ತೊಂದು ಮತಶಾಖೆ ಅಲ್ಲವೇ ಅಲ್ಲ. ಅದು ಕ್ಯಾಥೋಲಿಕ್, ಪ್ರೊಟೆಸ್ಟಂಟ್ ಅಲ್ಲವೇ ಅಲ್ಲ. ಅದು ಒಂದು ಬ್ರಾಂಡ್ ಅಲ್ಲ. ಅದು ಒಬ್ಬ ಮನುಷ್ಯನಿಂದ ಪ್ರಾರಂಭಿಸಲ್ಪಟ್ಟಿಲ್ಲ. ಅದಕ್ಕೊಬ್ಬ ಮಾನವ ಅಧಿಕಾರಿ, ಕಾರ್ಯದರ್ಶಿ ಇಲ್ಲ ಅದು ಮನುಷ್ಯರ ಹೆಸರನ್ನಂತೂ ಧರಿಸುವುದೇ ಇಲ್ಲ. ಮನುಷ್ಯರು ಬರೆದ ಪುಸಕ್ತಗಳನ್ನು ಅನುಸರಿಸಿ ಅದು ನಡೆಯದು. ಅದು ರಾಜಕೀಯವಾಗಿ, ಸಾಮಾಜಿಕವಾಗಿ ಇರುವ ಒಂದು ಸಂಸ್ಥೆ ಅಲ್ಲ. ಹಾಗಾದರೆ ಅದು ಏನು...? ಅದು ಏನಾಗಿರಬಹುದು...? ಅದನ್ನು ನಾವೀಗ ಪರಿಶೀಲಿಸೋಣ.

ಸಭೆ ಎಂಬ ಪದವು "ಎಕ್ಲೇಷಿಯ" ಎಂಬ ಗ್ರೀಕ್ ಪದದಿಂದ ಬಂದಿದೆ. ಅಂದರೆ 'ಕರೆಯಲ್ಪಟ್ಟವರು' ಎಂದು ಅರ್ಥ. ಈ ಲೋಕದೊಳಗಿಂದ ಕರ್ತನ ಸೇವೆಗೆ ಕರೆಯಲ್ಪಟ್ಟವರಿಂದ ಅದು ಆರಂಭವಾಗಿದೆ. "ದೇವರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು" ಕೊಲೊಸ್ಸೆ 1:13ರಲ್ಲಿ ಬರೆಯಲ್ಪಟ್ಟಿದೆ.

ಸಭೆಯನ್ನು ಕುರಿತು ಎರಡು ಭಾಗಗಳಾಗಿ ಬೈಬಲ್ ಹೇಳುತ್ತದೆ. ಅದು ಸಾರ್ವಜನಿಕವಾದ ಭಾವ. "ನಾನು ನನ್ನ ಸಭೆಯನ್ನು ಕಟ್ಟುವೆನೆಂದು" ಕ್ರಿಸ್ತನು ಹೇಳಿದಾಗ ಆತನು ತನ್ನ ಸಾರ್ವಜನಿಕ ಸಭೆಯನ್ನು ಕುರಿತು ಹೇಳಿದ್ದಾನೆ (ಮತ್ತಾಯ16:18).

ಎರಡನೆಯದಾಗಿ ಸ್ಥಾನಿಕ ಸಭೆಗಳು ಎಂಬ ಭಾವ. ಕೊರಿಂಥದಲ್ಲಿರುವ ಸಭೆ, ಥೆಸಲೋನಿಕದಲ್ಲಿರುವ ಸಭೆ ಎಂದು ಸ್ಥಾನಿಕ ಸಭೆಗಳನ್ನು ಕುರಿತು ನಾವು ಓದುತ್ತೇವೆ (1ಕೊರಿಂಥ1:2;1ಥೆಸ1:1). ಈ ಸ್ಥಾನಿಕ ಸಭೆಗಳು "ಕ್ರಿಸ್ತನ ಸಭೆಗಳೆಲ್ಲಾ ನಿಮ್ಮನ್ನು ವಂದಿಸುತ್ತವೆ" (ರೋಮಾ16:16) ಎಂದು ಪೌಲನು ಹೇಳಿದ್ದಾನೆ. ನಾವು ಪ್ರಕಟನೆ ಗ್ರಂಥದಲ್ಲಿ ಆಸ್ಯಸೀಮೆಯಲ್ಲಿರುವ ಏಳು ಸಭೆಗಳನ್ನು ಕುರಿತು ಓದುತ್ತಿರುವಾಗ ಅವು ಸ್ಥಾನಿಕ ಸಭೆಗಳು ಎಂಬ ಭಾವನೆಯಿಂದ ಬರೆಯಲ್ಪಟ್ಟಿವೆ ಎಂದು ತಿಳಿದುಕೊಳ್ಳಬೇಕು. ಸಭೆಯು ಭೂಮಿಯ ಮೇಲೆ ಕ್ರಿಸ್ತನ ಆತ್ಮೀಯ ಶರೀರವಾಗಿದೆ. ಆತನಿಗೆ ವಿಧೇಯರಾಗಿ, ಆತನನ್ನು ಸೇವಿಸುತ್ತಾ ಅವರೊಂದಿಗೆ ಅದು ಏರ್ಪಟಾಗುತ್ತದೆ. ಶರೀರದಲ್ಲಿ ಅನೇಕ ಅಂಗಾಂಗಗಳಿದ್ದು ಶಿರಸ್ಸು ಒಂದೇ. (1ಕೊರಿಂಥ12:12; ಕೊಲೊಸ್ಸೆ 1:18). ಆದರೆ ಶರೀರವು ಒಂದೇ (ಎಫೆಸ 4:4). ಆ ಶರೀರವೇ ಕ್ರಿಸ್ತನ ಸಭೆ (ಎಫೆಸ 1:22,23).

ಮನುಷ್ಯ ಕಲ್ಪಿತ ಸಭೆಗಳನ್ನು ಕುರಿತು ತಿಳಿದುಕೊಳ್ಳುವುದಕ್ಕೆ ನೀನು ಚರಿತ್ರೆ ಪುಸ್ತಕಗಳನ್ನು ಅಥವಾ ಅವರ ಸಾಹಿತ್ಯಗಳನ್ನು ಓದಬೇಕು. ಅವುಗಳು ಕರ್ತನಿಂದ ಆರಂಭಿಸಲ್ಪಟ್ಟಿಲ್ಲ ಆದ್ದರಿಂದ ಅವುಗಳನ್ನು ಕುರಿತು ಬೈಬಲ್ ನಲ್ಲಿ ಏನನ್ನೂ ಕಾಣುವುದಿಲ್ಲ. ಆದರೆ ಕ್ರಿಸ್ತನ ಸಭೆಯನ್ನು ಕುರಿತು ನೀನು ತಿಳಿದುಕೊಳ್ಳಬೇಕೆನಿಸಿದರೆ ಖಂಡಿತವಾಗಿ ಬೈಬಲ್ ಅನ್ನು ಓದಬೇಕು. ಬೈಬಲ್ ಸಭೆಯ ಚರಿತ್ರೆಯನ್ನು ಮಾತ್ರವಲ್ಲದೆ ನೀನು ತಿಳಿದುಕೊಳ್ಳಬೇಕಾದವುಗಳನ್ನು ಕುರಿತು ಬೋಧಿಸುತ್ತದೆ. ಸಭೆಗೆ ಮಾರ್ಗದರ್ಶಕವಾಗಿ ಕೆಲಸಮಾಡುತ್ತದೆ (2ತಿಮೊಥೆ 3:16; ಯಾಕೋಬ 1:25).

ಕ್ರಿಸ್ತನು ತನ್ನ ಸಭೆಯನ್ನು ಆರಂಭಿಸಿದನು (ಮತ್ತಾಯ16:18). ಕ್ರಿ.ಶ 33ರಲ್ಲಿ ಯೆರೂಸಲೇಮಿನಲ್ಲಿ ಅದನ್ನು ಸ್ಥಾಪಿಸಿದನು. ಆದ್ದರಿಂದ ಸಭೆಯು ನಿನ್ನದಾಗಲಿ ನನ್ನದಾಗಲಿ ಮತ್ತೆ ಬೇರೆ ಯಾರದಾಗಲಿ ಅಲ್ಲ. ಅದು ಇಂಗ್ಲೆಂಡ್ ದೇಶದಲ್ಲಿ ಸ್ಥಾಪಿಸಲಿಲ್ಲವಾದದರಿಂದ ಅದು ಇಂಗ್ಲಿಷ್ ದೇಶದ ಸಭೆಯಲ್ಲ. ಅದು ಅಮೇರಿಕಾದಲ್ಲಿ ಆರಂಭಿಸಲ್ಪಡಲಿಲ್ಲ. ಆದ್ದರಿಂದ ಅದು ಒಂದು ಅಮೇರಿಕಾ ಸಭೆಯಲ್ಲ. ಅದು ಆಸ್ಯಸೀಮೆಯ ಯೆರೂಸಲೇಮಿನಲ್ಲಿ ಪ್ರಾರಂಭಿಸಲ್ಪಟ್ಟಿತು. ಅದು ಸುಮಾರು ಎರಡು ಸಾವಿರ ವರ್ಷಗಳ ಹಿಂದೆಯೇ ಆರಂಭವಾಗಿದ್ದರಿಂದ ಅದು ಒಂದು ಹೊಸ ಸಭೆಯಲ್ಲ.

ಅಪೋಸ್ತಲರ ಕಾಲದಲ್ಲಿ ಈ ಸಭೆಯ ಸದಸ್ಯರಾಗಲು ಒಂದೇ ಒಂದು ಮಾರ್ಗವಿತ್ತು, ಅದು ಯೇಸು ಕ್ರಿಸ್ತನ ಸುವಾರ್ತೆಗೆ ಒಳಗಾಗುವುದು. ಸುವಾರ್ತೆಯನ್ನು ಕೇಳಿದವರು (ರೋಮಾ10:17), ಅದನ್ನು ನಂಬಿ (ಇಬ್ರಿಯ11:6), ಅವರ ಪಾಪಗಳ ನಿಮಿತ್ತವಾಗಿ ಮಾನಸಾಂತರ ಹೊಂದಿ (ಅ.ಕೃ.17:30), ಕ್ರಿಸ್ತನನ್ನು ದೇವರ ಮಗನೆಂದು

ಒಪ್ಪಿಕೊಂಡು (ರೋಮಾ 10:10) ಆತನ ಹೆಸರಿನಲ್ಲಿ ಪಾಪಕ್ಷಮಾಪಣೆಯ ನಿಮಿತ್ತವಾಗಿ ದೀಕ್ಷಾಸ್ನಾನ (ನೀರಿನಲ್ಲಿ ಮುಳುಗಿಸುವುದು) ಹೊಂದಿದರು (ಅ.ಕೃ.2:38). ಆ ರೀತಿಯಲ್ಲಿ ರಕ್ಷಣೆ ಹೊಂದಿದವರು ಸಭೆಯೊಂದಿಗೆ ಸೇರಿಸಲ್ಪಟ್ಟರು (ಅ.ಕೃ.2:47). ಕರ್ತನು ಈ ದಿನವೂ ಸಹ ಅದನ್ನೇ ಮಾಡುವನು.

ಆ ಸಭೆಯ ಸದಸ್ಯರು ಕ್ರೈಸ್ತರೆಂದು ಮಾತ್ರ ಕರೆಯಲ್ಪಟ್ಟರು (ಅ.ಕೃ.11:26; 1ಪೇತ್ರ 4:16). ಸಭೆ ಅಂದರೆ ಅವರು ಕ್ರಿಸ್ತನ ಸಭೆ ಎಂದು ದೇವರ ಸಭೆ ಎಂದು ಕರೆಯಲ್ಪಟ್ಟರು (ರೋಮಾ 16:16; ಅ.ಕೃ.20:28). ಅದು ಕ್ರಿಸ್ತನ ದೇಹವೆಂದು ಕರೆಯಲ್ಪಟ್ಟಿತು. (1ಕೊರಿಂಥ 12:27). ಆದರೆ ಶರೀರವೇ ಸಭೆಯಾಗಿರುವುದರಿಂದ (ಕೊಲೊಸ್ಸೆ1:18) ಲೇಖಕನು ಕ್ರಿಸ್ತನ ಆತ್ಮೀಯ ಶರೀರವಾದ ಕ್ರಿಸ್ತನ ಸಭೆಯನ್ನು ಕುರಿತು ಮಾತನಾಡುತ್ತಿದ್ದಾನೆ. ಅದು ಕ್ರಿಸ್ತನ ಹೆಸರನ್ನು ಧರಿಸಿಕೊಂಡು ಈ ದಿನವು ಕ್ರಿಸ್ತನನ್ನು ಮಹಿಮೆ ಪಡಿಸುತ್ತದೆ. (ಅ.ಕೃ.4:12).

ಪ್ರಪಂಚದಲ್ಲೆಲ್ಲಾ ಸಾವಿರಗಟ್ಟಲೇ ಇರುವ ವ್ಯಕ್ತಿಗತ ಸಭೆಗಳೊಂದಿಗೆ ಕ್ರಿಸ್ತನ ಸಭೆ ಬೇರಯಾಗಿದೆ. ಪ್ರತಿಯೊಂದು ಸ್ಥಾನಿಕ ಸಭೆಯು ಪ್ರೀತಿಯಿಂದಲೂ, ಏಕಾಭಿಪ್ರಾಯದಿಂದಲೂ ಸೇರಿ ಬಂದಿಸಲ್ಪಟ್ಟಿದೆ. ಕ್ರಿಸ್ತನು ಆ ಸಭೆಗೆ ಶಿರಸ್ಸು (ಎಫೆಸ5:23). ಸಭೆಗಳು ದೊಡ್ಡವಾಗಿ ಬೆಳೆದು ಆತ್ಮೀಯ ಬಲವನ್ನು ಹೊಂದಿದಾಗ ಅರ್ಹತೆಯುಳ್ಳವರು ಅದರಲ್ಲಿ ಹಿರಿಯರಾಗಿ, ಸೇವಕರಾಗಿ, ಸುವಾರ್ತಿಕರಾಗಿ, ಬೋಧಕರಾಗಿ ನೇಮಿಸಲ್ಪಡುವರು. (1ತಿಮೊಥಿ3,ತೀತ1). ಪ್ರತಿ ಭಾನುವಾರ ಆರಾಧನೆ ಇರುತ್ತದೆ (ಅ.ಕೃ.20:7). ಸದಸ್ಯರು ವಾಕ್ಯವನ್ನು ಓದುವುದಕ್ಕೂ(2ತಿಮೊಥಿ2:15), ಪ್ರಾರ್ಥಿಸುವುದಕ್ಕೂ (1ಥೆಸ 5:17). ಹಾಡುಗಳನ್ನು ಹಾಡುವುದಕ್ಕೂ (ಎಫೆಸ5:19), ಕರ್ತನ ಭೋಜನ ಮಾಡುವುದಕ್ಕೂ (1ಕೊರಿಂಥಿ4:23–30) ಕಾಣಿಕೆಗಳನ್ನು ಕೊಡುವುದಕ್ಕೂ (1ಕೊರಿಂಥಿ 16:2), ಸಭೆಯಾಗಿ ಕೂಡಿಕೊಳ್ಳುವರು.

ಕರ್ತನು ತನ್ನ ಪ್ರಜೆಗಳು ಪರಿಶುದ್ಧರನ್ನಾಗಿ ನಿರ್ದೋಷಿಗಳನ್ನಾಗಿ, ನಿಷ್ಕಳಂಕರನ್ನಾಗಿಯೂ ಇರಬೇಕೆಂದು ಕೋರಿಕೊಳ್ಳುತಾನೆ (ಎಫಸ 5:27). ಸರ್ವಸೃಷ್ಟಿಗೆ ಸುವಾರ್ತೆ ಪ್ರಕಟಿಸುವುದು (ಮಾರ್ಕ 16:15,16) ಕೊರತೆಯಲ್ಲಿದ್ದವರಿಗೆ ಸಹಾಯ ಮಾಡುವುದು ಸಭೆಯ ಕೆಲಸವಾಗಿದೆ (ಯಾಕೋಬ 1:27). ಅಂತ್ಯದವರೆಗೂ ನಂಬಿಗಸ್ತನಾಗಿ ಇರುವವರಿಗೆ ಜೀವಕಿರೀಟ ಕೊಡಲ್ಪಡುವುದು (ಪ್ರಕಟನೆ 2:10).

ಇದು ಯೇಸು ಕ್ರಿಸ್ತನ ಸಭೆ, ಬೈಬಲ್‌ನಲ್ಲಿ ಇದನ್ನು ಮಾತ್ರ ನೀನು ಓದಬಹುದು. ಅದನ್ನು ಕುರಿತು ನೀನು ಇನ್ನೂ ತಿಳಿದುಕೊಂಡು ಅದರ ಸದಸ್ಯನಾಗು.

# ೯. ಹೊಸ ಒಡಂಬಡಿಕೆ ಸಭೆ
# (The New Testament Church)

ಸಭೆಯನ್ನು ಕುರಿತಾದ ಸತ್ಯವನ್ನು ತಿಳಿದುಕೊಳ್ಳಬೇಕಾದರೆ ನಾವು ತಪ್ಪದೇ ಹೊಸ ಒಡಂಬಡಿಕೆಯನ್ನು ಓದಬೇಕು. ಅದು ಪ್ರವಾದನೆಗಳಲ್ಲಿ ಹೇಳಲ್ಪಟ್ಟಿದೆ (ಯೆಶಾಯ 2:2,3; ದಾನಿಯೇಲ 2:44). ಅವುಗಳ ನೆರವೇರಿಕೆಯನ್ನು ಕುರಿತು ತಿಳಿದುಕೊಳ್ಳಲು ಕ್ರಿಸ್ತನ ಬೋಧನೆಗಳನ್ನು ನಾವು ಓದಬೇಕು.

ಸಭೆಯನ್ನು ಕುರಿತು ಮನುಷ್ಯನು ಹೇಳಿದವುಗಳಲ್ಲಿ ನಮಗೆ ಆಸಕ್ತಿ ಇಲ್ಲವೆಂದು ತಿಳಿದುಕೊಳ್ಳಬೇಕು. ಆದರೆ ವಾಕ್ಯಗಳು ಏನು ಹೇಳುತ್ತಿವೆಯೋ ಅವುಗಳಲ್ಲಿಯೇ ನಮಗೆ ಆಸಕ್ತಿ ಇದೆ ಎಂದು ಗ್ರಹಿಸಬೇಕು. ಆದದರಿಂದ ಅದನ್ನು ಆರಂಭಿಸೋಣ.

1. ಕ್ರಿಸ್ತನು ತನ್ನ ಸಭೆಯನ್ನು ನಿರ್ಮಿಸಿದ್ದಾನೆ "ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು ಪಾತಾಳಲೋಕದ ಬಲವು ಅದನ್ನು ಸೋಲಿಸಲಾರದು" (ಮತ್ತಾಯ16:18). ಸಭೆಯನ್ನು ಕಟ್ಟುವೆನು ಎಂದು ಆತನೇ ಹೇಳಿದ್ದಾನೆಂದು ಗ್ರಹಿಸಿ. ಆದದರಿಂದ ಅದು ಆತನಿಗೆ ಸಲ್ಲುತ್ತದೆ.

2. ಸಭೆಯು ಯೆರೊಸಲೇಮ್‌ನಲ್ಲಿ ಆರಂಭವಾಯಿತು. ಯೆರೂಸಲೇಮ್ ಮೊದಲುಗೊಂಡು ಸಮಸ್ತ ಜನರು ಆತನ ಹೆಸರಿನಲ್ಲಿ ಮಾನಸಾಂತರ, ಪಾಪಕ್ಷಮಾಪಣೆ ಪ್ರಕಟಿಸಲ್ಪಡುವುದು. ಅವರು ಮೇಲಿಂದ ಶಕ್ತಿಯನ್ನು ಹೊಂದುವವರೆಗೂ ಯೆರೊಸಲೇಮಿನಲ್ಲಿ ಕಾದುಕೊಂಡಿರುವಂತೆ ಕ್ರಿಸ್ತನು ಅಪೊಸ್ತಲರಿಗೆ ಆಜ್ಞಾಪಿಸಿದನು (ಲೂಕ24:46–48). ಇದು ಹೇಗೆ ನೆರವೇರಿತೆಂದು ಅಪೊಸ್ತಲರ ಕೃತ್ಯಗಳು 2ನೇ ಅಧ್ಯಾಯದಲ್ಲಿ ನಾವು ನೋಡಬಹುದು.

3. ಅದು ಕ್ರಿ.ಶ.33ರಲ್ಲಿ ಸ್ಥಾಪಿಸಲ್ಪಟ್ಟಿತು. ಅದು ಕ್ರಿಸ್ತನು ಪುನರುತ್ಥಾನನಾದ 50 ದಿನಗಳ ನಂತರ ಸ್ಥಾಪಿಸಲ್ಪಟ್ಟಿತು. ಆತನು ತಿರಿಗಿ ಎಬ್ಬಿಸಲ್ಪಟ್ಟ ನಂತರ ಮೊದಲ ಪಂಚಶತ್ತಮ ದಿನದಂದು ಅದು ಪ್ರಾರಂಭವಾಯಿತು (ಅ.ಕೃ.2).

4. ಅದು ಅದರ ಸ್ಥಾಪಕನಾದ ಕ್ರಿಸ್ತನ ಹೆಸರನ್ನು ಧರಿಸಿಕೊಂಡಿರುತ್ತದೆ. ಪೌಲನು ರೋಮಾಪುರದಲ್ಲಿರುವ ಸಭೆಗೆ ಪತ್ರಿಕೆಯನ್ನು ಬರೆಯುವಾಗ ಅನೇಕ ಸಭೆಗಳಿಂದ ಶುಭವಚನಗಳನ್ನು ಆ ಅಭೆಗೆ ಕಳುಹಿಸುತ್ತಾ "ಕ್ರಿಸ್ತನ ಸಭೆಗಳೆಲ್ಲಾ ನಿಮ್ಮನ್ನು ವಂದಿಸುತ್ತವೆ" (ರೋಮಾ 16:16). 1ಕೊರಿಂಥಿ12:27ರಲ್ಲಿ ಆತನು ಕ್ರಿಸ್ತನ ಸಭೆಯಾದ ಶರೀರವನ್ನು ಕುರಿತು ಹೇಳಿದನು. ಆದ್ದರಿಂದ ಕ್ರಿಸ್ತನೇ ಅದನ್ನು ಕಟ್ಟಿದ್ದರಿಂದ ಅದು ಕ್ರಿಸ್ತನಿಗೆ ಸಲ್ಲುತ್ತದೆ. ಆದ್ದರಿಂದ ಅದು ಕ್ರಿಸ್ತನ ಸಭೆಯಾಗಿ

ಕರೆಯಲ್ಪಡುತ್ತದೆ. ಅದು ಮತ್ತೊಂದು ಹೆಸರನ್ನು ಧರಿಸಿದರೆ ಅದು ಹೇಗೆ ಕ್ರಿಸ್ತನಿಗೆ ಸಲ್ಲುತ್ತದೆ.

5. ಅದರ ಸದಸ್ಯರು ಕ್ರೈಸ್ತರು ಮಾತ್ರ. ಅ.ಕೃ.11:26ರಲ್ಲಿ ಮೊಟ್ಟ ಮೊದಲು ಅಂತಿಯೋಕ್ಯದಲ್ಲಿನ ಶಿಷ್ಯರಿಗೆ ಕ್ರೈಸ್ತರೆಂಬ ಹೆಸರು ಬಂತು. ಇದು ದೈವ ಚಿತ್ತಾನುಸಾರವಾಗಿ ಬಂದಿತು. ಹೇಗೆಂದರೆ ಕ್ರೈಸ್ತವನು ಎಂಬ ಹೆಸರಿನಿಂದಲೇ ನಾವು ಕ್ರಿಸ್ತನನ್ನು ಮಹಿಮೆ ಪಡಿಸಬೇಕೆಂದು ಪೇತ್ರನು ಹೇಳಿದ್ದಾನೆ (1ಪೇತ್ರ 4:16).

6. ಕ್ರಿಸ್ತನು ಸಭೆಗಾಗಿ ತನ್ನ ಪ್ರಾಣಕೊಡುವಷ್ಟರ ಮಟ್ಟಿಗೆ ಅದನ್ನು ಪ್ರೀತಿಸಿದನು. ಪುರುಷರೇ, ಕ್ರಿಸ್ತನು ಸಭೆಯನ್ನು ಪ್ರೀತಿಸಿದ ಪ್ರಾಕಾರವೇ ನೀವು ನಿಮ್ಮ ಹೆಂಡತಿಯರನ್ನು ಪ್ರೀತಿಸಿರಿ. ಆತನು ಅದನ್ನು ಪ್ರತಿಷ್ಠೆಪಡಿಸುವುದಕ್ಕಾಗಿ ತನ್ನನ್ನು ಒಪ್ಪಿಸಿಕೊಟ್ಟನು (ಎಫೆಸ 5:25–27).

7. ಅದು ಕ್ರಿಸ್ತನ ರಕ್ತದಿಂದ ಕ್ರಯಕ್ಕೆ ಕೊಳ್ಳಲ್ಪಟ್ಟಿತು. ಎಫೆಸದಲ್ಲಿರುವ ಸಭೆಯ ಹಿರಿಯರಿಗೆ ಪೌಲನು ಹೀಗೆ ಅಂದನು "ದೇವರು ಸ್ವರಕ್ತದಿಂದ ಸಂಪಾದಿಸಿಕೊಂಡ ಸಭೆಯನ್ನು ಪರಿಪಾಲಿಸುವುದಕ್ಕಾಗಿ ಪವಿತ್ರಾತ್ಮನು ನಿಮ್ಮನ್ನೇ ಆ ಹಿಂಡಿನಲ್ಲಿ ಅದ್ಯಕ್ಷರಾಗಿ ಇಟ್ಟಿರುವದರಿಂದ ನಿಮ್ಮ ವಿಷಯದಲ್ಲಿಯೂ ಎಲ್ಲಾ ಹಿಂಡಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿರ್ರಿ" (ಅ.ಕೃ.20:28).

8. ಒಂದೇ ಒಂದು ಸಭೆ ಇದೆ. ದೇವರ ವಾಕ್ಯವು "ನೀವೆಲ್ಲರೂ ಒಂದೇ ದೇಹಕ್ಕೆ ಸೇರಿದವರು (ಎಫೆಸ4:4)" ಆ ಶರೀರವೇ (ದೇಹ) ಸಭೆ" ಎಂದು (ಎಫೆಸ 1:22,23; ಕೊಲೊಸ್ಸೆ 1:18) ಹೇಳುತ್ತದೆ ಆದ್ದರಿಂದ ಇರುವ ಶರೀರ ಒಂದೇ. ಇರುವ ಸಭೆಯು ಒಂದೇ.

9. ಕ್ರಿಸ್ತನು ಆ ಸಭೆಗೆ ಶಿರಸ್ಸಾಗಿದ್ದಾನೆ. "ಸಭೆಯೆಂಬ ದೇಹಕ್ಕೆ ಆತನು ಶಿರಸ್ಸು, ಆತನು ಆದಿಸಂಭೂತನು, ಎಲ್ಲಾದರಲ್ಲಿ ಪ್ರಮುಖನಾಗುವಂತೆ ಸತ್ತವರೊಳಗಿಂದ ಮೊದಲು ಎದ್ದು ಬಂದವನು ಆತನೇ" (ಕೊಲೊಸ್ಸೆ1:18). ಇದನ್ನು ಆತನು ಯಾವ ಮನುಷ್ಯನೊಂದಿಗೂ ಹಂಚಿಕೊಳ್ಳುವುದಿಲ್ಲ.

10. ಕ್ರಿಸ್ತನೇ ಸಭೆಗೆ ರಕ್ಷಕನಾಗಿದ್ದಾನೆ. "ಕ್ರಿಸ್ತನು ಸಭೆಗೆ ತಲೆಯಾಗಿರುವ ಪ್ರಕಾರವೇ ಗಂಡನು ಹೆಂಡತಿಗೆ ತಲೆಯಾಗಿದ್ದಾನೆ." ಸಭೆಯೆಂಬ ದೇಹಕ್ಕೆ ರಕ್ಷನಾಗಿದ್ದಾನೆ. (ಎಫೆಸ 5:23).

11. ರಕ್ಷಣೆ ಹೊಂದಿದವರನ್ನು ಕರ್ತನು ತನ್ನ ಮಂಡಳಿಗೆ (ಸಭೆಗೆ) ಸೇರಿಸುತ್ತಾನೆ. ಒಬ್ಬನು ರಕ್ಷಣೆ ಹೊಂದುವುದಕ್ಕೆ ಕ್ರಿಸ್ತನನ್ನು ನಂಬಿ ದೀಕ್ಷಾಸ್ನಾನ

ಮಾಡಿಸಿಕೊಳ್ಳಬೇಕೆಂದು ಬೈಬಲ್ ಹೇಳುತ್ತದೆ (ಮಾರ್ಕ16:16). ಈ ನಂಬಿಕೆ ದೀಕ್ಷಸ್ನಾನದ ಮೂಲಕ ಒಬ್ಬನು ಕ್ರಿಸ್ತನಲ್ಲಿಗೆ ಕ್ರಿಸ್ತನ ಸಭೆಯೊಳಗೆ ಪ್ರವೇಶಿಸುವನೆಂದು ಎಂದು ಪೌಲನು ಹೇಳಿದ್ದಾನೆ (ಗಲಾತ್ಯ3:26,27; 1ಕೊರಿಂಥಿ 12:13). ಇನ್ನೊಂದು ಮಾತಿನಲ್ಲಿ ಪಂಚಶತ್ತಮ ದಿನದಲ್ಲಿ ಸುವಾರ್ತೆ ಕೇಳಿ, ಮಾನಸಾಂತರ ಹೊಂದಿ ತಮ್ಮ ಪಾಪಗಳ ಕ್ಷಮಾಪಣೆಗಾಗಿ ದೀಕ್ಷಾಸ್ನಾನ ಮಾಡಿಸಿಕೊಂಡು ರಕ್ಷಣೆ ಹೊಂದಿದ ಪ್ರತಿಯೊಬ್ಬರನ್ನು ಕರ್ತನು ತನ್ನ ಸಭೆಗೆ ಸೇರಿಸಿದನು (ಅ.ಕೃ.2:47).

12. ಕ್ರಿಸ್ತನು ತನ್ನ ವಧುವಾದ ಸಭೆಗಾಗಿ 2ನೇ ಸಾರಿ ತಿರಿಗಿ ಬರುವವನಾಗಿದ್ದಾನೆ. ಅದು ಕಳಂಕ ಸುಕ್ಕು ಮುಂತಾದದ್ದೊಂದು ಇಲ್ಲದ ಕನ್ನಿಕೆಯೊ ಎಂಬಂತೆ ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದು ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧ ಮಾಡಿದನು (ಎಫೆಸ5:27). ಆತನಿಗೆ ವಧುವಾಗಿ ಸಭೆ ಇದೆ. ಅದು ಆತನ ಹೆಸರನ್ನು ಧರಿಸಿಕೊಳ್ಳುತ್ತದೆ ಎಂದು ನಾವು ಗುರುತಿಸಬೇಕು. ಆತನು ಆ ಒಂದಾಕ್ಕಾಗಿಯೇ ತಿರಗಿ ಬರುತ್ತಿದ್ದಾನೆ. ನೀನು ಹೊಸ ಒಡಂಬಡಿಕೆಯಲ್ಲಿ ಓದಿಕೊಂಡ ಸಭೆಯ ಸದಸ್ಯನಾಗಿದ್ದಿಯಾ? ಇಲ್ಲವಾದರೆ ನೀನು ಕ್ರಿಸ್ತನ ಸಭೆಯ ಸದಸ್ಯನೆಂದು ಹೇಗೆ ಹೇಳಿಕೊಳ್ಳುವೆ? ಈ ಸಂಗತಿಗಳನ್ನು ಆಲೋಚಿಸಿ ಬೇಗನೇ ನಿನಗೆ ಸಮೀಪದಲ್ಲಿರುವ ಕ್ರಿಸ್ತನ ಸಭೆಯನ್ನು ಸಂಪರ್ಕಿಸು.

## 10. ಕ್ರಿಸ್ತನ ಸಭೆ ಭಾರತದಲ್ಲಿ ಎಷ್ಟುಕಾಲ ನಿಲ್ಲುತ್ತದೆ ?
## (How long will church of Christ be in india?)

ಕ್ರಿಸ್ತನ ಸಭೆ ಭಾರತದಲ್ಲಿ ಎಷ್ಟುಕಾಲ ನಿಲ್ಲುತ್ತದೆ ? ಎಂಬ ಪ್ರಶ್ನೆಯನ್ನು ಅನೇಕರು ಕೇಳುತ್ತಿದ್ದಾರೆ. ಈ ಪ್ರಶ್ನೆಗೆ ಉತ್ತರ, ಭಾರತದ ಪ್ರಜೆಗಳೇ ಕೊಡಬೇಕು. ಸಭೆಯು ಈ ದೇಶದಲ್ಲಿ ನಿರಂತರವಾಗಿರಲು ಸಾಧ್ಯ. ತಕ್ಕಷ್ಟು ಮಂದಿ ಕರ್ತನನ್ನು ಪ್ರೀತಿಸಿ, ಆತನಿಗೆ ವಿಧೇಯರಾಗಿ, ನಂಬಿಕೆಯಿಂದ ಇದ್ದರೆ ಅದು ಸಾಧ್ಯವಾಗುತ್ತದೆ. ಆದರೆ ಅದರಲ್ಲಿರುವ ಪ್ರಜೆಗಳಿಗೆ ಆಸಕ್ತಿ ಇಲ್ಲದೆ ಹೋದರೆ ಸಭೆಯು ಈ ದೇಶದಲ್ಲಿ ಜೀವಿಸುವುದು ಕಷ್ಟ.

ಇಲ್ಲಿಯೂ ವಿದೇಶಿಯರು ಯಾರಾದರು ಇದ್ದರೂ ಇಲ್ಲದಿದ್ದರೂ ಪರವಾಗಿಲ್ಲ. ವಿದೇಶಿಯರ ಸಹಾಯ ಬರುತ್ತಿದ್ದರೂ ಬರದೇ ಇದ್ದರೂ ಪರವಾಗಿಲ್ಲ. ಭವನಗಳು ಇದ್ದರೂ ಇಲ್ಲದಿದ್ದರೂ ಪರವಾಗಿಲ್ಲ. ಆದರೆ ನಿಜಕ್ಕೂ ಸ್ಥಾನಿಕ ಪ್ರಜೆಗಳು ಕರ್ತನು ಆಪೇಕ್ಷಿಸುವ ರೀತಿಯಲ್ಲಿ ಜೀವಿಸುವವರಾಗಿದ್ದಾರೊ ಅಥವಾ ಇಲ್ಲವೊ ಎಂಬುದೇ ನಿಜವಾದ ಸಮಸ್ಯೆ, ಅದರ ಮೇಲೆ ಸಭೆಯ ಭವಿಷ್ಯತ್ತು ಆಧಾರವಾಗಿದೆ.

ಇದು ಈ ದೇಶಕ್ಕೂ, ಇತರ ದೇಶಗಳಿಗೂ ಸಹ ಅನ್ವಯಿಸುತ್ತದೆ. ಪ್ರಜೆಗಳು ಎಲ್ಲಿ ಕರ್ತನಿಗೆ ಒಳಗಾಗಿ ಆತನನ್ನು ಸೇವಿಸಲು ಇಷ್ಟಪಡುವರೊ ಅಲ್ಲಿ ಮಾತ್ರವೇ ಕರ್ತನ ಸಭೆಯು ನಿಲ್ಲುತ್ತದೆ. ಆದರೆ ಅಂತಹವರು ಇಲ್ಲವಾದರೆ ಕರ್ತನ ಸಭೆಯು ಅಲ್ಲಿ ನಿಲ್ಲುವುದಿಲ್ಲ.

ಇಂದು ಇದ್ದು ನಾಳೆ ಇಲ್ಲದಂತಾಗುವ ಸಂಸ್ಥೆಗಳಂತೆ ಇರುವ ಸಭೆಯಲ್ಲಿ ಸದಸ್ಯರಾಗಿರುವುದಕ್ಕೆ ಸ್ಥಾನಿಕ ಪ್ರಜೆಗಳು ಸಂದೇಹ ಪಡುತ್ತಾರೆ. ಆದರೆ ನೀನು ಭಯಪಡುವ ಅವಶ್ಯಕತೆಯಿಲ್ಲ, ನೀನು ಒಂದು ಸಾರಿ ಕರ್ತನ ಕುಟುಂಬದಲ್ಲಿ ಜನ್ಮಿಸಿದಾಗ ಅದರಲ್ಲಿ ಸಧಾಕಾಲ ನೀನು ಸದಸ್ಯನೇ, ಆದರೆ ಮೊಟ್ಟಮೊದಲು ನಿನ್ನ ಪ್ರಾಂತ್ಯದಲ್ಲಿ ಕೆಲಸವನ್ನು ಪ್ರಾರಂಭಿಸಲಿಕ್ಕೆ ಬಂದ ಕೆಲಸದವನು ಈಗ ಇಲ್ಲದೇ ಇರಬಹುದು, ಕ್ರಿಸ್ತನನ್ನಾಗಲಿ, ಕ್ರೈಸ್ತತ್ವವನ್ನಾಗಲಿ ನಿನ್ನ ಬಳಿಯಿಂದ ಎಂದಿಗೂ ಆತನು ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ. ಆದ್ದರಿಂದ ನಿನ್ನ ಪ್ರಾಂತ್ಯದಲ್ಲಿ ಇರುವ ಸದಸ್ಯರೊಂದಿಗೆ ಸೇರಿ ಸಭೆಯ ಕೆಲಸವನ್ನು ನಡೆಸುವುದಕ್ಕೆ ನೀನು ಖಂಡಿತವಾಗಿ ತಿಳಿದುಕೊಳ್ಳಬೇಕು.

ಕ್ರಿಸ್ತನ ಸಭೆ ದೆಹಲಿಯಲ್ಲಿ ಮಾತ್ರವಲ್ಲದೆ ಮುಂಬಾಯಿ, ಚೆನ್ನೈ, ಲಕ್ನೊ, ಶಿಲಾಂಗ್, ಹೈದರಬಾದ್, ಬೆಂಗಳೂರು, ಇನ್ನೂ ಅನೇಕ ಚಿಕ್ಕ ಪಟ್ಟಣಗಳಲ್ಲಿ, ಗ್ರಾಮಗಳಲ್ಲಿ

ಇದೆಯಂದು ನೀನು ತಿಳಿದುಕೊಳ್ಳುವುದಕ್ಕೆ ಸ್ವಲ್ಪಕಾಲ ಆದರಣೆ ಸಿಗುತ್ತದೆ. ಆದರೆ ಹಿಂದೂ ದೇಶದಲ್ಲೆಲ್ಲಾ ಈಗ ಇಲ್ಲದಿದ್ದರೂ ಭವಿಷ್ಯದಲ್ಲಿಯೂ ಇರುವುದಿಲ್ಲ ಎಂದು ಇದರ ಅರ್ಥವಲ್ಲ. ನಿಜಕ್ಕೂ ಈ ದೇಶದ ಮೂಲೆ ಮೂಲೆಗೊ ಕ್ರಿಸ್ತನ ಸಭೆ ಅತಿ ಬೇಗನೇ ವ್ಯಾಪಿಸುತ್ತಾ ಇದೆ. ಇದರಿಂದಾಗಿ ಆ ಸಭೆಯು ಈ ದೇಶದಲ್ಲಿ ನಿರಂತರವಾಗಿ ಇರುತ್ತದೆಂದು ವ್ಯಕ್ತವಾಗುತ್ತದೆ.

ಕ್ರಿಸ್ತನ ಸಭೆ ಒಂದು ಹೊಸ ಸಭೆ ಅಲ್ಲ ಅದು ಹಿಂದೂ ದೇಶಕ್ಕೆ ಆಧುನಿಕವಾಗಿ ಈ ಮಧ್ಯಕಾಲದಲ್ಲಿ ಬಂದಿರಬಹುದು, ನಿಜಕ್ಕೂ ಚರಿತ್ರೆಯನ್ನು ನೋಡಿದರೆ ಕ್ರಿಸ್ತನ ಸುವಾರ್ತೆ ಮತ್ತು ಕ್ರಿಸ್ತನ ಸಭೆಯು ಮೊದಲ ಶತಮಾನದಲ್ಲಿಯೇ ಈ ದೇಶಕ್ಕೆ ಅಪೊಸ್ತಲನಾದ ತೋಮನ ಮೂಲಕ ಬೋಧಿಸಲ್ಪಟ್ಟಿದೆ. ಆಕಾಶದ ಕೆಳಗಿರುವ ಸರ್ವಸೃಷ್ಟಿಗೆ ಸುವಾರ್ತೆ ಸಾರಲ್ಪಟ್ಟಿದೆ ಎಂದು ಕೊಲೊಸ್ಸೆ1:23ರಲ್ಲಿ ಪೌಲನು ಬರೆದಿದ್ದಾನೆ. ಅದರಲ್ಲಿ ತಪ್ಪದೇ ಹಿಂದೂ ದೇಶವೂ ಸಹ ಸೇರಿಕೊಂಡಿರುತ್ತದೆ. ಆದರೆ ಆ ದಿನದಲ್ಲೇ ಸುವಾರ್ತೆಯನ್ನು ಕೇಳಿ ಅದಕ್ಕೆ ವಿಧೇಯರಾದವರೂ ಇದ್ದಾರೆ ಎಂದುಕೊಳ್ಳೋಣ, ಹಾಗದರೆ ಅವರೇನಾದರೊ? ಅ.ಕೃ.2:47 ಪ್ರಕಾರ ಅವರು ಕ್ರಿಸ್ತನ ಸಭೆಯ ಸದಸ್ಯರಾದರು ಆದರೆ ಅವರಿಗೆ ಏನು ಸಂಭವಿಸಿತು? ಈ ಲೋಕದಲ್ಲಿ ಅನೇಕ ಕಡೆ ಏನು ನಡೆಯಿತೊ ಅದೆ ಭಾರತದಲ್ಲಿ ಸಹ ನಡೆಯಿತು. ಕಾಲವು ಕಳೆದಂತೆಲ್ಲಾ ಜನರ ನಂಬಿಕೆ ದೂರವಾಗಿ ಭ್ರಷ್ಟರಾದರು. ಹೀಗಾಗಿ ಸಭೆಯೊಂದಿಗೆ ಹೋಲಿಕೆ ಇಲ್ಲದಂತೆ ಮಾರ್ಪಾಟಾಯಿತು. ಆದರೆ ಪ್ರಾರಂಭದಲ್ಲಿ ಹೇಗೆ ನಿಂತುಕೊಂಡಿತೊ ಹಾಗೆಯೇ ಇರುವುದಕ್ಕೆ ಪುನರುದ್ಧರಣೆ ನಡೆಯುತ್ತದೆ.

ಕ್ರಿಸ್ತನ ಸಭೆ ಅಮೇರಿಕ ಸಭೆಯಲ್ಲ ಎಂದು ನಿನ್ನ ಮನಸ್ಸಿನಲ್ಲಿ ನೆನಪಿನಲ್ಲಿಟ್ಟುಕೊ. ಅದು ಅಮೇರಿಕದಲ್ಲಿ ಪ್ರಾರಂಭಿಸಲ್ಪಟ್ಟಿಲ್ಲ. ಅದು ಯೆರೂಸಲೇಮ್‌ನಲ್ಲಿ ಸುಮಾರು 2000 ವರ್ಷಗಳ ಹಿಂದೆಯೇ ಪ್ರಾರಂಭಿಸಲ್ಪಟ್ಟಿತು. ಅದು ಒಂದು ಮತಶಾಖೆಗೆ (ಡಿನಾಮಿನೇಷನ್)ಗೆ ಸಂಭದಿಸಿದ್ದು ಅಲ್ಲ. ಅದು ಮನುಷ್ಯರದಲ್ಲ. ಕ್ರಿಸ್ತನ ಮೂಲಕ ಪ್ರಾರಂಭವಾಯಿತು(ಮತ್ತಾಯ16:18). ಬೈಬಲ್‌ನಲ್ಲಿ ಸಭೆಯು ಸಂಪೂರ್ಣ ಮಾಡಲ್ಪಟ್ಟಿದೆ. ಆದ್ದರಿಂದ ಆ ಮಾದರಿಯನ್ನು ಅನುಸರಿಸಿದಾಗ ಕರ್ತನ ಸಭೆಯು ಸ್ಥಾಪನೆ ನಡೆಯುತ್ತದೆ. ಅದು ಈ ದೇಶದಲ್ಲಿಯೂ, ಪ್ರಪಂಚದಲ್ಲೆಲ್ಲಾ ನಿಜಕ್ಕೂ ವ್ಯಾಪಿಸುತ್ತದೆ. ಈ ಮಾದರಿಯನ್ನು ಈಗ ನೀನೆ ಸಲ್ಪ ಪರಿಶೀಲನೆ ಮಾಡು.

1. ಅದು ಸಭೆ ಸ್ಥಾಪನೆಯ ಕುರಿತು ಹೇಳುತ್ತದೆ (ಮತ್ತಾಯ 16:18).
2. ಅದು ಎಲ್ಲಿ ಸ್ಥಾಪನೆಯಾಯಿತೆಂದು ಹೇಳುತ್ತದೆ (ಅ.ಕೃ.2ನೇಅಧ್ಯಾಯ).

3. ಅದು ಯಾವ ಹೆಸರನ್ನು ಧರಿಸಿಕೊಂಡಿದೆ ಎಂದು ಹೇಳುತ್ತದೆ (ರೋಮಾ 16:16).
4. ಅದು ಯಾವಾಗ ಸ್ಥಾಪನೆಯಾಯಿತು ಎಂದು ಹೇಳುತ್ತದೆ (ಅ.ಕೃ.2ನೇ ಅಧ್ಯಾಯ).
5. ಅದರ ಸದಸ್ಯರು ಯಾವ ಹೆಸರನ್ನು ಧರಿಸಿಕೊಂಡಿದ್ದರು ಎಂದು ಹೇಳುತ್ತದೆ. (ಅ.ಕೃ.11:26).
6. ಅದರಲ್ಲಿರುವ ಜನರು ಸದಸ್ಯರು ಹೇಗಾದರೋ ಅದು ಹೇಳುತ್ತಿದೆ (ಮಾರ್ಕ 16:15,16; ಅ.ಕೃ.2:38,47).
7. ಅದರ ಆರಾಧನೆಯನ್ನು ಕುರಿತು ಅದು ಹೇಳುತ್ತಿದೆ. (ಅ.ಕೃ.20:7).
8. ಅದರ ಮುಖ್ಯ ಅಧಿಕಾರಿ ಯಾರೆಂದು ಅದು ಹೇಳುತ್ತದೆ. (ಕೊಲೊಸ್ಸೆ 1:18).
9. ಎಷ್ಟು ಸಭೆಗಳಿವೆ ಎಂಬುದನ್ನು ಕುರಿತು ಕೂಡ ಅದು ಹೇಳುತ್ತದೆ. (ಎಫೆಸ 4:4; 1:22,23).

ಇನ್ನೂ ಅನೇಕ ಸಂಗತಿಗಳನ್ನು ಕುರಿತು ಅದು ಹೇಳುತ್ತದೆ. ಆದರೆ ಈ ಮಾದರಿಯನ್ನು ಯಾರು ಅನುಸರಿಸಿದರೋ ಅವರೆಲ್ಲರು ಕ್ರಿಸ್ತನ ಸಭೆಯ ಸದಸ್ಯರಾದರು. ನೀನು ಈ ಮಾದರಿಯನ್ನು ಅನುಸರಿಸಿ ನಡೆಯುವವರನ್ನು ಈ ಲೋಕದಲ್ಲಿ ಎಲ್ಲಿ ಕಂಡರೂ ಅವರು ನಿನ್ನಂತೆ, ನೀನು ಅವರಂತೆ ಕ್ರಿಸ್ತನಲ್ಲಿ ಒಂದಾಗಿದ್ದೀರೆಂದು, ಆತನ ಶರೀರವಾದ ಸಭೆಯಲ್ಲಿ ಏಕವಾಗಿದ್ದೀರೆಂದು ಗ್ರಹಿಸಬಹುದು.

ಇಲ್ಲಿಯವರೆಗು ನಾವು ಹೇಳಿದ ಸಂಗತಿಗಳಿಂದಾಗಿ ನೀನು ಬೈಬಲ್‌ನ್ನು ತೆಗೆದುಕೊಂಡು ಅದರಲ್ಲಿರುವ ಲೇಖನಗಳನ್ನು ಪರಿಶೀಲಿಸಬೇಕಾಗಿ ಕೋರುತ್ತಿದ್ದೇವೆ. ಇದನ್ನು ನೀನು ಸತ್ಯವೆಂದು ಗ್ರಹಿಸಿದರೆ ಅದನ್ನು ಅಂಗೀಕರಿಸು. ಅದು ಸತ್ಯವಲ್ಲವೆಂದು ಗ್ರಹಿಸಿದರೆ ಅದನ್ನು ವಿಸರ್ಜಿಸು. ನೀನು ಹೃದಯಪೂರ್ವಕವಾಗಿ, ನಿರ್ಮಲವಾದ ಒಳ್ಳೆಯ ಮನಸ್ಸಾಕ್ಷಿಯುಳ್ಳವನಾಗಿ ಓದಿದರೆ ಖಂಡಿತವಾಗಿ ಸತ್ಯವನ್ನು ಗ್ರಹಿಸಿಕೊಳ್ಳುವಿ. ಯಾರೂ ನಿನಗೆ ಮೋಸಮಾಡಲು ಪ್ರಯತ್ನಿಸುತ್ತಿಲ್ಲ. ನಾವು ನಿನಗೆ ಸಹಾಯ ಮಾಡುವ ಉದ್ದೇಶದಿಂದ ಹೇಳುತ್ತಿದ್ದೇವೆ. ಆದ್ದರಿಂದ ನಿನ್ನನ್ನು ದೇವರ ವಾಕ್ಯದ ಕಡೆಗೆ ತಿರುಗಿಸುವುದನ್ನು ಬಿಟ್ಟರೆ ನಾವು ತೋರಿಸಬೇಕಾದ ಒಳ್ಳೆಯ ಮಾರ್ಗ ಮತ್ತೊಂದಿಲ್ಲ. ನೀನು ಹಿಂದು ದೇಶದಲ್ಲಿ ಕ್ರಿಸ್ತನ ಸಭೆ ನಿಲ್ಲಬೇಕೆಂದು ಆಶಿಸುವುದಾದರೆ ಕರ್ತನಿಗೆ ಒಳಗಾಗು. ಆತನಿಗೆ ನಂಬಿಗಸ್ತನಾಗಿ ಇದ್ದು ಅನೇಕರನ್ನು ಆ ರೀತಿಯಲ್ಲಿರುವುದಕ್ಕೆ ಎಚ್ಚರಿಸು. ನಿನ್ನ ಮೂಲಕ, ನಿನ್ನಂತವರ ಮೂಲಕ ಇಲ್ಲಿರುವ ಕ್ರಿಸ್ತನ ಸಭೆಯು ತಪ್ಪದೇ ಚಿರಕಾಲ ನಿಲ್ಲುವುದು.

# 11. ನಾಲ್ಕು ಬೈಬಲ್ ಪ್ರಶ್ನೆಗಳು
# (Four Bible questions)

ಒಂದೇ ಒಂದು ಸಭೆ ಇದೆ ಎಂದು ಬೈಬಲ್ ಬಹಳವಾಗಿ ಬೋಧಿಸುತ್ತಿದೆ. (ಎಫೆಸ 4:4; ಕೊಲೊಸ್ಸೆ 1:18). ಆದರೆ ಪ್ರಪಂಚದಲ್ಲಿ ಇಂದು ಅನೇಕ ಸಭೆಗಳಿರುವುದರಿಂದ ಬೈಬಲ್ ಹೇಳುತ್ತಿರುವ ಆ ಸತ್ಯಸಭೆಯನ್ನು ಕುರಿತು ನಾವು ತಿಳಿದಿಕೊಳ್ಳುವುದು ಹೇಗೆ ಎಂಬ ಪ್ರಶ್ನೆ ಉಂಟಾಗುತ್ತದೆ. ಎಲ್ಲಾ ಸಭೆಗಳು ದೇವರ ವಾಕ್ಯಾನುಸಾರವಾಗಿರುವ ಹಾಗೆ ಸಮರ್ಥಿಸಿಕೊಳ್ಳುತ್ತಾರೆ. ಸಾಮಾನ್ಯವಾಗಿ ಒಂದೇ ಒಂದು ಸಭೆ ಇರುವುದಾದರೆ ಅವೆಲ್ಲವುಗಳು ಕರ್ತನಿಗೆ ಸೇರುವುದಿಲ್ಲ ಅಲ್ಲವೇ? ಸತ್ಯಸಭೆಯನ್ನು ನಿರ್ಣಯಿಸುವುದಕ್ಕೆ ನೀನು ನಾಲ್ಕು ಸೂಕ್ಷ್ಮ ಪ್ರಶ್ನೆಗಳನ್ನು ಹಾಕಿದರೆ ಸಾಕು. ಬೇಕಾದರೆ ಇನ್ನೂ ಹೆಚ್ಚು ಪ್ರಶ್ನೆಗಳನ್ನು ಕೇಳಬಹುದು. ಆದರೆ ಒಂದು ಸಭೆಯು ನಿಜವಾದದ್ದೋ ಅಲ್ಲವೋ ತಿಳಿದುಕೊಳ್ಳಲು ನಾಲ್ಕು ಪ್ರಶ್ನೆಗಳು ಸರಿ ಹೋಗುತ್ತವೆ.

ಈ ಪ್ರಶ್ನೆಗಳನ್ನು ಹಾಕುತ್ತಾ ಅವುಗಳಿಗೆ ಬೈಬಲ್‌ನಿಂದ ಉತ್ತರಗಳನ್ನು ಕಂಡುಕೊಳ್ಳೋಣ.

1. **ಸಭೆಯನ್ನು ಯಾರು ಸ್ಥಾಪಿಸಿದರು?:-**

ಕ್ರಿಸ್ತನು ಸಭೆಯನ್ನು ಸ್ಥಾಪಿಸಿದನೆಂದು ಬೈಬಲ್ ಬೋಧಿಸುವ ಹಾಗೆ ನಮ್ಮಲ್ಲಿ ಪ್ರತಿಯೊಬ್ಬರು ಅಂಗೀಕರಿಸುವರು. ಕ್ರಿಸ್ತನು ದೇವರ ಮಗನೆಂದು ಒಪ್ಪಿಕೊಂಡಾಗ, "ನೀನು ಪೇತ್ರನು, ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು; ಪಾತಾಳ ಲೋಕದ ಬಲವು ಅದನ್ನು ಸೋಲಿಸಲಾರದು" ಎಂದು ಕ್ರಿಸ್ತನು ಹೇಳಿದನು (ಮತ್ತಾಯ16:18). ಸಭೆಯನ್ನು ಕಟ್ಟುವೆನೆಂದು ಕ್ರಿಸ್ತನೇ ವಾಗ್ದಾನ ಮಾಡಿದನು. ಆದ್ದರಿಂದ ಅದನ್ನು ಕಟ್ಟಿದವನು ಖಂಡಿತವಾಗಿ ಆತನೇ ಅಲ್ಲವೆ? ನನ್ನ ಸಭೆಯನ್ನು ಕಟ್ಟುವೆನು, (ಸಭೆಗಳನ್ನು ಕಟ್ಟುವೆನು ಎಂದು ಅಲ್ಲ) ಎಂದು ಕ್ರಿಸ್ತನು ಹೇಳಿದ ಸಂಗತಿಯನ್ನು ಗುರುತಿಸು. ಆತನು ಒಂದರಿಂದಲೇ ನಿರ್ಮಿಸಿದನು. ಆದ್ದರಿಂದ ಅದು ಆತನಿಗೆ ಸೇರಿದ್ದೆಂದು ಆತನು ಹೇಳಿದ್ದಾನೆ. ನನ್ನ "ಸಭೆ" ಎಂದು ಆತನು ಹೇಳಿದ್ದಾನೆ. ಅದು ಆತನದಾದರೆ ಅದು ನನ್ನದು, ನಿನ್ನದು ಅಲ್ಲವೆಂದು ಅರ್ಥ.

2. **ಅದು ಎಲ್ಲಿ ಸ್ಥಾಪಿಸಲ್ಪಟ್ಟಿತು?:-**

ಅಪೊಸ್ತಲರ ಕೃತ್ಯಗಳು ಎರಡನೆಯ ಅಧ್ಯಾಯದ ಪ್ರಕಾರ ಅದು ಯೆರೂಸಲೇಮಿನಲ್ಲಿ ಸ್ಥಾಪಿಸಲ್ಪಟ್ಟಿತು. ಅದು ನಮಗೆ ಹೇಗೆ ತಿಳಿಯುತ್ತದೆ? ಹೇಗೆಂದರೆ ಅಪೊಸ್ತಲರೆಲ್ಲರು ಮೇಲಿನಿಂದ ಶಕ್ತಿಯನ್ನು ಹೊಂದುವವರೆಗೆ

ಯೆರೂಸಲೇಮಿನಲ್ಲಿ ಇರಬೇಕೆಂದು ಕ್ರಿಸ್ತನು ಅವರಿಗೆ ಆಜ್ಞಾಪಿಸಿದ್ದನು (ಲೂಕ 24:49). ಪವಿತ್ರಾತ್ಮನಿಂದ ಶಕ್ತಿ ಬಂದಾಗ ಅವರು ಯೆರೂಸಲೇಮಿನಲ್ಲಿಯೇ ಇದ್ದರು (ಅ.ಕೃ.2:1–4). ಅಷ್ಟೇ ಅಲ್ಲದೆ, ಪ್ರವಾದಿಯಾದ ಯೆಶಾಯನು ಕೂಡ ದೇವರ ರಾಜ್ಯವು ಅಥವಾ ಸಭೆಯು ಯೆರೂಸಲೇಮಿನಲ್ಲಿ ಸ್ಥಾಪಿಸಲ್ಪಡುತ್ತದೆ ಎಂದು ಪ್ರವಾದಿಸಿದ್ದನು (ಯೆಶಾಯ 2:2,3).

**3. ಅದು ಯಾವಾಗ ಸ್ಥಾಪಿಸಲ್ಪಟ್ಟಿತು?:–**

ಅಪೊಸ್ತಲರ ಕೃತ್ಯಗಳು ಎರಡನೆಯ ಅಧ್ಯಾಯದ ಪ್ರಕಾರ ಯೆರೂಸಲೇಮಿನಲ್ಲಿ ಸಭೆಯು ಕ್ರಿಸ್ತನಿಂದ ಸ್ಥಾಪಿಸಲ್ಪಟ್ಟಿತು. ಆದ್ದರಿಂದ ಅದು ಸರಿಸುಮಾರು ಕ್ರಿ.ಶ.33ರಲ್ಲಿ ಸ್ಥಾಪಿಸಲ್ಪಟ್ಟಿತು. ಆದ್ದರಿಂದ ಕರ್ತನ ಸಭೆಯು ಸುಮಾರು ಎರಡು ಸಾವಿರ ವರ್ಷಗಳ ಹಿಂದಿನಿಂದಲೂ ಇದೇ ಎಂದು ಗ್ರಹಿಸಬಹುದು.

**4. ಅದು ಯಾವ ನಾಮವನ್ನು ಧರಿಸಿಕೊಂಡಿತು?:–**

ವ್ಯಕ್ತಿಗತ ಸಭೆಯ ಸದಸ್ಯರು ಕ್ರೈಸ್ತರೆಂದು ಕರೆಯಲ್ಪಟ್ಟರು (ಅ.ಕೃ.11:26; 26:28;1ಪೇತ್ರ 4:16). ಕ್ರೈಸ್ತರೆಲ್ಲರು ಸೇರಿ ಸಭೆಯಾಗುವರು. ವಾಕ್ಯದಲ್ಲಿ ಅದು ಕ್ರಿಸ್ತನ ಶರೀರವೆಂದು ಕರೆಯಲ್ಪಟ್ಟಿದೆ(1ಕೊರಿಂಥ12:27). ಆದರೆ ಆ ಶರೀರವು ಸಭೆಯಾಗಿದೆ (ಕೊಲೊಸ್ಸೆ 1:18). ಆದ್ದರಿಂದ ಕ್ರಿಸ್ತನ ಸಭೆಯಾಗಿದೆ. ಆಯಾ ಪ್ರದೇಶಗಳಲ್ಲಿರುವ ಸಭೆಗಳು ಎಲ್ಲವು ಕ್ರಿಸ್ತನ ಸಭೆಗಳೆಂದು ಕರೆಯಲ್ಪಟ್ಟವು (ರೋಮಾ 16:16). ಕ್ರಿಸ್ತನೇ ಸಭೆಯನ್ನು ಸ್ಥಾಪಿಸಿದ್ದರೆ ಸಾಮಾನ್ಯವಾಗಿ ಅದು ಕ್ರಿಸ್ತನ ಹೆಸರನ್ನೇ ಧರಿಸಿಕೊಳ್ಳುತ್ತದೆ. ಅದು ಕ್ರಿಸ್ತನ ಸಭೆ ಅಲ್ಲವಾದರೆ ಬೇರೆ ಯಾರ ಸಭೆಯಾಗುತ್ತದೆ? ಅದು ಆತನ ನಾಮವನ್ನು ಧರಿಸದಿದ್ದರೆ ಅದು ಕ್ರಿಸ್ತನ ಸಭೆಯಾಗುತ್ತದೆಯಾ? ಹಾಗೆ ಎಂದಿಗೂ ಆಗುವುದಿಲ್ಲ. ಇವು ಬೈಬಲ್ ಉತ್ತರಗಳಿಂದ ಕೂಡಿದ ನಾಲ್ಕು ಚಿಕ್ಕ ಪ್ರಶ್ನೆಗಳು. ಯಾವುದಾದರು ಒಂದು ಸಭೆಯು ಕ್ರಿಸ್ತನ ಸಭೆಯೋ, ಅಲ್ಲವೋ ಎಂದು ನೀನು ತಿಳಿದುಕೊಳ್ಳಬೇಕಾದರೆ ಈ ನಾಲ್ಕು ಪ್ರಶ್ನೆಗಳನ್ನು ಕೇಳಿ ಅವುಗಳಿಗೆ ಉತ್ತರವನ್ನು ತಿಳಿದುಕೊ.

ಯಾವುದೇ ಒಂದು ಸಭೆಯು ಕ್ರಿಸ್ತನ ಸಭೆ ಎಂದು ಹೇಳಿಕೊಳ್ಳಬಹುದು. ಆದರೆ ಅದು ಒಬ್ಬ ಮನುಷ್ಯನಿಂದ ಸ್ಥಾಪಿಸಲ್ಪಟ್ಟಿದ್ದರೆ ಅದು ಕ್ರಿಸ್ತನ ಸಭೆ ಆಗಲಾರದು. ಅದು ಲಂಡನ್‌ನಲ್ಲಿ ಅಥವಾ ಅಮೇರಿಕದಲ್ಲಿಯಾಗಲಿ ಬೇರೆ ಎಲ್ಲಾದರು ಸ್ಥಾಪಿಸಲ್ಪಟ್ಟಿದ್ದರೆ ಅದು ಕ್ರಿಸ್ತನ ಸಭೆ ಹೇಗಾಗುತ್ತದೆ? ಅದು ಕಳೆದ ಕೆಲವು ಶತಮಾನಗಳಲ್ಲಿ ಸ್ಥಾಪಿಸಲ್ಪಟ್ಟಿದ್ದರೆ ಅದು ಕ್ರಿಸ್ತನ ಸಭೆಗಿಂತ ಬಹಳ ಹೊಸದು. ಮತ್ತು ಕೊನೆಯದಾಗಿ ಒಬ್ಬ ಮನುಷ್ಯ ಕಲ್ಪಿತ ಹೆಸರನ್ನು

ಧರಿಸಿಕೊಂಡರೆ ಅದು ಕೇವಲ ಒಂದು ಮತಶಾಖೆಗೆ ಸಂಬಂಧಿಸಿದ ಸಭೆ ಮಾತ್ರವೇ. ಆದ್ದರಿಂದ ಒಂದು ಸಭೆಯು ದೇವರದೋ, ಅಥವಾ ಮನುಷ್ಯನದೋ ಎಂದು ತಿಳಿದುಕೊಳ್ಳಲು ಇದು ಒಂದು ಪರೀಕ್ಷೆ ಎಂದು ಈಗ ನೀನು ಗ್ರಹಿಸಲಾರೆಯಾ? ಈ ಪರೀಕ್ಷೆ ಎಂದಿಗೂ ಅಪಜಯ ಹೊಂದುವುದಿಲ್ಲ.

ಯಾವ ಸಭೆಯಾದರು ಒಂದರಲ್ಲಿ ಬಿಟ್ಟು ಎಲ್ಲಾ ಅಂಶಗಳಲ್ಲಿಯೂ ಕರ್ತನ ಸಭೆಯಂತೆಯೇ ಇರುವ ಹಾಗೆ ನೀನು ನೋಡಿದರೆ ಅದು ಇನ್ನೂ ಕ್ರಿಸ್ತನ ಸಭೆ ಅಲ್ಲ. ಅದು ಬೈಬಲ್ ಬೋಧಿಸುವ ಒಂದೇ ಒಂದು ಸಭೆಯಾಗಿದ್ದರೆ ಅದು ಎಲ್ಲಾ ಅಂಶಗಳಲ್ಲಿಯೂ ಬೈಬಲ್ ಪ್ರಕಾರವೇ ಇರುತ್ತದೆ.

ನನ್ನ ಸಹೋದರನೇ, ನೀನು ಕ್ರಿಸ್ತನ ಸಭೆಯ ಸದಸ್ಯನಾ? ಈ ನಾಲ್ಕು ಪ್ರಶ್ನೆಗಳನ್ನು ಕೇಳಿ ನೋಡು. ಆಗ ನೀನು ಒಂದು ಮತಶಾಖೆಗೆ ಸೇರಿದ ಸಂಸ್ಥೆಯಲ್ಲಿ ಇರುವೆನೆಂದು ಗ್ರಹಿಸಿದರೆ ನೀನು ನಿನ್ನ ಬೈಬಲ್ ಅನ್ನು ಚೆನ್ನಾಗಿ ಓದಿ ಕರ್ತನಿಗೆ ಒಳಗಾಗು. ಬೈಬಲ್ ಬೋಧಿಸುವ ಹಾಗೆ ನೀನು ಮಾಡಿದರೆ ಕರ್ತನು ನಿನ್ನನ್ನು ರಕ್ಷಿಸಿ ತನ್ನ ಸಭೆಯಲ್ಲಿ ಸೇರಿಸಿಕೊಳ್ಳುವನು. ಆತನು ನಿನ್ನನ್ನು ರಕ್ಷಿಸಿ ಬೇರೆ ಯಾವುದೋ ಒಂದು ಸಭೆಯಲ್ಲಿ ಎಂದಿಗೂ ಸೇರಿಸುವುದಿಲ್ಲ. ಆದ್ದರಿಂದ ನೀನು ಭಯಪಡುವ ಅವಶ್ಯಕತೆಯಿಲ್ಲ. ಆತನು ತನ್ನ ಸಭೆಯನ್ನು ತಿಳಿದಿದ್ದಾನೆ. ಆದ್ದರಿಂದ ನಿನ್ನನ್ನು ಅದರಲ್ಲಿಯೇ ಸೇರಿಸುವನು. ಆಗ ಬೈಬಲ್‌ನಲ್ಲಿ ನೀನು ಓದುವ ಸಭೆಯಲ್ಲಿ ನೀನೂ ಒಬ್ಬ ಸದಸ್ಯನಾಗುವಿ. ನಾನು ಈ ಸಭೆಯಲ್ಲಿ ಅಥವಾ ಆ ಸಭೆಯಲ್ಲಿ ಯಾಕೆ ಇರುವೆನು ಎಂದು ಯಾರಿಗೂ ನೆಪಗಳನ್ನು ಹೇಳಿ ವಿವರಿಸಬೇಕಾದ ಅವಶ್ಯಕತೆಯಿಲ್ಲ. ಹೇಗೆಂದರೆ ಕರ್ತನಿಗೆ ಒಂದೇ ಒಂದು ಸಭೆಯಿದೆ, ನೀನು ಅದರಲ್ಲಿ ಸದಸ್ಯನು.

## 12. ಕ್ರಿಸ್ತನ ಸಭೆಯನ್ನು ನಿಮ್ಮ ಪಟ್ಟಣದಲ್ಲಿಯಾಗಲಿ, ನಿಮ್ಮ ಸ್ವಂತ ಊರಿನಲ್ಲಾಗಲಿ ಹೇಗೆ ಆರಂಭಿಸಬಹುದು.

## (How you can begin the Church of Christ in your own city or village)

ಕ್ರಿಸ್ತನ ಸಭೆ ಇಲ್ಲದಿರುವ ಒಂದು ಪಟ್ಟಣದಲ್ಲಿಯಾಗಲಿ, ಗ್ರಾಮದಲ್ಲಿಯಾಗಲಿ ನೀನು ಬಹುಶಃ ಇರಬಹುದು. ಅಲ್ಲಿ ಮನುಷ್ಯ ಕಲ್ಪಿತವಾದ ಮತಶಾಖೆಗಳಿಗೆ ಸಂಬಂಧಿಸಿದ ಸಭೆಗಳಿರಬಹುದು. ಆದರೆ ಕ್ರಿಸ್ತನ ಸಭೆಯು ಇನ್ನು ಸ್ಥಾಪಿಸಲ್ಪಟ್ಟಿಲ್ಲ. ಆದ್ದರಿಂದ ನಾನೇನು ಮಾಡಬೇಕು ಎಂದು ನೀನು ಆಲೋಚಿಸುತ್ತಿರಬಹುದು. ನೀನಿರುವ ರೀತಿಯಲ್ಲಿಯೇ ಇರುವುದು ಒಳ್ಳೆಯದಾ? ಕ್ರಿಸ್ತನ ಸಭೆ ಇರುವ ಊರಿಗೆ ಹೋಗುವುದು ಒಳ್ಳೆಯದಾ? ಇಲ್ಲವಾದರೆ ನಿನ್ನ ಊರಿನಲ್ಲಿಯೇ ಇರುವ ಸಭೆಗಳಲ್ಲಿ ಯಾವುದರಲ್ಲಿಯಾದರು ಸದಸ್ಯನಾಗಿರುವುದು ಒಳ್ಳೆಯದಾ? ಇವು ಬಹಳ ಪ್ರಾಮುಖ್ಯವಾದ ಪ್ರಶ್ನೆಗಳು ಆಗಿರುವುದರಿಂದ ಉತ್ತರಗಳು ಅಷ್ಟು ಸುಲಭವಾಗಿ ದೊರೆಯುವುದಿಲ್ಲ.

ನಾನು ನಿನಗೆ ಕೆಲವು ಸಲಹೆಗಳನ್ನು ಕೊಡಬೇಕೆಂದು ಇಷ್ಟಪಡುತ್ತಿದ್ದೇನೆ. ನೀನು ಕ್ರಿಸ್ತನ ಸಭೆಯ ಸದಸ್ಯನಾಗುವುದು ಸಾಧ್ಯವೇ. ನೀನು ನಿಮ್ಮ ಊರಿನಲ್ಲಿ ಕ್ರಿಸ್ತನ ಸಭೆಯನ್ನು ಪ್ರಾರಂಭಿಸಲು, ಹೆಜ್ಜೆ ಮುಂದಿಡಲು ಕೂಡ ನಿನಗೆ ಸಾಧ್ಯವಾಗಿರುವುದರಿಂದ ಈ ಕೆಳಗಿನ ಸಲಹೆಗಳನ್ನು ಪಾಲಿಸು :

1. ನೀನು ಒಂದು ಬೈಬಲ್ ಅನ್ನು ತೆಗೆದುಕೊ. ನೀನು ದೇವರ ಚಿತ್ತದ ಪ್ರಕಾರ ಜರುಗಿಸಬೇಕೆಂದು ಆಸಕ್ತಿ ಹೊಂದಿದ್ದರೆ ನಿನಗೆ ಒಂದು ಬೈಬಲ್ ಇರುವುದು ಅವಶ್ಯ. ಬೈಬಲ್‌ಗಳು ಭಾರತದೇಶದಲ್ಲಿ ದೊರೆಯುತ್ತಿವೆ. ನೀನು ಒಂದು ಪ್ರತಿಯನ್ನು ತೆಗೆದುಕೊಂಡ ನಂತರ ಅದನ್ನು ಶ್ರದ್ಧೆಯಿಂದ ಧ್ಯಾನಿಸುವುದಕ್ಕೆ ಪ್ರಾರಂಭಿಸು. ಹೊಸ ಒಡಂಬಡಿಕೆ ಓದುವಾಗ ಇನ್ನಷ್ಟು ಜಾಗ್ರತೆಯಿಂದ ಓದು. ಏಕೆಂದರೆ ಅದರಲ್ಲಿ ಇಂದಿನ ಜನರಿಗೆ ಕ್ರಿಸ್ತನ ಕಾನೂನು ಬರೆಯಲ್ಪಟ್ಟಿದೆ. ಹಾಗೆ ಮಾಡುವುದರಿಂದ ನೀನು ರಕ್ಷಣೆ ಹೊಂದಲು ಏನು ಮಾಡಬೇಕು? ಕ್ರಿಸ್ತನ ಸಭೆಯ ಸದಸ್ಯನಾಗುವುದು ಹೇಗೆ? ಆರಾಧಿಸುವುದು ಹೇಗೆ? ಕ್ರೈಸ್ತ ಜೀವನವನ್ನು ಜೀವಿಸುವುದು ಹೇಗೆ? ಎನ್ನುವವುಗಳನ್ನು ನೀನು ತಪ್ಪದೆ ಗ್ರಹಿಸಬಹುದು.

2. ನೀನು ಮೊದಲು ಸತ್ಯಕ್ಕೆ ಒಳಗಾಗು. ನೀನು ಆತನಲ್ಲಿ ನಂಬಿಕೆಯಿಟ್ಟು ಪಾಪಗಳ ವಿಷಯವಾಗಿ ಮಾನಸಾಂತರ ಹೊಂದಿ ಕ್ರಿಸ್ತನನ್ನು ಮನುಷ್ಯರ ಎದುರು ಒಪ್ಪಿಕೊಂಡು, ದೀಕ್ಷಾಸ್ನಾನ (ನೀರಿನಲ್ಲಿ ಮುಳುಗಿಸುವುದು) ಮಾಡಿಸಿಕೊಂಡಾಗ ನೀನು ರಕ್ಷಣೆ ಹೊಂದುವಿ ಎಂದು ಕರ್ತನು ಬೋಧಿಸಿದ್ದಾನೆ (ಮಾರ್ಕ16:16; ಮತ್ತಾಯ 10:32;ಅ.ಕೃ.2:38). ಅಪೊಸ್ತಲರ ಕಾಲದಲ್ಲಿ ಜನರು ಕ್ರಿಸ್ತನ ಕಡೆಗೆ

ಹೇಗೆ ತಿರುಗಿಕೊಂಡರೋ ಎಂಬುದನ್ನು ತಿಳಿದುಕೊಳ್ಳಲು ಅಪೊಸ್ತಲರ ಕೃತ್ಯಗಳು ಎಂಬ ಪುಸ್ತಕವನ್ನು ಸಹ ಓದು. ನೀನು ಕರ್ತನಿಗೆ ವಿಧೇಯನಾಗಲು ಸಿದ್ಧವಾಗಿದ್ದಾಗ ವಾಕ್ಯದ ಪ್ರಕಾರ ನಿನಗೆ ದೀಕ್ಷಾಸ್ನಾನ ಕೊಡುವುದಕ್ಕೆ ಯಾರನ್ನಾದರು ಕಂಡುಕೊಳ್ಳು, ಆತನು ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ಪಾಪಕ್ಷಮಾಪಣೆಯ ನಿಮಿತ್ತ ನೀರಿನಲ್ಲಿ ಮುಳುಗಿಸುವುದಕ್ಕೆ ಅವಕಾಶವಿರುವ ಒಂದು ಸ್ಥಳಕ್ಕೆ ತೆಗೆದುಕೊಂಡು ಹೋಗುವಂತೆ ನೋಡಿಕೊ. ನೀನು ಆ ರೀತಿಯಲ್ಲಿ ದೀಕ್ಷಾಸ್ನಾನ ಹೊಂದಿದ್ದರಿಂದ ನೀನು ಆ ಕ್ಷಣವೇ ಕ್ರಿಸ್ತನ ಸಭೆಯ ಸದಸ್ಯನಾಗುವಿ. ಹೇಗೆಂದರೆ ರಕ್ಷಣೆಯ ಮಾರ್ಗದಲ್ಲಿರುವವರನ್ನು ಕರ್ತನು ತನ್ನ ಸಭೆಯೊಂದಿಗೆ ಸೇರಿಸುತ್ತಿದ್ದನು (ಅ.ಕೃ.2:47). ನೀನು ಸಹ ಒಬ್ಬ ಕ್ರೈಸ್ತನಾಗುವಿ (ಅ.ಕೃ.11:26).

3. ನಂತರ ನಿನ್ನ ಮನೆಯಲ್ಲಿ ಆರಾಧನೆಯನ್ನು ಮಾಡಲು ಪ್ರಾರಂಭಿಸು. ನಿನ್ನ ಮನೆಯವರನ್ನು, ನಿನ್ನ ಸ್ನೇಹಿತರನ್ನು, ಆಸಕ್ತಿಯುಳ್ಳವರನ್ನು ಆಹ್ವಾನಿಸು. ಈ ಆರಾಧನೆಯ ಕೂಡಿಕೆ ಭಾನುವಾರದಂದು ನಡೆಯಬೇಕು. ಅದು ದೇವರಿಗೆ ಇಷ್ಟಪೂರ್ವಕವಾಗಿರುವಂತೆ ಆ ದಿನ ಬೈಬಲ್ ಓದಬೇಕು (2ತಿಮೊಥೆ 2:15), ಪ್ರಾರ್ಥನೆ ಮಾಡಬೇಕು (ಅ.ಕೃ.2:42), ಸ್ತುತಿಗೀತೆಗಳನ್ನು ಹಾಡಬೇಕು. ಕರ್ತನ ಭೋಜನವನ್ನು ಕೂಡ ತಪ್ಪದೇ ಆಚರಿಸಬೇಕು. ರೊಟ್ಟಿಯು ಕ್ರಿಸ್ತನ ಶರೀರಕ್ಕೆ ಸದೃಶವಾಗಿಯೂ, ದ್ರಾಕ್ಷಾರಸವು ಆತನ ರಕ್ತಕ್ಕೆ ಸಾ ದೃಶವಾಗಿಯೂ ತೆಗೆದುಕೊಳ್ಳಬೇಕು. ಒಂದು ವೇಳೆ ದ್ರಾಕ್ಷಾರಸವು ಅಂಗಡಿಗಳಲ್ಲಿ ದೊರಕದಿದ್ದಾಗ ಕೆಲವು ಕೆಂಪು ದ್ರಾಕ್ಷೆಗಳನ್ನು ತೆಗೆದುಕೊಂಡು ಕುದಿಸಿ ಆ ದ್ರಾಕ್ಷರಸವನ್ನು ಉಪಯೋಗಿಸಬೇಕು. ಕೊನೆಯದಾಗಿ ನೀನು ಅಭಿವೃದ್ಧಿಹೊಂದಿದ ಪ್ರಕಾರ ದೇವರಿಗೆ ಕೃತಜ್ಞತಾ ಪೂರ್ವಕವಾಗಿ ಕಾಣಿಕೆಯನ್ನು ಸಂಗ್ರಹಿಸಬೇಕು (1ಕೊರಿಂಥ 16:2).

ಕೂಡಿಕೆಗೆ ಹಾಜರಾದವರು ಕಾಣಿಕೆ ಕೊಡಬಹುದು. ಬಂದ ಹಣವನ್ನು ಯಥಾರ್ಥವಾಗಿ ಲೆಕ್ಕಿಸಿ, ಸುವಾರ್ತೆ ಪ್ರಕಟಿಸುವುದಕ್ಕೆ, ಕೊರತೆಯಲ್ಲಿದ್ದವರಿಗೆ ಸಹಾಯ ಮಾಡುವುದಕ್ಕೆ ಉಪಯೋಗಿಸಿಕೊಳ್ಳಬೇಕು. ಈ ಆರಾಧನೆ ಕ್ರಿಯೆಗಳೆಲ್ಲವೂ ವಾರದ ಮೊದಲನೆಯ ದಿನದಲ್ಲಿ (ಪ್ರತಿ ಭಾನುವಾರ) ನಡೆಸಬೇಕು (ಅ.ಕೃ.20:7)

4. ಪ್ರತಿ ಭಾನುವಾರ ನಿನ್ನ ಮನೆಯಲ್ಲಿ ಕೂಡಿಕೆಯನ್ನು ನಡೆಸುವುದು ಮಾತ್ರವಲ್ಲದೆ ಊರಿನಲ್ಲಿರುವ ಯಾವುದಾದರು ಒಂದು ಸ್ಥಳದಲ್ಲಿಯಾಗಲಿ ಮತ್ತೊಂದು ಊರಿನಲ್ಲಾಗಲಿ ಅಂತಹ ಕೂಟಗಳನ್ನು ನಡೆಸುವುದಕ್ಕೆ ಏರ್ಪಾಟು ಮಾಡಬೇಕು. ಈ ಕೂಟಗಳಲ್ಲಿ ಯಾರಾದರು ಸುವಾರ್ತೆಗೆ ಒಳಗಾಗುವ ವರೆಗೂ ನೀನು

ಸುವಾರ್ತೆ ಬೋಧಿಸುವುದಕ್ಕೆ ಮಾತ್ರ ನಡೆಯಬೇಕು. ಅವರು ಸಭೆಯ ಸದಸ್ಯರಾದಾಗ ಇದಕ್ಕೆ ಮೊದಲು ಹೇಳಿದ ರೀತಿಯಲ್ಲಿ ಆರಾಧನೆ ಕೂಟವನ್ನು ನಡೆಸಬೇಕು. ಹೊಸ ಒಡಂಬಡಿಕೆಯಲ್ಲಿ ಹೇಳಿದ ಪ್ರಕಾರ ಇತರರು ರಕ್ಷಣೆ ಹೊಂದಿ ಸಭೆಯ ಸದಸ್ಯರಾಗುವಂತೆ ಏನನ್ನು ಮಾಡಬೇಕು ಎಂದು ಅವರಿಗೆ ಬೋಧಿಸಬೇಕು. ಪ್ರತಿವಾರ ದೇವರನ್ನು ಆರಾಧಿಸುವ ವಿಧಾನವನ್ನು, ಕ್ರೈಸ್ತವ ಜೀವಿತ ಜೀವಿಸುವ ವಿಧಾನವನ್ನು ವಾಕ್ಯದಿಂದ ಅವರಿಗೆ ಬೋಧಿಸು. ನೀನು ಈ ಕೆಲಸ ಮಾಡಿದರೆ ದೇವರು ತಪ್ಪದೇ ನಿನ್ನನ್ನು ಆಶೀರ್ವದಿಸುವನು.

5. ಆರಾಧನೆಯಲ್ಲಿಯೂ, ಬೋಧನೆಯಲ್ಲಿಯೂ ಜೀವಿತದಲ್ಲಿಯೂ ನೀನು ಜನರಿಗೆ ಮಾದರಿಯಾಗಿ ನಂಬಿಕೆಯಿಂದ ಇರು. ದೇವರ ಸತ್ಯವನ್ನು ವಿಸ್ತರಿಸುವುದಕ್ಕೆ ನಿನ್ನ ಶಕ್ತಿಗೆ ಮೀರಿ ಕೆಲಸ ಮಾಡು. ನೀನು ಇರುವ ಕಡೆಯೇ ನೀನು ಕ್ರೈಸ್ತವನಾಗಿ ಕ್ರಿಸ್ತನ ಸಭೆಯ ಸದಸ್ಯನಾಗಿರಬಹುದೆಂದು ನೆನಪಿನಲ್ಲಿಟ್ಟುಕೊ. ಕರ್ತನಿಗೆ ಬೇಕಾದದ್ದು ನಿನ್ನ ವಿಧೇಯತೆಯೇ.

ನಾವು ನಿಮಗೆ ಸಹಾಯ ಮಾಡಬಹುದೆಂದು ನಿಮಗೆ ಅನಿಸಿದರೆ ತಪ್ಪದೇ ನಮ್ಮನ್ನು ಸಂಪರ್ಕಿಸಿ.

## ೧೩. ಕ್ರಿಸ್ತನ ಹೆಸರು
## (The Name of Christ)

ಹೊಸ ಒಡಂಬಡಿಕೆ ಓದುವಾಗ ಕ್ರಿಸ್ತನ ಹೆಸರು ಅನೇಕ ಸಾರಿ ಹೇಳಲ್ಪಟ್ಟಿದ್ದರಲ್ಲಿ ನಾವು ಆಶ್ಚರ್ಯ ಪಡಬಹುದು. ಹೆಸರು ಪ್ರಾಮುಖ್ಯವಲ್ಲವೆಂದು, ಹೆಸರಿನಲ್ಲಿ ಏನೂ ಇಲ್ಲವೆಂದು ಕೆಲವರು ವಾದಿಸುತ್ತಾರೆ. ಇದು ಕೆಲವು ಹೆಸರುಗಳ ಬಗ್ಗೆ ಸತ್ಯವಾಗಿರಬಹುದು, ಆದರೆ ಕರ್ತನ ಹೆಸರು ಅಂತಹದ್ದು ಅಲ್ಲ. ಈ ಕೆಳಗಿನ ಸಂಗತಿಗಳನ್ನು ಗಮನಿಸು :

1. ದೇವರ ಪ್ರಜೆಗಳು ಒಂದು ಹೊಸ ಹೆಸರಿನಿಂದ ಕರೆಯಲ್ಪಡುವರು (ಯೆಶಾಯ 62:2). ನಾವು ಹೊಸ ಒಡಂಬಡಿಕೆಯಲ್ಲಿ ನೋಡಿದಾಗ ಸಭೆಯು ಕ್ರಿಸ್ತನ ಹೆಸರನ್ನು ಧರಿಸಬೇಕೆಂದು (ರೋಮಾ 16:16; 1ಕೊರಿಂಥಿ 12:13). ವ್ಯಕ್ತಿಗತ ಸದಸ್ಯರು ಕ್ರೈಸ್ತವರೆಂದು ಕರೆಯಲ್ಪಡಬೇಕೆಂದು (ಅ.ಕೃ11:26) ನಮಗೆ ತಿಳಿಯುತ್ತದೆ.
2. ಕುಟುಂಬದ ಹೆಸರು ಕ್ರಿಸ್ತನ ಹೆಸರು. ಎಫೆಸ 3:14,15ರಲ್ಲಿ ಪೌಲನು ಹೀಗೆ ಹೇಳಿದ್ದಾನೆ "ಹೀಗಿರಲಾಗಿ ಯಾವ ತಂದೆಯಿಂದ ಭೂಪರಲೋಕಗಳಲ್ಲಿರುವ ಪ್ರತಿಜನವೂ ಹೆಸರು ತೆಗೆದುಕೊಳ್ಳುತ್ತದೋ ಆ ತಂದೆಯ ಮುಂದೆ ನಾನು ಮೊಣಕಾಲೂರಿಕೊಂಡು ಬೇಡಿಕೊಳ್ಳುತ್ತೇನೆ".
3. ಸಭೆಯು ಕ್ರಿಸ್ತನ ಮದಲಗಿತ್ತಿಯೆಂದು ಹೇಳಲ್ಪಟ್ಟಿದೆ. ಮದಲಗಿತ್ತಿ ಆತನ ಹೆಸರನ್ನು ಧರಿಸಿಕೊಳ್ಳುವಳು. (ಪ್ರಕ 21:19; 22:17). ಕ್ರಿಸ್ತನಿಗೆ ಒಬ್ಬಳೆ ವಧುವಿದ್ದಾಳೆ. ಆತನು ತಿರುಗಿ ಬಂದಾಗ ಆತನ ಹೆಸರನ್ನು ಧರಿಕೊಂಡ ಸಭೆಗಾಗಿ ಬರುವನು (ಎಫೆಸ 5:27).
4. ಆತನ ಹೆಸರು ಎಲ್ಲಾ ನಾಮಗಳಿಗಿಂತಲೂ ಮೇಲಾದದ್ದು. "ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ. ಆದುದರಿಂದ ಸ್ವರ್ಗ ಮರ್ತ್ಯ ಪಾತಾಳಗಳಲ್ಲಿರುವವರೆಲ್ಲರು ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸುಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು"(ಫಿಲಿಪ್ಪಿ2:9–11).
5. ಕ್ರಿಸ್ತನ ಹೆಸರಿನಲ್ಲಿ ನಾವು ನಂಬಿಕೆ ಇಡಬೇಕು. "ದೇವರ ಮಗನ ಹೆಸರಿನಲ್ಲಿ ನಂಬಿಕೆಯಿಡುವವರಾದ ನಿಮ್ಮಲ್ಲಿ ನಿತ್ಯಜೀವ ಉಂಟೆಂದು ನಿಮಗೆ ಗೊತ್ತಾಗುವಂತೆ ಈ ಮಾತುಗಳನ್ನು ಬರೆದಿದ್ದೇನೆ" (1ಯೋಹಾನ 5:13).
6. ಕ್ರಿಸ್ತನ ಹೆಸರನ್ನು ಒಪ್ಪಿಕೊಳ್ಳಬೇಕು. "ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರು ದುರ್ಮಾರ್ಗತನವನ್ನು ಬಿಟ್ಟುಬಿಡಬೇಕು" (2ತಿಮೊಥೆ 2:19).

7. ದೇವರ ಕಡೆಗೆ ತಿರುಗಿಕೊಂಡು ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು. "ನಿಮ್ಮ ಪಾಪಗಳು ಪರಿಹಾರವಾಗುವುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ ಆಗ ನೀವು ಪವಿತ್ರಾತ್ಮನ ದಾನವನ್ನು ಹೊಂದುವಿರಿ" (ಅ.ಕೃ.2:38).

8. ಕರ್ತನ ಹೆಸರಿನಲ್ಲಿ ಆರಾಧನೆಗೆ ಕೂಡಿಕೊಳ್ಳಬೇಕು. "ಯಾಕೆಂದರೆ ಇಬ್ಬರು, ಮೂವರು "ನನ್ನ ಹೆಸರಿನಲ್ಲಿ" ಎಲ್ಲಿ ಕೂಡಿಬಂದಿರುತ್ತಾರೋ ಅಲ್ಲಿ ಅವರ ನಡುವೆ ನಾನು ಇದ್ದೇನೆ ಅಂದನು" (ಮತ್ತಾಯ 18:20).

9. ಸಮಸ್ತವನ್ನು ಆತನ ಹೆಸರಿನಲ್ಲಿ ಮಾಡಬೇಕು. "ನೀವು ನುಡಿಯಿಂದಾಗಲಿ, ನಡೆಯಿಂದಾಗಲಿ ಏನು ಮಾಡಿದರೂ ಅದೆಲ್ಲವನ್ನು ಕರ್ತನಾದ ಯೇಸುವಿನ "ಹೆಸರಿನಲ್ಲಿಯೇ" ಮಾಡಿರಿ. ಆತನ ಮೂಲಕ ತಂದೆಯಾದ ದೇವರಿಗೆ ಕೃತಾಜ್ಞತಾ ಸ್ತುತಿಯನ್ನು ಸಲ್ಲಿಸಿರಿ" (ಕೊಲೊಸ್ಸೆ 3:17).

10. ನೀತಿವಂತರು ಆತನ ಹೆಸರಿನ ನಿಮಿತ್ತ ಹಿಂಸೆಗೆ ಒಳಗಾಗುವರು. "ನನ್ನ ಹೆಸರಿನ ನಿಮಿತ್ತ ನಿಮ್ಮನ್ನು ಕೆಲವರು ಹಗೆ ಮಾಡುವರು ಆದರೆ ಕಡೆವರೆಗೂ ತಾಳುವವನು ರಕ್ಷಣೆ ಹೊಂದುವನು" (ಮತ್ತಾಯ 10:22).

11. ಕ್ರಿಸ್ತನ ಹೆಸರಿನಲ್ಲಿ ಪ್ರಾರ್ಥಿಸಬೇಕು. "ನೀವು ನನ್ನ ಹೆಸರಿನಲ್ಲಿ ಏನೇನು ಬೇಡಿಕೊಳ್ಳುವಿರೊ ಅದನ್ನು ನೆರವೇರಿಸುವೆನು, ಹೀಗೆ ಮಗನ ಮೂಲಕವಾಗಿ ತಂದೆಗೆ ಮಹಿಮೆ ಉಂಟಾಗುವುದು" (ಯೋಹಾನ 14:13).

12. ಕ್ರಿಸ್ತನ ಹೆಸರನ್ನು ದೂಷಿಸಬಾರದು. "ನೀವು ಕರೆಸಿಕೊಳ್ಳುವ ಶ್ರೇಷ್ಟವಾದ ನಾಮವನ್ನು ದೂಷಿಸುವವರು ಅವರಲ್ಲವೋ?" (ಯಾಕೋಬ 2:7).

13. ಪಾಪಕ್ಷಮಾಪಣೆ ಕ್ರಿಸ್ತನ ಹೆಸರಿನಲ್ಲಿ ದೊರೆಯುತ್ತದೆ. "ಪ್ರಿಯರಾದ ಮಕ್ಕಳೇ, ಕ್ರಿಸ್ತನ ಹೆಸರಿನ ನಿಮಿತ್ತ ನಿಮ್ಮ ಪಾಪಗಳು ಕ್ಷಮಿಸಲ್ಪಟ್ಟಿರುವುದರಿಂದ ನಿಮಗೆ ಬರೆಯುತ್ತೇನೆ" (1ಯೋಹಾನ 2:12).

14. ಆತನ ಹೆಸರಿನಲ್ಲಿ ಪ್ರಯಾಸಪಡಬೇಕು. "ನೀನು ತಾಳ್ಮೆಯುಳ್ಳವನಾಗಿ ನನ್ನ ಹೆಸರಿನ ನಿಮಿತ್ತ ಬಾಧೆಯನ್ನು ಸೈರಿಸಿಕೊಂಡು ಬೇಸರಗೊಳ್ಳಲಿಲ್ಲ. ಇವೆಲ್ಲ ಬಲ್ಲೆನು" (ಪ್ರಕ 2:3).

15. ಕ್ರಿಸ್ತನ ಹೆಸರಿನ ಮೂಲಕ ನಿತ್ಯಜೀವ ಉಂಟಾಗುತ್ತದೆ. "ಯೇಸು ದೇವಕುಮಾರನಾದ ಕ್ರಿಸ್ತನೆಂದು ನಂಬುವಂತೆಯೂ, ನಂಬಿ ಆತನ ಹೆಸರಿನ

ಮೂಲಕವಾಗಿ ಜೀವವನ್ನು ಪಡೆದುಕೊಳ್ಳುವಂತೆಯೂ ಇಷ್ಟೆಲ್ಲಾ ಬರೆದದೆ" (ಯೋಹಾನ 20:31).

ಈಗ ಕ್ರಿಸ್ತನ ಹೆಸರು ಎಷ್ಟು ಪ್ರಾಮುಖ್ಯವಾದದ್ದು ಎಂಬುದನ್ನು ನೀನು ಗ್ರಹಿಸಿದ್ದೀ, ಅದು ನಿಜವಾದರೆ ನೀನು, ನಾನು ವ್ಯಕ್ತಿಗತವಾಗಿ, ಸಭೆಯ ಪರವಾಗಿ ಕ್ರಿಸ್ತನ ಹೆಸರನ್ನು ಧರಿಸಿಕೊಳ್ಳುವುದು ಅತ್ಯವಸರವೆಂದು ಗ್ರಹಿಸಿಕೊಳ್ಳುವಿ. ನಾನು ಕ್ರಿಸ್ತನ ಸಭೆಯ ಸದಸ್ಯನಾದ್ದರಿಂದ ಕ್ರೈಸ್ತವನಾಗಿದ್ದೇನೆ. ನಿನ್ನ ಸಂಗತಿಯೇನು? ನೀನು ಬೈಬಲಿನಲ್ಲಿ ಓದುವ ಸಭೆಯ ಸದಸ್ಯನಾಗಿದ್ದೀಯಾ? ನೀನು ಕ್ರೈಸ್ತವನಾ? ಇಲ್ಲವಾದರೆ ಈದಿನವೇ ಹಾಗೆ ಆಗು.

## 14. ನೀನು ಒಬ್ಬ ಕ್ರೈಸ್ತವನಾಗಿ ಮಾತ್ರ ಇರಬೇಕು
## (You can be just a Christian)

ಮತ ಸಂಭಂದವಾಗಿ ವಿಭಜಿಸಲ್ಪಟ್ಟ ಲೋಕದಲ್ಲಿ ಇಂದು ನಾವು ಜೀವಿಸುತ್ತಿದ್ದೇವೆ. ಸಾವಿರ ಗಟ್ಟಲೆ ಸಭೆಗಳು, ಸಾವಿರ ಗಟ್ಟಲೆ ಹೆಸರುಗಳು, ಬಿರುದುಗಳು ನಮಗೆ ಕಾಣಿಸುತ್ತವೆ. ಇವು ಕ್ರಿಸ್ತನ ರಾಜ್ಯಕ್ಕೆ ಏನು ಸಹಾಯ ಮಾಡುವುದಿಲ್ಲವಾದರೂ ಅನೇಕರನ್ನು ದಿಗ್ಭ್ರಾಂತಿ (ಗೊಂದಲಗೊಂಡ ಸ್ಥಿತಿ) ಹೊಂದುವಂತೆ ಮಾಡುತ್ತವೆ. ಜನರು ಈ ಮತ ಸಂಭಂದವಾದ ತೊಳಲಾಟವನ್ನು ನೋಡಿ, ಕಳವಳಗೊಂಡು ಕೊನೆಗೆ ಭಕ್ತಿಯನ್ನು ಬಿಟ್ಟುಬಿಡುವುದು ಸಹ ನಡೆದಿದೆ. ಆದರೆ ಇದೇನಾ ಉತ್ತರ..? ಇದಕ್ಕಿಂತಲೂ ಶ್ರೇಷ್ಠವಾದ ಮಾರ್ಗವು ಖಂಡಿತವಾಗಿ ಇರುತ್ತದೆ. ಆದ್ದರಿಂದ ಮತ ಸಂಭಂದವಾದ ಗಲಿಬಿಲಿ ಇದಕ್ಕೆ ಉತ್ತರವಲ್ಲ.

ನೀನು ಒಬ್ಬ ಕ್ರೈಸ್ತವನಾಗಿ ಮಾತ್ರ ಇರುವುದು ಸಾಧ್ಯವೆಂದು ನೀನು ತಿಳಿದುಕೊಂಡಿದ್ದೀಯಾ? ಹೌದು, ನೀನು ಮತ್ತು ಎಲ್ಲರೂ ಕ್ರೈಸ್ತವರಾಗಿ ಇರಬೇಕೆಂಬ ಆಸೆ ಇರಬೇಕಾದರೆ ನೀವು ಕ್ರೈಸ್ತವರಾಗಿ ಮಾತ್ರವೇ ಇರುವುದಕ್ಕೆ ಸಾಧ್ಯ. ನೀನು ಕ್ರಿಸ್ತನ ಹೆಸರನ್ನು ಧರಿಸಿಕೊಂಡಾಗ ಮನುಷ್ಯರು ಕೊಡುವ ಹೆಸರನ್ನು, ಬಿರುದುಗಳನ್ನು ಯಾಕೆ ಇಟ್ಟುಕೊಳ್ಳಬೇಕು? ಬೈಬಲ್ ಮಾತ್ರವೇ ನಿನ್ನನ್ನು ಕ್ರೈಸ್ತವನನಾಗಿ ಮಾಡುತ್ತದೆ.

ಹೊಸ ಒಡಂಬಡಿಕೆಯ ಕಾಲದಲ್ಲಿ ಜನರು ಕ್ರೈಸ್ತವರಾಗಿ ಮಾತ್ರ ಇದ್ದರು ಉದಾಹರಣೆಗೆ: "ಅಂತಿಯೋಕ್ಯದಲ್ಲಿಯೇ ಶಿಷ್ಯರಿಗೆ ಕ್ರೈಸ್ತರೆಂಬ ಹೆಸರು ಮೊದಲು ಬಂತು" (ಅ.ಕೃ.11:26) ಎಂದು ಓದುತ್ತೇವೆ. ಹಾಗಾದರೆ ಯಾವ ವಿಧವಾದ ಕ್ರೈಸ್ತವರು? ಎಂಬ ಪ್ರಶ್ನೆ ಸಹಜವಾಗಿ ನಮಗೆ ಬರಬಹುದು ಆದರೆ ಆ ಕಾಲದಲ್ಲಿ ಅವರು ಕೇವಲ ಕ್ರೈಸ್ತರೆಂದು

ಮಾತ್ರ ಕರೆಯಲ್ಪಟ್ಟರು. ಪುನಃ ಪೌಲನು ಅಗ್ರಿಪ್ಪ ರಾಜನಿಗೆ ಬೋಧಿಸುವಾಗ "ಅಲ್ಪ ಪ್ರಯತ್ನದಿಂದ ನನ್ನನ್ನು ಕ್ರೈಸ್ತನಾಗುವುದಕ್ಕೆ ಒಡಂಬಡಿಸುತ್ತೀಯಾ? ಎಂದು ಅಗ್ರಿಪ್ಪ ರಾಜನು ಹೇಳಿದನು (ಅ.ಕೃ.26:28).

ಕ್ರಿಸ್ತನ ಬೋಧನೆಗೆ ಒಳಗಾದ ಪ್ರತಿಯೊಬ್ಬರೂ ಕ್ರೈಸ್ತವರಾಗುವರೆಂದು ಆ ರಾಜನಿಗೆ ಹೇಗೆ ತಿಳಿದಿತ್ತು? ನಿಜಕ್ಕೂ ರಾಜನು ಆ ಸಂಗತಿಗಳನ್ನು ತಿಳಿದವನಾಗಿ ಅಥವಾ ಅದನ್ನು ಕುರಿತ ಬೋಧನೆಯನ್ನು ಕೇಳಿದವನಾಗಿರಬಹುದೆಂದು ತಿಳಿದುಕೊಳ್ಳುತ್ತೇವೆ. ಹೇಗಾದರೂ ಆತನು ಕ್ರಿಸ್ತನಿಗೆ ಒಳಗಾದವನಾದರೆ ಕ್ರೈಸ್ತನಾಗುವೆನೆಂದು ರಾಜನಿಗೆ ತಿಳಿದಿತ್ತು. ಕೊನೆಯದಾಗಿ ಪೇತ್ರನು ಹೀಗೆ ಬರೆದನು. "ಆದರೆ ಕ್ರೈಸ್ತನಾಗಿ ಭಾದೆಪಟ್ಟರೆ ಅವನು ನಾಚಿಕೆ ಪಡದೇ ಆ ಹೆಸರಿನಿಂದಲೇ ದೇವರನ್ನು ಘನಪಡಿಸಲಿ" (1ಪೇತ್ರ 4:16).

ಕ್ರೈಸ್ತವನೆಂಬ ಹೆಸರು ಹೊಸ ಒಡಂಬಡಿಕೆಯಲ್ಲಿ ಮೂರು ಸಾರಿ ಮಾತ್ರವೇ ಉಪಯೋಗಿಸಲ್ಪಟ್ಟಿದೆ. ಪ್ರತಿ ಸಾರಿ ಯಾರಾದರೂ ಕ್ರಿಸ್ತನಿಗೆ ಒಳಗಾದರೆ ಅಂತಹ ವ್ಯಕ್ತಿಗಳನ್ನು ಉದ್ದೇಶಿಸಿ, ಆ ಪದವು ಉಪಯೋಗಿಸಿದಂತೆ ವಿಪುಲವಾಗಿ ತಿಳಿಯುತ್ತೆ. ಇಲ್ಲವೇ ಒಬ್ಬನು ಕ್ರಿಸ್ತನಿಗೆ ವಿಧೇಯನಾದಾಗ ಅವನು ಕ್ರೈಸ್ತವನಾದಂತೆ ತಿಳಿಯಪಡಿಸುವುದಕ್ಕೆ ಉಪಯೋಗಿಸಲ್ಪಟ್ಟಿತು. ಕ್ರೈಸ್ತವನೆಂದರೆ ಕ್ರಿಸ್ತನಂತೆ ಇರುವವನು. ಕ್ರಿಸ್ತನ ಸ್ವಭಾವವನ್ನು, ಆತ್ಮವನ್ನು ಹೊಂದಿದವನೆಂಬ ಅರ್ಥ ಬರುತ್ತದೆ. ಯಾವನಾದರೂ ಕರ್ತನಿಗೆ ಒಳಗಾಗಿ ಆತನ ಹೆಸರನ್ನು ಧರಿಸಿಕೊಳ್ಳದೆ ಹೇಗೆ ಇರುವನು ? ಕ್ರಿಸ್ತನ ನಾಮವನ್ನಲ್ಲದೆ ಮಾನವ ಕಲ್ಪಿತ ನಾಮವನ್ನು ಧರಿಸಿಕೊಳ್ಳುವದರಲ್ಲಿ ಕ್ರಿಸ್ತನ ಸ್ವಭಾವವಾಗಲಿ, ಆತ್ಮವಾಗಲಿ ಹೇಗಿರುತ್ತದೆ? ಅವರು ಕ್ರಿಸ್ತನಂತೆ ಹೇಗೆ ಆಗುವರು? ಅದು ಎಂದಿಗೂ ಆಗದು.

ಹೆಸರಿನಲ್ಲಿ ಯಾವ ವಿಶೇಷತೆ ಇಲ್ಲವೆಂದು ಅನೇಕರು ಹೇಳುವರು. ಆದರೆ ಕ್ರಿಸ್ತನ ಹೇಸರಿನಲ್ಲಿಯೇ ರಕ್ಷಣೆ ಇದೆಯೆಂದು ವಾಕ್ಯವು ಹೇಳುತ್ತದೆ (ಅ.ಕೃ.4:12). ಬೇರೆ ಯಾವ ಹೆಸರಿನಲ್ಲಿಯೂ ರಕ್ಷಣೆ ಇಲ್ಲವೇ ಇಲ್ಲ. ಕೊರಿಂಥದಲ್ಲಿರುವ ಸಭೆಯ ಕೆಲವು ಸದಸ್ಯರು ವಿಭಾಗಿಸಲ್ಪಟ್ಟು ಅವರಲ್ಲಿ ಒಬ್ಬನು ನಾನು ಪೌಲನವನೆಂದು, ಒಬ್ಬನು ಕೇಫನವನು ಎಂದು, ಒಬ್ಬನು ಅಪಲ್ಲೋಸನವನೆಂದು, ಇನ್ನೊಬ್ಬನು ನಾನು ಕ್ರಿಸ್ತನವನೆಂದು ಅಂದುಕೊಳ್ಳುತ್ತಿದ್ದರು ಆದರೆ ಪೌಲನು ಅವರನ್ನು ಖಂಡಿಸಿದನು. "ಸಹೋದರರೇ ನಿಮ್ಮೆಲ್ಲರ ಮಾತು ಒಂದೇ ಯಾಗಿರಬೇಕು. ನಿಮ್ಮಲ್ಲಿ ಬೇಧಗಳಿರಬಾರದು ನೀವು ಒಂದೇ ಮನಸ್ಸು, ಒಂದೇ ಅಭಿಪ್ರಾಯವು ಉಳ್ಳವರಾಗಿದ್ದು ಹೊಂದಿಕೆಯಿಂದಿರಬೇಕು. ಎಂಬುದಾಗಿ ನಾನು ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ನಿಮ್ಮನ್ನು ಬೇಡಿಕೊಳ್ಳುತ್ತೇನೆ" (1ಕೋರಿಂಥ 1:10). ಅವರ ಬುದ್ಧಿ ಹೀನತೆಯನ್ನು ಬಯಲು ಪಡಿಸುತ್ತಾ ಹೀಗೆಂದನು "ಕ್ರಿಸ್ತನು ವಿಭಾಗವಾಗಿದ್ದಾನೋ? ನಿಮಗೋಸ್ಕರ ಶಿಲುಬೆಗೆ ಹಾಕಿಸಿಕೊಂಡವನು ಪೌಲನೋ? ನೀವು ಪೌಲನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಿರೋ?" (1ಕೊರಿಂಥ 1:13). ಹೌದು ಕ್ರಿಸ್ತನು ವಿಭಾಗವಾಗಿಲ್ಲವೆಂದು, ಆತನೇ ಅವರಿಗಾಗಿ ಶಿಲುಬೆಗೆ ಹಾಕಲ್ಪಟ್ಟನೆಂದು ಆತನ ಹೆಸರಿನಲ್ಲಿಯೇ ಅವರು ದೀಕ್ಷಾಸ್ನಾನ ಮಾಡಿಸಿಕೊಂಡರೆಂದು ಅವರಿಗೆ ತಿಳಿದಿತ್ತು.

ಆದ್ದರಿಂದ ಅವರು ಮನುಷ್ಯರ ಹೆಸರುಗಳನ್ನು ಧರಿಸಿಕೊಳ್ಳುವುದಕ್ಕಿಂತ ಕ್ರಿಸ್ತನ ಹೆಸರನ್ನೇ ಧರಿಸಿಕೊಳ್ಳಬೇಕೆಂದು ಗ್ರಹಿತವಾಗುತ್ತದೆ. ಅದೇ ಈ ದಿನದಲ್ಲಿಯೂ ಅನ್ವಯಿಸುತ್ತದೆ.

ಬೈಬಲ್‌ನಲ್ಲಿ ಅನ್ವಯಿಸದ ಹೆಸರುಗಳನ್ನು, ಬಿರುದುಗಳನ್ನು ನೀನು ಧರಿಸಿಕೊಂಡರೆ ಬೈಬಲ್ ಬೋಧಿಸುವ ಕ್ರೈಸ್ತನು ನೀನಲ್ಲ. ಒಂದು ವೇಳೆ ಬೈಬಲ್‌ನಿಂದಲೇ ನೀನು ಹೆಸರನ್ನು ಧರಿಸಿಕೊಳ್ಳಬಹುದು. ಆದರೆ ಅದನ್ನು ಕರ್ತನು ನಿನಗೆ ಉದ್ದೇಶಿಸದಿದ್ದರೆ ನೀನು ಧರಿಸಿಕೊಂಡಲ್ಲಿ ತಪ್ಪು ಮಾಡುತ್ತೀಯಾ. ಕ್ರೈಸ್ತವನೆಂಬ ಹೆಸರಿನ ಮುಂದಾಗಲಿ, ಹಿಂದೆಯಾಗಲಿ ಮತ್ತೊಂದು ಕಲ್ಪಿಸಿಕೊಂಡರೆ ನೀನು ಕರ್ತನ ಹೆಸರನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದೀಯ. ಆದ್ದರಿಂದ ನೀನು ಬೈಬಲ್ ಬೋಧಿಸುವ ರೀತಿಯಲ್ಲಿ ಕ್ರೈಸ್ತವನಾಗುವುದಿಲ್ಲ. ಯಾವುದೊ ಒಂದು ರೀತಿಯ ಕ್ರೈಸ್ತವನಾಗಿ ನಾನು ಕ್ರೈಸ್ತವನು ಮಾತ್ರ ಎಂದು ನೀನು ಅಂದುಕೊಳ್ಳಲಿಕ್ಕೆ ಆಗುವುದಿಲ್ಲ. ಹಾಗೆ ಆದರೆ ಕ್ರೈಸ್ತನು ಇಲ್ಲವೆ ಕ್ರೈಸ್ತವ ನಲ್ಲದವನು.

ಬೈಬಲ್ ಓದಿ ಅದರ ಪ್ರಕಾರ ನೀನು ಮಾಡಬೇಕೆಂದು ನಾವು ನಿನ್ನನ್ನು ಕೇಳಿಕೊಳ್ಳುತ್ತಿದ್ದೇವೆ. ನೀನು ಆ ರೀತಿಮಾಡಿದರೆ ನೀನು ಕೇವಲ ಕ್ರೈಸ್ತವನು ಮಾತ್ರ ಆಗುತ್ತೀಯ. ಅದಕ್ಕಿಂತಲೂ ಹೆಚ್ಚು ಇಲ್ಲ ಕಡಿಮೆಯೂ ಇಲ್ಲ, ಅದು ಸರಿ ಹೋಗುತ್ತದಲ್ಲವೆ? ನೀನು ಕ್ರೈಸ್ತವನಾಗಿರುವಾಗ ಅದಕ್ಕಿಂತಲೂ ಹೆಚ್ಚು, ಕಡಿಮೆಯಾಗಿ ಯಾಕೆ ಇರಬೇಕು?

ನೀನು ಕರ್ತನ ಮಾತುಗಳನ್ನು ಕೇಳಿ (ರೋಮಾ 10:17), ದೇವರಲ್ಲಿ ನಂಬಿಕೆ ಇಟ್ಟು (ಇಬ್ರಿಯ11:6), ನಿನ್ನ ಪಾಪಗಳ ವಿಷಯವಾಗಿ ದೇವರ ಕಡೆಗೆ ತಿರಗಿಕೊಂಡು (ಅ.ಕೃ.17:30), ನಿನ್ನ ಪಾಪಕ್ಷಮಾಪಣೆಯ ನಿಮಿತ್ತ ದೀಕ್ಷಾಸ್ನಾನ ಹೊಂದಿದಾಗ (ಅ.ಕೃ.2:38; ಮಾರ್ಕ 16:16) ಕರ್ತನು ನಿನ್ನನ್ನು ರಕ್ಷಿಸುವನು. ನೀನೊಬ್ಬ ಕ್ರೈಸ್ತವನು ಮಾತ್ರ ಆಗಬಹುದು. ನೀನು ತೋರಿಸಿದ ಈ ವಿಧೇಯತೆ ನಿನ್ನನ್ನು ಕ್ರಿಸ್ತನ ಸಭೆಯ ಸದಸ್ಯನಾಗುವಂತೆ ಮಾಡುತ್ತದೆ. ಅದನ್ನು ಕುರಿತು ಬೈಬಲ್ ನಲ್ಲಿ ಓದಬಹುದು (ಅ.ಕೃ.2:47; ಮತ್ತಾಯ 16:18; ರೋಮಾ 16;16).

ನೀನು ಕ್ರೈಸ್ತವನಾಗಿ ಮಾತ್ರವೇ ಆಗಿದ್ದು ಕ್ರಿಸ್ತನ ಸಭೆಯ ಸದಸ್ಯನಾಗಿದ್ದರೆ ಸರಿಯಾದ ಮಾರ್ಗದಲ್ಲಿ ಇರುವಿಯೆಂದು ತಿಳಿದುಕೊಳ್ಳಬಹುದು ನೀನು ಕ್ರಿಸ್ತನ ಹೆಸರನ್ನು ಧರಿಸಿ ಆತನ ಸಭೆಯ ಸದಸ್ಯನೆಂದು ಎಲ್ಲರೂ ಸಂತೋಷದಿಂದ ಹೇಳಿಕೊಳ್ಳಬಹುದು. ಇದರಿಂದಾಗಿ ನೀನು ಒಂದು ಮತಶಾಖೆಗೆ ಸೇರಿದವನಲ್ಲವೆಂದು, ಮನುಷ್ಯರ ಬೋಧನೆಯನ್ನು ಅನುಸರಿಸುವುದಿಲ್ಲವೆಂದು, ನೀನು ಮಾಡುವ ಭಕ್ತಿ ಪೂರ್ವಕವಾದ ಎಲ್ಲಾ ಕೆಲಸಗಳಿಗೂ ಬೈಬಲ್‌ನಿಂದ ನಿರೂಪಿಸುವಿ ಎಂದು ಅರ್ಥ. ಆಗ ಬಾಯಿ ಮಾತಿನಿಂದಾಗಲಿ, ಕ್ರಿಯೆಯಿಂದಾಗಲಿ ನೀನೇನು ಮಾಡಿದರೂ ಕರ್ತನಾದ ಯೇಸು ಕ್ರಿಸ್ತನ ಮೂಲಕ ತಂದೆಯಾದ ದೇವರಿಗೆ ಕೃತಜ್ಞತಾಸ್ತುತಿಯನ್ನು ಸಲ್ಲಿಸುತ್ತಾ ಸಮಸ್ತವನ್ನು ಆತನ ಹೆಸರಿನಲ್ಲಿ ಮಾಡಿರಿ ಎಂದು ಪೌಲನು ಯಾಕೆ ಹೇಳಿದ್ದಾನೊ ಎಂಬುದನ್ನು ಗ್ರಹಿಸಿ ಆನಂದದಿಂದ ಇರಬಹುದು (ಕೊಲೊಸ್ಸೆ 3:17).

## 15. ಕ್ರೈಸ್ತತ್ವವು ನಿನಗೇನು ಮಾಡಬಹುದು?

## (What Christianity can do for you)

ಪ್ರಪಂಚದಲ್ಲಿ ಕ್ರೈಸ್ತತ್ವವು ಮಾಡಿದಷ್ಟು ಮೇಲುಗಳನ್ನು ಬೇರೆ ಯಾವುದೂ ಮಾಡಿಲ್ಲ. ಅದನ್ನು ಅಂಗೀಕರಿಸಿದವರೂ ಕೂಡ ಅದರಿಂದ ಬದಲಾವಣೆ ಹೊಂದಿದ್ದಾರೆ. ಮನುಷ್ಯನು ಎಷ್ಟು ಕೆಟ್ಟವನಾದರೂ ಅದರ ಪ್ರಭಾವದಿಂದ ಅವನು ಅಷ್ಟು ಒಳ್ಳೆಯವನಾದನು. ಕ್ರೈಸ್ತತ್ವವು ಬರದೇ ಹೋಗಿದ್ದರೆ ಈ ಲೋಕದ ಸಂಗತಿ ಹೇಗಿರುತ್ತಿತ್ತೋ ಒಂದು ಸಾರಿ ಆಲೋಚಿಸು. ಆಗ ನಾವು ನಿಜಕ್ಕೂ ಜೀವಿಸುತ್ತಿದ್ದವರಾಗಿದ್ದರೆ ಜೀವಿಸುವುದಕ್ಕೆ ಇದು ದೌರ್ಭಾಗ್ಯ ಸ್ಥಳವಾಗಿರುತ್ತಿತ್ತು.

ಮಾನವ ಜಾತಿಗೆಲ್ಲಾ ಕ್ರೈಸ್ತತ್ವ ಎಷ್ಟು ಮಾಡಿದರೂ ಅದು ಸ್ವಾಭಾವಿಕವಾಗಿ ವ್ಯಕ್ತಿಗತವಾದದ್ದು. ನಾವು ಅದರಿಂದ ದೊಡ್ಡ ಮೇಲುಗಳನ್ನು ಹೊಂದಬೇಕೆಂದರೆ ನಾವು ಅದನ್ನು ಅಂಗೀಕರಿಸುವುದಕ್ಕೆ ಪ್ರಾರಂಭಿಸಬೇಕು. ಅದಕ್ಕೆ ಕರ್ತನಾದ ಯೇಸುಕ್ರಿಸ್ತನ ಬೋಧನೆಗಳ ಪ್ರಕಾರ ನಡೆಯುತ್ತಾ ವಿಧೇಯತೆ ತೋರಿಸುವುದರಿಂದ ಮಾತ್ರವೇ ಇದು ನಡೆಯುತ್ತದೆ. ಹಾಗೆ ಮಾಡುವುದರ ಮೂಲಕ ನೀತಿ ಸೂತ್ರಗಳು ನಮ್ಮ ಜೀವಿತದಲ್ಲಿ ಪ್ರವೇಶಿಸುತ್ತವೆ. ಅವುಗಳು ಫಲಿಸುವಂತೆ ಮಾಡಲು ನಾವು ಅವಕಾಶ ಕೊಟ್ಟಷ್ಟು ನಾವು ಆಶೀರ್ವದಿಸಲ್ಪಡುತ್ತೇವೆ.

ಕ್ರೈಸ್ತತ್ವವನ್ನು ಅಂಗೀಕರಿಸಿದ ನಂತರ ಹೇಳಲಾರದಷ್ಟು ಆಶೀರ್ವಾದಗಳು, ಮೇಲು ಉಂಟಾಗುತ್ತವೆ ಎಂದು ಕೆಲವರು ಭಾವಿಸುತ್ತಾರೆ. ಅಂತಹವರು ಧನವಂತರಾಗುವೆವೆಂದು, ಅವರಿಗಿರುವ ಎಲ್ಲಾ ಸಮಸ್ಯೆಗಳು ಏನೂ ಮಾಡುವ ಅವಶ್ಯಕತೆ ಇಲ್ಲದೆಯೇ ಪರಿಷ್ಕಾರವಾಗುತ್ತವೆ ಎಂದು ಭಾವಿಸುತ್ತಾರೆ. ನಿಜಕ್ಕೂ ಆತ್ಮೀಯ ವಿಷಯಗಳ ಮೇಲೆ ಆಸಕ್ತಿ ಇಲ್ಲದೇ ಇಹಲೋಕ ಸಂಭಂದವಾದ ಲಾಭಗಳನ್ನು ಅಪೇಕ್ಷಿಸುವವರು ಹೀಗೆ ಆಲೋಚಿಸುತ್ತಾರೆ. ಅವರ ಕನಸುಗಳು ನೆರವೇರದೆ ಹೋದಾಗ ಬೇಗನೇ ನಿರಾಶೆ ಹೊಂದಿ ಅವರು ಮತ್ತೊಂದು ಕಡೆಗೆ ಸುಲಭವಾಗಿ ಹೋಗುವರು.

ಕ್ರೈಸ್ತತ್ವವು ಸೂಕ್ಷ್ಮವಾದದ್ದು. ಯಾರು ಅದರ ಬೆಲೆಯನ್ನು ಕಂಡುಕೊಳ್ಳುವರೊ ಅವರಿಗೆ ಅನೇಕ ಮೇಲುಗಳು ಉಂಟಾಗುತ್ತವೆ. ನಂಬಿಕೆ ವಿಧೇಯತೆ, ಸೇವೆ ವಿಶ್ವಾಸ ಎಂಬಿವುಗಳಲ್ಲಿ ಅದರ ಮೌಲ್ಯವಿದೆ. ಯಾರು ಅದನ್ನು ಹೃದಯ ಪೂರ್ವಕವಾಗಿ ಅಂಗೀಕರಿಸುವರೊ ಅವರು ಅನೇಕ ರೀತಿಯಲ್ಲಿ ಭೌತಿಕವಾಗಿಯೂ, ಆಧ್ಯಾತ್ಮಿಕವಾಗಿಯೂ ಆಶೀರ್ವದಿಸಲ್ಪಡುವರು ಅಂತಹುದೇ ನಿನಗೂ ಸಂಭವಿಸಬಹುದು.

1. ಹಿಂದಿನ ಪಾಪಗಳಿಂದ ರಕ್ಷಣೆಯನ್ನು ಕ್ರೈಸ್ತತ್ವವು ನಿನಗೆ ಕೊಡುತ್ತದೆ. ತನಗೆ ವಿಧೇಯರಾದವರೆಲ್ಲರಿಗೆ ಕ್ರಿಸ್ತನು ನಿತ್ಯರಕ್ಷಣೆಗೆ ಕಾರಣನಾಗಿದ್ದಾನೆ. (ಇಬ್ರಿಯ 5:9). "ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು

ನಂಬದೇ ಹೋಗುವವನು ದಂಡನೆಗೆ ಗುರಿಯಾಗುವನು" (ಮಾರ್ಕ 16:16). ಮನುಷ್ಯನು ಪಾಪಿಯಾಗಿರುವುದರಿಂದ ಕ್ಷಮಾಪಣೆಹೊಂದುವುದು ಅವಶ್ಯಕ. ಮನುಷ್ಯನ ಅತೀ ಪ್ರಮುಖವಾದ ಆತ್ಮವನ್ನು ತೊಳೆದು ಶುದ್ಧಿಮಾಡುವನು (ಲೂಕ 19:10; ಮತ್ತಾಯ 26:26).

2. ದೇವರ ಅನೇಕ ವಾಗ್ದಾನಗಳ ಬಳಿಗೆ ಕ್ರೈಸ್ತತ್ವವು ನಿನ್ನನ್ನು ಕರೆತರುತ್ತದೆ. ಪವಿತ್ರಾತ್ಮ ಎಂಬ ವರವು (ಅ.ಕೃ.2:38), ಆ ಸಭೆಯಲ್ಲಿ ಸೇರಲ್ಪಡುವುದು(ಅ.ಕೃ2:47), ಕರ್ತನ ಸನ್ನಿಧಿ(ಮತ್ತಾಯ 28:20) ಪ್ರಾರ್ಥನೆ ಮಾಡುವುದಕ್ಕೆ ಅವಕಾಶ(ಯೋಹಾನ 9:31), ನಿತ್ಯಜೀವಿತದ ನಿರೀಕ್ಷಣೆ ಎಂಬ ವಾಗ್ದಾನಗಳು ಕ್ರೈಸ್ತವರಿಗೆ ಕೊಡಲ್ಪಟ್ಟಿವೆ.

3. ಕ್ರೈಸ್ತತ್ವವು ಆರ್ಥಿಕವಾಗಿಯೂ, ಆತ್ಮೀಯವಾಗಿಯೂ ಮೇಲನ್ನುಂಟು ಮಾಡುತ್ತದೆ. "ನೀವು ಮೊದಲು ದೇವರ ರಾಜ್ಯಕ್ಕಾಗಿಯೂ, ನೀತಿಗಾಗಿಯೂ ತವಕಪಡಿರಿ ಇವುಗಳ ಕೂಡ ಅವೆಲ್ಲವೂ ನಿಮಗೆ ದೊರಕುವವು" (ಮತ್ತಾಯ6:37). ನಾವು ಮೊದಲು ದೇವರ ರಾಜ್ಯವನ್ನು ಅಥವಾ ಸಭೆಗೆ ಪ್ರಥಮ ಸ್ಥಾನವನ್ನು ಕೊಟ್ಟರೆ ಅವೆಲ್ಲವೂ ನಮಗೆ ಅನುಗ್ರಹಿಸಲ್ಪಡುತ್ತವೆಂದು ಗ್ರಹಿಸಬಹುದು. ಕ್ರೈಸ್ತವರು ಅನೇಕ ಸಾರಿ ಅವರು ಇನ್ನೂ ಹೆಚ್ಚಾಗಿ ಆಶೀರ್ವದಿಸಲ್ಪಡುತ್ತಿಲ್ಲ ಎಂದು ಅಲೋಚಿಸುತ್ತಾರೆ. ಆದರೆ ಅವರು ಕರ್ತನಿಗಾಗಿ ಎಷ್ಟು ಕಡಿಮೆ ಮಾಡುತ್ತಿದ್ದಾರೊ ಗಮನಿಸಬೇಕು. ಮತ್ತಾಯ 5ನೇ ಅಧ್ಯಾಯವನ್ನು ಓದಿ.

4. ನಾವು ಒಳ್ಳೆದನ್ನು ಮಾಡುವುದಕ್ಕೆ ಕ್ರೈಸ್ತತ್ವವು ನಮಗೆ ಅವಕಾಶ ಕೊಡುತ್ತದೆ. "ಒಬ್ಬನು ಮತ್ತೊಬ್ಬರ ಭಾರವನ್ನು ಹೊತ್ತುಕೊಳ್ಳಲಿ ಹೀಗೆ ಕ್ರಿಸ್ತನ ನಿಯಮವನ್ನು ನೆರವೇರಿಸಿರಿ" (ಗಲಾತ್ಯ6:2). "ಆದ್ದರಿಂದ ನಮಗೆ ಸಮಯವಿರಲಾಗಿ ಎಲ್ಲರಿಗೂ ಒಳ್ಳೆದನ್ನೇ ಮಾಡೋಣ ಮುಖ್ಯವಾಗಿ ಒಂದೇ ಮನೆಯವರಂತಿರುವ ಕ್ರಿಸ್ತನ ನಂಬಿಕೆಯುಳ್ಳವರಿಗೆ ಮಾಡೋಣ" (ಗಲಾತ್ಯ 6:10).

5. ಎಷ್ಟು ಹೆಚ್ಚಾಗಿ ನಾವು ಕೊಟ್ಟರೆ ಅಷ್ಟು ಹೆಚ್ಚಾಗಿ ನಾವು ಹೊಂದುವೆವೆಂದು ಕ್ರೈಸ್ತತ್ವವು ಬೋಧಿಸುತ್ತದೆ. ಪೌಲನು ಕೊರಿಂಥದಲ್ಲಿರುವ ಸಹೋದರರನ್ನು ಹೀಗೆ ಎಚ್ಚರಿಸಿದ್ದಾನೆ "ಆದರೆ ಸ್ವಲ್ಪವಾಗಿ ಬಿತ್ತುವವನು ಪೈರನ್ನು ಸ್ವಲ್ಪವಾಗಿ ಕೊಯ್ಯುವನು ಹೆಚ್ಚಾಗಿ ಬಿತ್ತುವವನು ಹೆಚ್ಚಾಗಿ ಕೊಯ್ಯುವನೆಂದು ತಿಳಿದುಕೊಳ್ಳಿರಿ" (2ಕೊರಿಂಥ 9:6). "ಮನುಷ್ಯನು ತಾನು ಏನು ಬಿತ್ತುತಾನೋ ಅದನ್ನೇ ಕೊಯ್ಯಬೇಕು" (ಗಲಾತ್ಯ 6:7). ಏನು ಕೊಡದೆ ಇರುವುದರಿಂದ ಅನೇಕರು ಏನನ್ನು ಹೊಂದುವುದಿಲ್ಲ ಅಷ್ಟೆ ಅಲ್ಲದೆ ಯಾಕೆ ಹೊಂದುತ್ತಿಲ್ಲವೆಂದು ಅವರು ಆಲೋಚಿಸುವುದಿಲ್ಲ.

6. ತೆಗೆದು ಕೊಳ್ಳುವುದಕ್ಕಿಂತಲೂ ಕೊಡುವುದೇ ಹೆಚ್ಚಿನ ಭಾಗ್ಯವೆಂಬುದಾಗಿ ಕ್ರೈಸ್ತತ್ವವು ಬೋಧಿಸಿತ್ತದೆ (ಅ.ಕೃ.20:35). "ತನ್ನ ಪ್ರಾಣವನ್ನು ಕಂಡುಕೊಂಡವನು ಅದನ್ನು ಕಳಕೊಳ್ಳುವನು; ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಕಂಡುಕೊಳ್ಳುವನು" ಎಂದು ಆತನು ಹೇಳಿದ್ದಾನೆ (ಮತ್ತಾಯ10:39).

7. ಇಹಲೋಕದಿಂದ ಪರಲೋಕಕ್ಕೆ ಹೋಗುವ ಜೀವ ಮಾರ್ಗವನ್ನು ಕ್ರೈಸ್ತತ್ವವು ತೋರಿಸುತ್ತಿದೆ. "ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತೀರೊ, ಅಂತದ್ದನ್ನೇ ನೀವು ಅವರಿಗೆ ಮಾಡಿರಿ" (ಲೂಕ6:31) ಎಂದು ಯೇಸು ಹೇಳಿದ್ದಾನೆ. ಮನುಷ್ಯನು ತನ್ನ ಶತ್ರುಗಳನ್ನು ಪ್ರೀತಿಸಬೇಕೆಂದು (ಮತ್ತಾಯ 5:44). ತನ್ನಂತೆ ತನ್ನ ನೆರೆಯವನನ್ನು ಪ್ರೀತಿಸಬೇಕು (ಮತ್ತಾಯ23:39) ಎಂದು ಆತನು ಹೇಳುತ್ತಿದ್ದಾನೆ. ಕ್ರೈಸ್ತವನು ಈ ಲೋಕವನ್ನು ಪ್ರೀತಿಸದೆ (1ಯೋಹಾನ 2:15) ತನ್ನನ್ನು ತಾನು ಪವಿತ್ರನಾಗಿ ಇರುವಂತೆ ನೋಡಿಕೊಳ್ಳಬೇಕು (ಮತ್ತಾಯ 5:8) ದೇವರಿಗೆ ಸಜೀವ ಯಜ್ಞವಾಗಿ ಅರ್ಪಿಸಿಕೊಳ್ಳಬೇಕು (ರೋಮಾ12:1) ಕೊನೆಗೆ ದೊರೆಯುವ ಪ್ರತಿಫಲವೇನೆಂದರೆ ಶಾಂತಿ, ಸಂತೋಷ, ಸಮಧಾನ, ನಿತ್ಯಜೀವ, ನಿರೀಕ್ಷೆ ಎಂಬ ಒಳ್ಳೆ ಜೀವಿತ (ಕೊಲೊಸ್ಸೆ1:5) ಇದಕ್ಕಿಂತಲೂ ಹೆಚ್ಚಿನದಾಗಿ ಇನ್ನೇನು ಬೇಕು.

ಆದ್ದರಿಂದ ಕ್ರೈಸ್ತತ್ವ ತುಂಬ ಲಾಭದಾಯಕವಾದದ್ದು. ಆದರೆ ಒಬ್ಬನು ಅದರಲ್ಲಿ ಏನನ್ನು ವೆಚ್ಚಮಾಡುವನೊ ಅದನ್ನೇ ತಿರಿಗಿ ಪಡೆದುಕೊಳ್ಳುವನು. ನೀನು ಅದಕ್ಕಾಗಿ ಏನನ್ನು ವೆಚ್ಚ ಮಾಡದಿದ್ದರೆ ಅದರಿಂದ ಏನನ್ನೂ ಪಡೆದು ಕೊಳ್ಳುವುದಿಲ್ಲ. ಆದರೆ ನಿನ್ನನ್ನು ದೇವರಿಗೆ ಅರ್ಪಿಸಿಕೊಂಡು ಅದರ ಸೂತ್ರಗಳು ನಿನ್ನ ಜೀವಿತದಲ್ಲಿ ಕೆಲಸ ಮಾಡುವುದಕ್ಕೆ ಅವಕಾಶಕೊಟ್ಟರೆ ನೀನು ಊಹಿಸುವದಕ್ಕಿಂತಲೂ ಹೆಚ್ಚಿನ ಆಶೀರ್ವಾದಗಳನ್ನು ಹೊಂದುವಿ.

# 16. ಕ್ರೈಸ್ತವರಲ್ಲದ ಕೆಲವರು
## (Some who are not Christians)

ಅನೇಕರು ಕ್ರೈಸ್ತರೆಂದು ಹೇಳಿಕೊಳ್ಳುವರು ಆದರೆ ಆ ರೀತಿ ಹೇಳಿಕೊಳ್ಳುವವರೆಲ್ಲರೂ ಕ್ರೈಸ್ತರಲ್ಲ. ಇದು ನಿನಗೆ ದೊಡ್ಡ ಪೆಟ್ಟು ಅಥವಾ ನೋವು ಎಂದು ನಿನಗೆ ಅನಿಸ ಬಹುದು. ಆದರೂ ಇದು ಸತ್ಯ.

1. ಕ್ರೈಸ್ತರೆಂದು ಹೇಳಿಕೊಳ್ಳುವ ತಂದೆ ತಾಯಿಗೆ ಒಬ್ಬ ಮಗನು ಹುಟ್ಟಿದಾಗ ಅವನು ಕ್ರೈಸ್ತನಾಗುವುದಿಲ್ಲ. ಮಾನವ ಮತದ ಕೆಲವುಗಳಲ್ಲಿ ಒಬ್ಬನು ಜನ್ಮದಿಂದಲೇ ಬೌದ್ಧ ಮತದವನು ಎಂದು, ಹಿಂದೂವೆಂದು, ಮುಸ್ಲಿಮನೆಂದು ಹೇಳಿಕೊಳ್ಳುತ್ತಾರೆ ಎಂದು ನಮಗೆ ತಿಳಿದಿದೆ. ಒಂದು ರೀತಿಯಲ್ಲಿ ನೋಡಿದರೆ ಈ ಸಂಗತಿ ಕ್ಯಾಥೋಲಿಕರಿಗೂ ಅನ್ವಯಿಸುತ್ತದೆ. ಆದರೆ ಪರಿಶುದ್ಧವಾದ ಹೊಸ ಒಡಂಬಡಿಕೆ ಕ್ರೈಸ್ತತ್ವದಲ್ಲಿ ಇದು ಅನ್ವಯಿಸುವುದಿಲ್ಲ. ಕ್ರೈಸ್ತವ ಕುಟುಂಬದಲ್ಲಿ ಹುಟ್ಟಿದ ಮಾತ್ರಕ್ಕೆ ಯಾವನೂ ಕ್ರೈಸ್ತವನಾಗುವುದಿಲ್ಲ. ಒಬ್ಬನು ಕ್ರಿಸ್ತನಲ್ಲಿ ನಂಬಿಕೆ ಇಟ್ಟು ಆತನಿಗೆ ವಿಧೇಯನಾಗಿ ತಿರಿಗಿ ಹುಟ್ಟುವುದರ ಮೂಲಕ ದೇವರ ಕುಟುಂಬದಲ್ಲಿ ಸೇರಿದಾಗ ಮಾತ್ರ ಅವನು ನಿಜವಾಗಿ ಕ್ರೈಸ್ತನೆಂದು ಹೇಳಿಕೊಳ್ಳಬಹುದು (ಯೋಹಾನ 3:3–6).

2. ಹುಟ್ಟಿದಾಗಲೇ ಯಾರಾದರೂ ಪ್ರೋಕ್ಷಣೆ ದೀಕ್ಷಾಸ್ನಾನ ಹೊಂದಿದರೆ ಅದರ ನಿಮಿತ್ತ ಅವನು ಕ್ರೈಸ್ತವನಾಗುದಿಲ್ಲ. ಮೊದಲು ದೀಕ್ಷಾಸ್ನಾನ ಪ್ರೋಕ್ಷಣೆಯಿಂದ ಕೊಡುವಂಥದಲ್ಲ, ಅದು ನೀರಿನಲ್ಲಿ ಸಮಾಧಿ (ಕೊಲೊಸ್ಸೆ2:12; ರೋಮಾ6:3,4 ಅ.ಕೃ.8) ಎರಡನೆಯದಾಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ಮೊದಲು ದೇವರ ವಾಕ್ಯವನ್ನು ಕೇಳಿ (ರೋಮಾ10:17) ಅದನ್ನು ನಂಬಿ (ರೋಮಾ10:10). ತನ್ನ ಪಾಪಗಳ ವಿಷಯದಲ್ಲಿ ಮಾನಸಾಂತರ ಪಟ್ಟು (ಲೂಕ13:3) ಯೇಸು ದೇವರ ಮಗನೆಂದು ಒಪ್ಪಿಕೊಂಡ ನಂತರ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು. ದೀಕ್ಷಾಸ್ನಾನ ಮಾಡಿಸಿಕೊಳ್ಳುವವನಾಗಿ ಈ ಕ್ರಿಯೆಗಳನ್ನು ಮತ್ತೊಬ್ಬನು ಮಾಡಲಾಗದು. ಮೂರನೇಯದಾಗಿ ಚಿಕ್ಕ ಮಕ್ಕಳು ಜವಾಬ್ದಾರಿಯುಳ್ಳ ಯುಕ್ತವಯಸ್ಸು ಬರುವವರೆಗೆ ಅವರು ಪಾಪವನ್ನು ಅರಿಯದವರು (ಮತ್ತಾಯ 18:1–3). ಆದ್ದರಿಂದ ಹುಟ್ಟಿದಾಗಲೇ ಪ್ರೋಕ್ಷಿಸುವ ದೀಕ್ಷಾಸ್ನಾನ ಹೊಂದಿದರು, ಮತ್ಯಾವುದಾದರೂ ಹೊಂದಿದರು ಆ ರೀತಿಯಲ್ಲಿ ಹೊಂದಿದವನು ಕ್ರೈಸ್ತವನಾಗಲಾರನು. ಕ್ರಿಸ್ತನಿಗೆ ಒಳಗಾದರೆ ಮಾತ್ರ ಒಬ್ಬನು ಕ್ರೈಸ್ತವನಾಗಲು ಸಾಧ್ಯ. ಪ್ರೋಕ್ಷಿಸುವ ದೀಕ್ಷಾಸ್ನಾನ ದೇವರ ಆಜ್ಞೆಯಲ್ಲ, ಅದು ಮಾನವ ಕಲ್ಪಿತ.

3. ಕ್ರಿಸ್ತನು ದೇವರ ಮಗನೆಂದು ಯಾವನಾದರೂ ನಂಬಿದರೆ ಆ ನಂಬಿಕೆಯಿಂದ ಮಾತ್ರವೇ ಅವರು ಕ್ರೈಸ್ತವರಾಗುವುದಿಲ್ಲ. ಕ್ರಿಸ್ತನು ದೇವರ ಮಗನೆಂದು ನಾವು

ತಪ್ಪದೇ ನಂಬಬೇಕು ಆದರೆ ಇದು ಮಾತ್ರ ಸಾಲದು, ನಂಬಿಕೆಯಿಟ್ಟ ಮಾತ್ರಕ್ಕೆ ಒಬ್ಬನು ಕ್ರೈಸ್ತವನಾಗಲಾರನು. ಒಂದು ವೇಳೆ ಹಾಗೆ ಹಾಗುವುದಾದರೆ ದೆವ್ವಗಳು ಸಹ ಕ್ರೈಸ್ತವರಾಗಬಹುದು, ಹೇಗೆಂದರೆ ದೆವ್ವಗಳು ಸಹ ನಂಬಿ ಹೆದರಿ ನಡುಗುತ್ತವೆ. ಎಂದು ಬೈಬಲ್ ಹೇಳುತ್ತದೆ. "ದೇವರು ಒಬ್ಬನೇ ಎಂದು ನೀನು ನಂಬುವವನು. ಹಾಗೆ ನಂಬುವುದು ಒಳ್ಳೇದು. ದೆವ್ವಗಳು ಕೂಡ ಹಾಗೆಯೇ ನಂಬಿ ಹೆದರಿ ನಡುಗುತ್ತವೆ" (ಯಾಕೋಬ2:19). ಒಬ್ಬನು ಕ್ರೈಸ್ತವನಾಗಬೇಕಾದರೆ ಅವನು ಕ್ರಿಸ್ತನಲ್ಲಿ ನಂಬಿಕೆ ಇಡಬೇಕು. ಆ ನಂಬಿಕೆಯ ನಿಮಿತ್ತ ಯೇಸು ದೇವರ ಮಗನೆಂದು ನಂಬುವುದು ಮಾತ್ರವಲ್ಲದೆ, ಆತನ ಬೋಧನೆಗಳಿಗೆ ವಿಧೇಯರಾಗುವ ನಂಬಿಕೆ ಅವನಿಗೆ ಇರಬೇಕು. "ಹೀಗೆ ಆತನು ಮಗನಾಗಿದ್ದರೂ ಅನುಭವಿಸಿದ ಬಾಧೆಗಳಿಂದ ವಿಧೇಯತೆಯನ್ನು ಕಲಿತುಕೊಂಡನು. ಇದಲ್ಲದೆ ಆತನು ಸಿದ್ಧಿಗೆಬಂದು ದೇವರಿಂದ ಮೆಲ್ಕಿಜೆದೇಕನ ತರಹದ ಮಹಾ ಯಾಜಕನೆನಿಸಿಕೊಂಡವನಾಗಿ ತನಗೆ ವಿಧೇಯರಾಗಿರುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣನಾದನು" (ಇಬ್ರಿಯ 5:8–9).

"ಇದಕ್ಕಾಗಿಯೇ ನೀವು ಕರೆಯಲ್ಪಟ್ಟಿರಿ; ಕ್ರಿಸ್ತನು ಸಹ ನಿಮಗೋಸ್ಕರ ಬಾಧೆಯನ್ನನುಭವಿಸಿ ನೀವು ತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕೆಂದು ಮಾದರಿಯನ್ನು ತೋರಿಸಿ ಹೋದನು" (1ಪೇತ್ರ 2:21). ಅಷ್ಟು ಮಾತ್ರವಲ್ಲದೆ ಮರಣದವರೆಗೂ ನಂಬಿಗಸ್ತನಾಗಿರಬೇಕು. "ನಿನಗೆ ಸಂಭವಿಸುವುದಕ್ಕಿರುವ ಬಾಧೆಗಳಿಗೆ ಹೆದರಬೇಡ. ಇಗೋ ನೀವು ದುಷ್ಪ್ರೇರಣೆಗೆ ಒಳಗಾಗುವಂತೆ ಸೈತಾನನು ನಿಮ್ಮಲ್ಲಿ ಕೆಲವರನ್ನು ಸೆರೆಮನೆಯೊಳಗೆ ಹಾಕುವುದಕ್ಕಿದ್ದಾನೆ; ಮತ್ತು ಹತ್ತು ದಿವಸಗಳ ತನಕ ನಿಮಗೆ ಸಂಕಟವಿರುವುದು. ನೀನು ಸಾಯಬೇಕಾದರೂ ನಂಬಿಗಸ್ತನಾಗಿರು; ನಾನು ನಿನಗೆ ಜೀವವೆಂಬ ಜಯಮಾಲೆಯನ್ನು ಕೊಡುವೆನು" (ಪ್ರಕಟನೆ 2:10).

4. ಒಬ್ಬನು ಯಾವುದಾದರು ಮತಶಾಖೆಗೆ ಸಂಬಂಧಿಸಿದ ಸಭೆಯ ಸದಸ್ಯನಾದರೆ ಅವನು ಕ್ರೈಸ್ತವನಾಗಲಾರನು. ಈ ದಿನಗಳಲ್ಲಿ ಅನೇಕ ಸಭೆಗಳಿರುವುದರಿಂದ ಕ್ರೈಸ್ತವರೆಂದು ಹೇಳಿಕೊಳ್ಳುವ ಅನೇಕರಿದ್ದಾರೆ ಆದರೆ ಅವರು ಮೋಸಹೋದವರು. ಕ್ರಿಸ್ತನನ್ನು ಅನುಸರಿಸುವವನಾದ ಯಾವಾನಾದರು ಮತಶಾಖೆಯ(ಡಿನಾಮಿನೇಷನ್) ಸಭೆಯ ಸದಸ್ಯನಾಗುದಿಲ್ಲ. ಬೈಬಲ್ ಮಾತ್ರ ಒಬ್ಬನನ್ನು ಕ್ರೈಸ್ತವನನ್ನಾಗಿ ಮಾಡುತ್ತದೆ. " ಅ ಮೇಲೆ ಅವರು ಪೂರ ಒಂದು ವರುಷ ಸಭೆಯವರ ಸಂಗಡ ಕೂಡಿದ್ದು ಬಹುಜನರಿಗೆ ಉಪದೇಶ ಮಾಡಿದರು. ಅಂತಿಯೋಕ್ಯದಲ್ಲಿಯೇ ಶಿಷ್ಯರಿಗೆ ಕ್ರೈಸ್ತರೆಂಬ ಹೆಸರು ಮೊದಲು ಬಂತು" (ಅ.ಕೃ.11:26). ವಾಕ್ಯಗಳು ನಮ್ಮನ್ನು ಬೇರ್ಪಡಿಸವು ಕ್ರಿಸ್ತನಲ್ಲಿ ನಮ್ಮನ್ನು ಒಂದು

ಮಾಡುತ್ತವೆ. "ಸಹೋದರರೇ, ನಿಮ್ಮೆಲ್ಲರ ಮಾತು ಒಂದೇ ಆಗಿರಬೇಕು; ನಿಮ್ಮಲ್ಲಿ ಭೇದಗಳಿರಬಾರದು, ನೀವು ಒಂದೇ ಮನಸ್ಸೂ ಒಂದೇ ಅಭಿಪ್ರಾಯವೂ ಉಳ್ಳವರಾಗಿದ್ದು ಹೊಂದಿಕೆಯಿಂದಿರಬೇಕು ಎಂಬುದಾಗಿ ನಾನು ನಮ್ಮ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ನಿಮ್ಮನ್ನು ಬೇಡಿಕೊಳ್ಳುತ್ತೇನೆ" (1ಕೊರಿಂಥ 1:10). ಆದ್ದರಿಂದ ಯಾವನಾದರು ಮಾನವ ಕಲ್ಪಿತ ಸಭೆಯ ಸದಸ್ಯರಾದರೆ ಅವನು ಕ್ರೈಸ್ತವನು ಅಲ್ಲವೆಂದು ಅರ್ಥ. ಅವರು ಎಲ್ಲಾ ವಿಧವಾದ ನೆಪಗಳನ್ನು, ವಾದಗಳನ್ನೂ, ಮಾಡಬಹುದಾದರು. ಅವನು ಬೈಬಲ್ ಬೋಧಿಸುವ ನಿಜ ಕ್ರೈಸ್ತನಲ್ಲ ಎಂಬುದು ಯಥಾರ್ಥವಾಗಿ ನಿಲ್ಲುತ್ತದೆ. ಅವನು ನಿಜವಾಗಲೂ ಕ್ರೈಸ್ತವನಾದರೆ ಮತಶಾಖೆಯ ಸಭೆಯಲ್ಲಿರದೆ ಕ್ರಿಸ್ತನ ಸಭೆಯಲ್ಲಿ ಸದಸ್ಯನಾಗಿರುವವನಾಗಿ ಮಾತ್ರ ಇರುವನು. "ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲು ಅವರ ಮಂಡಲಿಗೆ ಸೇರಿಸುತ್ತಿದ್ದನು" (ಅ.ಕೃ.2:47).

"ಆದರೆ ಕ್ರೈಸ್ತನಾಗಿ ಭಾದೆಪಟ್ಟರೆ ಅವನು ನಾಚಿಕೆ ಪಡದೆ ಆ ಹೆಸರಿನಿಂದಲೇ ದೇವರನ್ನು ಘನಪಡಿಸಲಿ" (1ಪೇತ್ರ 4:16). ಬೈಬಲ್‌ನ್ನು ಚೆನ್ನಾಗಿ ಓದಿ ನೀನೆ ಗಮನಿಸು.......

5. ಕ್ರೈಸ್ತವನೆಂದು ಹೇಳಿಕೊಂಡ ಮಾತ್ರಕ್ಕೆ ಯಾರು ಕ್ರೈಸ್ತವನಾಗುವುದಿಲ್ಲ. ಈ ಲೋಕದಲ್ಲಿ ಅನೇಕರು ಅನೇಕ ವಿಧವಾದ ರೀತಿಯಲ್ಲಿ ಹೇಳಿಕೊಳ್ಳಬಹುದು ಆದರೆ ಅವುಗಳನ್ನು ನಿರೂಪಿಸುವುದಿಲ್ಲವಾದರೆ ಅವರು ಸುಳ್ಳುಗಾರರು, ಮೋಸ ಮಾಡುವವರು, ಆಗಿರುವರು. ಇದು ಹೀಗಿರುವಾಗ ಅನೇಕರು ಕ್ರೈಸ್ತರೆಂದು ಸುಲಭವಾಗಿ ಹೇಳಿಕೊಳ್ಳುತ್ತಾರೆ. ಆ ರೀತಿ ಹೇಳಿಕೊಳ್ಳುವವರು ಕ್ರೈಸ್ತವರೆಂದು ಅನೇಕರು ಬಾವಿಸುತ್ತಾರೆ. ಅದು ಹಾಗೆ ಅಲ್ಲ ಒಬ್ಬನು ದೇವರ ವಾಕ್ಯದಿಂದಲೂ, ತನ್ನ ಜೀವಿತದಿಂದಲೂ ಕ್ರೈಸ್ತವನೆಂದು ನಿರೂಪಿಸದೆ ಹೋದರೆ ಅವನು ಎಷ್ಟು ಹೇಳಿಕೊಂಡರೂ ಕ್ರೈಸ್ತವನಾಗುವುದಿಲ್ಲ. "ನನ್ನನ್ನು ಸ್ವಾಮಿ ಸ್ವಾಮಿ ಅನ್ನುವವರೆಲ್ಲರು ಪರಲೋಕರಾಜ್ಯ ಸೇರುವರೆಂದು ನೆನಸಬೇಡಿರಿ; ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕರಾಜ್ಯಕ್ಕೆ ಸೇರುವನು. ಸ್ವಾಮಿ, ಸ್ವಾಮಿ, ನಿನ್ನ ಹೆಸರಿನ ಮೇಲೆ ದೆವ್ವಗಳನ್ನು ಬಿಡಿಸಲಿಲ್ಲವೇ? ನಿನ್ನ ಹೆಸರಿನ ಮೇಲೆ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲವೆ ಎಂದು ಆ ದಿನದಲ್ಲಿ ಎಷ್ಟೋ ಜನರು ನನಗೆ ಹೇಳುವರು. ಆಗ ನಾನು ಅವರಿಗೆ –ನಾನೆಂದೂ ನಿಮ್ಮ ಗುರುತು ಕಾಣೆನು; ಧರ್ಮವನ್ನು ಮೀರಿನಡೆಯುವವರೇ, ನನ್ನಿಂದ ತೊಲಗಿಹೋಗಿರಿ ಎಂದು ಎಲ್ಲರ ಮುಂದೆ ಹೇಳಿಬಿಡುವೆನು" (ಮತ್ತಾಯ 7:21–23).

ನಿನ್ನ ಸ್ಥಿತಿಯನ್ನು ನೀನೇ ಪರೀಕ್ಷಿಸಿಕೊ ಎಂದು ನಿನ್ನಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ.

ನೀನು ಕ್ರೈಸ್ತವನಾ? ನೀನು ಬೈಬಲ್ ಬೋಧನೆಯ ಪ್ರಕಾರ ಇರುವೆಯಾ? ಅದನ್ನು ನಿರೂಪಿಸುವೆಯಾ? ನೀನು ಕರ್ತನಿಗೆ ಒಳಗಾಗಿದ್ದೀಯಾ? ಆಗಿದ್ದೇಯಾದರೆ ನಂಬಿಗಸ್ತನಾಗಿ ಇರುವೆಯಾ? ಇಲ್ಲವಾದರೆ ಆತನಲ್ಲಿ ನಂಬಿಕೆ ಇಟ್ಟು, ಪಾಪಗಳ ವಿಷಯದಲ್ಲಿ ಮಾನಸಾಂತರ ಹೊಂದಿ ಕ್ರಿಸ್ತನು ದೇವರ ಮಗನೆಂದು ಒಪ್ಪಿಕೊಂಡು ನಿನ್ನ ಪಾಪಗಳ ಕ್ಷಮಾಪಣೆಗಾಗಿ ದೀಕ್ಷಾಸ್ನಾನ ಹೊಂದುವದರಿಂದ ಕ್ರೈಸ್ತವನಾಗು. (ಮಾರ್ಕ16:15–16; ಅ.ಕೃ.2:38). ಕ್ರಿಸ್ತನು ನಿನ್ನನು ರಕ್ಷಿಸಿ ತನ್ನ ಸಭೆಯಲ್ಲಿ ಸೇರಿಸಿಕೊಳ್ಳುವನು. "ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲು ಅವರ ಮಂಡಲಿಗೆ ಸೇರಿಸುತ್ತಿದ್ದನು" (ಅ.ಕೃ.2:47). ಆಗ ನೀನು ಕ್ರೈಸ್ತವನು ಮಾತ್ರ ಆಗುವಿ. (ಅ.ಕೃ.11:26). ನೀನು ನಂಬಿಕೆಯಿಂದ ಇರುವುದಾದರೆ ನಿತ್ಯರಕ್ಷಣೆ ನಿನ್ನದಾಗುವುದು (ರೋಮಾ 6:23; ಯೋಹಾನ 14:1–3).

## 17. ರಕ್ಷಣೆಹೊಂದಲು ಏನು ಮಾಡಬೇಕು?
## (What must one do to be Saved?)

ಎಲ್ಲರೂ ಪಾಪ ಮಾಡಿದವರೆ. "ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ" (ರೋಮಾ 3:23). ನೀತಿವಂತನು ಒಬ್ಬನೂ ಇಲ್ಲ. (ರೋಮಾ 3:10). ಪಾಪದ ಸಂಬಳ ಮರಣ. "ಪಾಪವು ಕೊಡುವ ಸಂಬಳ ಮರಣ" (ರೋಮಾ 6:23). ಈ ವಿಧವಾದ ಅನೇಕ ವಚನಗಳನ್ನು ನಾವು ಹೇಳಿಕೊಳ್ಳಬಹುದು, ಇವೆಲ್ಲವುಗಳ ಪ್ರಕಾರ ಮನುಷ್ಯನು ನಶಿಸಿಹೋದನೆಂದು, ದೇವರ ಮಹಿಮೆಯನ್ನು ಕಳೆದುಕೊಂಡು ನಿರೀಕ್ಷಣೆ ಇಲ್ಲದವನಾಗಿದ್ದಾನೆಂದು ತಿಳಿಯುತ್ತದೆ. ಆದ್ದರಿಂದ ಮನುಷ್ಯನು ರಕ್ಷಣೆ ಹೊಂದಲು ಏನು ಮಾಡಬೇಕು? ನಾವು ಅಪೊಸ್ತಲರ ಕೃತ್ಯಗಳು ಪುಸ್ತಕವನ್ನು ಓದಿದಾಗ ಇದನ್ನು ತಿಳಿದುಕೊಳ್ಳುತ್ತೇವೆ.

ಮಾನಸಾಂತರ ಹೊಂದಿರುವ 11 ಸಂದರ್ಭಗಳನ್ನು ಅ.ಕೃ. ಪುಸ್ತಕದಲ್ಲಿ ಬರೆಯಲ್ಪಟ್ಟಿವೆ. ನಮಗಿಲ್ಲಿ ಸಮಯ, ಸ್ಥಳವಿಲ್ಲವಾದ್ದರಿಂದ ಅವರೆಲ್ಲರು ರಕ್ಷಣೆ ಹೊಂದುವುದಕ್ಕೆ ಏನು ಮಾಡಿದರು ಎಂಬುದನ್ನು ವಿವರವಾಗಿ ಬರೆಯುತ್ತಿಲ್ಲ. ಆದರೆ ಈ ಪಾಠ ಭಾಗದಲ್ಲಿ 3ಸಂದರ್ಭಗಳನ್ನು ವಿವರಿಸಿಕೊಳ್ಳೋಣ. ಪ್ರತಿ ಸಂದರ್ಭಗಳಲ್ಲಿಯೂ ಕನಿಷ್ಠ ಒಂದೇ ಪ್ರಶ್ನೆ ಏನೆಂದರೆ "ರಕ್ಷಣೆಹೊಂದುವುದಕ್ಕೆ ನಾನೇನು ಮಾಡಬೇಕು?" ಮೇಲಿನ ಸಂದರ್ಭಗಳನ್ನು ಒಂದೊಂದನ್ನು ಗಮನಿಸುತ್ತಾ ಉತ್ತರ ಕಂಡುಕೊಳ್ಳೋಲು ದಯಮಾಡಿ ಪ್ರಯತ್ನಿಸು.

1. ಪಂಚಶತ್ತಮ ದಿನದಂದು "ಸಹೋದರರರೇ, ನಾವೇನು ಮಾಡಬೇಕು?" ಎಂದು

ಜನರು ಪ್ರಶ್ನಿಸಿದರು (ಅ.ಕೃ. 2ನೇ ಅಧ್ಯಾಯ) ಇಲ್ಲಿ ಅಪೊಸ್ತಲನಾದ ಪೇತ್ರನು ಉಳಿದವರು ಅವಿಶ್ವಾಸಿಗಳಿಗೆ ಮೊದಲನೇ ಸಾರಿ ಸುವಾರ್ತೆ ಪ್ರಕಟಿಸಿದರು. ಕ್ರಿಸ್ತನು ನಿಜವಾಗಿಯೂ ಶಿಲುಬೆಗೆ ಹಾಕಲ್ಪಟ್ಟಾಗ ಆ ಸಂದರ್ಭದಲ್ಲಿ ಅನೇಕರು ಸೇರಿ ಬಂದಿದ್ದರು. ಆದ್ದರಿಂದ ಅಂತವರಲ್ಲಿ ಕ್ರಿಸ್ತನೇ ದೇವರ ಮಗನೆಂಬ ನಂಬಿಕೆಯನ್ನು ಅವರಲ್ಲಿ ಉಂಟುಮಾಡಬೇಕು. ಅದಕ್ಕಾಗಿ ನಜರೇತಿನ ಯೇಸುವಿನ ಹೆಸರಿನಲ್ಲಿ ಅದ್ಭುತಗಳು, ಮಹತ್ಕಾರ್ಯಗಳು, ಸೂಚಕ ಕ್ರಿಯೆಗಳನ್ನು ಅವರ ಮಧ್ಯದಲ್ಲಿ ದೇವರು ನಡಿಸಿದನೆಂದು ಪೇತ್ರನು ಅವರಿಗೆ ನೆನಪಿಗೆ ತಂದನು. ಯೇಸುವನ್ನು ಶಿಲುಬೆಗೆ ಹಾಕಿಸಿ ಕೊಲ್ಲಿಸಿದರು, ಆತನು 3ನೇ ದಿನದಲ್ಲಿ ಸಮಾಧಿಯಿಂದ ತಿರುಗಿ ಎದ್ದನೆಂದು ಆತನು ಅವರಿಗೆ ಕಾಣಿಸಿದನೆಂದು, ಪರಲೋಕದ ತಂದೆಯ ಬಳಿಗೆ ತಿರಿಗಿ ಆರೋಹಣನಾದನೆಂದು ಪೇತ್ರನು ಅವರಿಗೆ ಬೋಧಿಸಿದನು. ಕ್ರಿಸ್ತನನ್ನು ಕುರಿತು ಅನೇಕ ಪ್ರವಾದನೆಗಳನ್ನು ಯೇಸುವು ನೆರವೇರಿಸಿದನೆಂದು, ಆತನು ಈಗ ದಾವೀದನ ಸಿಂಹಾಸನದ ಮೇಲೆ ಆಸೀನನಾಗಿದ್ದಾನೆಂದು ಅವನು ಹೇಳಿದನು. "ಇದನ್ನು ಅವರು ಕೇಳಿ ಹೃದಯದಲ್ಲಿ ಅಲಗು ನೆಟ್ಟಂತಾಗಿ ಪೇತ್ರನನ್ನೂ ಉಳಿದ ಅಪೊಸ್ತಲರನ್ನೂ-ಸಹೋದರರೇ, ನಾವೇನು ಮಾಡಬೇಕು ಎಂದು ಕೇಳಲು ಪೇತ್ರನು ಅವರಿಗೆ-ನಿಮ್ಮ ಪಾಪಗಳು ಪರಿಹಾರವಾಗುವುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ. ಆಗ ನೀವು ಪವಿತ್ರಾತ್ಮನ ದಾನವನ್ನು ಹೊಂದುವಿರಿ; ಆ ವಾಗ್ದಾನವು ನಿಮಗೂ ನಿಮ್ಮ ಮಕ್ಕಳಿಗೂ ದೂರವಾಗಿರುವವರೆಲ್ಲರಿಗೂ ಅಂತೂ ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ ಮಾಡೋಣವಾಗಿದೆ ಎಂದು ಹೇಳಿದನು" (ಅ.ಕೃ.3:37-39). "ಅವನ ಮಾತಿಗೆ ಒಪ್ಪಿಕೊಂಡವರು ದೀಕ್ಷಾಸ್ನಾನ ಮಾಡಿಸಿಕೊಂಡರು. ಆ ದಿನ ಸುಮಾರು 3000 ಜನರು ಅಪೊಸ್ತಲರಲ್ಲಿ ಸೇರಿದರು" (ಅ.ಕೃ.2:4). ಕರ್ತನು ರಕ್ಷಣೆಯ ಮಾರ್ಗದಲ್ಲಿರುವವರನ್ನು ದಿನಾಲು ಅವರ ಮಂಡಲಿಗೆ ಸೇರಿಸುತ್ತಿದ್ದನು.

ಸುವಾರ್ತೆ ಪ್ರಕಟಿಸಲ್ಪಟ್ಟಿತು, ಜನರು ಅದನ್ನು ನಂಬಿದರು, ಮಾನಸಾಂತರ ಹೊಂದಿದರು, ಪಾಪಗಳ ಪರಿಹಾರಕ್ಕಾಗಿ ದೀಕ್ಷಾಸ್ನಾನ ಮಾಡಿಸಿಕೊಂಡರೆಂದು ದಯಮಾಡಿ ನೀನು ಗಮನಿಸು..... ಆದರೆ ಏನು ನಡೆದಿತ್ತು? ಅವರು ರಕ್ಷಣೆಹೊಂದಿ ಸಭೆಯೊಂದಿಗೆ ಸೇರಿಸಲ್ಪಟ್ಟರು.

5. "ಕರ್ತನೇ ನಾನೇನು ಮಾಡಬೇಕು"? ಎಂದು ಪೌಲನು ಪ್ರಶ್ನಿಸಿದನು (ಅ.ಕೃ.22:10). ತನಗಿರುವ ಶಕ್ತಿಯನ್ನೆಲ್ಲಾ ಕರ್ತನ ಸಭೆಯನ್ನು ಹಾಳು ಮಾಡಬೇಕೆಂದು ಪ್ರಯತ್ನಿಸುತ್ತಾ, ಕ್ರಿಸ್ತನನ್ನು ಹಿಂಸಿಸುತ್ತಾ ಇದ್ದ ಮನುಷ್ಯನು ಇವನು. "ನಾನು ಪ್ರಯಾಣ ಮಾಡುತ್ತಾ ದಮಸ್ಕದ ಹತ್ತಿರಕ್ಕೆ ಬಂದಾಗ ಸುಮಾರು

ಮಧ್ಯಾಹ್ನದಲ್ಲಿ ಪಕ್ಕನೆ ಆಕಾಶದೊಳಗಿನಿಂದ ಒಂದು ದೊಡ್ಡ ಬೆಳಕು ನನ್ನ ಸುತ್ತಲೂ ಹೊಳೆಯಿತು, ನಾನು ನೆಲಕ್ಕೆ ಬಿದ್ದೆನು. ಅಗ–ಸೌಲನೇ, ಸೌಲನೇ ನನ್ನನ್ನು ಯಾಕೆ ಹಿಂಸೆಪಡಿಸುತ್ತೀ? ಎಂದು ನನಗೆ ಹೇಳಿದ ಒಂದು ಶಬ್ಧಕೇಳಿದೆನು. ಅದಕ್ಕೆ ನಾನು ಕರ್ತನೆ ನೀನಾರು? ಎಂದು ಕೇಳಲು ಆತನು– ನೀನು ಹಿಂಸೆಪಡಿಸುವ ನಜರೇತಿನ ಯೇಸುವೇ ನಾನು ಎಂದು ನನಗೆ ಹೇಳಿದನು" (ಅ.ಕೃ.22:6–8)."ಆಗ ನಾನು–ಕರ್ತನೇ, ನಾನೇನು ಮಾಡಬೇಕು? ಎಂದು ಕೇಳಲು ಕರ್ತನು ನನಗೆ– ನೀನೆದ್ದು ದಮಸ್ಕದೊಳಗೆ ಹೋಗು, ಮಾಡುವುದಕ್ಕೆ ನೇಮಿಸಿರುವದನ್ನೆಲ್ಲಾ ಅಲ್ಲಿ ತಿಳಿಸಲ್ಪಡುವದು ಎಂದು ಹೇಳಿದನು" (ಅ.ಕೃ22:10). ಅವನು ಪಟ್ಟಣದೊಳಗೆ ಹೋಗಿ 3ದಿನ ಕಣ್ಣು ಕಾಣದೆ ಅನ್ನಪಾನಗಳಿಲ್ಲದೆ ಪ್ರಾರ್ಥನೆ ಮಾಡುತ್ತಿದ್ದನು. ದಮಸ್ಕದಲ್ಲಿರು ಅನನೀಯನೆಂಬ ಶಿಷ್ಯನಿಗೆ ಕರ್ತನು ಕಾಣಿಸಿಕೊಂಡು, ಸೌಲನು ಏನು ಮಾಡಬೇಕೆಂದು ತಿಳಿಸಲು ಅನನೀಯನನ್ನು ಸೌಲನ ಬಳಿಗೆ ಕಳುಹಿಸಿದನು. ಪೌಲನು ತನಗಾದ ಅನುಭವವನ್ನು ತಿಳಿಸುತ್ತಾ ಅನನೀಯ ಅವನ ಬಳಿಗೆ ಬಂದು "ಈಗ ನೀನೇಕೆ ಸಾವಕಾಶ ಮಾಡುತ್ತೀ? ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ ಅಂದನು" (ಅ.ಕೃ.22:16). ಎಂದು ಹೇಳಿದನು.

ಪೌಲನು ಯಾವಾಗ ರಕ್ಷಣೆ ಹೊಂದಿದನು? ಕರ್ತನು ಅವನಿಗೆ ಕಾಣಿಸಿಕೊಂಡಾಗ ಎಂದು ಕೆಲವರು ಹೇಳುತ್ತಾರೆ. ಆದರೆ ಅವನು ಪಟ್ಟಣದೊಳಗೆ ಹೋದಾಗ ಅವನು ಏನು ಮಾಡಬೇಕು ಎಂದು ತಿಳಿಯುತ್ತದೆ ಎಂದು ಕರ್ತನು ಹೇಳಿದನು. ಅವನು ಪ್ರಾರ್ಥನೆಯ ಮೂಲಕ ರಕ್ಷಣೆ ಹೊಂದಿದನೆಂದು ಕೆಲವರು ಅಂದುಕೊಳ್ಳುತ್ತಾರೆ. ಅದು ನಿಜವೇ, ಆದರೆ ನೀನು ಎದ್ದು ದೀಕ್ಷಾಸ್ನಾನ ಹೊಂದಿ ನಿನ್ನ ಪಾಪಗಳನ್ನು ತೊಳೆದುಕೊ ಎಂದು ಅನನೀಯ ಅವನಿಗೆ ಯಾಕೆ ಹೇಳಿದ? ನಿಜವೇನೆಂದರೆ ಪಂಚಶತ್ತಮ ದಿನದಂದು ಜನರು ಹೇಗೆ ರಕ್ಷಣೆ ಹೊಂದಿದರೋ, ಹಾಗೆ ಅವನು ರಕ್ಷಣೆಹೊಂದಿದನು. ಅವನು ಸುವಾರ್ತೆ ಕೇಳಿದನು, ಅದನ್ನು ನಂಬಿದನು, ಪಾಪಗಳಿಂದ ಮಾನಸಾಂತರ ಹೊಂದಿದನು. ಯೇಸುವು ದೇವರ ಮಗನೆಂದು ಅಂಗೀಕರಿಸಿದನು. ತನ್ನ ಪಾಪಕ್ಷಮಾಪಣೆಗಾಗಿ ದೀಕ್ಷಾಸ್ನಾನ ಮಾಡಿಸಿಕೊಂಡನು.

6. "ಸ್ವಾಮಿಗಳೇ, ನಾನು ರಕ್ಷಣೆಹೊಂದುವುದಕ್ಕೆ ಏನು ಮಾಡಬೇಕೆಂದು? ಫಿಲಿಪ್ಪದ ಸೆರೆಮನೆಯ ಅಧಿಕಾರಿ ಕೇಳಿದನು" (ಅ.ಕೃ.16:30).

ಪೌಲ ಸೀಲರು ಬಹಳ ಪೆಟ್ಟುಗಳನ್ನು ಹೊಡೆದು ಸೆರೆಮನೆಯೊಳಗೆ ಹಾಕಲ್ಪಟ್ಟರು. ಅದ್ಭುತರೀತಿಯಲ್ಲಿ ಅವರಿಗೆ ಹಾಕಿದ ಬೇಡಿಗಳು ಕಳಚಿಬಿದ್ದವು. ಸೆರೆಯಲ್ಲಿದ್ದವರೆಲ್ಲರೂ ಓಡಿಹೋದರೆಂದು ನೆನಸಿ ಸೆರೆಮನೆಯ ಅಧಿಪತಿ

ಭಯಪಟ್ಟು ತನ್ನ ಕತ್ತಿಯಿಂದ ಹಿರಿದು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದಿದ್ದನು. "ಆದರೆ ಪೌಲನು ಮಹಾ ಶಬ್ಧದಿಂದ ಕೂಗಿ ಅವನಿಗೆ-ನೀನೇನೂ ಕೇಡುಮಾಡಿಕೊಳ್ಳಬೇಡ, ನಾವೆಲ್ಲರೂ ಇಲ್ಲೇ ಇದ್ದೇವೆ ಎಂದು ಹೇಳಲು ಅವನು ದೀಪ ತರಬೇಕೆಂದು ಒಳಕ್ಕೆ ಹಾರಿ ನಡುಗುತ್ತ ಪೌಲ-ಸೀಲರ ಮುಂದೆ ಬಿದ್ದನು ಮತ್ತು ಅವರನ್ನು ಹೊರಗೆ ಕರಕೊಂಡು ಬಂದನು" (ಅ.ಕೃ.16:28-29). "ಸ್ವಾಮಿ ರಕ್ಷಣೆಹೊಂದುವುದಕ್ಕೆ ಏನು ಮಾಡಬೇಕೆಂದು ಕೇಳಲು ಅವನು ಕರ್ತನಾದ ಯೇಸುವಿನ ಮೇಲೆ ನಂಬಿಕೆಯನ್ನಿಡು, ಆಗ ನೀನು ರಕ್ಷಣೆಯನ್ನು ಹೊಂದುವಿ, ನಿನ್ನ ಮನೆಯವರೂ ರಕ್ಷಣೆ ಹೊಂದುವರು ಎಂದು ಹೇಳಿದನು"(ಅ.ಕೃ. 16:31). ಅನೇಕರು ಇಷ್ಟಕ್ಕೆ ನಿಂತು ಹೋಗಿ ಈ ಮನುಷ್ಯನು ರಕ್ಷಣೆಹೊಂದಬೇಕಾದರೆ ಇಷ್ಟೆನಾ? ಎಂದು ಅನ್ನುವರು. ಆದರೆ ಇದೆ ಪ್ರಾರಂಭ. ಈ ಮನುಷ್ಯನಾರು? ಒಬ್ಬ ಅವಿಶ್ವಾಸಿ ಆದ್ದರಿಂದ ಅವನು ಮೊದಲು ನಂಬಿಕೆಯಿಡುವುದು ಬಹಳ ಪ್ರಾಮುಖ್ಯವಾದದ್ದು. ಹಾಗೆ ಮಾಡುವುದಕ್ಕೆ ಅವರು ಅವನಿಗೂ ಅವನ ಮನೆಯವರೆಲ್ಲರಿಗೂ ದೇವರ ವಾಕ್ಯವನ್ನು ತಿಳಿಸಿದನು. ಆ ಮೇಲೆ ಅವನು ರಾತ್ರಿಯ ಅದೇ ಗಳಿಗೆಯಲ್ಲಿ ಅವರನ್ನು ಕರಕೊಂಡು ಹೋಗಿ ಅವರ ಗಾಯಗಳನ್ನು ತೊಳೆದ ಕೂಡಲೆ ತಾನು ತನ್ನವರೆಲ್ಲರ ಸಹಿತವಾಗಿ ದೀಕ್ಷಾಸ್ನಾನ ಮಾಡಿಸಿಕೊಂಡನು. ತರುವಾಯ ಅವರನ್ನು ತನ್ನ ಮನೆಗೆ ಕರಕೊಂಡು ಹೋಗಿ ಊಟ ಮಾಡಿಸಿದನು. ಅವನು ತನ್ನ ಮನೆಯವರೆಲ್ಲರ ಸಂಗಡ ಉಲ್ಲಾಸಗೊಂಡನು" (ಅ.ಕೃ.16:32-34). ಈ ಮನುಷ್ಯನು, ತನ್ನ ಮನೆಯವರು ಏನು ಮಾಡಿದರು? ದೇವರ ವಾಕ್ಯವನ್ನು ಅವರು ಕೇಳಿದಾಗ ಅವರು ನಂಬಿದರು, ಆದರೆ ಕರ್ತನು ಕೊಟ್ಟ ಆಜ್ಞೆ ಏನು? "ನಂಬೀದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ದೀಕ್ಷಾಸ್ನಾನ ರಕ್ಷಣೆ ಹೊಂದುವನು" (ಮಾರ್ಕ16:16). ಕರ್ತನ ವಾಕ್ಯವನ್ನು ಕೇಳುವುದರ ಫಲಿತವಾಗಿ ಅವನು ಖೈದಿಗಳ ಗಾಯಗಳನ್ನು ತೊಳೆಯುವುದರ ಮೂಲಕ ಮಾನಸಾಂತರವನ್ನು ವ್ಯಕ್ತಪಡಿಸಿದನು. ರಾತ್ರಿಯ ಅದೇ ಗಳಿಗೆಯಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡನು. ಪೌಲನು ಮಾಡಿದ ಬೋಧನೆಯಲ್ಲಿಯೂ, ಈ ಆಜ್ಞೆಗಳು ಒಂದು ಭಾಗವಾಗಿದೆ ಇಲ್ಲವಾದರೆ ಸೆರೆಮನೆಯ ಅಧಿಕಾರಿ ಅವುಗಳನ್ನು ಕೇಳದೇ ಇರುತ್ತಿದ್ದನು.

ಈಗ ನಾವು ರಕ್ಷಣೆ ಹೊಂದುವುದು ಹೇಗೆ? ಮೇಲೆ ಹೇಳಿದ ರೀತಿಯಲ್ಲಿ ಒಬ್ಬನು ಸತ್ಯವನ್ನು ಕೇಳಬೇಕು ಅದನ್ನು ನಂಬಬೇಕು ತನ್ನ ಪಾಪಗಳ ವಿಷಯವಾಗಿ ಮಾನಸಾಂತರ ಪಟ್ಟು ಕ್ರಿಸ್ತನನ್ನು ಒಪ್ಪಿಕೊಳ್ಳಬೇಕು ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು.ಈ ಕಳಗಿನ ವಚನಗಳನ್ನು ಜಾಗ್ರತೆಯಿಂದ ಓದು. ಇಬ್ರಿಯ 11:6; ರೋಮಾ 10:10; ಲೂಕ 13:3; ಅ.ಕೃ.17:30 ಮತ್ತು 10:32; ಮಾರ್ಕ 16:15; ಅ.ಕೃ.2:38.

## 18. ರಕ್ಷಣೆಯ ಮಾರ್ಗ
## (The Plan of Salvation)

ಮನುಷ್ಯನು ಪಾಪಿಯೆಂದು ಬೈಬಲ್ ಬೋಧಿಸುತ್ತದೆ. "ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ" (ರೋಮಾ 2:23). "ಪಾಪವು ಕೊಡುವ ಸಂಭಳ ಮರಣ ಎಂದು ಹೇಳುತ್ತದೆ" (ರೋಮಾ 6:23). ಇದರ ಪ್ರಕಾರ ಮನುಷ್ಯನು ರಕ್ಷಣೆ ಹೊಂದುವುದು ಅತ್ಯವಶ್ಯಕ. ಆದರೆ ಅವನು ಹೇಗೆ ರಕ್ಷಣೆ ಹೊಂದುವನು? ಬೈಬಲ್ ಇದನ್ನು ಬಯಲು ಪಡಿಸುತ್ತದೆ.

ದೇವರು ಮನುಷ್ಯನನ್ನು ಮಾಡಿದನು. ಅವನು ದೇವರಿಂದ ತೊಲಗಿ ಹೋಗಿದ್ದರು ಮತ್ತೆ ತಿರುಗಿ ಸೇರುವುದಕ್ಕೆ ದೇವರೇ ಮಾರ್ಗವನ್ನು ಏರ್ಪಡಿಸಿದ್ದಾನೆ. ಈ ಮಾರ್ಗವೆಲ್ಲ ದೇವರ ಕೃಪೆ, ಕರುಣೆ, ಪ್ರೀತಿಯ ಮೇಲೆ ಆಧಾರ ಪಟ್ಟಿದೆ (ಯೋಹಾನ 3:1, ಎಫೆಸ 3:8–9). ಮನುಷ್ಯನು ಆತನ ಬಳಿಗೆ ಬರಬೇಕೆಂದು ದೇವರು ಬಲವಂತ ಮಾಡುವುದಿಲ್ಲ, ಆದರೆ ಬಾ ಎಂದು ಆತನು ಆಹ್ವಾನಿಸಿತ್ತಿದ್ದಾನೆ ಎಂದು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಹಾಗೆ ಮಾಡುವವರು ತಪ್ಪದೇ ರಕ್ಷಣೆ ಹೊಂದುವರು.

**ಮನುಷ್ಯನು ರಕ್ಷಣೆ ಹೊಂದುವುದಕ್ಕೆ ದೇವರು 5ಹಂತಗಳನ್ನು ಇಟ್ಟಿದ್ದಾನೆ.**

1. ಒಬ್ಬನು ಸತ್ಯವನ್ನು ಕೇಳಬೇಕು. "ಈತನು ಪ್ರಿಯನಾಗಿರುವ ನನ್ನ ಮಗನು; ಈತನನ್ನು ನಾನು ಮೆಚ್ಚಿದ್ದೇನೆ; ಈತನ ಮಾತನ್ನು ಕೇಳಿರಿ" (ಮತ್ತಾಯ 17:5). "ಆದಕಾರಣ ಸಾರಿದ ಸುವಾರ್ತೆಯು ನಂಬಿಕೆಗೆ ಆಧಾರ, ಆ ವಾರ್ತೆಗೆ ಕ್ರಿಸ್ತನ ವಾಕ್ಯವೆ ಆಧಾರ" (ರೋಮಾ 10:17).

2. ಒಬ್ಬನು ದೇವರಲ್ಲಿಯೂ, ಕ್ರಿಸ್ತನು ದೇವರ ಮಗನೆಂದು ನಂಬಿಕೆ ಇಡಬೇಕು. "ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದು ಅಸಾಧ್ಯ; ದೇವರ ಬಳಿಗೆ ಬರುವವನು ದೇವರು ಇದ್ದಾನೆ, ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವದು ಅವಶ್ಯ" (ಇಬ್ರಿಯ11:6). "ದೇವರನ್ನು ನಂಬಿರಿ, ನನ್ನನ್ನು ನಂಬಿರಿ" ಎಂದು ಯೇಸು ಹೇಳಿದ್ದಾನೆ (ಯೋಹಾನ 14:1). "ಆತನ ಮಗನನ್ನು ನಂಬುವವನಿಗೆ ನಿತ್ಯಜೀವ ಉಂಟು; ಮಗನಿಗೆ ಒಳಗಾಗದವನು ಜೀವವನ್ನು ಕಾಣುವುದೇ ಇಲ್ಲ; ದೇವರ ಕೋಪವು ಅವನ ಮೇಲೆ ನೆಲೆಗೊಂಡಿರುವುದು" (ಯೋಹಾನ 3:36). ಎಂದು ಕ್ರಿಸ್ತನು ಹೇಳಿದ್ದಾನೆ. ಇನ್ನೂ ಅನೇಕ ವಚನಗಳನ್ನು ನಾವು ಇಲ್ಲಿ ತೋರಿಸಬಹುದು ಆದರೆ ಇವುಗಳ ನಿಮಿತ್ತವೇ ರಕ್ಷಣೆಹೊಂದುವುದಕ್ಕೆ ನಂಬಿಕೆ ಅತಿ ಪ್ರಾಮುಖ್ಯವೆಂದು ನೀನು ಗಮನಿಸಬಹುದು. ಆದರೆ ಇದರಲ್ಲಿ ಒಂದಾದರು ನಂಬಿಕೆಯಿಂದ ಮಾತ್ರವೇ ರಕ್ಷಣೆ ದೊರೆಯುತ್ತದೆ ಎಂದು ಬೋಧಿಸುವುದಿಲ್ಲವೆಂದು ಗಮನಿಸಬಹುದು.

3. ಒಬ್ಬನು ತನ್ನ ಪಾಪಗಳ ವಿಷಯದಲ್ಲಿ ದೇವರ ಕಡೆಗೆ ತಿರಿಗಿಕೊಳ್ಳಬೇಕು. "ದೇವರ ಕಡೆಗೆ ತಿರುಗಿಕೊಳ್ಳದಿದ್ದರೆ ನೀವೆಲ್ಲರು ಹಾಗೆಯೇ ಹಾಳಾಗಿಹೋಗುವಿರಿ" (ಲೂಕ 13:3). "ಆ ಅಜ್ಞಾನದ ಕಾಲಗಳನ್ನು ದೇವರು ಲಕ್ಷಕ್ಕೆ ತರಲಿಲ್ಲ; ಈಗಲಾದರೂ ಆತನು ನಾಲ್ಕು ದಿಕ್ಕಿನಲ್ಲಿರುವ ಮನುಷ್ಯರೆಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪ್ಪಣೆಕೊಡುತ್ತಾನೆ"(ಅ.ಕೃ.17:30). "ಕರ್ತನು ತನ್ನ ವಾಗ್ದಾನವನ್ನು ನೆರವೇರಿಸುವುದಕ್ಕೆ ತಡಮಾಡುತ್ತಾನೆಂಬುದಾಗಿ ಕೆಲವರು ಅರ್ಥ ಮಾಡಿಕೊಳ್ಳುವ ಪ್ರಕಾರ ಆತನು ತಡಮಾಡುವವನಲ್ಲ; ಯಾವನಾದರೂ ನಾಶವಾಗುವದರಲ್ಲಿ ಆತನು ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಆಪೇಕ್ಷಿಸುವವನಾಗಿದ್ದು ನಿಮ್ಮ ವಿಷಯದಲ್ಲಿ ದೀರ್ಘಶಾಂತಿಯುಳ್ಳವನಾಗಿದ್ದಾನೆ"(2ಪೇತ್ರ3:9). ಮಾನಸಾಂತರ ಅಂದರೆ ಪಾಪಗಳ ವಿಷಯದಲ್ಲಿ ನಮ್ಮ ಮನಸ್ಸನ್ನು ಬದಲಾಯಿಸಿಕೊಳ್ಳುವುದು (ದೇವರ ಕಡಗೆ ತಿರುಗಿಕೊಳ್ಳುವುದು) ಎಂದು ಅರ್ಥ. ಪಾಪದಿಂದ ಹೊರಗೆ ಬರುವುದು, ಮತ್ತೊಂದು ದಿಕ್ಕಿಗೆ (ನೀತಿಗೆ) ಹೋಗುವುದು, ಅಥವಾ ಪಾಪವನ್ನು ಪರಿತ್ಯಜಿಸುವುದು ಎಂದು ಅರ್ಥ. ಏನೇ ಆದರೂ ಒಳ್ಳೆ ಜೀವಿತವನ್ನು ಜೀವಿಸುವುದಾದರೆ ಅವನು ಮೊದಲು ಪಾಪಕ್ಕೆ ಮುಕ್ತಾಯ ಹೇಳಬೇಕು, ಇದೇ ಕರ್ತನು ಕೋರುತ್ತಿದ್ದಾನೆ.

4. ಒಬ್ಬನು ಕ್ರಿಸ್ತನು ದೇವರ ಮಗನೆಂದು ಒಪ್ಪಿಕೊಳ್ಳಬೇಕು. "ಹಾಗಾದರೆ ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನೆಂದು ಒಪ್ಪಿಕೊಳ್ಳುವನೋ, ನಾನು ಸಹ ಅವನನ್ನು ನನ್ನವನೆಂದು ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ಒಪ್ಪಿಕೊಳ್ಳುವೆನು" (ಮತ್ತಾಯ10:32). ಎಂದು ಕ್ರಿಸ್ತನು ಹೇಳಿದನು. "ಹೃದಯದಲ್ಲಿ ನಂಬುವುದರ ಮೂಲಕ ನೀತಿಯು ದೊರಕುತ್ತದೆ, ಬಾಯಿಂದ ಅರಿಕೆ ಮಾಡುವುದರ ಮೂಲಕ ರಕ್ಷಣೆಯಾಗುತ್ತದೆ" (ರೋಮಾ10:10). ಅ.ಕೃ.8ನೇ ಅಧ್ಯಾಯದಲ್ಲಿ ಐಥಿಯೋಪ್ಯದ ಕಂಚುಕಿಯು ದೀಕ್ಷಾಸ್ನಾನ ಹೊಂದುವುದಕ್ಕೆ ಮೊದಲು ಹೀಗೆ ಒಪ್ಪಿಕೊಂಡನು. ಇದನ್ನು ಒಳ್ಳೆ ಒಪ್ಪಿಗೆ ಎಂದು ಸಾಧಾರಣವಾಗಿ ಹೇಳುವರು. ಇದಕ್ಕಿಂತ ಒಳ್ಳೆಯ ಒಪ್ಪಿಕೊಳ್ಳುವಿಕೆ ಮತ್ತೇನಿದೆ?

5. ಒಬ್ಬನು ರಕ್ಷಣೆ ಹೊಂದಲು ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು. ಕ್ರಿಸ್ತನು ಇದನ್ನು ಹೇಳಿದ್ದಾನೆ "ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು ನಂಬದೇ ಹೋಗುವವನಿಗೆ ದಂಡನೆಯಾಗುವುದು" (ಮಾರ್ಕ16:16). "ಪೇತ್ರನು ಅವರಿಗೆ– ನಿಮ್ಮ ಪಾಪಗಳು ಪರಿಹಾರವಾಗುವುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬನು ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ" (ಅ.ಕೃ.2:38). "ಆ ನೀರಿಗೆ ಅನುರೂಪವಾದ ದೀಕ್ಷಾಸ್ನಾನವು

ಯೇಸುಕ್ರಿಸ್ತನ ಪುನರುತ್ಥಾನದ ಮೂಲಕ ಈಗ ನಮ್ಮನ್ನು ರಕ್ಷಿಸುತ್ತದೆ; ಅದು ಮೈಕೊಳೆಯನ್ನು ಹೋಗಲಾಡಿಸುವಂಥದಲ್ಲ; ಒಳ್ಳೇ ಮನಸ್ಸಾಕ್ಷಿ ಬೇಕೆಂದು ದೇವರಿಗೆ ವಿಜ್ಞಾಪಿಸಿಕೊಳ್ಳುವುದೇ" (1ಪೇತ್ರ 3:21). "ಈಗ ನೀನೇಕೆ ಸಾವಕಾಶ ಮಾಡುತ್ತಿ? ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ ಅಂದನು" (ಅ.ಕೃ.22:16). ದೀಕ್ಷಾಸ್ನಾನ ಒಂದೇ ಎಂದು ಬೈಬಲ್ ಹೇಳುತ್ತದೆ. "ನೀವೆಲ್ಲರೂ ಒಂದೇ ದೇಹಕ್ಕೆ ಸೇರಿದವರು, ಒಬ್ಬನೇ ಆತ್ಮನನ್ನು ಹೊಂದಿದವರು, ಒಂದೇ ಪದವಿಯನ್ನು ನಿರೀಕ್ಷಿಸುವುದಕ್ಕೆ ಕರೆಯಲ್ಪಟ್ಟವರು; ನಿಮ್ಮೆಲ್ಲರಿಗೂ ಕರ್ತನು ಒಬ್ಬನೇ, ಭರವಸವು ಒಂದೇ, ಸ್ನಾನದೀಕ್ಷೆ ಒಂದೇ" (ಎಫೆಸ 4:5). ಅದು ಒಂದು ಸಮಾದಿ, ಅದು ನೀರಿನ ಸಮಾದಿ (ಕೊಲೊಸ್ಸೆ 2:12; ಅ.ಕೃ.8:36–39). ಈ ಒಂದು ದೀಕ್ಷಾಸ್ನಾನವನ್ನು ತಂದೆ, ಮಗ, ಪವಿತ್ರಾತ್ಮನ ಹೆಸರಿನಲ್ಲಿ ಮಾಡಿಸಿಕೊಳ್ಳಬೇಕು. (ಮತ್ತಾಯ 28:18–20). ಅದು ಒಬ್ಬನನ್ನು ಕ್ರಿಸ್ತನಲ್ಲಿಗೆ, ಆತನ ಸಭೆಯಲ್ಲಿಗೆ ಸೇರಿಸುತ್ತದೆ (ರೋಮಾ 6:3; 1ಕೊರಿಂಥ 12:13).

ಈ ಚಿಕ್ಕ ಆಜ್ಞೆಗೆ ಅಧೀನರಾಗುವುದರ ಮೂಲಕ ಒಬ್ಬನು ತನ್ನ ಹಿಂದಿನ ಪಾಪಗಳಿಂದ ಬಿಡುಗಡೆ (ಪರಿಹಾರ) ಹೊಂದಿ ಕರ್ತನ ಸಭೆಯೊಂದಿಗೆ ಸೇರಿಸಲ್ಪಟ್ಟು, ಅವನು ಕ್ರೈಸ್ತವನಾಗಿ ತನ್ನ ಜೀವಿತ ಕಾಲದಲ್ಲಿ ನಂಬಿಕೆಯಿಂದ ದೇವರನ್ನು ಸೇವಿಸಿದರೆ ಮೋಕ್ಷರಾಜ್ಯ ಆತನದಾಗುತ್ತದೆ. ಮೇಲೆ ಹೇಳಿದ ಸಂಗತಿಗಳನ್ನು ಕುರಿತು ಈ ದಿನವೇ ನಿರ್ಧರಿಸಬೇಕೆಂದು ಕರ್ತನ ಹೆಸರಿನಲ್ಲಿ ನಿಮ್ಮನ್ನು ಪ್ರೀತಿಯಿಂದ ಎಚ್ಚರಿಸುತ್ತೇನೆ.

## 19. ಕ್ರಿಸ್ತನಲ್ಲಿಗೆ ಬರಲು ಮೆಟ್ಟಲು
## (Steps into Christ)

ನಾವು ಹೊಂದಬೇಕಾದ ಆಶೀರ್ವಾದಗಳೆಲ್ಲಾ ಕ್ರಿಸ್ತನಲ್ಲಿವೆ ಎಂದು ವಾಕ್ಯವು ಬೋಧಿಸುತ್ತದೆ. ಅದರಲ್ಲಿ ರಕ್ಷಣೆ ಎಂಬ ಆಶೀರ್ವಾದವನ್ನು ನೋಡೋಣ. "ಹೀಗಿರಲಾಗಿ ಯಾವನಾದರೂ ಕ್ರಿಸ್ತನನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು. ಇಗೂ, ಪೂರ್ವ ಸ್ಥಿತಿ ಹೋಗಿ ಎಲ್ಲಾ ನೂತನವಾಯಿತು" (2ಕೊರಿಂಥ 5:17). "ನಮ್ಮ ಕರ್ತನಾದ ಯೇಸುಕ್ರಿಸ್ತನ ದೇವರೂ ತಂದೆಯೂ ಆಗಿರುವಾತನಿಗೆ ಸ್ತೋತ್ರ. ಆತನು ಪರಲೋಕದಲ್ಲಿನ ಸಕಲ ಆತ್ಮೀಯವರಗಳನ್ನು ನಮಗೆ ಕ್ರಿಸ್ತಯೇಸುವಿನಲ್ಲಿ ಅನುಗ್ರಹಿಸಿದ್ದಾನೆ" (ಎಫೆಸ 1:3). "ತಾನು ಕಾಲವು ಪರಿಪೂರ್ಣವಾದಾಗ ನಿರ್ವಹಿಸಬೇಕಾದ ಒಂದು ಕೃಪೆಯುಳ್ಳ ಸಂಕಲ್ಪವನ್ನು ಆತನು ಕ್ರಿಸ್ತನಲ್ಲಿ ಮೊದಲೇ ನಿಷ್ಕರ್ಷೆಮಾಡಿಕೊಂಡಿದ್ದನು. ಅದೇನಂದರೆ ಭೂ ಪರಲೋಕಗಳಲ್ಲಿರುವ ಸಮಸ್ತವನ್ನು ಕ್ರಿಸ್ತನಲ್ಲಿ ಒಂದು ಮಾಡಬೇಕೆಂಬುದೇ" (ಎಫೆಸ 1:10).

ಈ ಆಶೀರ್ವಾದಗಳೆಲ್ಲವೂ ಕ್ರಿಸ್ತನಲ್ಲಿರುವುದರಿಂದ ಕ್ರಿಸ್ತನಲ್ಲಿಗೆ ಪ್ರವೇಶಿಸುವದು ಹೇಗೆಂದು ನಾವು ಸಹಜವಾಗಿ ಕೇಳುತ್ತೇವೆ. ಇದಕ್ಕೆ ಉತ್ತರ ಕೊಡುವುದಕ್ಕೆ ಮತ್ತೆ ನಾವು ದೇವರ ವಾಕ್ಯದಲ್ಲಿ ಹುಡುಕಬೇಕು. ನಾವು ಅದನ್ನು ಓದುತ್ತಿರುವಾಗ ನಾವು ಹತ್ತಬೇಕಾದ ಕೆಲವು ಮೆಟ್ಟಿಲುಗಳಿವೆ ಎಂದು ಅರ್ಥವಾಗುತ್ತದೆ. ಅದರಲ್ಲಿರುವ ಪ್ರತಿಯೊಂದು ಮೆಟ್ಟಿಲು ಮತ್ತೊಂದು ಮೆಟ್ಟಿಲಿನಂತೆ ಬಹಳ ಪ್ರಮುಖ್ಯವಾದದ್ದು. ಈ ಕೊನೆಯ ಮೆಟ್ಟಿಲನ್ನು ದಾಟುತ್ತಲೇ ಕ್ರಿಸ್ತನಿಗೆ ಹೊರಗಡೆ ಇರುವವನು ಕ್ರಿಸ್ತನಲ್ಲಿಗೆ ಬದಲಾಗುವನು. ಯಾವುದಾದರೂ ಒಂದು ಭವನದಲ್ಲಿ ನಾವು ಪ್ರವೇಶಿಸಬೇಕಾದರೆ ಅದಕ್ಕೆ ಮುಂದಿರುವ ಮೆಟ್ಟಿಲುಗಳನ್ನು ದಾಟಿದರು ಕೊನೆಯ ಮೆಟ್ಟಿಲನ್ನು ದಾಟಿದ ನಂತರವೇ ನಾವು ಆ ಭವನದೊಳಗೆ ಪ್ರವೇಶಿಸಬಹುದು. ಕ್ರಿಸ್ತನಲ್ಲಿಗೆ ನಡೆಸುವ ಮೆಟ್ಟಿಲು ಸಹ ಅಷ್ಟೆ ಎಂದು ಗ್ರಹಿಸಿಕೊಳ್ಳಲಾರದಂತೆ ಕಷ್ಟಕರವಾದುವಗಳಲ್ಲ. ಈಗ ಆ ಮೆಟ್ಟಿಲುಗಳು ಏನೆಂದು ನೋಡೋಣ.

1. ಮೊಟ್ಟ ಮೊದಲ ಮೆಟ್ಟಿಲಾಗಿ ಒಬ್ಬನು ಕ್ರಿಸ್ತನನ್ನು ಕುರಿತು ಅಥವಾ ದೇವರನ್ನು ಕುರಿತು ವಾಕ್ಯವನ್ನು ಕುರಿತು ಕೇಳಬೇಕು. ಆತನು ಪ್ರಕಾಶಮಾನವಾದ ರೂಪವನ್ನು ಹೊಂದಿದಾಗ. "ಈತನು ಪ್ರಿಯನಾಗಿರು ನನ್ನ ಮಗನು ಈತನನ್ನು ನಾನು ಮೆಚ್ಚಿದ್ದದೇನೆ, ಇತನ ಮಾತನ್ನು ಕೇಳಿರಿ" ಎಂದು ಕ್ರಿಸ್ತನನ್ನು ಕುರಿತು ದೇವರು ಸಾಕ್ಷಿಕೊಟ್ಟನು (ಮತ್ತಾಯ 17:5). "ಸಾರಿದ ಸುವಾರ್ತೆಯು ನಂಬಿಕೆಗೆ ಆಧಾರ, ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ" ಎಂದು ಪೌಲನು ಬೋಧಿಸಿದ್ದಾನೆ (ರೋಮಾ 10:17). ಆದದರಿಂದಲೇ ಅಪೊಸ್ತಲರಿಗೆ ಸರ್ವಸೃಷ್ಟಿಗೆ ಸುವಾರ್ತೆ ಪ್ರಕಟಿಸಬೇಕೆಂದು ಯೇಸು ಆಜ್ಞಾಪಿಸಿದನು. ಯಾವನಾದರೂ ಕ್ರಿಸ್ತನನ್ನು ಕುರಿತು ಕೇಳದೆ ಹೋದರೆ ವಿಧೇಯನಾಗುವುದಿಲ್ಲ.

ಮೊದಲ ಮೆಟ್ಟಿಲು ಬಹಳ ಪ್ರಮುಖ್ಯವಾದದ್ದು ಆದರೆ ಅದು ಒಂದು ಮಾತ್ರ ಕ್ರಿಸ್ತನಲ್ಲಿಗೆ ಸೇರಿಸದು. ನಾವು ಇಲ್ಲೆ ನಿಂತು ಹೋದರೆ ಅದು ವಿಷಾದನಿಯ.

2. 2ನೇ ಮೆಟ್ಟಿಲು ಒಬ್ಬನು ದೇವರಲ್ಲಿಯೂ, ಯೇಸುಕ್ರಿಸ್ತನು ದೇವರ ಮಗನೆಂದು ನಂಬಬೇಕು "ಆದರೆ ನಂಬಿಕೆ ಇಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ; ದೇವರ ಬಳಿಗೆ ಬರುವವನು ದೇವರಿದ್ದಾನೆ, ಮತ್ತು ಆತನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವುದು ಅವಶ್ಯ" (ಇಬ್ರಿಯ 11:6). "ದೇವರನ್ನು ನಂಬಿರಿ, ನನ್ನನ್ನೂ ನಂಬಿರಿ" ಎಂದು ಯೇಸು ಹೇಳಿದ್ದಾನೆ (ಯೋಹಾನ14:1). "ಆದದರಿಂದ ನೀವು ನಿಮ್ಮ ಪಾಪಗಳಲ್ಲಿಯೇ ಸಾಯುವಿರೆಂದು ನಿಮಗೆ ಹೇಳಿದೆನು; ನನ್ನನು ಆತನೆಂದು ನೀವು ನಂಬದೆ ಹೋದರೆ ನಿಮ್ಮ ಪಾಪಗಳಲ್ಲಿಯೇ ಸಾಯಿವಿರೆಂದು ಹೇಳಿದನು" (ಯೋಹಾನ 8:24).

ಆದ್ದರಿಂದ ರಕ್ಷಣೆ ಹೊಂದಬೇಕಾದರೆ ನಂಬಿಕೆ ಬಹಳ ಪ್ರಮುಖ್ಯವೆಂದು ಬೇರೆ ಹೇಳಬೇಕಾಗಿಲ್ಲ. ಆದರೆ ನಂಬಿಕೆ ಮಾತ್ರವೇ ನಮ್ಮನ್ನು ರಕ್ಷಿಸುವುದಿಲ್ಲ. ಕ್ರಿಸ್ತನಲ್ಲಿಗೆ ಸೇರಿಸದು. ಆದರೆ ರಕ್ಷಣೆಯ ಮಾರ್ಗದಲ್ಲಿ ಹಾಕಿದ ಒಂದು ಪ್ರಮುಖವಾದ ಮೆಟ್ಟಿಲು ಅದು. ಪೌಲನು ಹೀಗೆ ಹೇಳಿದ್ದಾನೆ "ಹೃದಯದಿಂದ ನಂಬುವುದರ ಮೂಲಕ ನೀತಿಯು ದೊರಕುತ್ತದೆ, ಬಾಯಿಂದ ಅರಿಕೆ ಮಾಡುವುದರ ಮೂಲಕ ರಕ್ಷಣೆಯಾಗುತ್ತದೆ" (ರೋಮಾ10:10). ಆದ್ದರಿಂದ ನಂಬಿಕೆಯು ರಕ್ಷಣೆ ಹೊಂದುವುದಕ್ಕೆ ಅತ್ಯವಶ್ಯಕವಾಗಿದೆ.

3. 3ನೇ ಮೆಟ್ಟಿಲು, ಈ ಮೆಟ್ಟಿಲಿನಲ್ಲಿ ಒಬ್ಬನು ತನ್ನ ಪಾಪಗಳ ವಿಷಯದಲ್ಲಿ ಮಾನಸಾಂತರ ಪಟ್ಟು ದೇವರ ಕಡೆಗೆ ತಿರುಗಿಕೊಳ್ಳಬೇಕು. ಅವಿಧೇಯರಾಗುವವರೆಲ್ಲರು ದೇವರ ದೃಷ್ಟಿಯಲ್ಲಿ ಪಾಪಿಗಳು. ಪಾಪದಿಂದ ಬರುವ ಸಂಬಳ ಮರಣ (ರೋಮಾ 3:23, 6:23). ಆದ್ದರಿಂದ ಇದಕ್ಕೆ ಪರಿಷ್ಕಾರವೇನು? ಮಾನಸಾಂತರ ಹೊಂದುವದು. ಅಂದರೆ ಮನಸ್ಸಿನ ಆಲೋಚನೆಗಳನ್ನು ದೇವರ ಕಡೆಗೆ ತಿರುಗಿಸುವುದು, ಬದಲಾವಣೆ ಹೊಂದಿ ಮತ್ತೊಂದು ಮಾರ್ಗದಲ್ಲಿ ನಡೆಯುವುದು, ಜೀವಿತದಲ್ಲಿರುವ ಪಾಪವೆನ್ನೆಲ್ಲಾ ಪರಿತ್ಯಜಿಸುವುದು ಹಾಗೆ ಮಾಡುವುದರ ಮೂಲಕ ದೋಷರಹಿತ ಜೀವಿತವನ್ನು ಜೀವಿಸುವುದು. ಮನುಷ್ಯನು ತನ್ನ ಪಾಪದಲ್ಲಿ ರಕ್ಷಣೆ ಹೊಂದಲು ಸಾಧ್ಯವಿಲ್ಲ ಎಂದು ಕ್ರಿಸ್ತನು ತಿಳಿದವನಾಗಿ ಹೀಗೆ ಹೇಳಿದ್ದಾನೆ "ದೇವರ ಕಡೆಗೆ ತಿರುಗಿಕೊಳ್ಳದಿದ್ದರೆ ನೀವೆಲ್ಲರೂ ಹಾಗೆಯೇ ಹಾಳಾಗುವಿರಿ" (ಲೂಕ 13:3). ಪೌಲನು ಹೀಗೆ ಹೇಳಿದ್ದಾನೆ "ಆ ಅಜ್ಞಾನ ಕಾಲಗಳನ್ನು ದೇವರು ಲಕ್ಷಕ್ಕೆ ತರಲಿಲ್ಲ; ಈಗಲಾದರೂ ಆತನು ನಾಲ್ಕು ದಿಕ್ಕಿನಲ್ಲಿರುವ ಮನುಷ್ಯರೆಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪ್ಪಣೆಕೊಡುತ್ತಾನೆ" (ಅ.ಕೃ.17:30). ಪೇತ್ರನು ಸಹ ಹೀಗೆ

ಹೇಳಿದ್ದಾನೆ "ಅವರಿಗೆ–ನಿಮ್ಮ ಪಾಪಗಳು ಪರಿಹಾರವಾಗುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬನೂ ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೇಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ" (ಅ.ಕೃ.2:38).

ಒಬ್ಬನು ಕರ್ತನನ್ನು ತನ್ನ ಹೃದಯ ಪೂರ್ವಕವಾಗಿ ನಂಬಿ ತನ್ನ ಪಾಪಗಳಿಂದ ತಿರುಗಿ ಕೊಂಡರೂ ಅವನು ರಕ್ಷಿಸುವುದಕ್ಕೆ ಇದು ಮಾತ್ರವೇ ಸಾಲದು ಅವನು ದಾಟಬೇಕಾದ ಮೆಟ್ಟಿಲು ಇನ್ನೂ ಇವೆ.

4. ನಾಲ್ಕನೇಯದಾಗಿ ಒಬ್ಬನು ಯೇಸು ಕ್ರಿಸ್ತನನ್ನು ದೇವರ ಮಗನೆಂದು ತನ್ನ ಬಾಯಿಂದ ಒಪ್ಪಿಕೊಳ್ಳಬೇಕು "ಹಾಗಾದರೆ ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನೆಂದು ಒಪ್ಪಿಕೊಳ್ಳುವನೋ, ನಾನು ಸಹ ಅವನನ್ನು ನನ್ನವನೆಂದು ಪರಲೋಕದಲ್ಲಿರುವ ನನ್ನ ತಂದೆಯ ಬಳಿಯಲ್ಲಿ ಒಪ್ಪಿಕೊಳ್ಳುವೆನು" (ಮತ್ತಾಯ 10:32). ಅ.ಕೃ 8:37ರಲ್ಲಿ ಕಂಚುಕಿಯು ಇದನ್ನು ಮಾಡಿದನೆಂದು ಹೇಳಬಹುದು. ರಕ್ಷಣೆ ಉಂಟಾಗುವಂತೆ ಒಬ್ಬನು ಬಾಯಿಂದ ಒಪ್ಪಿಕೊಂಡನೆಂದು ನಾವು ಗ್ರಹಿಸಿದ್ದೇವೆ (ರೋಮಾ 10:10). ಆದರೂ ಇನ್ನೂ ಉಳಿದಿದ್ದೇನು? ಕ್ರಿಸ್ತನಲ್ಲಿಗೆ, ರಕ್ಷಣೆಯೊಳಗೆ ಸೇರಿಸುವ ಅತಿ ಪ್ರಮುಖ ಕೊನೆಯ ಮೆಟ್ಟಿಲು ಮಾತ್ರವೇ. ಮೇಲೆ ಕೇಳಿದ ಎಲ್ಲ ಮೆಟ್ಟಿಲುಗಳು ಅವಶ್ಯವಾದರೂ ಈ ಕೊನೆಯ ಮೆಟ್ಟಿಲು ಕೊನೆಗೆ ಕ್ರಿಸ್ತನಲ್ಲಿಗೆ ಸೇರಿಸುತ್ತದೆ. ಅದನ್ನು ಪರಿಶೀಲಿಸೋಣ.

5. ಐದನೇ ಮೆಟ್ಟಿಲು ಒಬ್ಬನು ತನ್ನ ಪಾಪಗಳ ಕ್ಷಮಾಪಣೆಗಾಗಿ ಕ್ರಿಸ್ತನಲ್ಲಿಗೆ ದೀಕ್ಷಾಸ್ನಾನ ಮಾಡಿಸಿಕೊಳ್ಳುವುದರ ಮೂಲಕ ನೀರಿನಲ್ಲಿ ಮುಳುಗಬೇಕು. ಹೀಗೆ ಮಾಡುವುದರಿಂದ ಅವನು ಕ್ರಿಸ್ತನಲ್ಲಿಗೆ ಆತನ ಸಭೆಯೊಳಗೆ ಸೇರಿಸಲ್ಪಡುತ್ತಾನೆ. ದೀಕ್ಷಾಸ್ನಾನದ ಪ್ರಾಮುಖ್ಯತೆಯುನ್ನು ಈ ವಚನಗಳಲ್ಲಿ ನಾವು ತಿಳಿದುಕೊಳ್ಳಬಹುದು: ಮಾರ್ಕ16:16, ಅ.ಕೃ.2:38, 22:16, 1ಪೇತ್ರ 3:21 ಮುಂತಾದವುಗಳು. ಪೌಲನು ಹೀಗೆ ಬರೆದನು "ಕ್ರಿಸ್ತನಲ್ಲಿಗೆ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರೂ ಆತನ ಮರಣದಲ್ಲಿ ಪಾಲುಗಾರರಾಗುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ" (ರೋಮಾ 6:3) ಮತ್ತು "ನೀವೆಲ್ಲರೂ ಕ್ರಿಸ್ತ ಯೇಸುವಿನಲ್ಲಿಟ್ಟಿರುವ ನಂಬಿಕೆಯ ಮೂಲಕ ದೇವರ ಪುತ್ರರಾಗಿದ್ದಿರಿ. ಹೇಗೆಂದರೆ ಕ್ರಿಸ್ತನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರೂ ಕ್ರಿಸ್ತನನ್ನು ಧರಿಸಿಕೊಂಡಿರಿ" (ಗಲಾತ್ಯ 3:26,27).

ಕ್ರಿಸ್ತನಲ್ಲಿ ಸೇರುವುದಕ್ಕೆ ಒಂದೇ ಒಂದು ಮಾರ್ಗವಿದೆ. ಅದು ದೀಕ್ಷಾಸ್ನಾನವೆಂಬ ಕ್ರಿಯೆ ಮಾತ್ರ. ದೀಕ್ಷಾಸ್ನಾನ ಒಂದೇ ರಕ್ಷಿಸುತ್ತದೆ ಎಂದು ಇದರ ಅರ್ಥವಲ್ಲ. ಇದಕ್ಕೆ ಮೊದಲು ಹೇಳಿದಂತೆ ಈ ಕೊನೆಯ ಮೆಟ್ಟಿಲು ದಾಟುವುದಕ್ಕೆ ಮೊದಲು ಇರುವ

ಮೆಟ್ಟಿಲುಗಳನ್ನು ಸಹ ದಾಟಿ ಬರುವುದು ಅವಶ್ಯಕ. ಒಬ್ಬನು ಈ ಮೆಟ್ಟಿಲುಗಳೆಲ್ಲವನ್ನು ದಾಟಿದ ನಂತರ ಮಾತ್ರವೇ ರಕ್ಷಣೆ ಹೊಂದುವನೆಂದು ಗ್ರಹಿಸುತ್ತೇವೆ. ಕರ್ತನು ವಿಧಿಸಿದ ಷರತ್ತುಗಳನ್ನು ನೆರವೇರಿಸುವವನೇ ರಕ್ಷಣೆ ಹೊಂದುವನು. ನೀನು ಕ್ರಿಸ್ತನಲ್ಲಿ ಇರುವೆಯಾ? ಈ ಮೆಟ್ಟಿಲುಗಳನ್ನು ದಾಟದೇ ಹೋದರೆ ನೀನು ಕ್ರಿಸ್ತನಲ್ಲಿ ಇಲ್ಲ. ಪ್ರತಿಯೊಂದು ಮೆಟ್ಟಿಲು ದಾಟಿ ಕ್ರಿಸ್ತನಲ್ಲಿ ಪ್ರವೇಶಿಸಬೇಕೆಂದು ನಿನಗೆ ಮನವಿ ಮಾಡಿಕೊಳ್ಳುತ್ತಿದ್ದೇನೆ.

## 20. ಹೊಸ ಜನ್ಮ
## (The New Birth)

ನಾವು ಅನೇಕ ಸಾರಿ ತಿರುಗಿ ಜನ್ಮಿಸುವುದನ್ನು ಕುರಿತು ತಿರುಗಿ ಜನ್ಮಿಸಿದ ಕ್ರೈಸ್ತವರನ್ನು ಕುರಿತು ಕೇಳುತ್ತಿದ್ದೇವೆ. ಅದರ ಅರ್ಥವೇನು? ಅದನ್ನು ಕುರಿತು ನೀನು ಕೇಳಿದಾಗ ಕ್ರಿಸ್ತನನ್ನು ಯಾರು ತನ್ನ ಆತ್ಮ ರಕ್ಷಕನನ್ನಾಗಿ ಅಂಗೀಕರಿಸುವರೋ ಅವರಿಗೆ ಇದು ಅನ್ವಯಿಸುತ್ತದೆಂದು ಸಾದಾರಣವಾಗಿ ಹೇಳುವರು. ಇನ್ನೂ ಮುಂದುವರೆಸಿ ನೀನು ಕೇಳುವದಾದರೆ ಏನೇನೋ ಹೇಳುವರು. ಆದರೆ ದೇವರು ವಾಕ್ಯದಿಂದ ಐಕ್ಯವಾಗುವಂತೆ ಅದನ್ನು ವಿವರಿಸುವುದಿಲ್ಲ.

ಇದು ಬೈಬಲ್ ಅಂಶವಾಗಿರುವುದರಿಂದ ಈ ವಿಷಯದ ಮೇಲೆ ಬೈಬಲ್ ಏನು ಹೇಳುತ್ತದೋ ನೋಡಬೇಕು. ಮೊದಲನೇಯದಾಗಿ ಇದನ್ನು ಕುರಿತು ಬೈಬಲ್‌ನಲ್ಲಿ ಬರೆದಿರುವ ವಚನವನ್ನು ಓದುವುದು ಒಳ್ಳೆಯದು. "ಫರಿಸಾಯರಲ್ಲಿ ಯೆಹೊದ್ಯರಲ್ಲಿ ಹಿರಿಯ ಸಭೆಯವನಾದ ನಿಕೊದೇಮನೆಂಬ ಒಬ್ಬ ಮನುಷ್ಯನಿದ್ದನು. ಅವನು ರಾತ್ರಿಯಲ್ಲಿ ಯೇಸುವಿನ ಬಳಿಗೆ ಬಂದು ಆತನಿಗೆ– ಗುರುವೇ, ನೀನು ದೇವರ ಕಡೆಯಿಂದ ಬಂದ ಬೋಧಕನೆಂದು ಬಲ್ಲೆವು. ನೀನು ಮಾಡುವಂಥ ಈ ಸೂಚಕಕಾರ್ಯಗಳನ್ನು ದೇವರ ಸಹಾಯವಿಲ್ಲದೆ ಮಾಡುವುದು ಯಾರಿಂದಲೂ ಆಗದು ಎಂದು ಹೇಳಿದನು. ಅದಕ್ಕೆ ಯೇಸು– ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ, ಒಬ್ಬನು ಹೊಸದಾಗಿ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು ಅಂದನು. ನಿಕೊದೇವುನು ಆತನನ್ನು– ಮನುಷ್ಯನು ಮುದುಕನಾದ ಮೇಲೆ ಹುಟ್ಟುವದು ಹೇಗೆ? ಅವನು ತನ್ನ ತಾಯಿಯ ಗರ್ಭದಲ್ಲಿ ತಿರಿಗಿ ಸೇರಿ ಹುಟ್ಟುವದಾದೀತೆ? ಎಂದು ಕೇಳಿದನು. ಆದರೆ ಯೇಸು– ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ, ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು. ದೇಹದಿಂದ ಹುಟ್ಟಿದ್ದು ದೇಹವೇ; ಆತ್ಮನಿಂದ ಹುಟ್ಟಿದ್ದು ಆತ್ಮವೇ. ನೀವು ಹೊಸದಾಗಿ ಹುಟ್ಟಬೇಕು ಎಂದು ನಾನು ನಿನಗೆ ಹೇಳಿದ್ದರಿಂದ ಆಶ್ಚರ್ಯಪಡಬೇಡ. ಗಾಳಿಯು ಮನಸ್ಸು ಬಂದ ಕಡೆ ಬೀಸುತ್ತದೆ; ಅದರ ಸಪ್ಪಳವನ್ನು ಕೇಳುತ್ತೀ; ಆದರೆ ಅದು ಎಲ್ಲಿಂದ ಬರುತ್ತದೋ ಎಲ್ಲಿಗೆ ಹೋಗುತ್ತದೋ ನಿನಗೆ ತಿಳಿಯದು; ಆತ್ಮನಿಂದ ಹುಟ್ಟಿದವರೆಲ್ಲರು ಅದರಂತೆಯೇ ಅಂದನು" (ಯೋಹಾನ 3:1–8)

ಈ ಹೊಸ ಜನ್ಮ ಭೌತಿಕ ಸಂಬಂಧವಾದದಲ್ಲ ಎಂಬುದನ್ನು ಮೊದಲು ನಾವು ಗಮನಿಸಬೇಕು. ನೀರನ್ನು ಕುರಿತು ಹೇಳಿದದರಿಂದ ಇದು ಭೌತಿಕ ಜನ್ಮವೆಂದು ಅನೇಕರು ವಿವರಿಸುವುದಕ್ಕೆ ಸಿದ್ಧರಿರುವರು. ಆದರೆ ಹಾಗೆ ಅಲ್ಲ ನಿಕೋದೇಮನು ಸಹ ಇದೇ ರೀತಿಯಾಗಿ ಭೌತಿಕ ಜನ್ಮವೆಂದು ನೆನೆಸಿದನು. ಆದರೆ ಹಾಗೆ ಅಲ್ಲ ಎಂದು ಕರ್ತನು ತಿಳಿಯಪಡಿಸಿದನು. ಇದು ಭೌತಿಕ ಜನ್ಮವಾಗದಿದ್ದರೆ ಆತ್ಮೀಯ ಜನ್ಮವಾಗಿರುತ್ತದೆ. ಆದ್ದರಿಂದ "ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು" (ಯೋಹಾನ 3:5) ಎಂದು ಕ್ರಿಸ್ತನು ಹೇಳಿದ್ದಾನೆ. ನಿಜಕ್ಕೂ ಆತನು ಏನು ಹೇಳುತ್ತಿದ್ದಾನೆ?

1. ಕರ್ತನ ರಾಜ್ಯದಲ್ಲಿ ಸೇರುವುದಕ್ಕೆ ಒಂದೇ ಒಂದು ಮಾರ್ಗವಿದೆ ಅದರ ಮೂಲಕವೇ ಹೊರತು ಮತ್ತೊಂದು ಮಾರ್ಗವಿಲ್ಲ ಎಂದು ಕರ್ತನು ಇಲ್ಲಿ ಹೇಳುತ್ತಿದ್ದಾನೆ.
2. ಒಬ್ಬನು (ಮನುಷ್ಯನು) ಎಂಬ ಮಾತು ಪುರುಷರಿಗೆ ಸ್ತ್ರೀಯರಿಗೆ ಅನ್ವಯಿಸುತ್ತದೆ. ಆದ್ದರಿಂದ ಅಲ್ಪಜ್ಞಾನವುಳ್ಳವರು ಈ ಮಾರ್ಗದಲ್ಲಿ ಬರಬೇಕು. ಚಿಕ್ಕ ಮಕ್ಕಳಿಗೆ ಇದು ಅನ್ವಯಿಸುವುದಿಲ್ಲ.
3. ಹುಟ್ಟುವುದು ಹೊಸ ಜನ್ಮ ಆತ್ಮೀಯ ಹುಟ್ಟು ಆಗಿರುವುದರಿಂದ ಅದರಲ್ಲಿ ಎರಡು ಪ್ರಮುಖ ಅಂಶಗಳಿವೆ ನೀರು, ಆತ್ಮ ಇದು ಆತ್ಮದ ಮೂಲಕ ಹುಟ್ಟಿ ನೀರಿನ ಮೂಲಕ ಜನಿಸಬೇಕು.
4. ನೀರು: ಇಲ್ಲಿರುವ ನೀರು ದೀಕ್ಷಾಸ್ನಾನವನ್ನು ಸೂಚಿಸುತ್ತದೆ ಇದು ಸಾಮಾನ್ಯವಾದ ನೀರು ಎಂದು ನೀನು ಗಮನಿಸಬೇಕು ಕ್ರೈಸ್ತವ ಮಾರ್ಗದಲ್ಲಿ ನೀರನ್ನು ಉಪಯೋಗಿಸುವ ಕ್ರಿಯೆ ಒಂದೇ ಇದೆ ಅದು ದೀಕ್ಷಾಸ್ನಾನ ಆದ್ದರಿಂದ ಒಬ್ಬನು ನೀರಿನಲ್ಲಿ ದೀಕ್ಷಾಸ್ನಾನ ಹೊಂದುವುದರ ಮೂಲಕ ಹೂಣಲ್ಪಟ್ಟಾಗ (ರೋಮಾ 6:3,4) ಅದರೊಳಗಿಂದ ತಿರಿಗಿ ಎಬ್ಬಿಸಲ್ಪಡುವುದು ಅಥವಾ ಹೊಸದಾಗಿ ಹುಟ್ಟುವುದು.
5. ಆತ್ಮ: ಹೊಸದಾಗಿ ಹುಟ್ಟುವುದರಲ್ಲಿ ಒಬ್ಬನು ಆತ್ಮನ ಮೂಲಕ ಹುಟ್ಟಿದವನಾಗಿರುವನು. ಅದು ಹೇಗೆ? ದೇವರ ವಾಕ್ಯದಿಂದ, ವಾಕ್ಯವು ಆತ್ಮನ ಪ್ರೇರಣೆಯಿಂದ ಕೊಡಲ್ಪಟ್ಟಿದೆ. ಅದು ಒಳ್ಳೆ ಹೃದಯದಲ್ಲಿ ಬಿತ್ತಲ್ಪಟ್ಟಾಗ ಅದು ಹುಟ್ಟಿ ವಿಧೇಯತೆಯ ಫಲಕೊಡುತ್ತದೆ. ನಂಬಿಗಸ್ತನು ತನ್ನ ಜೀವಿತದಲ್ಲಿ ದೇವರಿಗೆ ಅರ್ಪಿಸುವುದಕ್ಕೆ ನಿಶ್ಚಯಿಸಿಕೊಂಡಿರುತ್ತಾನೆ. ಐಹಿಕವಾದ ಇಚ್ಛೆಗಳಿಂದಲೂ, ಪಾಪದಿಂದಲೂ, ಹೊರ ಹೋಗುವನು. ಯೇಸುವಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡು ಒಬ್ಬ ಹೊಸ ಮನುಷ್ಯನಂತೆ ಪಾಪದಿಂದ ತೊಳೆಯಲ್ಪಟ್ಟು ದೇವರ ಕುಟುಂಬದಲ್ಲಿ ಹುಟ್ಟಿದವನಾಗಿರುವನು. ಪೇತ್ರನು ಹೀಗೆ ಹೇಳುತ್ತಾನೆ "ನೀವು ಸತ್ಯೋಪದೇಶಕ್ಕೆ ವಿಧೇಯರಾಗಿದ್ದು ನಿಮ್ಮ ಆತ್ಮಗಳನ್ನು ಶುದ್ಧ ಮಾಡಿಕೊಂಡದ್ದರಿಂದ ನಿಷ್ಕಪಟವಾದ ಸಹೋದರ ಸ್ನೇಹವುಳ್ಳವರಾಗಿರತಕ್ಕದ್ದು.

ಹೀಗಿರಲಾಗಿ ಒಬ್ಬರನ್ನೊಬ್ಬರು ಹೃದಯ ಪೂರ್ವಕವಾಗಿಯೂ ಯಥಾರ್ಥವಾಗಿಯೂ ಪ್ರೀತಿಸಿರಿ. ನೀವು ಪುನರ್ಜನ್ಮ ಹೊಂದಿದವರಾಗಿದ್ದೀರಲ್ಲಾ; ಆ ಜನ್ಮವು ನಾಶವಾಗುವ ಬೀಜದಿಂದ ಉಂಟಾದದ್ದಲ್ಲ. ನಾಶವಾಗದ ಬೀಜದಿಂದಲೇ ಉಂಟಾದದ್ದು. ಅದು ದೇವರ ಸದಾಜೀವವುಳ್ಳ ವಾಕ್ಯದ ಮೂಲಕವಾಗಿ ಉಂಟಾಯಿತು" (1ಪೇತ್ರ 1:22–23). ಅದ್ದರಿಂದ ಹುಟ್ಟುವಂತೆ ಮಾಡಲು ಆತ್ಮ ದೇವರ ವಾಕ್ಯದ ಮೂಲಕ ಕಾರ್ಯಸಾಧಿಸುವದು. ವಿಧೇಯತೆಯ ಮೂಲಕ ಒಬ್ಬನು ದೀಕ್ಷಾಸ್ನಾನ ಹೊಂದುವನು. ಹಾಗೆ ಆತನು ನೀರಿನಿಂದಲೂ ಆತ್ಮನಿಂದಲೂ ಹೊಸದಾಗಿ ಹುಟ್ಟುವನು ಇದು ಸೂಕ್ಷ್ಮವಾದದ್ದು.

6. ರಾಜ್ಯ: ಇದು ದೇವರ ರಾಜ್ಯ. ಆತನ ಸಭೆ (ಮತ್ತಾಯ 16:18–19) ಅದರೊಳಗೆ ಸೇರುವುದಕ್ಕೆ ಒಂದೇ ಒಂದು ಮಾರ್ಗವಿದೆ ಅದು ನೀರಿನಿಂದಲೂ, ಆತ್ಮನಿಂದಲೂ ಹುಟ್ಟುವುದರ ಮೂಲಕವೇ ಎಂದು ಯೇಸು ಹೇಳಿದ್ದಾನೆ. ಭೌತಿಕ ಜನ್ಮಕ್ಕೆ ಮತ್ತು ಆತ್ಮೀಯ ಜನ್ಮಕ್ಕೆ ಇರುವ ವ್ಯತ್ಯಾಸವನ್ನು ತೋರಿಸುವುದಕ್ಕೆ ಯೇಸು ಗಾಳಿಯನ್ನು ಉದಾಹರಣೆಯನ್ನಾಗಿ ಕೊಟ್ಟನು. ಒಬ್ಬನು ಗಾಳಿಯನ್ನು ನೋಡದೆ ಹೋದರೂ ಅದರ ಸಪ್ಪಳವನ್ನು ಗುರುತಿಸಬಹುದು. ಅದೇ ರೀತಿ ಆತ್ಮನು ಸಹ ಅದರ ಕೆಲಸವನ್ನು ನಾವು ನೋಡದಿದ್ದರೂ ಪ್ರತಿಫಲಗಳು ಬಹಳ ವಿಪುಲವಾಗಿ ಕಾಣಿಸುತ್ತವೆ. ಆತ್ಮ ವಾಕ್ಯದ ಮೂಲಕ ಕೆಲಸ ಮಾಡುತ್ತದೆ. ಅದರ ಬೋಧನೆಗೆ ವಿಧೇಯತೆ ತೋರಿಸುವುದರ ಮೂಲಕ ಒಬ್ಬನು ರಕ್ಷಣೆ ಹೊಂದುವನು. ಕರ್ತನ ರಾಜ್ಯದಲ್ಲಿ ಪ್ರವೇಶಿಸ್ತುವನು ಮತ್ತು ಆತ್ಮ ಫಲಗಳನ್ನು ಫಲಿಸುವನು (ಗಲಾತ್ಯ 5:22–23).

ರಕ್ಷಣೆ ಹೊಂದುವುದಕ್ಕಾಗಿ, ದೇವರ ರಾಜ್ಯವೆಂಬ ಸಭೆಯಲ್ಲಿ ಪ್ರವೇಶಿಸುವುದಕ್ಕಾಗಲಿ ಕರ್ತನು ಎರಡು ಮಾರ್ಗಗಳನ್ನು ಇಟ್ಟಿಲ್ಲ. ರಕ್ಷಣೆ ಹೊಂದುವುದಕ್ಕೆ ಮಾಡಬೇಕಾದ ವಿಧಿಗಳನ್ನು ಕುರಿತು ಹೊಸ ಒಡಂಬಡಿಕೆಯಲ್ಲಿರುವ ಬೋಧನೆ ಎಲ್ಲವೂ ಮಾರ್ಕ 16:16, ಅ.ಕೃ.2:38 ಮತ್ತು ಇತರ ವಚನಗಳಲ್ಲಿ ಐಕ್ಯತೆಯುಳ್ಳದ್ದಾಗಿದೆ. ಒಬ್ಬನು ಸತ್ಯವನ್ನು ಕೇಳಿದಾಗ (ರೋಮಾ10:17). ಅದನ್ನು ನಂಬಿದಾಗ (ರೋಮಾ10:10) ತನ್ನ ಪಾಪಗಳ ವಿಷಯದಲ್ಲಿ ಮಾನಸಾಂತರ ಪಟ್ಟು ದೇವರ ತಿರುಗಿ ಕೊಂಡಾಗ (ಅ.ಕೃ.17:30) ಕ್ರಿಸ್ತನನ್ನು ಒಪ್ಪಿಕೊಂಡಾಗ (ರೋಮಾ10:10) ದೀಕ್ಷಾಸ್ನಾನ ಹೊಂದಿದಾಗ (ಅ.ಕೃ.2:38,22:16) ಅವನು ಈ ಎಲ್ಲಾ ಕ್ರಿಯೆಗಳಿಂದ ಹೊಸದಾಗಿ ಹುಟ್ಟಿದವನಾಗಿ ಕರ್ತನ ಸಭೆಯಲ್ಲಿ ಪ್ರವೇಶಿಸುವನು (1ಕೊರಿಂಥ 12:13, ಅ.ಕೃ.2:47. ದೇವರ ವಾಕ್ಯದಿಂದ ನೀನು ತಿರುಗಿ ಹೊಸದಾಗಿ ಹುಟ್ಟಿರುವಿಯೊ? ಇಲ್ಲವಾ? ಗಮನಿಸು.

## 21. ಹೊಸ ಒಡಂಬಡಿಕೆಯ ದೀಕ್ಷಾಸ್ನಾನ
## (New Testment Baptism)

ದೀಕ್ಷಾಸ್ನಾನ ಬೈಬಲ್‌ನಲ್ಲಿರುವ ಅಂಶವಾಗಿದೆ. ಬೈಬಲ್‌ನಲ್ಲಿ ದೀಕ್ಷಾಸ್ನಾನವನ್ನು ಕುರಿತು ಇಲ್ಲದಿದ್ದರೆ ನಮಗೆ ತಿಳಿಯುತ್ತಿರಲಿಲ್ಲ. ಆದ್ದರಿಂದ ದೇವರೇ ಅದಕ್ಕೆ ಕರ್ತೃವೆಂದು ಭಾವಿಸಬಹುದು. ಅದನ್ನು ತನ್ನ ವಾಕ್ಯದ ಮೂಲಕ ನಮಗೆ ಪ್ರಕಟಿಸಿಲು ಉದ್ದೇಶಿಸಿದ್ದನು. ಅದ್ದರಿಂದ ಅದರ ಸತ್ಯವನ್ನು ಗ್ರಹಿಸುವದಕ್ಕೆ ಮನಸ್ಸು ಮಾಡಬೇಕು.

1. ಒಂದೇ ದೀಕ್ಷಾಸ್ನಾನ ಇದೆ: ಎಫೆಸ 4:5ರಲ್ಲಿ ಪೌಲನು ಹೀಗೆ ಬರೆಯುತ್ತಾನೆ "ಒಬ್ಬನೇ ಕರ್ತನು, ಭರವಸವು ಒಂದೇ, ಸ್ನಾನದೀಕ್ಷೆ ಒಂದೇ" ಬೇರೆ ಕೆಲವು ದೀಕ್ಷಾಸ್ನಾನಗಳಿದ್ದವು, ಆದರೆ ಕ್ರಿ.ಶ.61ನೇ ಅಥವಾ 65ರ ಸಮಯಕ್ಕೆ ಒಂದೇ ದೀಕ್ಷಾಸ್ನಾನ ಉಂಟೆಂದು ಆತ್ಮ ಪ್ರೇರಣೆಯುಳ್ಳ ಲೇಖಕಕನು ಬರೆದನು. ಮನುಷ್ಯನು ನಂತರದಲ್ಲಿ ಕೆಲವನ್ನು ಸೇರಿಸಿದರೂ ಇಂತಹವುಗಳು ದೇವರ ವಾಕ್ಯಗಳಿಗೆ ವಿರುದ್ಧವಾಗಿದೆ.

2. ದೀಕ್ಷಾಸ್ನಾನದ ಅರ್ಥ: ಕೊಲೊಸ್ಸೆ 2:12ರಲ್ಲಿ ಈ ರೀತಿ ಬರೆಯಲ್ಪಟ್ಟಿದೆ "ಇದಲ್ಲದೆ ಆತನನ್ನು ಸತ್ತವರೊಳಗಿಂದ ಎಬ್ಬಿಸಿದ ದೇವರ ಸಾಮರ್ಥ್ಯದಲ್ಲಿ ನಂಬಿಕೆಯಿಡುವುದರ ಮೂಲಕ ಅದರಲ್ಲಿ ಆತನ ಕೂಡ ಎದ್ದು ಬಂದಿರಿ". ಮತ್ತು "ಕ್ರಿಸ್ತ ಯೇಸುವಿನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರೂ ಆತನ ಮರಣದಲ್ಲಿ ಪಾಲುಗಾರರಾಗುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೊ? ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದದ್ದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು" (ರೋಮಾ6:3–4). ಆದ್ದರಿಂದ ದೀಕ್ಷಾಸ್ನಾನ ಒಂದು ಸಮಾಧಿ. ಇದು ಪ್ರೋಕ್ಷಿಸುವಂತ, ಅಭಿಷೇಕಿಸುವಂತದನ್ನು ತಕ್ಷಣ ತೆಗೆದು ಹಾಕುತ್ತದೆ.

3. ದೀಕ್ಷಾಸ್ನಾನ ಒಂದು ನೀರಿನಲ್ಲಿನ ಸಮಾದಿ: ದೀಕ್ಷಾಸ್ನಾನ ಒಂದು ಸಮಾದಿ ಮಾತ್ರವಲ್ಲದೆ ಅದು ನೀರಿನಲ್ಲಿನ ಸಮಾದಿ ಎಂದು ಅ.ಕೃ.8ನೇ ಅಧ್ಯಾಯವು ಬೋಧಿಸುತ್ತದೆ. ಐತಿಯೋಪ್ಯದೇಶದ ಕಂಚುಕಿಯು ಮಾನಸಾಂತರ ಹೊಂದಿದಾಗ "ಅವರು ದಾರಿಯಲ್ಲಿ ಹೋಗುತ್ತಿರುವಾಗ ನೀರಿನ ಬಳಿಗೆ ಬಂದರು. ಕಂಚುಕಿಯು–ಅಗೋ, ನೀರು; ನನಗೆ ದೀಕ್ಷಾಸ್ನಾನವಾಗುದಕ್ಕೆ ಅಡ್ಡಿ ಏನು ಎಂದು ಹೇಳಿ ರಥವನ್ನು ನಿಲ್ಲಿಸು ಎಂದು ಅಪ್ಪಣೆಕೊಟ್ಟನು; ಫಿಲಿಪ್ಪನು ಕಂಚುಕಿಯು ಇಬ್ಬರೂ ನೀರಿನೊಳಗೆ ಇಳಿದರು. ಫಿಲಿಪ್ಪನು ಅವನಿಗೆ ದೀಕ್ಷಾಸ್ನಾನ

ಮಾಡಿಸಿದನು. ಅವರು ನೀರನ್ನು ಬಿಟ್ಟು ಮೇಲಕ್ಕೆ ಬಂದಾಗ ಕರ್ತನ ಆತ್ಮ ಫಿಲಿಪ್ಪನನ್ನು ಎತ್ತಿಕೊಂಡು ಹೋಗಲಾಗಿ ಕಂಚುಕಿಯು ಸಂತೋಷವುಳ್ಳವನಾಗಿ ತನ್ನ ದಾರಿಯನ್ನು ಹಿಡಿದು ಅವನನ್ನು ಕಾಣಲೇ ಇಲ್ಲ" (ಅ.ಕೃ.8:36–39).

4. **ದೀಕ್ಷಾಸ್ನಾನ ಪಾಪಗಳ ಪರಿಹಾರಕ್ಕಾಗಿ ಕೊಡಲ್ಪಟ್ಟಿದೆ:** "ಪೇತ್ರನು ಅವರಿಗೆ– ನಿಮ್ಮ ಪಾಪಗಳು ಪರಿಹಾರವಾಗುವುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ, ಆಗ ನೀವು ಪವಿತ್ರಾತ್ಮನ ದಾನವನ್ನು ಹೊಂದುವಿರಿ; ಆ ವಾಗ್ದಾನವು ನಿಮಗೂ ನಿಮ್ಮ ಮಕ್ಕಳಿಗೂ ದೂರವಾಗಿರುವವವರೆಲ್ಲರಿಗೂ ಅಂತೂ ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ ಮಾಡೋಣವಾಗಿದೆ ಎಂದು ಹೇಳಿದನು" (ಅ.ಕೃ.2:38). ಅ,ಕೃ.22:16 ಅನ್ನು ಸಹ ಓದು.

5. **ದೀಕ್ಷಾಸ್ನಾನ ರಕ್ಷಿಸುತ್ತದೆ:** "ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆಹೊಂದುವನು ನಂಬದೇ ಹೋಗುವವನು ದಂಡನೆಗೆ ಗುರಿಯಾಗುವನು" (ಮಾರ್ಕ 16:16) ಎಂದು ಕ್ರಿಸ್ತನು ಹೇಳಿದ್ದಾನೆ "ಅ ನೀರಿಗೆ ಅನುರೂಪವಾದ ದೀಕ್ಷಾಸ್ನಾನವು ಯೇಸು ಕ್ರಿಸ್ತನ ಪುನರುತ್ಥಾನದ ಮೂಲಕ ಈಗ ನಮ್ಮನ್ನು ರಕ್ಷಿಸುತ್ತದೆ; ಅದು ಮೈಕೊಳೆಯನ್ನು ಹೋಗಲಾಡಿಸುವಂಥದ್ದಲ್ಲ; ಒಳ್ಳೇ ಮನಸ್ಸಾಕ್ಷಿ ಬೇಕೆಂದು ದೇವರಿಗೆ ವಿಜ್ಞಾಪಿಸಿಕೊಳ್ಳುವಂಥದ್ದೇ" (1ಪೇತ್ರ3:21). ದೀಕ್ಷಾಸ್ನಾನ ಯಾವಾಗ ರಕ್ಷಿಸುತ್ತದೆ? ಆತನು ಆಜ್ಞಾಪಿಸಿದ ರೀತಿಯಲ್ಲಿ ಯಾರು ಕರ್ತನಲ್ಲಿ ನಂಬಿಕೆ ಇಟ್ಟು, ಮಾನಸಾಂತರ ಹೊಂದಿ ದೇವರ ಕಡೆಗೆ ತಿರುಗಿಕೊಂಡು, ಆತನನ್ನು ಒಪ್ಪಿಕೊಂಡು ದೀಕ್ಷಾಸ್ನಾನ ಮಾಡಿಸಿಕೊಳ್ಳುವರೋ ಆಗ ಈ ದೀಕ್ಷಾಸ್ನಾನ ರಕ್ಷಿಸುತ್ತದೆ. (ಅ.ಕೃ.10:48) ಆಗ ಮಾತ್ರವೇ ಸಾದ್ಯ. ಅದಕ್ಕಿಂತಲೂ ಮೊದಲು ಅಲ್ಲ.

6. ದೀಕ್ಷಾಸ್ನಾನ ಒಬ್ಬನನ್ನು ಕ್ರಿಸ್ತನಲ್ಲಿಗೆ ತರುತ್ತದೆ. ಗಲಾತ್ಯ 3:26–27, ರೋಮಾ 6:3–4ನ್ನು ಸಹ ಓದು.

7. **ದೀಕ್ಷಾಸ್ನಾನ ಒಬ್ಬನನ್ನು ಸಭೆಯೊಳಗೆ ತರುತ್ತದೆ:** "ಯೆಹೂದ್ಯರಾಗಲಿ ಗ್ರೀಕರಾಗಲಿ ದಾಸರಾಗಲಿ ಸ್ವತಂತ್ರರಾಗಲಿ ನಾವೆಲ್ಲರೂ ಒಂದೇ ದೇಹವಾಗುವುದಕ್ಕಾಗಿ ಒಂದೇ ಆತ್ಮನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡೆವು; ಒಂದೇ ಆತ್ಮ ನಮ್ಮೆಲ್ಲರಿಗೂ ಪಾನವಾಗಿ ಕೊಡಲ್ಪಟ್ಟಿತು" (1ಕೊರಿಂಥ12:13) ಆ ಶರೀರವೇ ಸಭೆ. "ಸಭೆಯೆಂಬ ದೇಹಕ್ಕೆ ಆತನೇ ಶಿರಸ್ಸು ಆತನು ಆದಿಸಂಭೂತನು". "ಆತನು ಸಮಸ್ತವನ್ನೂ ಕ್ರಿಸ್ತನ ಪಾದ ಕೆಳಗೆ ಹಾಕಿದನು. ಇದಲ್ಲದೆ ಆತನನ್ನು ಎಲ್ಲಾದರ ಮೇಲೆ ಇರಿಸಿ

ಸಭೆಗೆ ಶಿರಸ್ಸಾಗಿ ನೇಮಿಸಿದನು. ಸಭೆಯು ಆತನ ದೇಹವಾಗಿದೆ; ಎಲ್ಲವನ್ನೂ ಎಲ್ಲಾ ಸಂಬಂಧದಲ್ಲಿ ವ್ಯಾಪಿಸುವಾತನಿಂದ ಅದು ಪರಿಪೂರ್ಣತೆಯುಳ್ಳದ್ದಾಗಿದೆ" (ಎಫೆಸ 1:22–23).

8. ದೀಕ್ಷಾಸ್ನಾನ ಹೊಸ ಜನ್ಮವನ್ನು ಕಲ್ಪಿಸುತ್ತದೆ: "ಅದಕ್ಕೆ ಯೇಸು–ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ, ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು" (ಯೋಹಾನ 3:5).

9. ದೀಕ್ಷಾಸ್ನಾನವು ಯೇಸು ಕ್ರಿಸ್ತನ ಮರಣ, ಸಮಾಧಿ, ಪುನರುತ್ಥಾನಕ್ಕೆ ಸಾದೃಶ್ಯವಾಗಿದೆ. ರೋಮಾ 6ನೇಅಧ್ಯಾಯ ಓದು.

ಮೇಲೆ ಹೇಳಿದ ವಾಕ್ಯದ ಪ್ರಕಾರ ರಕ್ಷಣೆ ಹೊಂದುವುದಕ್ಕೆ ದೀಕ್ಷಾಸ್ನಾನ ಬಹಳ ಮುಖ್ಯ. ಎಂದು ವಿವರವಾಗಿ ಹೇಳಲ್ಪಟ್ಟಿದೆ. ನಂತರ ಅನೇಕ ವಚನಗಳನ್ನು ಇನ್ನೂ ಹೇಳಿಕೊಳ್ಳಬಹುದು ಆದರೆ ನೀನು ದೇವರ ಆಜ್ಞೆಯ ಪ್ರಕಾರ ದೀಕ್ಷಾಸ್ನಾನ ಮಾಡಿಸಿಕೊಂಡಿರುವೆಯಾ? ಇಲ್ಲವಾದರೆ ನೀನು ತಪ್ಪದೇ ಮಾಡಿಸಿಕೊಳ್ಳಬೇಕು.

## 22. ದೀಕ್ಷಾಸ್ನಾನ ಪ್ರಯೋಜನಗಳು
## (The purpose of Baptism)

ದೀಕ್ಷಾಸ್ನಾನವು ಬೈಬಲ್ ಅಂಶವಾಗಿದೆ. ವಾಕ್ಯದಲ್ಲಿ ಅದು ವಿವರವಾಗಿ ವಿವರಿಸಿದರು ಅನೇಕರು ಅದನ್ನು ಅಪಾರ್ಥ ಮಾಡಿಕೊಂಡಿದ್ದಾರೆ ಅವರು ಅದರ ಪ್ರಯೋಜನವನ್ನು ತೀಳಿಯದಿರುವುದರಿಂದ ಅದು ಒಂದು ಪ್ರಮುಖ ಸಮಸ್ಯೆಯಾಗಿದೆ. ದೇವರ ವಾಕ್ಯವು ಅದನ್ನು ಕುರಿತು ಏನು ಹೇಳುತ್ತದೆ?

ಮೊಟ್ಟಮೊದಲು ಒಂದೇ ಒಂದು ದೀಕ್ಷಾಸ್ನಾನವಿದೆ ಎಂದು ಗ್ರಹಿಸಬೇಕು (ಎಫೆಸ 4:5) ಯೋಹಾನನ ದೀಕ್ಷಾಸ್ನಾನ, ಶ್ರಮೆಗಳ ದೀಕ್ಷಾಸ್ನಾನ ಮುಂತಾದವುಗಳು ಆದರೆ ಪೌಲನು ಕ್ರಿ.ಶ.64ರಲ್ಲಿ ಈ ಸಂಗತಿಯನ್ನು ಬರೆಯುವಷ್ಟರಲ್ಲಿ ಒಂದೇ ದೀಕ್ಷಾಸ್ನಾನವಿತ್ತು. ಅದು ನಿಜವಾದದೆ. ಯಾವುದನ್ನು ಕುರಿತು ಪೌಲನು ಆಲೋಚಿಸುತ್ತಿದ್ದನೋ ನಾವು ಹೇಗೆ ನಿರ್ಣಯಿಸಬಹುದು? ಅದು ಸುಲಭವೇ ನಾವು ಮಾಡಬೇಕದಾದ್ದು ಅ.ಕೃ. ಪುಸ್ತಕವನ್ನು ಓದಿ ಮಾನಸಾಂತರ ಹೊಂದಿದವರ ಸಂದರ್ಭವನ್ನು ಪರೀಕ್ಷಿಸಬೇಕು. ಹೀಗೆ ಮಾಡಿದಾಗ ದೀಕ್ಷಾಸ್ನಾನ ಒಂದು ಸಮಾದಿಯಂತೆ ಅದು ನೀರಿನ ಸಮಾದಿಯೆಂದು, ಪಾಪಗಳನ್ನು ತೆಗೆಯುತ್ತದೆ ಎಂದು ಪಾಪಗಳ ಪರಿಹಾರಕ್ಕಾಗಿ ಕರ್ತನು ಅದನ್ನು ಆಜ್ಞಾಪಿಸಿದ್ದಾನೆಂದು ನಾವು ಕಂಡುಕೊಳ್ಳಬಹುದು. (ಅ.ಕೃ.8:22–39, 22:16, 2:38, 10:48).

ದೀಕ್ಷಾಸ್ನಾನವನ್ನು ಕುರಿತ ವಚನಗಳು ಬೈಬಲ್‌ನಲ್ಲಿ ಓದಿದಾಗ ಕೆಲವರು ಅದು ಪವಿತ್ರಾತ್ಮನ ದೀಕ್ಷಾಸ್ನಾನವನ್ನು ಕುರಿತು ಎಂದು ಹೇಳಿ ದಾಟಿಹೋಗುವರು. ಆದರೆ ಪವಿತ್ರಾತ್ಮನ ದೀಕ್ಷಾಸ್ನಾನ ಎಂದಿಗೂ ಆಜ್ಞಾಪಿಸಲ್ಪಟ್ಟಿಲ್ಲವೆಂದು ದಯಾಮಾಡಿ ನೆನಪಿನಲ್ಲಿಟ್ಟುಕೋ. ಅದು ಎಂದಿಗೂ ಸಹ ಬೋಧಿಸಲ್ಪಟ್ಟಿಲ್ಲ. ಆದರೆ ನೀರಿನ ದೀಕ್ಷಾಸ್ನಾನವಲ್ಲದೆ ಮತ್ತೆ ಯಾವುದಾದರು ದೀಕ್ಷಾಸ್ನಾನವನ್ನು ಕುರಿತು ಬೈಬಲ್ ಹೇಳುತ್ತಿದ್ದರೆ ಅದು ಯೋಹಾನನ ದೀಕ್ಷಾಸ್ನಾನ ಅಥವಾ ಪವಿತ್ರಾತ್ಮನ ದೀಕ್ಷಾಸ್ನಾನ ಎಂದು ಅದನ್ನು ಕುರಿತು ವಿವರವಾಗಿ ಹೇಳಲಾಗಿದೆ. ಆದರೆ ದೀಕ್ಷಾಸ್ನಾನ ಎಂಬ ಪದವು ಒಂದೇ. ಮಾರ್ಕ16:16ರಲ್ಲಿಯೂ ಅ.ಕೃ.2:38ರಲ್ಲಿ ಇದೆಯಾದರೂ ಅದು ನೀರಿನ ದೀಕ್ಷಾಸ್ನಾನವನ್ನು ಕುರಿತು ಹೇಳಲಾಗಿದೆ ಎಂದು ಗಮನಿಸು. ಎಫೆಸ 4:5ರಲ್ಲಿ ಹೇಳಿದ ಒಂದೇ ದೀಕ್ಷಾಸ್ನಾನಕ್ಕೆ ಇದು ಸಹ ಅನ್ವಯಿಸುತ್ತದೆ.

ನಂತರ ಪ್ರಯೋಜನವಲ್ಲದ ದೀಕ್ಷಾಸ್ನಾನ ಹೊಂದುವದು ಅಸಾಧ್ಯವೆಂದು ಗಮನಿಸು. ಒಬ್ಬನು ರಕ್ಷಣೆಹೊಂದಬಹುದು, ಆಗ ದೀಕ್ಷಾಸ್ನಾನ ಹೊಂದಬಹುದೆಂದು ಅನೇಕರು ಬೋಧಿಸುತ್ತಾರೆ. ಮತ್ತೆ ಒಬ್ಬನು ರಕ್ಷಣೆಹೊಂದಿದ ನಂತರ ಸಭೆಯಲ್ಲಿ ಪ್ರವೇಶಿಸುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಹೇಳುವರು. ಈ ಎರಡು ಸಂದರ್ಭಗಳಲ್ಲಿಯೂ ದೀಕ್ಷಾಸ್ನಾನ ಪ್ರಯೋಜನವಿಲ್ಲದಾಗುತ್ತದೆ. ಯಾವನಾದರೂ

ವಾಕ್ಯಗಳ ಪ್ರಕಾರ ಒಂದು ಮತಶಾಖೆಯೊಳಕ್ಕೆ ದೀಕ್ಷಾಸ್ನಾನ ಹೊಂದುವುದು ಅಸಾಧ್ಯ. ಆದ್ದರಿಂದ ಅನೇಕರು ದೀಕ್ಷಾಸ್ನಾನ ಹೊಂದದಿದ್ದರೂ ಅದನ್ನು ಹೊಂದಿದೆವೆಂದು ಆಲೋಚಿಸುವಲ್ಲಿ ಅವರು ಮೋಸಹೋಗುತ್ತಿದ್ದಾರೆ. ಒಬ್ಬನು ನೀರಿನಲ್ಲಿ ಮುಳಿಗಿಸಲ್ಪಟ್ಟರೂ, ಅವನು ವಾಕ್ಯದ ಪ್ರಕಾರ ದೀಕ್ಷಾಸ್ನಾನ ಹೊಂದಿದನೆಂದು ಅರ್ಥವಲ್ಲ. ವಾಕ್ಯಗಳ ಪ್ರಕಾರ ದೀಕ್ಷಾಸ್ನಾನ ಒಂದೇ. ಅದು ಬೈಬಲ್‌ನಲ್ಲಿರುವ ದೀಕ್ಷಾಸ್ನಾನವಾಗುವಂತೆ ಅದನ್ನು ಸರಿಯಾದ ಪ್ರಯೋಜನಕ್ಕಾಗಿ ಉಪಯೋಗಿಸಬೇಕು. ಅದು ಸರಿಯಾದ ಪ್ರಯೋಜನಕ್ಕೆ ಅಲ್ಲವಾದರೆ ಅದು ಬೈಬಲ್ ಪ್ರಕಾರವಾಗಿರುವ ದೀಕ್ಷಾಸ್ನಾನವಾಗಿರದು. ಆದ್ದರಿಂದ ಮೋಸ ಹೋಗಬೇಡಿರಿ. ಅಂತಹ ಸಂದರ್ಭದಲ್ಲಿ ಒಬ್ಬನು ತಿರಿಗಿ ಮುಳಿಗಿಸಲ್ಪಡಬೇಕು. ಅವನು ರಕ್ಷಣೆಹೊಂದಿದ್ದಕ್ಕೆ ಅಲ್ಲವಾದರೂ ರಕ್ಷಣೆ ಹೊಂದುವುದಕ್ಕೆ ಮುಳಿಗಿಸಲ್ಪಡಬೇಕು, ಆಗ ಮಾತ್ರವೇ ವಾಕ್ಯದಲ್ಲಿರುವ ಒಂದೇ ದೀಕ್ಷಾಸ್ನಾನ ಹೊಂದಿದವನಾಗುವನು.

1. ನಂಬಿಕೆ, ಮಾನಸಾಂತರ ಒಪ್ಪಿಕೊಳ್ಳುವುದು ನಡೆದ ನಂತರ ಅವನು ರಕ್ಷಣೆಹೊಂದುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು "ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು; ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು" (ಮಾರ್ಕ16:16) ಎಂದು ಕ್ರಿಸ್ತನು ಹೇಳಿದ್ದಾನೆ. ದೀಕ್ಷಾಸ್ನಾನದ ನಂತರವೇ ರಕ್ಷಣೆಯನ್ನು ಕ್ರಿಸ್ತನು ಇಟ್ಟಿದ್ದಾನೆ ದೀಕ್ಷಾಸ್ನಾನಕ್ಕಿಂತ ಮೊದಲಲ್ಲ. ನಂಬಿದವನು ತಪ್ಪದೇ ರಕ್ಷಣೆಯನ್ನು ಅನುಭವಿಸುವನು. ಆದರೆ ರಕ್ಷಣೆ ಹೊಂದುವುದಕ್ಕೆ ಒಬ್ಬನು ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು. ಮತ್ತೆ ಪೇತ್ರನು ಈ ರೀತಿ ಹೇಳುತ್ತಾನೆ "ಆ ನೀರಿಗೆ ಅನುರೂಪವಾಗಿರುವಾದ ದೀಕ್ಷಾಸ್ನಾನವು ಯೇಸು ಕ್ರಿಸ್ತನ ಪುನರುತ್ಥಾದ ಮೂಲಕ ಈಗ ನಮ್ಮನು ರಕ್ಷಿಸುತ್ತದೆ; ಅದು ಮೈಕೊಳೆಯನ್ನು ಹೊಗಲಾಡಿಸುವಂಥದಲ್ಲ, ಒಳ್ಳೇ ಮನಸಾಕ್ಷಿ ಬೇಕೆಂದು ದೇವರಿಗೆ ವಿಜ್ಞಾಪಿಸಿಕೊಳ್ಳುವಂಥದೇ" (1ಪೇತ್ರ3:21). ದೀಕ್ಷಾಸ್ನಾನ ರಕ್ಷಿಸುವುದಿಲ್ಲವೆಂದು ಯಾರು ಹೇಳುವರು?
2. ದೀಕ್ಷಾಸ್ನಾನ ಪಾಪಗಳ ಪರಿಹಾರಕ್ಕಾಗಿ ಇದೆ "ಪೇತ್ರನು ಅವರಿಗೆ– ನಿಮ್ಮ ಪಾಪಗಳು ಪರಿಹಾರವಾಗುವುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ" (ಅ.ಕೃ.2:38).
3. ದೀಕ್ಷಾಸ್ನಾನದಲ್ಲಿ ನಮ್ಮ ಪಾಪಗಳು ತೊಳೆಯಲ್ಪಡುತ್ತವೆ. "ಈಗ ನೀನೇಕೆ ಸಾವಕಾಶ ಮಾಡಿತ್ತೀ? ಎದ್ದು ಆತನ ಹೇಸರನ್ನು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನ ಮಾಡಿಸಿಕೊಂಡು ನಿನ್ನ ಪಾಪಗಳನ್ನು ತೊಳೆದುಕೋ ಅಂದನು" (ಅ.ಕೃ.22:16).
4. ದೀಕಾಸ್ನಾನ ಒಬ್ಬನನ್ನು ಕ್ರಿಸ್ತನ ರಕ್ತದಲ್ಲಿ ಸೇರಿಸುತ್ತದೆ ಪೌಲನು ರೋಮಾಪುರದವರಿಗೂ, ಗಲಾತ್ಯದವರಿಗೂ, ಹೀಗೆ ಬರೆಯುತ್ತಾನೆ "ಪಾಪದ

ಪಾಲಿಗೆ ಸತ್ತವರಾದ ನಾವು ಇನ್ನೂ ಅದರಲ್ಲಿಯೇ ಬದುಕುವುದು ಹೇಗೆ? ಕ್ರಿಸ್ತ ಯೇಸುವಿನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರು ಆತನ ಮರಣದಲ್ಲಿ ಪಾಲುಗಾರರಾಗುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ? ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು" (ರೋಮಾ6:3). "ನೀವೆಲ್ಲರೂ ಕ್ರಿಸ್ತ ಯೇಸುವಿನಲ್ಲಿಟ್ಟಿರುವ ನಂಬಿಕೆಯ ಮೂಲಕ ದೇವರ ಪುತ್ರರಾಗಿದ್ದೀರಿ. ಹೇಗೆಂದರೆ ಕ್ರಿಸ್ತನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿದ್ದೀರಿ" (ಗಲಾತ್ಯ3:26–27). ಯಾವನಾದರೂ ದೀಕ್ಷಾಸ್ನಾನ ಹೊಂದುವುದಕ್ಕಿಂತ ಮೊದಲೇ ರಕ್ಷಣೆ ಹೊಂದಿದ್ದೇನೆ ಎಂದು ಹೇಳಿಕೊಳ್ಳುವವನಾಗಿದ್ದರೆ ಅವನು ಕ್ರಿಸ್ತನಿಗೆ ಹೊರಗಡೆ ಇದ್ದು ರಕ್ಷಿಸಲ್ಪಡುವೆನೆಂದು, ಅವನು ಕ್ರಿಸ್ತನು ಇಲ್ಲದವನೆಂದು ಹೇಳಿಕೊಳ್ಳುವವನಂತೆ ಕಂಡುಬರುತ್ತದೆ. ಸುಳ್ಳು ಸಿದ್ಧಾಂತಗಳ ಮೂಲಕ ಒಬ್ಬನ ಕ್ರಿಯೆಗಳು ಈ ರೀತಿಯಾಗಿ ಒಪ್ಪಿಕೊಳ್ಳುವಂತೆ ಮಾಡುತ್ತದೆ.

5. ದೀಕ್ಷಾಸ್ನಾನ ಒಬ್ಬನನ್ನು ಸಭೆಯಲ್ಲಿ ಸೇರಿಸುತ್ತದೆ "ಯೆಹೂದ್ಯರಾಗಲಿ ಗ್ರೀಕರಾಗಲಿ ದಾಸರಾಗಲಿ ಸ್ವತಂತ್ರರಾಗಲಿ ನಾವೆಲ್ಲರು ಒಂದೇ ದೇಹವಾಗುವುದಕ್ಕೆ ಒಂದೇ ಆತ್ಮನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡೆವು; ಒಂದೇ ಆತ್ಮ ನಮ್ಮೆಲ್ಲರಿಗೂ ಪಾನವಾಗಿ ಕೊಡಲ್ಪಟ್ಟಿತು" (1ಕೊರಿಂಥ12:13). ಇಲ್ಲಿ ಹೇಳಲಾದ ಸಭೆ ಶರೀರವಾಗಿದೆ (ಕೊಲೊಸ್ಸೆ 1:18). ಇಲ್ಲಿ ಹೇಳಲಾಗಿರು ದೀಕ್ಷಾಸ್ನಾನ ಪವಿತ್ರಾತ್ಮನ ದೀಕ್ಷಾಸ್ನಾನವಲ್ಲ, ಅದು ನೀರಿನ ದೀಕ್ಷಾಸ್ನಾನ. ಒಬ್ಬನು ಸಭೆಯಲ್ಲಿ ಸೇರುವುದಕ್ಕೆ ಪವಿತ್ರಾತ್ಮನ ದೀಕ್ಷಾಸ್ನಾನ ಎಂದೂ ಕೊಡಲ್ಪಟ್ಟಿಲ್ಲ. ಆದರೆ ಆತ್ಮನು ವಾಕ್ಯದ ಮೂಲಕ ಕೊಟ್ಟು ನಡೆಸುವುದರ ನಿಮಿತ್ತ ಒಬ್ಬನು ಶರೀರದೊಳಕ್ಕೆ ಅಥವಾ ಸಭೆಯಲ್ಲಿಗೆ ದೀಕ್ಷಾಸ್ನಾನ ಹೊಂದುವನು.

6. ದೀಕ್ಷಾಸ್ನಾನದಲ್ಲಿ ಕ್ರಿಸ್ತನ ಮರಣ, ಸಮಾದಿ, ಪುನರುತ್ಥಾನದ ಅನುರೂಪವಿದೆ (ರೋಮಾ6:1–7,1ಕೊರಿಂಥ15:1–4). ಕ್ರಿಸ್ತನು ಶಿಲುಬೆಯ ಮೇಲೆ ಮರಣಿಸಿದಂತೆ, ಪಾಪಿಯು ತನ್ನ ಪಾಪಗಳ ವಿಷಯದಲ್ಲಿ ಮರಣಿಸುವನು. ಕ್ರಿಸ್ತನು ಸಮಾದಿ ಮಾಡಲ್ಪಟ್ಟಂತೆ ಅವನು ನೀರಿನಲ್ಲಿ ಹೂಣಲ್ಪಡುವನು, ಕ್ರಿಸ್ತನು ಸಮಾದಿಯಿಂದ ತಿರುಗಿ ಪುನರುತ್ಥಾನವಾದಂತೆ ಅವನು ಕ್ರಿಸ್ತನಲ್ಲಿ ನೂತನ ಪುರುಷನಾಗಿ ಎಬ್ಬಿಸಲ್ಪಡುವನು (1ಕೊರಿಂಥ 5:17, ರೋಮಾ6:1–12).

7. ದೀಕ್ಷಾಸ್ನಾನವು ಹೊಸ ಜನ್ಮವನ್ನು ಒದಗಿಸುತ್ತದೆ. "ಅದಕ್ಕೆ ಯೇಸು– ನಾನು

ನಿನಗೆ ನಿಜನಿಜವಾಗಿ ಹೇಳುತ್ತೇನೆ, ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು" (ಯೋಹಾನ 3:5). ಇದು ಪವಿತ್ರಾತ್ಮನ ದೀಕ್ಷಾಸ್ನಾನವಲ್ಲ ಇದು ನೀರಿನ ದೀಕ್ಷಾಸ್ನಾನವೆಂದು ನಾವು ಗಮನಿಸಬೇಕು. ಆತ್ಮನು ವಾಕ್ಯದ ಮೂಲಕ ಕೆಲಸಮಾಡುತ್ತಾ ನಮ್ಮನ್ನು ನಡೆಸುತ್ತಾ ಕರ್ತನ ರಾಜ್ಯ ಅಥವಾ ತನ್ನ ಸಭೆಯಲ್ಲಿ ಪ್ರವೇಶಿಸುವುದಕ್ಕೆ ದೀಕ್ಷಾಸ್ನಾನ ಹೊಂದುವುದು ಅವಶ್ಯವೆಂದು ನಮಗೆ ಬೋಧಿಸಲ್ಪಟ್ಟಿದೆ. ಮತ್ತೆ 2ಕೊರಿಂಥ 5:17, 1ಪೇತ್ರ 1:21–22ನ್ನು ಓದು.

ದೀಕ್ಷಾಸ್ನಾನ ಮಾತ್ರ ರಕ್ಷಿಸುವುದಿಲ್ಲ, ಆದರೆ ಅದು ರಕ್ಷಣೆ ಹೊಂದುವುದಕ್ಕೆ ಅವಶ್ಯ. ನೀನು ವಾಕ್ಯದ ಪ್ರಕಾರ ದೀಕ್ಷಾಸ್ನಾನ ಮಾಡಿಸಿಕೊಂಡಿರುವೆಯಾ? ಇಲ್ಲವಾದರೆ ನೀನು ದೀಕ್ಷಸ್ನಾನ ಮಾಡಿಸಿಕೊಳ್ಳಬೇಕೆಂದು ನಿಮಗಾಗಿ ಪ್ರಾರ್ಥಿಸುತ್ತೇವೆ.

# ೨೩. ಶಿಲುಬೆಯ ಮೇಲಿದ್ದ ಕಳ್ಳ
# (The thief on the Cross)

ಬೈಬಲ್‌ನ ಒಟ್ಟು ಭಾಗದಲ್ಲಿ ನಾವು ಚೆನ್ನಾಗಿ ತಿಳಿದ ವ್ಯಕ್ತಿಗಳಲ್ಲಿ ಯೇಸುವಿನ ಜೊತೆ ಶಿಲುಬೆಗೆ ಹಾಕಲ್ಪಟ್ಟ ಕಳ್ಳನು ಸಹ ಒಬ್ಬನು. ನೀವು ಆತ್ಮರಕ್ಷಣಾರ್ಥವಾದ ದೀಕ್ಷಾಸ್ನಾನ ಅವಶ್ಯವೆಂದು ಹೇಳುತ್ತಿದ್ದಿರಿ. ಈ "ಕಳ್ಳನ ಸಂಗತಿ ಏನು?" ಎಂದು ಕೆಲವರು ಕೇಳುವರು. ಕರ್ತನು ಏನು ಹೇಳಿದ್ದಾನೆ? ಎಂದು ಅವರು ಕೇಳುವುದಿಲ್ಲ. ಆದರೆ ಆ ಕಳ್ಳ ದೀಕ್ಷಾಸ್ನಾನ ಮಾಡಿಸಿಕೊಳ್ಳದೆ ರಕ್ಷಣೆ ಹೊಂದಿದನಲ್ಲವೆ? ಎಂದು ಕೇಳುವರು. ಹೊಸ ಒಡಂಬಡಿಕೆಯಲ್ಲಿ ಕಾಣಿಸದ ಒಂದು ಸಿದ್ಧಾಂತ ನಿರೂಪಿಸುವುದಕ್ಕೆ ಜ್ಞಾನವುಳ್ಳವರು ಯುಕ್ತಿಯಿಂದ ನಡೆದುಕೊಳ್ಳುವುದು ವಿಚಾರದ ಸಂಗತಿಯೇ. ಅವರು ವಾದಿಸುವದಕ್ಕೆ ಯಾವ ನೆಪ ದೊರೆಯದೆ, ಸಹಾಯಕ್ಕಾಗಿ ಈ ಕಳ್ಳನ ಬಳಿಗೆ ಬರುವುದು ಆಶ್ಚರ್ಯದ ಸಂಗತಿಯೇ. ಒಬ್ಬನ ಆಚಾರಗಳನ್ನು ನಿರೂಪಿಸುವುದಕ್ಕೆ ಕಳ್ಳನ ಬಳಿಗೆ ಹೋಗುವುದು ಎಷ್ಟು ಆಶ್ಚರ್ಯದಾಯಕ? ದೀಕ್ಷಾಸ್ನಾನವಿಲ್ಲದೆ ಆ ಕಳ್ಳ ರಕ್ಷಣೆ ಹೊಂದಿದನೆಂಬುದನ್ನು ಆಧಾರ ಮಾಡಿಕೊಂಡು ವಾಧಿಸುವವರು ಅನೇಕ ಸಂಗತಿಗಳನ್ನು ಮರೆತು ಹೋಗುತ್ತಾರೆ.

1. ಆ ಕಳ್ಳನು ದೀಕ್ಷಾಸ್ನಾನ ಮಾಡಿಸಿಕೊಂಡನೆಂದು ಅಥವಾ ಮಾಡಿಸಿಕೊಂಡಿಲ್ಲವೆಂದು ಯಾರು ನಿರೂಪಿಸಲಾರರು. ಪರಿಶುದ್ಧ ವಾಕ್ಯದಲ್ಲಿ ಈ ರೀತಿಯಾಗಿ ದಾಖಲಿಸಲ್ಪಟ್ಟಿದೆ "ಆಗ ಯೆರೂಸಲೇಮೂ ಎಲ್ಲಾ ಯೂದಾಯವೂ ಯೊರ್ದನ್ ಹೊಳೆಯ ಸುತ್ತಲಿರುವ ಎಲ್ಲಾ ಸೀಮೆಯೂ ಅವನ ಬಳಿಗೆ ಹೊರಟು ಹೋಗಿ, ಅವರು ತಮ್ಮ ತಮ್ಮ ಪಾಪಗಳನ್ನು ಹೇಳಿಕೊಂಡು ಯೊರ್ದನ್ ಹೊಳೆಯಲ್ಲಿ ಅವನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತಿದ್ದರು" (ಮತ್ತಾಯ 3:5–6). ಆದ್ದರಿಂದ ಈ ಕಳ್ಳನು ಸ್ನಾನಿಕನಾದ ಯೋಹಾನನಿಂದ ಮಾಡಿಸಿಕೊಂಡವರಲ್ಲಿ ಒಬ್ಬನಾಗಿರಬಹುದು. ಆದರೆ ಅವನು ಕಳ್ಳನಲ್ಲವೆ? ಎಂದು ಯಾರಾದರೂ ಕೇಳಬಹುದು, ಹೌದು, ದೀಕ್ಷಾಸ್ನಾನ ಹೊಂದಿದ ನಂತರ ಇವನು ಕಳ್ಳನಾಗಿರಬಹುದು ಅಂತವರನ್ನು ಕುರಿತು ನೀನು ಸಹ ತಪ್ಪದೇ ಕೇಳಿರುವಿ, ನಿಜ ಸಂಗತಿ ಏನೆಂದರೆ ಈ ಕಳ್ಳನು ದೀಕ್ಷಾಸ್ನಾನ ಹೊಂದದೆ ರಕ್ಷಣೆಹೊಂದಿದನು. ಆದ್ದರಿಂದ ನಾವು ಇಂದು ರಕ್ಷಣೆ ಹೊಂದುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಅವಶ್ಯಕತೆ ಇಲ್ಲವೆಂದು ಹೇಳುವದು ಎಷ್ಟು ಆಶ್ಚರ್ಯವಾಗಿದೆ.

2. ಈ ಕಳ್ಳನು ಮೋಶೆಯ ಧರ್ಮಶಾಸ್ತ್ರ ಕಾಲದಲ್ಲಿ ಜೀವಿಸಿದ್ದನು. ಕ್ರಿಸ್ತನು ಸಹ ಆ ಕಾಲದಲ್ಲಿಯೇ ಜೀವಿಸಿದ್ದನು. ಆ ಕಾನೂನಿನ (ಧರ್ಮಶಾಸ್ತ್ರ) ಕೆಳಗೆ ಅನೇಕ ಜನರ ಪಾಪಗಳನ್ನು ಕ್ರಿಸ್ತನು ಕ್ಷಮಿಸಿದನು. ಆ ರೀತಿಮಾಡುವುದಕ್ಕೆ ಆತನಿಗೆ ಅಧಿಕಾರವಿತ್ತು ಆದ್ದರಿಂದ ಆ ಕಳ್ಳನು ರಕ್ಷಣೆ ಹೊಂದಿದನೋ, ಇಲ್ಲವೋ ಎಂದು ಯಾರಬಳಿಯಲ್ಲಿ ವಾದಿಸಲು ಅವಶ್ಯಕತೆ ಇಲ್ಲ. ಪ್ರಸ್ತುತ ಪ್ರಶ್ನೆ ಅದಲ್ಲ. ಪ್ರಶ್ನೆ

ಏನೆಂದರೆ ಆತನು ಯಾವ ಕಾನೂನಿನ (ಧರ್ಮಶಾಸ್ತ್ರ ಅಥವಾ ಹೊಸ ಒಡಂಬಡಿಕೆ) ಪ್ರಕಾರ ಜೀವಿಸಿದನು ಎನ್ನುವುದು.

3. ಕ್ರಿಸ್ತನು ಮರಣಹೊಂದುವುದಕ್ಕೆ ಮುಂಚೆ ಆ ಕಳ್ಳನು ಜೀವಿಸಿದನು. ಕರ್ತನನ್ನು ಅವನು ಬೇಡಿಕೊಂಡಿದ್ದರಿಂದ ಆತನು ಇನ್ನೂ ಲೋಕ ಪಾಪಗಳಿಗಾಗಿ ಮರಣಹೊಂದಿರಲಿಲ್ಲ. ಆದ್ದರಿಂದ ರಕ್ಷಣೆ ಹೊಂದುವುದಕ್ಕೆ ಈ ಕಳ್ಳನನ್ನು ನಾವು ಹೇಗೆ ಮಾದರಿಯಾಗಿ ತೆಗೆದುಕೊಳ್ಳಬಹುದು.?

4. ಕ್ರಿಸ್ತನು ಶಿಲುಬೆಯ ಮೇಲೆ ಮರಣ ಹೊಂದಿದಾಗ ಹೊಸ ಒಡಂಬಡಿಕೆಯನ್ನು ಆತನು ತನ್ನ ರಕ್ತದಿಂದ ಸ್ಥಾಪಿಸಿದನು. "ಮರಣ ಶಾಸನವು ಮರಣವಾದ ಮೇಲೆ ನಡೆಯುವುದೇ ಹೊರತು ಜೀವದಿಂದಿರುವಾಗ ಎಂದಿಗೂ ಸಾಧ್ಯವಿಲ್ಲ" (ಇಬ್ರಿಯ 9:17). ಎಂದು ನಾವು ನೋಡಬಹುದು ಆದ್ದರಿಂದ ಮರಣ ಹೊಂದುವದಕ್ಕಿಂತ ಮೊದಲು ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ ಎಂದು ಹೇಳುವುದಕ್ಕೆ ಆತನಿಗೆ ಅಧಿಕಾರವಿತ್ತು. ಆದರೆ ಆತನು ಮರಣ ಹೊಂದಿದ ನಂತರ ಆತನ ಶಾಸನ (ಕಾನೂನು ಅಥವಾ ಹೊಸ ಒಡಂಬಡಿಕೆ) ಜಾರಿಗೆ ಬಂದಿತು. ಆತನು ಆ ಕಳ್ಳನಿಗೆ ಒಂದು ಮಾತನ್ನು ಹೇಳಿದನು. ಅಪೊಸ್ತಲರಿಗಾದರೆ "ಆ ಮೇಲೆ ಅವರಿಗೆ– ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ. ನಂಬಿ ದೀಕ್ಷಾಸ್ನಾನ ಹೊಂದುವವನು ರಕ್ಷಣೆ ಹೊಂದುವನು; ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು" ಆತನು ಇದನ್ನು ಯಾವಾಗ ಹೇಳಿದನು? ಆತನ ಮರಣಕ್ಕಿಂತ ಮೊದಲ? ಅಥವಾ ನಂತರವಾ? ಮರಣಹೊಂದಿದ ನಂತರವಲ್ಲವೆ ಆದರೆ ಅಪೊಸ್ತಲರು ಏನು ಬೋಧಿಸಿದರು? ಕರ್ತನು ಅವರಿಗೆ ಏನು ಆಜ್ಞಾಪಿಸಿದನೋ ಅದನ್ನೇ ಬೋಧಿಸಿದರು. ರಕ್ಷಣೆಗೆ ಮಾರ್ಗವನ್ನು ಅವರು ಶಿಲುಬೆಯ ಮೇಲಿರುವ ಕಳ್ಳನನ್ನು ಮಾದರಿಯಾಗಿ ತೋರಿಸಲಿಲ್ಲ. ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ಕರ್ತನು ಅವರಿಗೆ ಬೋಧಿಸಿದ್ದನ್ನೇ ಅವರು ಬೋಧಿಸಿದರೆಂದು ನಾವು ನೋಡಬಹುದು ಅದರ ಫಲಿತವಾಗಿ ಜನರು ನಂಬಿದರು, ಮಾನಸಾಂತರ ಹೊಂದಿದರು, ಕ್ರಿಸ್ತನನ್ನು ಒಪ್ಪಿಕೊಂಡು ಅವರ ಪಾಪಗಳ ಪರಿಹಾರಕ್ಕಾಗಿ ದೀಕ್ಷಾಸ್ನಾನ ಮಾಡಿಸಿಕೊಂಡರು.

5. ಕ್ರಿಸ್ತನ ಶಾಸನ ಬದಲಾವಣೆಯಾಗಲಾರದು, ನಿರರ್ಥಕವಾಗುವುದಿಲ್ಲ. ಕರ್ತನು ಅದರಲ್ಲಿ ಏನು ಅಡಗಿಸಿಟ್ಟಿದ್ದಾನೋ ಅದು ನಿರಂತರವು ಇರುತ್ತದೆ. ಹೇಗೆಂದರೆ ಆತನ ರಕ್ತದಿಂದ ಅದು ಸ್ಥಾಪಿತವಾಗಿದೆ (ಪ್ರಕಟನೆ 22:18–19, ಗಲಾತ್ಯ1:6–9).

6. ಕ್ರಿಸ್ತನ ಶಾಸನವು ಸುಲಭವಾದದ್ದು, ಸರಳವಾದದ್ದು ಅದನ್ನು ಅರ್ಥಮಾಡಿಕೊಳ್ಳುವವನು ಅರ್ಥಮಾಡಿಕೊಳ್ಳುವನು. ಅದನ್ನು

ಅಪಾರ್ಥಮಾಡಿಕೊಳ್ಳುವವನು ಅಪಾರ್ಥಮಾಡಿಕೊಳ್ಳುವನು. ಆದರೆ ಸರಿಯಾಗಿ ಅರ್ಥಮಾಡಿಕೊಳ್ಳಲು ಯಾರ ಸಹಾಯವಾದರು ಅವಶ್ಯಕ.

7. ಮರಣ ಹತ್ತಿರವಿರುವವರ ಸಹಾಯಾರ್ಥವಾಗಿ ಶಿಲುಬೆಯ ಮೇಲಿರುವ ಕಳ್ಳನನ್ನು ಮಾದಿರಿ ಮಾಡಿಕೊಳ್ಳಲಾಗದು. ನೀನು, ನಾನು ಕ್ರಿಸ್ತನ ಶಾಸನದ ಪ್ರಕಾರ ತೀರ್ಪುಹೊಂದುವೆವು. ಆದರೆ ಆ ಕಳ್ಳನಾದರೂ ಯಾವ ಶಾಸನದ ಕೆಳಗೆ ಜೀವಿಸಿ ಮರಣ ಹೊಂದಿದನೋ ಅದರ ಪ್ರಕಾರವೇ ತೀರ್ಪುಹೊಂದುವನು. ದೀಕ್ಷಾಸ್ನಾನ ಹೊಂದದೆ ಇಂತಹ ರೀತಿಯಲ್ಲಿ ರಕ್ಷಣೆಹೊಂದುವನೆಂದು ಮನುಷ್ಯರು ಅನೇಕ ನೆಪಗಳನ್ನು ಹೇಳುವರು. ಆದರೆ ನಿರೂಪಿಸುವುದಕ್ಕೆ ಬೈಬಲ್‌ನಲ್ಲಿ ಒಂದು ಮಾದರಿಯೂ ಸಹ ಇಲ್ಲವೇ ಇಲ್ಲ. ನಮಗೆ ತಿಳಿದಿರುವುದೆಲ್ಲಾ ಕರ್ತನು ಹೇಳಿದ್ದಾನೋ, ಇಂದಿಗೂ ಏನು ಹೇಳುತ್ತಿದ್ದಾನೋ ಅದು ಮಾತ್ರವೇ? "ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆಹೊಂದುವನು. ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು" (ಮಾರ್ಕ 16:16). ನಾನು ಬೈಬಲ್‌ನ್ನು ಅನೇಕ ಸಾರಿ ಓದಿದ್ದೇನೆ. ಆದರೆ ಅದಕ್ಕೆ ಬದಲಾಗಿರುವ ಮತ್ತೊಂದು ವಾಕ್ಯವನ್ನು ನಾನು ಕಂಡುಕೊಂಡಿಲ್ಲ. ರಕ್ಷಣೆ ಹೊಂದುವುದಕ್ಕೆ ಮನುಷ್ಯರು ಏನು ಮಾಡಬೇಕೆಂದು ಕರ್ತನು ಬೋಧಿಸುತ್ತಿದ್ದಾನೋ ಅದನ್ನು ಮಾಡಿದರೆ ಎಲ್ಲಾ ಮನುಷ್ಯರು ಆತನು ಕೊಟ್ಟಿರುವ ನಿಯಮಗಳ ಮೇಲೆ ರಕ್ಷಣೆ ಹೊಂದುವರು.

ದೀಕ್ಷಾಸ್ನಾನ ಮಾತ್ರವೇ ಆಗಲಿ ಮತ್ತೆ ಯಾವುದಾಗಲಿ ರಕ್ಷಿಸುತ್ತದೆ ಎಂದು ನಾವು ಹೇಳಲಿಲ್ಲವೆಂದು ಗಮನಿಸು. ಆದರೆ ರಕ್ಷಣೆ ಹೊಂದುವುದಕ್ಕೆ ಏನು ಮಾಡಬೇಕೆಂದು ಕರ್ತನು ಅಪ್ಪಣೆ ಕೊಟ್ಟಿದ್ದಾನೊ ಅದನ್ನು ಮಾತ್ರವೇ ಪ್ರಕಟಿಸುತ್ತಿದ್ದೆವೆ. ಅದರಲ್ಲಿ ದೀಕ್ಷಾಸ್ನಾನ ಒಂದು. ನಂಬಿಕೆ, ಮಾನಸಾಂತರ, ಎಷ್ಟು ಅವಶ್ಯಕತೆಯೊ ದೀಕ್ಷಾಸ್ನಾನವೂ ಅಷ್ಟೇ ಅವಶ್ಯಕವಾಗಿದೆ! ಅಷ್ಟೆ.

# 24. ಚಿಕ್ಕ ಮಕ್ಕಳ ದೀಕ್ಷಾಸ್ನಾನ
# (Infant Baptism)

ಇಂದಿನ ಮತಾಚಾರದಲ್ಲಿ ಚಿಕ್ಕ ಮಕ್ಕಳ ದೀಕ್ಷಾಸ್ನಾನ ಬಹಳವಾಗಿ ವ್ಯಾಪಿಸಿದೆ ಆದರೆ ಅದನ್ನು ಕುರಿತು ಬೈಬಲ್ ಎಲ್ಲಿಯೂ ಬೋಧಿಸಿಲ್ಲ. ವಾಕ್ಯವು ಸಂಪೂರ್ಣವಾಗಿ ಬರೆಯಲ್ಪಟ್ಟ ಅನೇಕ ವರ್ಷಗಳ ನಂತರ ಇದು ಆರಂಭಿಸಲ್ಪಟ್ಟಿತ್ತು. ಅರಿಜನ್ ಎಂಬುವವನು ಸಭೆಯ ಚರಿತ್ರೆಯಲ್ಲಿ ಮೊದಲ ಚಿಕ್ಕ ಮಕ್ಕಳ ದೀಕ್ಷಾಸ್ನಾನವನ್ನು ಬರೆದನು. 6ನೇ ಶತಮಾನದಲ್ಲಿ ಕ್ಯಾಥೋಲಿಕ್ ಸಭೆಯು ಸ್ಥಾಪಿಸಿದ ನಂತರ ಈ ಪದ್ಧತಿಯನ್ನು ಅವರು ಪ್ರಾರಂಭಿಸಿದರು. ಅನೇಕ ವರ್ಷಗಳ ನಂತರ ದೀಕ್ಷಾಸ್ನಾನಕ್ಕೆ ಬದಲಾಗಿ 'ಪ್ರೋಕ್ಷಿಸುವುದನ್ನು' ಪ್ರಾರಂಭಿಸಿದರು. ಪ್ರೋಕ್ಷಿಸುವುದನ್ನು ಅಂಗೀಕರಿಸಿದವರು ಅದನ್ನು ಆಚರಿಸುತ್ತಿದ್ದರು. ಅವರು ರೋಮನ್ ಕ್ಯಾಥೋಲಿಕ್ ಎಂದು ಕರೆಯಲ್ಪಟ್ಟರು. ಅದನ್ನು ತಿರಸ್ಕರಿಸಿದವರು ಇವತ್ತಿಗೂ ಮುಳಿಗಿಸುವುದನ್ನು ಮಾಡುತ್ತಿದ್ದಾರೆ ಅವರನ್ನು ಗ್ರೀಕ್ ಅರ್ಥಡೆಕ್ಸ್ ಕ್ಯಾಥೊಲಿಕ್ ಸಭೆಯವರೆಂದು ಕರೆಯುವರು.

ಎಲ್ಲಿ ಮನುಷ್ಯರು ಆದಿಯಿಂದಲೂ ಪಾಪದಿಂದಲೇ ಹುಟ್ಟಿದವೆಂದು ತಿಳಿದು ಚಿಕ್ಕ ಮಕ್ಕಳೆಲ್ಲರೂ ಆದಾಮನು ಮಾಡಿದ ಆದಿ ಪಾಪದಲ್ಲಿ ಹುಟ್ಟುವರೆಂದು ಕೆಲವರ ಉದ್ದೇಶ. ಮನುಷ್ಯರೆಲ್ಲರೂ ಪಾಪದ ಫಲವನ್ನು ಅನುಭವಿಸುವರು ಎನ್ನುವ ಮಾತು ನಿಜವೆ. ಆದರೆ ಒಬ್ಬನು ಮತ್ತೊಬ್ಬನ ಪಾಪಕ್ಕೆ ಎಂದಿಗೂ ದಾಸನಾಗುವುದಿಲ್ಲ. "ಪಾಪ ಮಾಡುವ ಪ್ರತಿಯೊಬ್ಬನು ಅಧರ್ಮ ಮಾಡುವವನಾಗಿದ್ದಾನೆ ಪಾಪವು ಅಧರ್ಮವೇ" (1ಯೋಹಾನ 3:4) ಎಂದು ನಮಗೆ ಹೇಳುತ್ತದೆ. ಹೊಸದಾಗಿ ಹುಟ್ಟಿದ ಮಗುವು ಇದನ್ನು ಹೇಗೆ ಮಾಡುತ್ತದೆ? ಅವನಿಗೆ ಕಾನೂನು (ನಿಯಮಗಳು) ತಿಳಿಯುವುದಿಲ್ಲ. ದೇವರ ಪ್ರವಾದಿಯು ಮೊದಲೇ ಇದನ್ನು ಹೀಗೆ ಹೇಳಿದ್ದಾನೆ "ಪಾಪ ಮಾಡುವವನೇ ಸಾಯುವನು; ಮಗನು ತಂದೆಯ ದೋಷ ಫಲವನ್ನು ಅನುಭವಿಸನು, ತಂದೆಯು ಮಗನ ದೋಷ ಫಲವನ್ನು ಅನುಭವಿಸನು; ಶಿಷ್ಟನ ಶಿಷ್ಟತನದ ಫಲವು ಶಿಷ್ಟನದೇ, ದುಷ್ಟನ ದುಷ್ಟತನದ ಫಲವು ದುಷ್ಟನದೇ" (ಯೆಹೆಜ್ಕೇಲ 18:20).

ಯೇಸು ಹೀಗಿ ಬೋಧಿಸಿದ್ದಾನೆ "ಆತನು ಚಿಕ್ಕ ಮಗುವನ್ನು ಹತ್ತರಕ್ಕೆ ಕರೆದು ನಡುವೆ ನಿಲ್ಲಿಸಿ ಅವರಿಗೆ– ನೀವು ತಿರುಗಿಕೊಂಡು ಚಿಕ್ಕ ಮಕ್ಕಳಂತೆ ಆಗದೆ ಹೋದರೆ ನೀವು ಪರಲೋಕರಾಜ್ಯದಲ್ಲಿ ಸೇರುವುದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ" (ಮತ್ತಾಯ 18:3). "ಆದರೆ ಯೇಸು ಮಕ್ಕಳನ್ನು ಬಿಡಿರಿ; ನನ್ನ ಹತ್ತರ ಬರುವದಕ್ಕೆ ಅವುಗಳಿಗೆ ಅಡ್ಡಿ ಮಾಡಬೇಡಿರಿ; ಪರಲೋಕ ರಾಜ್ಯವು ಇಂಥವರದೇ ಎಂದು ಹೇಳಿ ಅವುಗಳ ಮೇಲೆ ಕೈ ಯಿಟ್ಟು, ಅಲ್ಲಿಂದ ಹೊರಟು ಹೋದನು" (ಮತ್ತಾಯ19:14). ಆದ್ದರಿಂದ ಚಿಕ್ಕ ಮಕ್ಕಳು ಪವಿತ್ರರು, ಪಾಪವಿಲ್ಲದವರು ಆದ್ದರಿಂದ ಪಾಪದ

ಭಾರವಿಲ್ಲದವರು ಎಂದು ಕರ್ತನು ಚಿಕ್ಕ ಮಕ್ಕಳನ್ನು ಕುರಿತು ಹೇಳಿದ್ದಾನೆ. ನಿಜಕ್ಕೂ ಅವರು ಪಾಪದಿಂದಲೂ, ಅನೀತಿಯಿಂದಲೂ ತುಂಬಿರುವವರಾದರೆ ನೀವು ತಿರುಗಿಕೊಂಡು ಚಿಕ್ಕ ಮಕ್ಕಳಂತಾಗದೆ ಹೋದರೆ ನೀವು ಪರಲೋಕ ರಾಜ್ಯದಲ್ಲಿ ಸೇರುವದೇ ಇಲ್ಲ ಎಂದು ಆತನು ಬೋಧಿಸುತ್ತಿರುತ್ತಿರಲ್ಲಿಲ್ಲ. ಮತ್ತೆ ಅವರು ಪಾಪದಿಂದ ಇರುವವರಾದರೆ ಇಂತವರದೇ ಪರಲೋಕ ರಾಜ್ಯವೆಂದು ಆತನು ಬೋದಿಸುತ್ತಿರಲಿಲ್ಲ.

ಚಿಕ್ಕ ಮಕ್ಕಳು ಪಾಪವಿಲ್ಲದವರಾಗಿ ಈ ಲೋಕದಲ್ಲಿ ಜನ್ಮಿಸುವರು. ಪಾಪದಿಂದ ತುಂಬಿರುವ ಈ ಲೋಕದಲ್ಲಿ ಅವರು ಜನ್ಮಿಸಬಹುದು ಆದರೆ ಜನಿಸಿದಾಗಲೇ ಪಾಪವಿಲ್ಲದವರಾಗಿ ಜನ್ಮಿಸುವವರು. ಒಳ್ಳೆದರ ಕೆಟ್ಟದರ ಅರಿವು ಬರುವ ವಯಸ್ಸು ಬರುವವರೆಗೆ ಒಬ್ಬನು ದೇವರ ದೃಷ್ಟಿಯಲ್ಲಿ ಪವಿತ್ರನು, ಪಾಪವಿಲ್ಲದವನಾಗಿ ಇರುವನು. ವೀಕ್ಷಣೆ ಜ್ಞಾನ ಬಂದಾಗ ಅವನು ತನ್ನ ಕ್ರಿಯೆಗಳಿಗೆ ಬಾಧ್ಯನಾಗುವನು. ಆಗ ಮಾತ್ರವೇ ಅವನು ಕರ್ತನಿಗೆ ಒಳಗಾಗುವನು.

ದೇವರ ವಾಕ್ಯದಲ್ಲಿ ವಿವರಿಸಲ್ಪಟ್ಟಂತೆ ರಕ್ಷಣೆ ಮಾರ್ಗವು ವೀಕ್ಷಣೆ ಜ್ಞಾನವುಳ್ಳವರಿಗೆ ಉದ್ದೇಶಿಸಿದ್ದಾಗಿದೆ. ಚಿಕ್ಕ ಮಕ್ಕಳಿಗೆ ರಕ್ಷಣೆ ಮಾರ್ಗವನ್ನು ಕರ್ತನು ಕೊಡಲಿಲ್ಲ. ಅವರು ಪಾಪವಿಲ್ಲದವರಾಗಿರುವುದರಿಂದ ದೇವರ ಎದುರಿನಲ್ಲಿ ಕ್ಷೇಮವಾಗಿದ್ದಾರೆ. ಅವರು ಸತ್ತು ಹೋದರೆ ಕರ್ತನ ಬಳಿ ಇರುವುದಕ್ಕೆ ಹೋಗುವರು. ದಾವೀದನು ತನ್ನ ಮಗನು ಸತ್ತು ಹೋದಾಗ ನಾನು ಅವನ ಬಳಿಗೆ ಹೋಗಬೇಕಾಗಲಿ ಅವನು ನನ್ನ ಬಳಿಗೆ ಹಿಂದಿರುಗಿ ಬರಲಾರನು (2ಸಮುವೇಲ 12:23).

ತಂದೆ ತಾಯಿಗಳು ಎಷ್ಟು ಒಳ್ಳೆಯವರಾದರೂ ಮತ್ತೊಬ್ಬ ವ್ಯಕ್ತಿಯ ಆತ್ಮವನ್ನು ಕುರಿತ ಸಂಗತಿ ಅವರು ಹೇಗೆ ನಿಶ್ಚಯಿಸುವರು? ಒಂದು ಮಗು ಗ್ರಹಿಸಿಕೊಳ್ಳದಿರುವ ಸ್ಥಿತಿಯಲ್ಲಿ ಇರುವದರಿಂದ ಬಲವಂತವಾಗಿ ತನಗೆ ಕೊಟ್ಟದರಿಂದ ಒಳ್ಳೆದನ್ನು ಹೇಗೆ ಹೊಂದುವುದು? ಕರ್ತನು ತನ್ನ ಶಾಸನವನ್ನು ಕೇಳಿ ಗ್ರಹಿಸಿಕೊಳ್ಳುವವರಿಗೆ (ಮತ್ತಾಯ 28:19; ರೋಮಾ 10:17) ಹೃದಯದಿಂದ ನಂಬುವವರಿಗೆ (ರೋಮಾ10:10: ಇಬ್ರಿಯ11:6) ತಮ್ಮ ಪಾಪಗಳ ಪರಿಹಾರಕ್ಕಾಗಿ ದೇವರ ಕಡೆಗೆ ತಿರುಗಿಕೊಳ್ಳುವವರಿಗೆ (ಲೂಕ 13:3: ಅ.ಕೃ.17:30) ಕ್ರಿಸ್ತನನ್ನು ತಮ್ಮ ಕರ್ತನೆಂದು ತಮ್ಮ ಬಾಯಿಯಿಂದ ಅರಿಕೆ ಮಾಡುವವರಿಗೆ (ರೋಮಾ10:10; ಮತ್ತಾಯ10:32) ಪಾಪಗಳ ಪರಿಹಾರಕ್ಕಾಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವರಿಗೆ (ಅ.ಕೃ.2:38) ಉದ್ದೇಶಿಸಿ ಆಜ್ಞಾಪಿಸಿದ್ದಾನೆ. ಒಂದು ಚಿಕ್ಕ ಮಗು ಈ ಎಲ್ಲವುಗಳನ್ನು ಮಾಡುತ್ತದಾ? ಮಾಡಲು ಸಾದ್ಯವಿಲ್ಲ ತಾನೆ. ಮಗುವು ಪ್ರಾರ್ಥನೆ ಮಾಡುತ್ತದೆಯೇ? ಕರ್ತನ ಭೋಜನದಲ್ಲಿ ಪಾಲುಗಾರರಾಗುತ್ತಾರೆಯೇ? ಇತರರಿಗೆ ದೇವರನ್ನು ಕುರಿತು ಬೋಧಿಸುವನಾ? ಮಗು ಮಾಡುವುದಿಲ್ಲವೆಂದು ನಿನಗೆ ತಿಳಿಯುತ್ತದೆ. ಆದರೆ ಪ್ರತಿ ಕ್ರೈಸ್ತವನು ಇದೆಲ್ಲವನ್ನು ಮಾಡಬೇಕು. ಆದ್ದರಿಂದ ದೇವರ ಕಾನೂನು ಚಿಕ್ಕ ಮಕ್ಕಳಿಗೆ ಅನ್ವಯಿಸುವುದಿಲ್ಲ. ಆದರೂ ಅದು ದೊಡ್ಡವರಾಗಿ ಬಾಧ್ಯತೆಯುಳ್ಳ ವಯಸ್ಸು ಬಂದವರಿಗೆ ಅನ್ವಯಿಸುತ್ತದೆ.

ನಿಜಕ್ಕೂ ಚಿಕ್ಕಮಕ್ಕಳ ದೀಕ್ಷಾಸ್ನಾನ ಅದು ದೀಕ್ಷಾಸ್ನಾನವಾಗುವುದಿಲ್ಲ. ಅದು ಪ್ರೋಕ್ಷಿಸುವುದರಿಂದಾಲಿ ಅಭೀಷೇಕಿಸುವುದರಿಂದಾಗಲಿ ಮಾಡುತ್ತಾರೆ. ಆದರೆ ಅದು ದೀಕ್ಷಾಸ್ನಾನವಲ್ಲ. ಬೈಬಲ್ ದೀಕ್ಷಾಸ್ನಾನ ಒಂದು ಸಮಾಧಿ ಎಂದು ಬೋಧಿಸುತ್ತದೆ. ಅಪೊಸ್ತಲನಾದ ಪೌಲನು ಹೀಗೆ ಹೇಳುತ್ತಾನೆ "ನೀವು ದೀಕ್ಷಾಸ್ನಾನದಲ್ಲಿ ಕ್ರಿಸ್ತನೊಂದಿಗೆ ಹೂಣಲ್ಪಟ್ಟಿದ್ದರಿಂದಲೇ ಆ ಸುನ್ನತಿಯನ್ನು ಹೊಂದಿದಿರಿ" (ಕೊಲೊಸ್ಸೆ2:12). "ಕ್ರಿಸ್ತಯೇಸುವಿನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರೂ ಆತನ ಮರಣದಲ್ಲಿ ಪಾಲುಗಾರರಾಗುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೊ? ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು, ಆದ್ದದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು" (ರೋಮಾ6:3–4). ಅ.ಕೃ.8ನೇಅಧ್ಯಾಯದಲ್ಲಿ ಕಂಚುಕಿಗೆ ಪಿಲಿಪ್ಪನು ನೀರಿನೊಳಗೆ ಇಳಿದು ದೀಕ್ಷಾಸ್ನಾನ ಕೊಟ್ಟ ಮಾದರಿ ನಮಗೆ ಕಾಣಿಸುತ್ತದೆ. ಏನು ನಡೆಯಿತು? ಪಿಲಿಪ್ಪನು ಅವನಿಗೆ ನೀರಿನಲ್ಲಿ ಮುಳುಗಿಸಿದನು ಅಥವಾ ನೀರಿನಲ್ಲಿ ಹೂಣಿಟ್ಟನು. ದೀಕ್ಷಸ್ನಾನದ ಸರಿಯಾದ ಪ್ರಯೋಜನವನ್ನು ಪಡೆದುಕೊಳ್ಳಬೇಕು. ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಕ್ರಿಸ್ತನು ಬೋಧಿಸಿದನು (ಮಾರ್ಕ 16:16). ದೇವರ ಕಡೆಗೆ ತಿರಿಗಿಕೊಂಡು ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಪೇತ್ರನು ಹೇಳಿದ್ದಾನೆ (ಅ.ಕೃ.2:38). ಅದನ್ನು ತಂದೆ ಮಗನ ಪವಿತ್ರಾತ್ಮನ ಹೆಸರಿನಲ್ಲಿ ಕೊಡಬೇಕೆಂದು ಕ್ರಿಸ್ತನು ಬೋಧಿಸಿದ್ದಾನೆ (ಮತ್ತಾಯ 28:19). ದೀಕ್ಷಾಸ್ನಾನ ಒಂದೇ (ಎಫೆಸ 4:5) ಒಬ್ಬನು ಕ್ರಿಸ್ತನಲ್ಲಿ ಸಭೆಗೆ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಳ್ಳುವನು ಅಥವಾ ನೀರಿನಲ್ಲಿ ಹೂಣಲ್ಪಡುವನು. (ಗಲಾತ್ಯ 3:26,27; 1ಕೊರಿಂಥ 12:13).

ಚಿಕ್ಕ ಮಕ್ಕಳು ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಅವಶ್ಯಕತೆ ಇಲ್ಲ. ಆದರೆ ಅವರ ತಂದೆ ತಾಯಿಗಳು ಕರ್ತನಿಗೆ ವಿಧೇಯರಾಗುವದು ಅತ್ಯವಶ್ಯಕ. ನೀನು ವಾಕ್ಯದ ಪ್ರಕಾರ ದೀಕ್ಷಾಸ್ನಾನ ಮಾಡಿಸಿಕೊಂಡಿರುವೆಯಾ?

## ೨೫. ಒಬ್ಬನು ಮತ್ತೊಂದು ಸಾರಿ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕಾ?
## (Should one be Baptised again?)

ಒಬ್ಬನು ದೀಕ್ಷಾಸಾನ ಮಾಡಿಸಿಕೊಳ್ಳಬೇಕೆಂದು ಬೈಬಲ್ ಖಂಡಿತವಾಗಿ ತಪ್ಪದೇ ಬೋಧಿಸುತ್ತದೆ. ಇದಕ್ಕೆ ಅನೇಕ ಕಾರಣಗಳಿವೆ. ದೀಕ್ಷಾಸ್ನಾನ ರಕ್ಷಿಸುತ್ತದೆ (1ಪೇತ್ರ 3:21). ಅದು ಪಾಪಗಳ ಪರಿಹಾರಕ್ಕಾಗಿ (ಅ.ಕೃ.2:38). ಅದು ಒಬ್ಬನನ್ನು ಕ್ರಿಸ್ತನಲ್ಲಿಗೆ, ಸಭೆಗೆ ಸೇರಿಸುತ್ತದೆ (ರೋಮಾ 6:3–4, 1ಕೊರಿಂಥ 12:13). ಆದರೂ ದೀಕ್ಷಾಸ್ನಾನ ಒಂದೇ ಎಂದು ವಾಕ್ಯವು ಹೇಳುತ್ತದೆ (ಎಫೆಸ 4:5). ಪ್ರಶ್ನೆ ಏನೆಂದರೆ ಒಬ್ಬನು ದೀಕ್ಷಾಸ್ನಾನ ಹೊಂದಿದ ನಂತರ ಅವನು ಮತ್ತೊಂದು ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕಾ?

ಒಬ್ಬನು ವಾಕ್ಯದ ಪ್ರಕಾರ ದೀಕ್ಷಾಸ್ನಾನ ಹೊಂದಿದರೆ ಯಾವ ಸಂದರ್ಭದಲ್ಲಿಯೂ ಅವನು ತಿರುಗಿ ದೀಕ್ಷಾಸ್ನಾನ ಹೊಂದುವದು ಅಸಾಧ್ಯ. ವಾಕ್ಯದ ಪ್ರಕಾರ ಒಂದೇ ಸಾರಿ ಮಾತ್ರವೇ ದೀಕ್ಷಾಸ್ನಾನ ಮಾಡಿಸಿಕೊಂಡರೆ ಸಾಕು. ಆದ್ದರಿಂದ ಒಬ್ಬನು ವಾಕ್ಯದ ಪ್ರಕಾರ ದೀಕ್ಷಾಸ್ನಾನ ಹೊಂದಿದಾನಾ? ಎಂಬ ಪ್ರಶ್ನೆ ಉಂಟಾಗುತ್ತದೆ. ನಿಜಕ್ಕೂ ಲಕ್ಷಾಂತರ ಪ್ರಜೆಗಳು ದೀಕ್ಷಾಸ್ನಾನ ಹೊಂದದೆ ಹೋದರು ಹೊಂದಿದ್ದೇವೆಂದು ಹೇಳಿಕೊಳ್ಳುತ್ತಾರೆ. ಇಲ್ಲಿ ಕೆಲವು ಅಂತಹ ಸಂದರ್ಭಗಳನ್ನು ನೋಡೋಣ.

1. ಚಿಕ್ಕ ಮಕ್ಕಳಿಗಾಗುವ ಪ್ರೋಕ್ಷಿಸುವ ದೀಕ್ಷಾಸ್ನಾನ ಹೊಂದಿದವರು ಎಂದಿಗೂ ದೀಕ್ಷಾಸ್ನಾನ ಮಾಡಿಸಿಕೊಂಡಿಲ್ಲ, ಪ್ರೋಕ್ಷಿಸುವುದು ದೀಕ್ಷಾಸ್ನಾನವಲ್ಲ. ವಾಕ್ಯಧಾರವಿಲ್ಲದ ಒಂದು ಮಾನವ ಆಚಾರವದು. ದೀಕ್ಷಾಸ್ನಾನ ಒಂದು ಸಮಾಧಿ ಅದು ನೀರಿನಲ್ಲಿನ ಸಮಾಧಿ ಎಂದು ವಾಕ್ಯವು ಬೋಧಿಸುತ್ತದೆ (ಕೊಲೊಸ್ಸೆ 2:21, ರೋಮಾ6:3–4,ಅ.ಕೃ.8:36–39). ನಂತರ ಚಿಕ್ಕ ಮಕ್ಕಳ ದೀಕ್ಷಾಸ್ನಾನ ಬೈಬಲ್‌ನಲ್ಲಿ ಎಲ್ಲಿಯೂ ಬೋಧಿಸಲ್ಪಟ್ಟಿಲ್ಲ. ಅಲ್ಲದೆ ಚಿಕ್ಕ ಮಕ್ಕಳು ಪಾಪಿಗಳು ಅಲ್ಲ. ಎಂದು ಅದು ಬೋಧಿಸುತ್ತದೆ (ಮತ್ತಾಯ 18:1–3). ಕರ್ತನಿಗೆ ಒಳಗಾಗುವುದು ಒಬ್ಬನು ವಾಕ್ಯವನ್ನು ಕೇಳಿ ನಂಬಿಕೆಯಿಟ್ಟು, ಮಾನಸಾಂತರಹೊಂದಿ, ಕರ್ತನನ್ನು ಒಪ್ಪಿಕೊಂಡು, ಪಾಪಗಳ ಪರಿಹಾರಕ್ಕಾಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವ ವಯಸ್ಸುಳ್ಳವನಾಗಿರಬೇಕೆಂದು ಬೋಧಿಸುತ್ತದೆ. (ರೋಮಾ 10:7; ಯೋಹಾನ 3:16;ಅ.ಕೃ.17:30,ಮತ್ತಾಯ10:32;ಅ.ಕೃ.2:38) ಆದ್ದರಿಂದ ಹೇಗೆ ನೋಡಿದರೂ ಒಬ್ಬನು ಚಿಕ್ಕವನಾಗಿರುವಾಗಲೇ ಪ್ರೋಕ್ಷಿಸುವ ದೀಕ್ಷಾಸ್ನಾನ ಹೊಂದಿದರೂ ಅವನು ಇನ್ನೂ ಸರಿಯಾದ ದೀಕ್ಷಾಸ್ನಾನ ಹೊಂದಲಿಲ್ಲವಾದ್ದರಿಂದ ಅವನು ಕರ್ತನು ಆಜ್ಞಾಪಿಸಿದ ಪ್ರಕಾರ ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕು (ಮಾರ್ಕ 16:15–16).
2. ಅದೇ ರೀತಿ ವಯಸ್ಸು ಬಂದ ನಂತರ ಪ್ರೋಕ್ಷಿಸುವ ದೀಕ್ಷಾಸ್ನಾನ ಹೊಂದಿದವರು ಎಂದಿಗೂ ದೀಕ್ಷಾಸ್ನಾನ ಮಾಡಿಸಿಕೊಂಡಿಲ್ಲ. ಪ್ರೋಕ್ಷಿಸುವುದು ಅದು ದೀಕ್ಷಾಸ್ನಾನವಲ್ಲ. ದೀಕ್ಷಾಸ್ನಾನ ಅಂದರೆ ನೀರಿನಲ್ಲಿ ಮುಳುಗುವುದು ಎಂದು ಬೈಬಲ್ ಬೋಧಿಸುತ್ತದೆ.

ಪ್ರೋಕ್ಷಿಸುವುದೇ ದೀಕ್ಷಾಸ್ನಾನವೆಂದು ನಿರೂಪಿಸುವುದಕ್ಕೆ ಯಾವ ಮಾರ್ಗವೂ ಇಲ್ಲ ನೀನು ಒಂದು ನಿಘಂಟಿನಲ್ಲಿ ನೋಡಿದರೂ ಸಹ ದೀಕ್ಷಾಸ್ನಾನವೆಂದರೆ ಪ್ರೋಕ್ಷಿಸುವುದು ಅಲ್ಲವೆಂದು ಗ್ರಹಿಸುತ್ತೀಯ. ಸರ್ವಾಧಿಕಾರ ನನಗೆ ಕೊಡಲ್ಪಟ್ಟಿದೆ ಎಂದು ಯೇಸು ಹೇಳಿದ್ದಾನೆ (ಮತ್ತಾಯ28:18–20). ಪ್ರೋಕ್ಷಿಸುವುದಕ್ಕೆ ಅಭೀಷೇಕಿಸುವುದಕ್ಕೆ ಆತನು ಒಪ್ಪಿಗೆ ನೀಡಿಲ್ಲ. ಅವುಗಳನ್ನು ದೀಕ್ಷಾಸ್ನಾನವೆಂದು ಅಂಗೀಕರಿಸುವವರು ಕರ್ತನನ್ನಲ್ಲದೆ ಮನುಷ್ಯರನ್ನು ಅನುಸರಿಸುತ್ತಾರೆ. ಆದ್ದರಿಂದ ಯಾವನಾದರೂ ಪ್ರೋಕ್ಷಿಸುವುದನ್ನು ಹೊಂದಿದ್ದರೆ ಅವನು ಇನ್ನೂ ದೀಕ್ಷಾಸ್ನಾನ ಮಾಡಿಸಿಕೊಂಡವನಲ್ಲ. ಆದ್ದರಿಂದ ಅವನು ತಿರುಗಿ ಮತ್ತೆ ದೀಕ್ಷಾಸ್ನಾನ ಹೊಂದಿರುವುದರಲ್ಲಿ ದೀಕ್ಷಾಸ್ನಾನ ಹೊಂದಬೇಕೆಂದು ಅಲ್ಲ, ವಾಕ್ಯದ ಪ್ರಕಾರ ದೀಕ್ಷಾಸ್ನಾನ ಹೊಂದಬೇಕು

3. ಒಂದು ಮತಶಾಖೆಯ ಸಭೆಯಲ್ಲಿ ಸೇರುವುದಕ್ಕೆ ಮುಳುಗಿಸುವುದನ್ನು ಹೊಂದಿದವರು ವಾಕ್ಯದ ಪ್ರಕಾರ ದೀಕ್ಷಾಸ್ನಾನ ಹೊಂದಿಲ್ಲ. ಬೈಬಲ್‌ನ ದೀಕ್ಷಾಸ್ನಾನ ನೀರಿನ ಸಮಾಧಿ ಅಷ್ಟೆಯಲ್ಲದೆ ಸರಿಯಾದ ಪ್ರಯೋಜನಕ್ಕಾಗಿ ಜರುಗಿಸಬೇಕು (ಮತ್ತಾಯ28:19–20). ಬೈಬಲ್ ಬೋಧಿಸುವಂತೆ ಯಾವನಾದರೂ ದೀಕ್ಷಾಸ್ನಾನ ಹೊಂದಿದವನಾದರೆ ಅವನು ಮನುಷ್ಯ ಕಲ್ಪಿತ ಸಭೆಯಲ್ಲಿ ಸೇರಿಸಲ್ಪಡುವುದಿಲ್ಲ. ಆದರೆ ಕರ್ತನ ಒಪ್ಪಿಗೆಯ ಮೇರೆಗೆ ದೀಕ್ಷಾಸ್ನಾನ ಹೊಂದಿ ರಕ್ಷಣೆ ಹೊಂದಿದ ಪ್ರತಿಯೊಬ್ಬನನ್ನು ಆತನು ತನ್ನ ಸಭೆಯಲ್ಲಿ ಸೇರಿಸಿಕೊಳ್ಳುವನು. ಒಬ್ಬನು ಮುಳುಗಿಸುವುದರಲ್ಲಿ ದೀಕ್ಷಾಸ್ನಾನ ಹೊಂದಿದರೂ ಇನ್ನೂ ಮತಶಾಖೆಯಲ್ಲಿರುವುದರಿಂದ ಅವನು ದೀಕ್ಷಾಸ್ನಾನವನ್ನು ಸರಿಯಾದ ಪ್ರಯೋಜನಕ್ಕಾಗಿ ಹೊಂದಬೇಕು ಆಗ ಮಾತ್ರವೇ ಅವನು ನಿಜವಾದ ಒಂದೇ ದೀಕ್ಷಾಸ್ನಾನ ಹೊಂದಿದವನಾಗುವನು.

ಆದ್ದರಿಂದ ದೀಕ್ಷಾಸ್ನಾನ ಪ್ರಮುಖ್ಯವಾದದ್ದು ಅದನ್ನು ಸರಿಯಾಗಿ ನಡೆಸಬೇಕು. ಇಲ್ಲವಾದರೆ ಅದು ದೀಕ್ಷಾಸ್ನಾನವಾಗುವುದಿಲ್ಲ. ಅನೇಕರು ವಾಕ್ಯ ಪ್ರಕಾರ ದೀಕ್ಷಾಸ್ನಾನ ಹೊಂದದೆ ಹೋದರೂ ದೀಕ್ಷಾಸ್ನಾನ ಹೊಂದಿದೆವೆಂದು ನನ್ನ ಬಳಿ ಹೇಳಿದರು. ಆದರೆ ಪ್ರೋಕ್ಷಿಸುವುದು ನಿಜವಾದ ದೀಕ್ಷಾಸ್ನಾನವಲ್ಲ ಎಂದು ಅವರು ಗ್ರಹಿಸಿದಾಗ ಅಥವಾ ನಿಜವಾದ ದೀಕ್ಷಾಸ್ನಾನ ಒಂದು ಡಿನಾಮಿನೇಷನ್ (ಮತಶಾಖೆಯಲ್ಲಿ) ಸೇರಿಸುವುದಿಲ್ಲವೆಂದು ಗ್ರಹಿಸಿದಾಗ ಅವರು ವಾಕ್ಯದ ಪ್ರಕಾರ ದೀಕ್ಷಾಸ್ನಾನ ಹೊಂದಬೇಕು. ಆಗ ಮಾತ್ರವೇ ಅವರು ದೀಕ್ಷಾಸ್ನಾನ ಹೊಂದಿದೆವೆಂದು ಹೇಳಿಕೊಳ್ಳಬಹುದು. ಇಂತಹ ಒಂದು ಸಂದರ್ಭವನ್ನು ಅ.ಕೃ.19ನೇ ಅಧ್ಯಾಯದಲ್ಲಿ ನಾವು ನೋಡಬಹುದು.

ನೀನು ವಾಕ್ಯದ ಪ್ರಕಾರ ದೀಕ್ಷಾಸ್ನಾನ ಮಾಡಿಸಿಕೊಂಡಿರುವೆಯಾ? ಇಲ್ಲವಾದರೆ "ಈಗ ನೀನೇಕೆ ಸಾವಕಾಶ ಮಾಡುತ್ತೀ? ಎದ್ದು ಆತನ ಹೆಸರನ್ನು ಹೇಳಿಕೊಳ್ಳುವವನಾಗಿ ದೀಕ್ಷಾಸ್ನಾನ ಮಾಡಿಸಿಕೊಡು ನಿನ್ನ ಪಾಪಗಳನ್ನು ತೊಳೆದುಕೋ ಅಂದನು" (ಅ.ಕೃ. 22:16).

## 26. ನಂಬಿಕೆಯಿಂದ ಉಂಟಾಗುವ ರಕ್ಷಣೆ
## (Salvation By Faith)

ನಂಬಿಕೆಯಿಂದ ರಕ್ಷಣೆ ಉಂಟಾಗುತ್ತದೆ ಎಂದು ಬೈಬಲ್ ವಿಫುಲವಾಗಿ ಬೋಧಿಸುತ್ತದೆ. ಒಬ್ಬನು ನಂಬಿಕೆಯಿಂದ ರಕ್ಷಣೆಹೊಂದುವನು ನಾವು ನಂಬಿಕೆಯಿಂದ ನೀತಿವಂತರಾಗಿ ನಿರ್ಣಯಿಸಲ್ಪಡುತ್ತೇವೆ. "ಧರ್ಮಪ್ರಮಾಣ ಸಂಬಂಧವಾದ ಕರ್ಮಗಳಿಲ್ಲದೆ ನಂಬಿಕೆಯಿಂದಲೇ ಮನುಷ್ಯರು ನೀತಿವಂತರೆಂದು ನಿರ್ಣಯಿಸಲ್ಪಡುವರೆಂಬುದಾಗಿ ನಿಶ್ಚಯಮಾಡಿಕೊಂಡಿದ್ದೇವಲ್ಲಾ" (ರೋಮಾ3:28). ಇಲ್ಲಿಯೇ ಮೋಶೆಯ ಧರ್ಮಶಾಸ್ತ್ರವನ್ನು ಕುರಿತು ಹೇಳಲಾಗಿದೆ. "ಹೀಗಿರಲಾಗಿ ನಾವು ನಂಬಿಕೆಯಿಂದ ನೀತಿವಂತರಾದ ಕಾರಣ ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ದೇವರೊಂದಿಗೆ ಉಂಟಾದ ಸಮಾಧಾನದಲ್ಲಿ ಇರೋಣ" (ರೋಮಾ 5:1). ಇಂತಹ ಅನೇಕ ವಚನಗಳನ್ನು ನಾವು ಹೇಳಬಹುದು. ಆದ್ದರಿಂದ ನಂಬಿಕೆಯಿಂದ ರಕ್ಷಣೆ ದೊರೆಯುತ್ತದೆ ಎಂದು ತಪ್ಪದೆ ಅಂಗೀಕರಿಸಬೇಕು. ನಂಬಿಕೆಯಿಂದ ರಕ್ಷಣೆಯಿದೆ ಎಂದು ನಾವು ಹೇಳದೇ ಹೋದರೂ, ನಂಬಿಕೆಯಿಂದ ಮಾತ್ರವೇ ರಕ್ಷಣೆಯಿದೆ ಎಂದು ಹೇಳುವ ವಚನದಲ್ಲಿ ಮಾತ್ರವೇ ಎಂಬ ಪದವನ್ನು ಸೇರಿಸಿ ಓದುತ್ತಿದ್ದೇವೆ. ಹಾಗೆ ಮಾಡುವುದರಿಂದ ನಂಬಿಕೆಯಿಂದ ಮಾತ್ರ ರಕ್ಷಣೆಯಿದೆ ಎಂದು ತಿಳಿದುಬರುತ್ತದೆ. ಇದು ಸತ್ಯವಲ್ಲ. ನಂಬಿಕೆಯಿಂದ ಮಾತ್ರವೇ ರಕ್ಷಣೆ ಇಲ್ಲ. "ಮನುಷ್ಯನು ಕ್ರಿಯೆಗಳಿಂದ ನೀತಿವಂತನೆಂದು ನಿರ್ಣಯಿಸಲ್ಪಡುತ್ತಾನೇ ಹೊರತು ಬರೀ ನಂಬಿಕೆಯಿಂದಲ್ಲವೆಂದು ನೋಡುತ್ತೀರಿ." (ಯಾಕೋಬ2:24) ಎಂದು ಯಾಕೋಬನು ಹೇಳಿದ್ದಾನೆ.

ಒಬ್ಬನು ನಂಬಿಕೆಯಿಂದ ಮಾತ್ರ ರಕ್ಷಣೆ ಹೊಂದದೆ ಹೋದರೆ ನಂಬಿಕೆಯಿಂದ ರಕ್ಷಣೆಯಿದೆಯೆಂದು ಹೇಳುವಲ್ಲಿ ವಾಕ್ಯದ ಭಾವವೇನು? ನಿಜಕ್ಕೂ ನಂಬಿಕೆಯೆಂದರೆ ಯೇಸು ಕ್ರಿಸ್ತನು ದೇವರ ಮಗನೆಂದು ಮನಃಪೂರ್ವಕವಾಗಿ ಅಂಗೀಕರಿಸುವುದಕ್ಕಿಂತ ಹೆಚ್ಚು ಮತ್ತೇನಿಲ್ಲ. ನಂಬಿಕೆಯಿಂದ ದೇವರ ವಾಕ್ಯದ ಪ್ರಕಾರ ನಡೆದು ಕೊಳ್ಳುವುದು ಕರ್ತನ ಚಿತ್ತವನ್ನು ನೆರವೇರಿಸುವುದು, ಕರ್ತನನ್ನು ಸೇವಿಸುವುದು ಎಂಬಿವುಗಳು ಸೇರಿಕೊಂಡಿವೆ. ಆತನ ಆಜ್ಞೆಗಳನ್ನು ಕೈಗೊಂಡು ಆತನಿಗೆ ವಿಧೇಯರಾಗಿ ಕೆಲಸಮಾಡುವುದರಲ್ಲಿದೆ. ಇದು ನಂಬಿಕೆಯಿಂದ ಯಾವುದನ್ನು ತೆಗೆದು ಹಾಕದು, ದೇವರ ಕೃಪೆಯನ್ನು ತೆಗೆಯದು. ಆದರೆ ಕರ್ತನು ನಮಗೆ ರಕ್ಷಣೆಯನ್ನು ಅನುಗ್ರಹಿಸಿದ್ದಾನೆ. ಅದನ್ನು ನಾವು ನಂಬಿಕೆಯಿಂದಲೂ ವಿಧೇಯತೆಯಿಂದಲೂ ಅಂಗೀಕರಿಸಬೇಕು. ರಕ್ಷಣೆ ಹೊಂದುವುದಕ್ಕೆ ಕರ್ತನು ಆಜ್ಞಾಪಿಸಿದ ಎಲ್ಲವುಗಳನ್ನು ನಾವು ಮಾಡಿದ ನಂತರ ಸಹ ರಕ್ಷಣೆ ದೇವರ ಕೃಪೆಯಿಂದಲೂ ನಂಬಿಕೆಯಿಂದಲೂ ಉಂಟಾಗುತ್ತದೆ.

ಇದು ಹೇಗೆ ಕೆಲಸ ಮಾಡುತ್ತದೆ ಎಂದು ನೋಡೋಣ. ಉದಾಹರಣೆಗೆ,

ಯೋಹಾನ 3:16ನ್ನು ತೆಗೆದುಕೊಳ್ಳೋಣ. ಕ್ರಿಸ್ತನು ಹೀಗೆ ಹೇಳಿದ್ದಾನೆ, "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರು ನಾಶವಾಗದೇ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು". ಈ ವಚನ ಹೇಳುವಾಗಲೇ ಆತನಲ್ಲಿ ನಂಬಿಯಿಡುವ ಪ್ರತಿಯೊಬ್ಬನು ನಿತ್ಯಜೀವ ಹೊಂದುವನೆಂದು ಕರ್ತನು ಹೇಳಿದ್ದಾನಲ್ಲವೇ? ಎಂದು ಕೆಲವರು ಹೇಳುವರು. ಅದು ನಿಜ, ಆದರೆ ನಂಬಿಕೆ ಮಾತ್ರ ಎಂದು ಹೇಳಲಿಲ್ಲ. ಆದರೆ ಯಾವುದನ್ನು ನಂಬಬೇಕು? ಎಂದು ನಾವು ಕೇಳಬೇಕು. ಯೇಸುವಿನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಎಂದು ಕಾಣುತ್ತದೆ. ಆದ್ದರಿಂದ ಈ ಪ್ರಶ್ನೆ ಏನೆಂದರೆ ನೀನು ಯೇಸುವುನಲ್ಲಿ ನಂಬಿಕೆ ಇಟ್ಟಿರುವೆಯಾ? ಹೌದು ಎಂದು ನೀನು ಉತ್ತರ ಕೊಡಬಹುದು, ಆಗ ಆತನು ಹೇಳಿದ ರೀತಿಯಲ್ಲಿ ಮಾಡುವವರೆಗೂ ಆತನಲ್ಲಿ ನಂಬಿಕೆ ಇಟ್ಟಿರುವೆಯಾ? ಹಾಗಾದರೆ ನೀನು ಆತನಿಗೆ ಒಳಗಾಗಿ ಆತನ ಬೋಧನೆಗೆ ಒಳಗಾಗುವಷ್ಟು ನೀನು ಆತನನ್ನು ನಂಬದೇ ಹೋದರೆ ನಿನ್ನ ನಂಬಿಕೆ ಸತ್ತದ್ದಾಗಿರುತ್ತದೆ.

ಯೋಹಾನ 3:36ನ್ನು ಗಮನಿಸು "ಆತನ ಮಗನನ್ನು ನಂಬುವವನಿಗೆ ನಿತ್ಯಜೀವ ಉಂಟು; ಮಗನಿಗೆ ಒಳಗಾಗದವನು ಜೀವವನ್ನು ಕಾಣುವದೇ ಇಲ್ಲ; ದೇವರ ಕೋಪವು ಅವನ ಮೇಲೆ ನೆಲೆಗೊಂಡಿರುವದು". ನಂಬಿಕೆ ಮಾತ್ರ ಇಡುವವನೆಂದು ಹೇಳುತ್ತಿಲ್ಲವೆಂದು ಗಮನಿಸು. ಆದರೆ ವಿದೇಯತೆ ತೋರಿಸದವನಿಗೆ ಏನು ನಡೆಯುತ್ತದೆಯೋ ಹೇಳಲ್ಪಟ್ಟಿದೆ. ಮತ್ತೊಂದು ಮಾತಿನಲ್ಲಿ ನಂಬಿಕೆಯಿಟ್ಟು ವಿಧೇಯತೆ ತೊರಿಸುವವನಿಗೆ ನಿತ್ಯಜೀವ ದೊರೆಯುವುದು, ಆದರೆ ನಂಬದವರು ವಿಧೇಯತೆ ತೋರಿಸದವರು ಜೀವವನ್ನು ಕಾಣುವುದಿಲ್ಲ.

ರೋಮಾಪುರದವರಿಗೆ ಪೌಲನು ಹೀಗೆ ಬರೆಯುತ್ತಿದ್ದಾನೆ "ಅದೇನೆಂದರೆ ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆ ಮಾಡಿಕೊಂಡು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವುದು ಎಂಬದೇ" (ರೋಮಾ 10:9). ಇದರ ನಂತರದ ವಚನದಲ್ಲಿ ನಂಬಿಕೆ, ಒಪ್ಪಿಕೊಳ್ಳುವುದು, ರಕ್ಷಣೆ ಉಂಟಾಗುವದಕ್ಕೆ ಅವಶ್ಯವೆಂದು ಆತನು ಹೇಳಿದ್ದಾನೆ. ಒಬ್ಬನು ಆ ರೀತಿ ನಂಬಿ ಒಪ್ಪಿಕೊಂಡರೆ ಕರ್ತನು ಆಜ್ಞಾಪಿಸಿದ್ದನ್ನು ಅವನು ಮಾಡುವುದಿಲ್ಲವೇ?

ಅ.ಕೃ.8:26–39ರಲ್ಲಿನ ಒಂದು ಮಾದರಿಯನ್ನು ಪರಿಶೀಲನೆ ಮಾಡೋಣ. "ಅಷ್ಟರಲ್ಲಿ ಕರ್ತನ ದೂತನು ಫಿಲಿಪ್ಪನಿಗೆ– ನೀನು ಎದ್ದು ದಕ್ಷಿಣಕಡೆಗೆ ಯೆರೂಸಲೇಮಿನಿಂದ ಗಾಜಕ್ಕೆ ಹೋಗುವ ದಾರಿಯಲ್ಲಿ ಹೋಗು, ಅದು ಅಡವಿ ಎಂದು ಹೇಳಿದನು. ಅವನು ಎದ್ದು ಹೊರಟು ಹೋದನು; ಹೋಗುತ್ತಿರುವಾಗ ಒಬ್ಬ ಮನುಷ್ಯನನ್ನು ಕಂಡನು ಅವನು ಕಂಚುಕಿಯು ಐಥಿಯೋಪ್ಯದವರ ರಾಣಿಯಾದ ಕಂದಾಕೆಯ ಕೈ ಕೆಳಗೆ ದೊಡ್ಡ ಅಧಿಕಾರಿಯು ಆಕೆಯ ಎಲ್ಲಾ ಖಜಾನೆಯ ಮೇಲ್ವಿಚಾರಕನು ಆಗಿದ್ದನು. ಅವನು

ದೇವಾರಾಧನೆ ಗೋಸ್ಕರ ಯೆರೂಸಲೇಮಿಗೆ ಬಂದು ಹಿಂತಿರುಗಿ ಹೋಗುವಾಗ ರಥದಲ್ಲಿ ಕೂತುಕೊಂಡು ಯೆಶಾಯ ಪ್ರವಾದಿಯ ಗ್ರಂಥವನ್ನು ಓದುತ್ತಿದ್ದನು. ದೇವರಾತ್ಮನು ಫಿಲಿಪ್ಪನಿಗೆ– ನೀನು ಆ ರಥದ ಹತ್ತಿರ ಹೋಗಿ ಅದರ ಸಂಗಡಲೇ ನಡೆ ಎಂದು ಹೇಳಿದನು. ಫಿಲಿಪ್ಪನು ಓಡಿ ಹೋಗಿ ಆ ಮನುಷ್ಯನು ಯೆಶಾಯ ಪ್ರವಾದಿಯ ಗ್ರಂಥವನ್ನು ಓದುತ್ತಿರುವುದನ್ನು ಕೇಳಿ– ಎಲೈ, ನೀನು ಓದುವುದು ನಿನಗೆ ತಿಳಿಯುತ್ತದೋ? ಅನ್ನಲು ಅವನು ಯಾರಾದರೂ ನನಗೆ ಅರ್ಥತಿಳಿಸಿಕೊಟ್ಟ ಹೊರತು ಅದು ನನಗೆ ಹೇಗೆ ತಿಳಿದೀತು ಎಂದು ಹೇಳಿ ನೀನು ನನ್ನ ರಥವನ್ನು ಹತ್ತಿ ನನ್ನ ಬಳಿಯಲ್ಲಿ ಕೂತುಕೊ ಎಂಬುದಾಗಿ ಫಿಲಿಪ್ಪನನ್ನು ಕೇಳಿಕೊಂಡನು. ಅವನು ಓದುತ್ತಿದ್ದ ಶಾಸ್ತ್ರವಚನವು ಯಾವದೆಂದರೆ – ವಧ್ಯಸ್ಥಾನಕ್ಕೆ ಒಯ್ಯಲ್ಪಡುವ ಕುರಿಯಂತೆ ಆತನು ಒಯ್ಯಲ್ಪಟ್ಟನು; ಕುರಿಮರಿಯು ಉಣ್ಣೆ ಕತ್ತರಿಸುವವನ ಮುಂದೆ ಮೌನವಾಗಿರುವಂತೆ ಆತನು ಬಾಯಿತೆರೆಯಲೇ ಇಲ್ಲ. ಆತನಿಗುಂಟಾದ ದೀನಾವಸ್ಥೆಯಲ್ಲಿ ನ್ಯಾಯವು ಇಲ್ಲದೆ ಹೋಯಿತು. ಆತನ ಸಕಾಲದವರನ್ನು ಹೇಳತಕ್ಕದ್ದೇನು? ಆತನ ಜೀವವನ್ನು ಭೂಮಿಯ ಮೇಲಿನಿಂದ ತೆಗೆದು ಬಿಟ್ಟರಲ್ಲಾ ಎಂಬುದೆ. ಕಂಚುಕಿಯು ಈ ವಚನವನ್ನು ಕುರಿತು ಪ್ರವಾದಿಯು ಇದನ್ನು ಯಾರ ವಿಷಯದಲ್ಲಿ ಹೇಳಿದ್ದಾನೆ? ತನ್ನ ವಿಷಯದಲ್ಲಿಯೋ? ಮತ್ತೊಬ್ಬನ ವಿಷಯದಲ್ಲಿಯೊ? ದಯಮಾಡಿ ಹೇಳಬೇಕೆಂದು ಫಿಲಿಪ್ಪನನ್ನು ಕೇಳಲು ಫಿಲಿಪ್ಪನು ಉಪದೇಶಿಸುವುದಕ್ಕೆ ತೊಡಗಿ ಅದೇ ವಚನವನ್ನು ಆಧಾರ ಮಾಡಿಕೊಂಡು ಅವನಿಗೆ ಯೇಸುವಿನ ವಿಷಯವಾದ ಸುವಾರ್ತೆಯನ್ನು ತಿಳಿಸಿದನು. ಅವರು ದಾರಿಯಲ್ಲಿ ಹೋಗುತ್ತಿರುವಾಗ ನೀರಿನ ಬಳಿಗೆ ಬಂದರು. ಕಂಚುಕಿಯು– ಅಗೋ, ನೀರು; ನನಗೆ ದೀಕ್ಷಾಸ್ನಾನವಾಗುವುದಕ್ಕೆ ಅಡ್ಡಿ ಏನು ಎಂದು ಹೇಳಿ ರಥವನ್ನು ನಿಲ್ಲಿಸು ಎಂದು ಅಪ್ಪಣೆ ಕೊಟ್ಟನು; ಫಿಲಿಪ್ಪನು ಕಂಚುಕಿಯು ಇಬ್ಬರು ನೀರಿನೊಳಗೆ ಇಳಿದರು. ಫಿಲಿಪ್ಪನು ಅವನಿಗೆ ದೀಕ್ಷಾಸ್ನಾನ ಮಾಡಿಸಿದನು. ಅವರು ನೀರನ್ನು ಬಿಟ್ಟು ಮೇಲಕ್ಕೆ ಬಂದಾಗ ಕರ್ತನ ಆತ್ಮ ಫಿಲಿಪ್ಪನನ್ನು ಎತ್ತಿಕೊಂಡು ಹೋಗಲಾಗಿ ಕಂಚುಕಿಯು ಸಂತೋಷವುಳ್ಳವನಾಗಿ ತನ್ನ ದಾರಿಯನ್ನು ಹಿಡಿದು ಅವನನ್ನು ಕಾಣಲೇ ಇಲ್ಲ" (ಅ.ಕೃ8:26–39). ಮತ್ತು ಕಂಚುಕಿಯು ಕರ್ತನನ್ನು ನಂಬಿ ಒಪ್ಪಿಕೊಂಡು ಆತನಿಗೆ ವಿಧೇಯನಾದನು. ಆದ್ದರಿಂದ ಅವನು ರಕ್ಷಣೆ ಹೊಂದಿದನು.

ಅ.ಕೃ. 16:31ರಲ್ಲಿ "ಕರ್ತನಾದ ಯೇಸುವಿನ ಮೇಲೆ ನಂಬಿಕೆ ಇಡು ಆಗ ನೀನು ರಕ್ಷಣೆಹೊಂದುವಿ ನಿನ್ನ ಮನೆಯವರೂ ರಕ್ಷಣೆ ಹೊಂದುವರು ಎಂದು ಹೇಳಿ ಅವನಿಗೂ ಅವನ ಮನೆಯಲ್ಲಿದ್ದವರಿಗೂ ದೇವರ ವಾಕ್ಯವನ್ನು ತಿಳಿಸಿದರು" ಎಂದು ಸೆರೆ ಮನೆಯ ಅಧಿಕಾರಿಗೆ ಪೌಲನು ಹೇಳಿದನು. ಅನೇಕರು ಇಲ್ಲಿ ತಪ್ಪುತ್ತಿದ್ದಾರೆ ಸೆರೆಮನೆಯ ಅಧಿಪತಿಯಾರು? ಅಪನಂಬಿಗಸ್ತನಾಗಿದ್ದರಿಂದ ಅವನು ಮೊದಲು ನಂಬಬೇಕು. ಅವನು ವಾಕ್ಯವನ್ನು ಕೇಳಿ ನಂಬಿಕೆ ಇಟ್ಟು ಪೌಲ ಸೀಲರ ಗಾಯಗಳನ್ನು ತೊಳೆಯುವುದರ ಮೂಲಕ ಮಾನಸಾಂತರ ತೋರಿಸಿ ತನ್ನ ಮನೆಯವರೊಂದಿಗೆ ಸೇರಿ ದೀಕ್ಷಾಸ್ನಾನ

ಮಾಡಿಸಿಕೊಂಡನು.

ಯೇಸುವಿನ ಪ್ರತ್ಯೇಕವಾದ ಮಹಾ ಆದೇಶವನ್ನು ಮರೆಯಬೇಡ "ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆಹೊಂದುವನು ನಂಬದೇ ಹೋಗುವವನು ದಂಡನೆಗೆ ಗುರಿಯಾಗುವನು" (ಮಾರ್ಕ16:16) ಎಂದು ಕ್ರಿಸ್ತನು ಹೇಳಿದ್ದಾನೆ. "ನೀವು ನಿಮ್ಮ ಪಾಪಗಳ ಪರಿಹಾರಕ್ಕಾಗಿ ದೇವರ ಕಡೆಗೆ ತಿರಿಗಿಕೊಂಡು ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ" ಎಂದು ಪೇತ್ರನು ಹೇಳಿದ್ದಾನೆ (ಅ.ಕೃ.2:38). ಕರ್ತನು ನಂಬಿಕೆಯಿಂದ ಮಾತ್ರವೇ ರಕ್ಷಣೆಹೊಂದುವರೆಂದು ಒಂದು ಸಾರಿ ಹೇಳಿ, ಅವರು ಒಳಗಾಗುವುದಕ್ಕೆ ಇನ್ನೂ ಆಜ್ಞೆಗಳಿವೆ ಎಂದು ಮತ್ತೊಂದು ಸಾರಿ ಹೇಳುವನಾ? ಹಾಗೆ ಎಂದಿಗೂ ಇಲ್ಲ. ನಂಬಿದವನು ಕರ್ತನ ಆಜ್ಞೆಗಳಿಗೆ ಒಳಗಾಗುವುದರ ಮೂಲಕ ಅದನ್ನು ತೋರಿಸುತ್ತಾನೆ. ಚರಿತ್ರೆಯಲ್ಲಿ ನಂಬಿಕೆಯಿಂದ ನಡೆದುಕೊಂಡವರನ್ನು ಕುರಿತು ಇಬ್ರಿಯ 11ನೇ ಅಧ್ಯಾಯದಲ್ಲಿ ಓದು.

ಈ ಅಂಶವನ್ನು ಮುಕ್ತಾಯ ಮಾಡುವುದಕ್ಕಿಂತ ಮೊದಲು ಇರುವ ಪ್ರಶ್ನೆ ಏನೆಂದರೆ ನಿನಗಿರುವ ನಂಬಿಕೆ ಎಷ್ಟು? "ಇದಲ್ಲದೆ ನೀನು ನನ್ನನ್ನು ಸ್ವಾಮಿ ಸ್ವಾಮಿ ಅಂತ ಕರೆದು ನಾನು ಹೇಳುವುದನ್ನು ನಡೆಸದೆ ಇರುವುದು ಏಕೆ?" (ಲೂಕ 6:46). ನಂಬಿಕೆಯಿಂದ ಇಂದ ಮಾತ್ರ ರಕ್ಷಣೆ ಉಂಟಾಗುತ್ತದೆ ಎಂಬ ಸಿದ್ಧಾಂತವನ್ನು ನೀನು ಹಿಡಿದುಕೊಂಡರೆ ಕರ್ತನು ಆ ಪ್ರಶ್ನೆಗೆ ನಿನ್ನನ್ನೇ ಕೇಳಬಹುದು. ಕೆಲವು ವಚನಗಳನ್ನು ಬೇರೆ ಮಾಡಬೇಡ ಅಪಾರ್ಥಮಾಡಿಕೊಳ್ಳಬೇಡ. ವಾಕ್ಯದಪ್ರಕಾರ ಇಲ್ಲದ ಬೋಧನೆಯನ್ನು ಮಾಡಬೇಡ ಕರ್ತನಲ್ಲಿ ನಂಬಿಕೆ ಇಟ್ಟು ಆತನು ಹೇಳಿದವುಗಳನ್ನು ಮಾಡಿದಾಗ ಮಾತ್ರವೇ ನೀನು ನಂಬಿಕೆಯಿಂದ ರಕ್ಷಣೆಹೊಂದುವಿ.

## 27. ಹೊಸ ಒಡಂಬಡಿಕೆಯ ಐಕ್ಯತೆ

## (New Testment Unity)

ಕ್ರೈಸ್ತವ ಲೋಕ ಈ ದಿನದಲ್ಲಿ ವಿಭಜಿಸಲ್ಪಟ್ಟಿದೆ ಅವರು ಕ್ಯಾಥೊಲಿಕ್ಸ್, ಪ್ರೊಟೆಸ್ಟಂಟ್ ಡಿನಾಮಿನೇಷನ್‌ಗಳೆಂದು, ಗುಂಪುಗಳೆಂದು ಶಾಖೆಗಳೆಂದು ವಿಭಜಿಸಲ್ಪಟ್ಟಿದೆ. ಅವರೆಲ್ಲರೂ ಒಬ್ಬನೇ ಕರ್ತನನ್ನು ಸೇವಿಸುತ್ತಿದ್ದಾರೆ ಅವರಲ್ಲಿ ಎಲ್ಲೋ ಸ್ವಲ್ಪ ದೋಷವಿದೆ ಎಂದು ಎಲ್ಲರೂ ಗುರುತಿಸುತ್ತಾರೆ ಆದ್ದರಿಂದ ಅವರಲ್ಲಿ ಐಕ್ಯತೆಯನ್ನು ಹೊಡೆಯುವುದಕ್ಕೆ ಆಯಾ ಮತಶಾಖೆಯ ನಾಯಕರು ಸಾಧಾರಣ ಅಂಶಗಳನ್ನು ಹುಡುಕುತ್ತಿದ್ದಾರೆ. ಈ ಜನರ ಐಕ್ಯತೆಯನ್ನು ಕುರಿತು ಅಭಿವೃದ್ಧಿಯನ್ನು ಹೊಂದುತ್ತಿರುವುದು ಆನಂದಿಸುವ ಸಂಗತಿಯಾದರೂ ಅವರೆಲ್ಲರೂ ತಮ್ಮ ನಂಬಿಕೆ ಪ್ರಮಾಣ ಪುಸ್ತಕಗಳನ್ನು, ಆಶ್ಚರ್ಯ ನಂಬಿಕೆಗಳನ್ನು ಹೆಸರುಗಳನ್ನು ಸಿದ್ಧಾಂತಗಳನ್ನು ಆಚರಣೆಗಳನ್ನು ಪರಿತ್ಯಜಿಸಿ ಬೈಬಲ್ ಬೋಧಿಸುವ ರೀತಿಯಲ್ಲಿ ನಡೆದು ಕೊಳ್ಳುವುದಕ್ಕೆ ಬೈಬಲ್ ಬೋಧಿಸುವ ರೀತಿಯಲ್ಲಿ ನಡೆದುಕೊಳ್ಳುವುದಕ್ಕೆ ಬೈಬಲ್‌ನ ಬಳಿಗೆ ಬರುವ ವರೆಗೆ ಆ ಐಕ್ಯತೆ ಅವರಿಗೆ ಲಭಿಸದು. ಒಂದು ವೇಳೆ ಹಾಗೆ ಮಾಡುವುದಾದರೆ ನಿಜವಾದ ಐಕ್ಯತೆ ಉಂಟಾಗುತ್ತದೆ.

ದೇವರು ವಿಭಜನೆಗಳನ್ನು, ಕಳವಳಗಳನ್ನು ದ್ವೇಷಿಸುತ್ತಾನೆ. ಇದು ವಾಕ್ಯದಲ್ಲಿ ವಿಪುಲವಾಗಿದೆ. ಕೊರಿಂಥದಲ್ಲಿರುವ ಸಭೆಯಲ್ಲಿ ವಿಭಜನೆಗಳು ಏರ್ಪಟ್ಟಾಗ ಪೌಲನು ಅದನ್ನು ತಕ್ಷಣವೇ ಖಂಡಿಸಿದನು. ಆ ವಾಕ್ಯವನ್ನು ಗಮನಿಸು. "ಸಹೋದರರೇ, ನಿಮ್ಮೆಲ್ಲರ ಮಾತು ಒಂದೇ ಆಗಿರಬೇಕು; ನಿಮ್ಮಲ್ಲಿ ಭೇದಗಳಿರಬಾರದು, ನೀವು ಒಂದೇ ಮನಸ್ಸು, ಒಂದೇ ಅಭಿಪ್ರಾಯವು ಉಳ್ಳವರಾಗಿದ್ದು ಹೊಂದಿಕೆಯಿಂದಿರಬೇಕು ಎಂಬುದಾಗಿ ನಾನು ನಮ್ಮ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ನಿಮ್ಮನ್ನು ಬೇಡಿಕೊಳ್ಳುತ್ತೇನೆ. ಯಾಕೆಂದರೆ ನನ್ನ ಸಹೋದರರೇ, ನಿಮ್ಮಲ್ಲಿ ಜಗಳಗಳುಂಟೆಂದು ನಿಮ್ಮ ವಿಷಯವಾಗಿ ಖ್ಲೋಯೆಯ ಮನೆಯವರಿಂದ ನನಗೆ ತಿಳಿದು ಬಂದ್ರ ನಿಮ್ಮೊಳಗೆ ಪ್ರತಿಯೊಬ್ಬನು ನಾನು ಪೌಲನವನು ಇಲ್ಲವೆ ನಾನು ಅಪೊಲ್ಲೋಸನವನು, ಅಥವಾ ನಾನು ಕೇಫನವನು ಇಲ್ಲವೆ ನಾನು ಕ್ರಿಸ್ತನವನು ಎಂದು ಹೇಳಿಕೊಳ್ಳುತ್ತಾನಂತೆ. ಕ್ರಿಸ್ತನು ವಿಭಾಗವಾಗಿದ್ದಾನೊ? ನಿಮಗೋಸ್ಕರ ಶಿಲುಬೆಗೆ ಹಾಕಿಸಿಕೊಂಡವನು ಪೌಲನೊ? ನೀವು ಪೌಲನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಿರೊ? ನಿಮ್ಮಲ್ಲಿ ಕ್ರಿಸ್ಪನಿಗೂ ಗಾಯನಿಗೂ ಹೊರತಾಗಿ ಮತ್ತಾರಿಗೂ ನಾವು ದೀಕ್ಷಾಸ್ನಾನ ಮಾಡಿಸಲಿಲ್ಲವಾದ್ದರಿಂದ ನೀವು ನನ್ನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಿರೆಂದು ಯಾರೂ ಹೇಳಲಾಗದು. ಅದಕ್ಕಾಗಿ ದೇವರಿಗೆ ಸ್ತೋತ್ರ ಮಾಡುತ್ತೇನೆ. ಇದಲ್ಲದೆ ಸ್ತೆಫನನ ಮನೆಯವರಿಗೂ ಸಹ ದೀಕ್ಷಾಸ್ನಾನ ಮಾಡಿಸಿದೆನು ಇವರಿಗಲ್ಲದೆ ಇನ್ನಾರಿಗೂ ನಾನು ದೀಕ್ಷಸ್ನಾನ ಮಾಡಿಸಿದಂತೆ ಕಾಣೆನು. ದೀಕ್ಷಾಸ್ನಾನ ಮಾಡಿಸುವದಕ್ಕಲ್ಲ ಸುವಾರ್ತೆಯನ್ನು ಸಾರುವುದಕ್ಕೆ ಕ್ರಿಸ್ತನು ನನ್ನನ್ನು ಕಳುಹಿಸಿದನು. ಆದರೆ ವಾಕ್ಚಾತುರ್ಯದಿಂದ ಸಾರಬೇಕೆಂದು ಕಳುಹಿಸಲಿಲ್ಲ. ಹಾಗೆ ಸಾರಿದರೆ ಕ್ರಿಸ್ತನ ಶಿಲುಬೆಯು

ನಿರರ್ಥಕವಾಗುವುದು" (1ಕೊರಿಂಥ 1:10–17).

ಮೇಲೆ ಹೇಳಿದರಲ್ಲಿ ಐಕ್ಯತೆಗಾಗಿ ಪೌಲನು ಮಾಡಿದ ವಾದವನ್ನು ಗಮನಿಸು. ವಿಭಜನೆಯನ್ನು ಖಂಡಿಸುತ್ತಾ ವಿಭಜಿಸಲ್ಪಟ್ಟವರಿಗೆ ಮೂರು ಸಾಮಾನ್ಯ ಪ್ರಶ್ನೆಗಳನ್ನು ಕೇಳಿದ ಒಂದನೇಯದು: ಕ್ರಿಸ್ತನು ವಿಭಜಿಸಲ್ಪಟ್ಟಿದ್ದಾನಾ? ಆತನು ವಿಭಜಿಸಲ್ಪಟ್ಟಿಲ್ಲವೆಂದು ಅವರಿಗೆ ತಿಳಿದಿದೆ. 2ನೇಯದು: ಪೌಲನು ನಿಮಗಾಗಿ ಶಿಲುಬೆಗೆ ಹಾಕಲ್ಪಟ್ಟನಾ? ಕರ್ತನೆ ಅವರಿಗಾಗಿ ಶಿಲುಬೆಗೆ ಹಾಕಲ್ಪಟ್ಟನೆಂದು ಅವರಿಗೆ ತಿಳಿದೆದೆ. 3ನೇಯದು: ನೀವು ಪೌಲನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಿರಾ? ಅವರು ಪೌಲನ ಹೆಸರಿನಲ್ಲಿ ಅಲ್ಲ ಯೇಸು ಕ್ರಿಸ್ತನ ಹೆಸರಿನಲ್ಲಿಯೇ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದಾರೆ. ಆದ್ದರಿಂದ ಇದರ ಭಾವವೇನೆಂದರೆ ಅವರೆಲ್ಲರೂ ಕ್ರಿಸ್ತನಲ್ಲಿಯೇ ಐಕ್ಯವಾಗಿರಬೇಕು ಅದು ಎಷ್ಟು ಸುಲಭ?

ಕೊರಿಂಥದಲ್ಲಿರುವ ಸಂದರ್ಭದ ಪ್ರಕಾರ ಆತನು ಕೆಲವರಿಗೆ ಮಾತ್ರ ದೀಕ್ಷಾಸ್ನಾನ ಮಾಡಿಸಿರುವುದಕ್ಕೆ ಪೌಲನು ಸಂತೋಷಿಸಿದನು. ಇಲ್ಲವಾದರೆ ಅವರು ಪೌಲನ ಹೆಸರಿನಲ್ಲಿ ದೀಕ್ಷಾಸ್ನಾನ ಹೊಂದಿದೆವೆಂದು ಹೇಳಿಕೊಳ್ಳುವರು. ಇದನ್ನು ಮನಸ್ಸಿನಲ್ಲಿಟ್ಟುಕೊಂಡು ದೀಕ್ಷಾಸ್ನಾನ ಕೊಡುವುದಕ್ಕೆ ನಾನು ಬರಲಿಲ್ಲ, ಆದರೆ ಸುವಾರ್ತೆ ಪ್ರಕಟಿಸುವುದಕ್ಕೆ ಬಂದಿದ್ದೇನೆ ಎಂದು ಹೇಳಿಕೊಂಡಿದ್ದಾನೆ. ಸಹಜವಾಗಿ ಆತನು ಸುವಾರ್ತೆ ಪ್ರಕಟಿಸಿದನು. ಕೇಳಿದವರಲ್ಲಿ ಕೆಲವರು ಪೌಲನ ಕೈಯಿಂದ, ಮತ್ತೆ ಕೆಲವರು ಇತರರ ಕೈಯಿಂದ ದೀಕ್ಷಾಸ್ನಾನ ಮಾಡಿಸಿಕೊಂಡರು. ಪೌಲನು ಇಲ್ಲಿ ದೀಕ್ಷಾಸ್ನಾನಕ್ಕೆ ವಿರುದ್ಧವಾಗಿ ಬೋಧಿಸುತ್ತಿಲ್ಲ. ಆಗಿದ್ದಲ್ಲಿ ಆತನು ಯಾರಿಗೂ ದೀಕ್ಷಾಸ್ನಾನ ಕೊಡುತ್ತಿರಲಿಲ್ಲಾ. ಆದರೆ ಪ್ರಸ್ತುತ ಸಂದರ್ಭದಲ್ಲಿ ಕೆಲವರಿಗೆ ಆತನು ದೀಕ್ಷಾಸ್ನಾನ ಕೊಟ್ಟಿದ್ದಕ್ಕೆ ಆನಂದಿಸಿದನು.

ರೋಮಾ 16:17–18ರಲ್ಲಿ ಪೌಲನು ಹೀಗೆ ಹೇಳಿದ್ದಾನೆ "ಸಹೋದರರೇ, ನೀವು ಹೊಂದಿದ ಉಪದೇಶಕ್ಕೆ ವಿರುದ್ಧವಾಗಿ ಭೇದಗಳನ್ನು ವಿಘ್ನಗಳನ್ನು ನಿಮ್ಮಲ್ಲಿ ಉಂಟುಮಾಡುವವರನ್ನು ಗುರುತಿಟ್ಟು ಅವರನ್ನು ಬಿಟ್ಟು ತೊಲಗಿ ಹೋಗಿರೆಂದು ನಿಮ್ಮನ್ನು ಬೇಡಿಕೊಳ್ಳುತ್ತೇನೆ. ಅಂಥವರು ನಮ್ಮ ಕರ್ತನಾದ ಕ್ರಿಸ್ತನ ಸೇವೆಯನ್ನು ಮಾಡದೆ ತಮ್ಮ ಹೊಟ್ಟೆಯ ಸೇವೆಯನ್ನೇ ಮಾಡುವವರಾಗಿ ನಯದ ನುಡಿಗಳಿಂದಲೂ ಹೊಗಳಿಕೆಯ ಮಾತುಗಳಿಂದಲೂ ನಿಷ್ಕಪಟಿಗಳ ಹೃದಯಗಳನ್ನು ಮೋಸಗೊಳಿಸುತ್ತಾರೆ". ಭೇದಗಳನ್ನು ಉಂಟುಮಾಡುವವರ ಗುರುತಿಟ್ಟುಕೊಳ್ಳಿರೆಂದು ಅಪೊಸ್ತಲನು ಹೇಳುತ್ತಿದ್ದಾನೆ ಅಂಥವರಿಂದ ದೂರವಾಗಿರು. ಯಾಕಂದರೆ ಅವರು ಕ್ರಿಸ್ತನನ್ನು ಸೇವಿಸದೇ ಇಂಪಾದ ಮಾತುಗಳಿಂದ ನಿಷ್ಕಪಟಿಗಳನ್ನು ಮೋಸಗೋಳಿಸುವರು. ಆದರೆ ಅಂತಹವರನ್ನು ಮೆಚ್ಚಿಕೊಂಡು ಆನಂದಪಡಿಸು, ಸಹಿಸಿಕೊಳ್ಳಿ ಎಂದು ಆತನು ಹೇಳುತ್ತಿಲ್ಲ. ಆದ್ದರಿಂದ ದೇವರ ಮಕ್ಕಳೆಂದು ಹೇಳಿಕೊಳ್ಳುವವರೆಲ್ಲರೂ ದೇವರ ಮಕ್ಕಳಲ್ಲವೆಂದು, ಬೈಬಲ್ ಅನ್ನು ಬೋಧಿಸುತ್ತಿಲ್ಲವೆಂದು ನಾವು ಗ್ರಹಿಸುವುದು ಎಷ್ಟು ಒಳ್ಳೆದು.

ಕ್ರಿಸ್ತನು ಐಕ್ಯತೆಗಾಗಿ ಪ್ರಾರ್ಥಿಸಿದನು. ಐಕ್ಯತೆ ಅಂದರೆ ಏಕತ್ವ, ಪರಿಪೂರ್ಣತೆ, ಪವಿತ್ರತೆ, ಒಂದೇ ಮನಸ್ಸು, ಒಂದೇ ಆಲೋಚನೆ, ಒಂದೇ ಉದ್ದೇಶ, ಒಂದೇ ಭಾವಗಳು. ಆತನು ಹೀಗೆ ಪ್ರಾರ್ಥಿಸಿದನು– "ಆದರೆ ಇವರಿಗೋಸ್ಕರ ಮಾತ್ರವಲ್ಲದೆ ಇವರ ವಾಕ್ಯದಿಂದ ನನ್ನನ್ನು ನಂಬುವವರಿಗೋಸ್ಕರ ಸಹ ಕೇಳಿಕೊಳ್ಳುತ್ತೇನೆ. ನೀನು ನನ್ನನ್ನು ಲೋಕಕ್ಕೆ ಕಳುಹಿಸಿಕೊಟ್ಟಿದ್ದೀ ಎಂದು ಲೋಕವು ನಂಬುವುದಕ್ಕಾಗಿ ಅವರೆಲ್ಲರೂ ಒಂದಾಗಿರಬೇಕೆಂತಲೂ ತಂದೆಯೇ, ನೀನು ನನ್ನಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರೂ ನಮ್ಮಲ್ಲಿ ಇರಬೇಕೆಂದು ಕೇಳಿಕೊಳ್ಳುತ್ತೇನೆ" (ಯೋಹಾನ17:20–21). ಇಲ್ಲಿ ಅಪೊಸ್ತಲರಿಗಾಗಿಯೂ ಅವರ ವಾಕ್ಯದ ಮೂಲಕ ನಂಬುವವರಿಗಾಗಿ ಕ್ರಿಸ್ತನು ಪ್ರಾರ್ಥಿಸಿದನು. ಯಾವ ರೀತಿಯಲ್ಲಿ? ತಂದೆಯಾದ ದೇವರು, ಮಗನಾದ ಯೇಸುಕ್ರಿಸ್ತನು ಒಂದೇ ಆಗಿರುವಂತೆ. ಅದು ನಿಜವಾದ ಐಕ್ಯತೆ.

ಮತ್ತೆ ಪೌಲನು ಬರೆದಿದ್ದನ್ನು ನೋಡಿದರೆ ಅಂದು ಐಕ್ಯತೆಗಾಗಿ ಒಂದು ಬುನಾದಿ ಕೊಡಲ್ಪಟ್ಟಿತು. "ನಿವೆಲ್ಲರೂ ಒಂದೇ ದೇಹಕ್ಕೆ ಸೇರಿದವರು, ಒಬ್ಬನೇ ಆತ್ಮನನ್ನು ಹೊಂದಿದವರು, ಒಂದೇ ಪದವಿಯನ್ನು ನಿರೀಕ್ಷಿಸುವುದಕ್ಕೆ ಕರೆಯಲ್ಪಟ್ಟವರು; ನಿಮ್ಮೆಲ್ಲರಿಗೂ ಕರ್ತನು ಒಬ್ಬನೇ; ಭರವಸವೂ ಒಂದೇ, ಸ್ನಾನದೀಕ್ಷೆ ಒಂದೇ. ಎಲ್ಲರಿಗೂ ತಂದೆಯಾಗಿರುವ ದೇವರು ಒಬ್ಬನೇ. ಆತನು ಎಲ್ಲರ ಮೇಲಿರುವವನು ಎಲ್ಲರ ಮುಖಾಂತರ ಕಾರ್ಯನಡೆಸುವವನು ಎಲ್ಲರಲ್ಲಿ ವಾಸಿಸುವವನೂ ಆಗಿದಾನೆ" (ಎಫೆಸ4:4–6). ಒಂದೊಂದೇ ಎಂದು ಹೇಳಲ್ಪಟ್ಟಿರುವುದು ಎಷ್ಟು? ಒಂದೇ. ಒಂದೇ ಅಂದರೆ ಎಷ್ಟು? ಒಂದು ಮಾತ್ರವಲ್ಲವೆ? ಅನೇಕ ವಿಧವಾದ ಸಭೆಗಳಿರುವಾಗ ಅವೆಲ್ಲವುಗಳನ್ನು ಒಂದು ಕಡೇ ಸೇರಿಸಿ ಅವುಗಳಲ್ಲಿ ಒಂದೇ ಎಂದು ಹೇಳುವುದು ಆಶ್ಚರ್ಯವಾಗಿಯೇ ಇರುತ್ತದೆ.

ನನ್ನ ಸಹೋದರರೇ, ದೇವರು ನಮಗೆ ಕೊಟ್ಟ ಗ್ರಂಥವು ಒಂದೇ. ಅದುವೇ ಬೈಬಲ್. ನಾವೆಲ್ಲರೂ ಅದನ್ನು ಓದಿ ನಂಬಿಕೆ ಇಟ್ಟು ಅದರ ಬೋಧನೆಗೆ ಒಳಗಾದರೆ ನಾವೆಲ್ಲರೂ ಒಂದೇ ಎಂಬ ಬೋಧನೆಗೆ ಒಳಗಾಗುವೆವು. ಒಂದೇ ಸಭೆಯಲ್ಲಿ ಸೇರಿಸಲ್ಪಡುವೆವು. ಒಂದೇ ಹೆಸರನ್ನು ಧರಿಸಿಕೊಳ್ಳುವೆವು. ಒಂದೇ ರೀತಿಯಲ್ಲಿ ಆರಾಧಿಸುವೆವು. ಒಂದೇ ಸಂಗತಿಯನ್ನು ಬೋಧಿಸುವೆವು ಅಲ್ಲವೆ. ಬೈಬಲ್ ನಮ್ಮನ್ನು ವಿಭಜಿಸುವುದಿಲ್ಲ ಅದು ಐಕ್ಯ ಮಾಡುತ್ತದೆ. ನಾವೆಲ್ಲರೂ ವಿಭಜಿಸಲ್ಪಡಬೇಕೆಂದು ಕ್ರಿಸ್ತನು ಬೋಧಿಸಲಿಲ್ಲ ಆದರೆ ನಾವೆಲ್ಲರೂ ಆತನಲ್ಲಿ ಒಂದೇ ಆಗಿರಬೇಕೆಂದು ಕೋರಿಕೊಳ್ಳುತ್ತಾನೆ. ನೀವು ದೇವರ ಚಿತ್ತವನ್ನು ನೆರವೇರಿಸಿದಾಗ ಖಂಡಿತವಾಗಿಯು ಐಕ್ಯತೆ ಇರುತ್ತದೆ. ಅದಕ್ಕಿಂತ ಮೊದಲಲ್ಲ.

# 28. ಹೊಸ ಒಡಂಬಡಿಕೆ ಆರಾಧನೆ ಕ್ರಮ
## (New Testment Worship)

ಹೊಸ ಒಡಂಬಡಿಕೆ ಮೂರು ರೀತಿಯಾದ ಆರಾಧನೆಯನ್ನು ಕುರಿತು ಹೇಳುತ್ತದೆ. ಮೊದಲನೇಯದು ತಿಳಿಯದ ಆರಾಧನೆ: ಅಥೇನ್ಯದಲ್ಲಿ ಜನರು ವಿಗ್ರಹಗಳನ್ನು ಪೂಜಿಸುತ್ತಿದ್ದರಿಂದ ತಿಳಿಯದ ಆರಾಧನೆಯನ್ನು ಮಾಡುತ್ತಿದ್ದಾರೆಂದು ಪೌಲನು ಹೇಳಿದನು (ಅ.ಕೃ.17:23–31). ಎರಡನೇಯದು ವ್ಯರ್ಥ ಆರಾಧನೆ: ಈ ಆರಾಧನೆಯು ಶೂನ್ಯವಾದದ್ದು, ಕೆಲಸಕ್ಕೆ ಬಾರದ್ದು ಹೇಗೆಂದರೆ ಅದು ಮಾನವ ಕಲ್ಪಿತ ಸಿದ್ಧಾಂತಗಳ ಮೇಲೆ ಆಧಾರವಾಗಿರುತ್ತದೆ. "ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಅವರು ಬೋಧಿಸುವುದರಿಂದ ನನಗೆ ಭಕ್ತಿತೋರಿಸುವುದು ವ್ಯರ್ಥ ಎಂಬದೆ" (ಮತ್ತಾಯ 15:9). ಮೂರನೇಯದು ಸತ್ಯ ಆರಾಧನೆ: ದೇವರು ಆಪೇಕ್ಷಿಸುವ ಆರಾಧನೆ ಇದು. "ದೇವರು ಆತ್ಮ ಸ್ವರೂಪನು ಆತನನ್ನು ಆರಾಧಿಸುವವರು ಆತ್ಮೀಯರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು" (ಯೋಹಾನ 4:24). ಎಂದು ಹೇಳಿ ಕ್ರಿಸ್ತನು ಇದನ್ನು ದೃಡಪಡಿಸಿದನು. ನಮ್ಮ ಆರಾಧನೆಗೆ ಕರ್ತನು ದೇವರು ಆಗಿರಬೇಕೆಂದು ದಯಮಾಡಿ ಗಮನಿಸಿ. ಆತನನ್ನು ಆರಾಧಿಸಬೇಕೆಂದು ದೇವರು ನಮ್ಮನ್ನು ಬಲವಂತ ಮಾಡುವುದಿಲ್ಲ. ಆದರೆ ಹಾಗೆ ಮಾಡುವುದಕ್ಕೆ ನಾವು ನಿಶ್ಚಯಿಸಿಕೊಂಡರೆ ನಮ್ಮ ಆರಾಧನೆ ಆತ್ಮದಿಂದಲೂ ಸತ್ಯದಿಂದಲೂ ಇರಬೇಕು. ಆತ್ಮದಿಂದ ಆರಾಧಿಸುವುದೆಂದರೆ ನಿಷ್ಕಪಟದಿಂದ ಭಕ್ತಿಭಾವದಿಂದ ಆರಾಧಿಸುವುದು. ಸತ್ಯದಿಂದ ಅಂದರೆ ಸತ್ಯ ವಾಕ್ಯಾನುಸಾರವಾಗಿ ಹೊಸ ಒಡಂಬಡಿಕೆಯನ್ನು ಅನುಸರಿಸಿ ಆರಾಧಿಸುವುದು. ಈ ರೀತಿಯಲ್ಲಿ ಮಾತ್ರ ನಮ್ಮ ಆರಾಧನೆಯು ಸತ್ಯವಾದದ್ದಾಗಿ ಅಂಗೀಕಾರಕ್ಕೆ ಯೋಗ್ಯವಾಗಿ ಇರುತ್ತದೆ.

ನಾವು ದೇವರನ್ನು ಸತ್ಯದಿಂದ ಆರಾಧಿಸಬೇಕು. ಆದ್ದರಿಂದ ಆ ಸತ್ಯ ಎಂದರೇನೊ ನಾವು ಮಾಡಬೇಕಾದದ್ದೇನೊ ಎಂದು ನಾವು ಕಂಡುಕೊಳ್ಳಬೇಕು ಇದನ್ನು ಕಂಡುಕೊಳ್ಳಲು ನಾವು ಹೊಸ ಒಡಂಬಡಿಕೆಯ ಬಳಿಗೆ ಬರಬೇಕು. ಸತ್ಯದಿಂದ ಆರಾಧಿಸಬೇಕೆಂದು ದೇವರು ನಮ್ಮನ್ನು ಕೋರಿದಾಗ, ಆತನು ಕೋರಿದ್ದನ್ನು ಸತ್ಯವಾಕ್ಯದಲ್ಲಿ ಖಂಡಿತವಾಗಿ ಪ್ರಕಟಿಸಲ್ಪಟ್ಟಿದೆ. ಹೊಸ ಒಡಂಬಡಿಕೆ ಓದುವಾಗ ಪ್ರಾರಂಭದ ಕ್ರೈಸ್ತರು (1ನೇ ಶತಮಾನದ ಕ್ರೈಸ್ತರು) ಆರಾಧನೆಯಲ್ಲಿ ಕನಿಷ್ಟ ಐದು ಅಂಶಗಳನ್ನು ನೆರವೇರಿಸಿದಂತೆ ನಾವು ನೋಡುತ್ತೇವೆ. ಅವುಗಳು ಈ ಕೆಳಗಿನಂತಿವೆ.

1. **ಕ್ರೈಸ್ತರು ವಾರದ ಮೊದಲನೇ ದಿನದಲ್ಲಿ ದೇವರ ವಾಕ್ಯವನ್ನು ಧ್ಯಾನಿಸುವುದಕ್ಕೆ ಕೂಡಿಕೊಂಡಿದ್ದರು.**

   ಅ.ಕೃ.20:7ರಲ್ಲಿ ಪೌಲನು ಒಂದು ಕೂಟದಲ್ಲಿ ಪ್ರಸಂಗಿಸುತ್ತಿರುವುದನ್ನು ನೋಡುತೇವೆ. ನಾವು ವಾಕ್ಯಗಳನ್ನು ಪರಿಶೋಧಿಸಬೇಕೆಂದು ಕ್ರಿಸ್ತನು

ಬೋಧಿಸಿದ್ದಾನೆ. (ಯೋಹಾನ 5:39) ವಾಕ್ಯವನ್ನು ಧ್ಯಾನಿಸಬೇಕೆಂದು ಪೌಲನು ತಿಮೋಥಿಯನ್ನು ಎಚ್ಚರಿಸುತ್ತಾನೆ. (2ತಿಮೋಥಿ 2:15). ಬೈಬಲ್ ಓದದೆ ಆರಾಧನೆ ನಡೆಯುವುದನ್ನು ನಾವು ಊಹಿಸಲು ಸಾಧ್ಯವಿಲ್ಲ. ದೇವರು ಈ ರೀತಿಯಲ್ಲಿ ನಮ್ಮೊಂದಿಗೆ ಮಾತನಾಡುತ್ತಾನೆ ಆದ್ದರಿಂದ ಇದು ಸರಿಯಾದುದು.

2. **ಅವರು ಪ್ರಾರ್ಥನೆ ಮಾಡುವುದಕ್ಕೆ ಕೂಡಿಕೊಂಡರು.**

ಆದಿ ಕ್ರೈಸ್ತರು "ಇವರು ಅಪೊಸ್ತಲರ ಬೋಧನೆಯನ್ನು ಕೇಳುವುದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿ ರೊಟ್ಟಿ ಮುರಿಯುವುದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು" (ಅ.ಕೃ.2:42). ಎಡಬಿಡದೆ ನಿತ್ಯವೂ ಪ್ರಾರ್ಥನೆ ಮಾಡಿರಿ (1ಥೆಸಲೋನಿಕ 5:17). ಎಂದು ಪೌಲನು ಸಹ ಹೇಳಿದ್ದರಿಂದ ಇದು ಖಂಡಿತವಾಗಿಯೂ ಆರಾಧನೆಯಲ್ಲಿ ಒಂದು ಭಾಗವಾಗಿದೆ. ನಾವು ಬೇಸರಗೊಳ್ಳದೆ ನಿತ್ಯವೂ ಪ್ರಾರ್ಥನೆ ಮಾಡಬೇಕೆಂದು ಕ್ರಿಸ್ತನು ಸಹ ಹೇಳಿದ್ದಾನೆ (ಲೂಕ 18:1). ಮನುಷ್ಯನು ಈ ರೀತಿಯಲ್ಲಿ ದೇವರೊಂದಿಗೆ ಮಾತನಾಡುತ್ತಾನೆ. ಆದ್ದರಿಂದ ಪ್ರಾರ್ಥನೆ ಇಲ್ಲದ ಆರಾಧನೆ ಅದು ಆರಾಧನೆ ಅಲ್ಲ ಎಂದು ನಾವು ಹೇಳಬಹುದು.

3. **ಅವರು ದೇವರಿಗೆ ಸ್ತುತಿಗಾನ ಮಾಡುವುದಕ್ಕೆ ಕೂಡಿಕೊಂಡರು.**

ಮೊದಲನೇಯದಾಗಿ ಎಫೆಸ5:19 ನೋಡೋಣ "ಆದರೆ ಪವಿತ್ರಾತ್ಮಭರಿತರಾಗಿದ್ದು ಕೀರ್ತನೆಗಳಿಂದಲೂ ಆತ್ಮ ಸಂಬಂಧವಾದ ಪದಗಳಿಂದಲೂ ಒಬ್ಬರಿಗೊಬ್ಬರು ಮಾತಾಡಿಕೊಳ್ಳುತ್ತಾ ನಿಮ್ಮ ಹೃದಯಗಳಲ್ಲಿ ಕರ್ತನಿಗೆ ಗಾನ ಮಾಡುತ್ತಾ ಕೀರ್ತನೆ ಹಾಡುತ್ತಾ". ಎಂದು ಮತ್ತು ಕೊಲೊಸ್ಸೆ 3:16 ಅನ್ನು ಗಮನಿಸಿ. ಎರಡು ವಿಧವಾದ ಸಂಗೀತಗಳಿವೆ ಅದು ವಾದ್ಯ ಸಂಗೀತ, ಗಾತ್ರ ಸಂಗೀತ ಎಂದು ದೇವರು ಆರಾಧನೆಯಲ್ಲಿ ಸ್ವರ ಗಾನವನ್ನು ಕೋರಿದಂತೆ ಬೋಧಿಸಲ್ಪಟ್ಟಿದೆ. ಇಬ್ರಿಯ 13:15ರಲ್ಲಿ ಕ್ರೈಸ್ತರು ಹೊಸ ಒಡಂಬಡಿಕೆಯ ಪ್ರಕಾರ ಪರಿಪಾಲಿಸಲ್ಪಡುತ್ತಿದ್ದಾರೆ. ಆತನು ನಮ್ಮ ಬಾಯಿಂದ ಬರುವ ಸ್ತೋತ್ರಗಾನವನ್ನು ಕೋರುತ್ತಾನೆಯಾಗಲೀ ನಾಶವಾಗುವಂತಹ, ನಿರ್ಜೀವವುಳ್ಳಂತ, ಮನಸ್ಸಿಲ್ಲದಂತಹ ಯಂತ್ರಗಳಿಂದ ಸ್ತೋತ್ರವನ್ನು ಆತನು ಕೋರಲಿಲ್ಲ. ದೇವರನ್ನು ನಾವು ಸಂತೋಷಪಡಿಸಬೇಕೆಂದು ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

4. **ಆದಿ ಕ್ರೈಸ್ತರು ಕರ್ತನ ಭೋಜನದಲ್ಲಿ (ರೊಟ್ಟಿ ಮುರಿಯುವುದರಲ್ಲಿ) ಪಾಲುಗಾರರಾಗಲು ಕೂಡಿಕೊಳ್ಳುತ್ತಿದ್ದರು.**

ಮತ್ತಾಯ26:26–28ರಲ್ಲಿ ಕ್ರಿಸ್ತನು ಈ ಭೋಜನವನ್ನು ಸ್ಥಾಪಿಸಿದನು. ರೊಟ್ಟಿಯು ಆತನ ಶರೀರಕ್ಕೆ, ದ್ರಾಕ್ಷರಸವು ಆತನ ರಕ್ತಕ್ಕೆ ಅನುರೂಪವಾಗಿದೆ. 1ಕೊರಿಂಥ 11ನೇ ಅಧ್ಯಾಯದಲ್ಲಿ ಪ್ರತಿಯೊಬ್ಬ ಕ್ರೈಸ್ತರು ರೊಟ್ಟಿಯನ್ನು ತಿಂದು ದ್ರಾಕ್ಷಾರಸ ಕುಡಿಯುವಾಗ ಕ್ರಿಸ್ತನ ಶರೀರ ಮತ್ತು ರಕ್ತವನ್ನು ಜ್ಞಾಪಕ ಮಾಡಿಕೊಳ್ಳಬೇಕೆಂದು ಪೌಲನು ಬರೆಯುತ್ತಾನೆ. ಅ.ಕೃ.20:7ರಲ್ಲಿ ಮೊದಲ ಕ್ರೈಸ್ತರು ರೊಟ್ಟಿ ಮುರಿಯುವುದಕ್ಕೆ ಭಾನುವಾರ (ವಾರದ ಮೊದಲ ದಿನ) ಕೂಡಿ ಬಂದಿದ್ದರೆಂಬ ಮಾದರಿ ನಮಗಿದೆ. ನಾವು ಕೂಡಿಕೊಳ್ಳವುದನ್ನು ಬಿಟ್ಟುಬಿಡಬಾರದೆಂದು ಇಬ್ರಿಯ 10:25ರಲ್ಲಿ ಎಚ್ಚರಿಕೆ ಇದೆ.

5. **ಅವರು ಅಭಿವೃದ್ಧಿಹೊಂದಿದ ಪ್ರಕಾರ ಕಾಣಿಕೆಯನ್ನು ಕೊಡುವುದಕ್ಕೆ ಕೂಡಿಕೊಂಡರು.**

ಕೊರಿಂಥದಲ್ಲಿರುವ ಸಭೆಯನ್ನು ಪೌಲನು ಹೀಗೆ ಎಚ್ಚರಿಸಿದ್ದಾನೆ "ನಾನು ಬಂದಾಗ ಹಣ ವಸೂಲು ಮಾಡಬೇಕಾದ ಅವಶ್ಯವಾಗದಂತೆ ಪ್ರತಿಯೊಬ್ಬನೂ ತನಗೆ ಬಂದ ಸಂಪಾದನೆಯ ಮೇರೆಗೆ ವಾರ ವಾರದ ಮೊದಲನೆಯ ದಿನದಲ್ಲಿ ಗಂಟು ಮಾಡಿ ಮನೆಯಲ್ಲಿಟ್ಟು ಕೊಂಡಿರಬೇಕು" (1ಕೊರಿಂಥ 16:2). ಗಮನಿಸು ಎಷ್ಟೊ ಸ್ವಲ್ಪಕೊಡಬೇಕೆಂದು ಇಲ್ಲ. ಇದು ಇಷ್ಟ ಪೂರ್ವಕವಾದ ಅರ್ಪಣೆ. ಆದರೆ ಅವರು ಅಭಿವೃದ್ಧಿ ಹೊಂದಿದಂತೆ ಕೊಡಬೇಕೆಂದು ಇರುವುದರಿಂದ ಪ್ರತಿಯೊಬ್ಬನೂ ಎಷ್ಟರವರೆಗೆ ಅಭಿವೃದ್ಧಿ ಹೊಂದುವನೋ ನಿಶ್ಚಯಿಸಿಕೊಡುವುದು ಒಳ್ಳೆಯದು.

ಆದ್ದರಿಂದ ವಾಕ್ಯಗಳು ತಿಳಿಯ ಪಡಿಸಿರುವ ಆರಾಧನೆ ಕ್ರಮ ಇದು. ಆದಿ ಕ್ರೈಸ್ತರು ಪ್ರತೀ ಭಾನುವಾರ ಈ ರೀತಿಯಲ್ಲಿ ಆರಾಧನೆ ಮಾಡುವುದಕ್ಕೆ ಕೂಡಿಕೊಂಡರು ನಾವು ಕ್ರೈಸ್ತವರಾದರೆ ಅವರಿಗಿಂತ ಕಡಿಮೆ ಮಾಡಬಹುದಾ?

## 29. ವಾರದ ಮೊದಲನೆ ದಿನ

## (The Fist day of the Week)

ಪ್ರತಿ ವಾರದಲ್ಲಿ ಏಳು ದಿನಗಳಿವೆ ಆದರೆ ದೇವರನ್ನು ಕ್ರೈಸ್ತರು ಯಾವ ದಿನದಲ್ಲಿ ಆರಾಧಿಸಬೇಕು? ಯಾವುದಾದರು ಒಂದು ದಿನ ಆರಾಧನೆ ದಿನವಾಗಿ ಪ್ರತ್ಯೇಕಿಸಲ್ಪಟ್ಟಿದೆಯಾ? ಬೈಬಲ್ ಏನು ಬೋಧಿಸುತ್ತಿದೆ?

ಧರ್ಮಶಾಸ್ತ್ರದ ಪ್ರಕಾರ ಯೆಹೊದ್ಯರ ಆರಾಧನೆ ದಿನ ಸಬ್ಬತ್ ದಿನ ಎಂದು ನಮಗೆ ತಿಳಿದಿದೆ. ಇತರ ಮತಗಳಲ್ಲಿ ಸೂಚಿಸಿದ ಮುಸ್ಲೀಮರು ಶುಕ್ರವಾರದ ದಿನದಂದು ಭೌದ್ದರು ಪೋಯಾದಿನದಂದು (ಗುರುವಾರ) ಆರಾಧಿಸುವರು. ಹಾಗಾದರೆ ಕ್ರೈಸ್ತರ ಸಂಗತಿಯೇನು? ಆರಾಧನೆ ಮಾಡಲು ಯಾವ ದಿನವಾದರೂ ಸರಿಯಾದದ್ದೇನಾ?

ನಮ್ಮಲ್ಲಿ ಅನೇಕರು ಯೆಹೊದ್ಯರ ಕ್ರಮ ಪದ್ಧತಿಯ ಪ್ರಕಾರ ಸಬ್ಬತ್ ದಿನವು ಇನ್ನೂ ಜಾರಿಯಲ್ಲಿದೆ ಎಂದು ಹೇಳುತ್ತಾರೆ. ಆದರೆ ಇದು ಯೆಹೊದ್ಯರಿಗೆ ಮಾತ್ರವೇ ಕೊಡಲ್ಪಟ್ಟಿದೆ ಎಂದು ಗಮನಿಸು. (ವಿಮೋಚ 20:1–17). ನಮಗೆ ಕೊಡಲ್ಪಟ್ಟ ಒಡಂಬಡಿಕೆಗಿಂತಲೂ ಅದು ಬೇರೆಯಾದದ್ದು. ಅದು ನೆರವೇರಿಸಲ್ಪಟ್ಟಿದ್ದು. ತೆಗೆದು ಹಾಕಲ್ಪಟ್ಟದ್ದು. (ಯೋಹಾನ 1:17; ಮತ್ತಾಯ 5:17–19). ಕ್ರಿಸ್ತನು ಸಬ್ಬತ್ ದಿನವನ್ನು ಆಚರಿಸಿದ್ದಾನೆ ಹೇಗೆಂದರೆ ಆತನು ಬೇರೆಯೊಂದು ಕಾನೂನು ಕಾಲದಲ್ಲಿ ಜೀವಿಸಿ ಮರಣಿಸಿದನು. ಆ ದಿನವನ್ನು ಆಚರಿಸಬೇಕಾಗಿ ಕ್ರಿಸ್ತನು ಒಂದು ಸಾರಿಯೂ ಸಹ ಎಲ್ಲಿಯೂ ಆಜ್ಞೆ ಕೊಟ್ಟಿಲ್ಲವೆಂದು ನೆನಪಿನಲ್ಲಿಟ್ಟುಕೊಳ್ಳುವುದು ಒಳ್ಳೆಯದು. ಅಪೊಸ್ತಲರು ಕೂಡ ಆಜ್ಞೆ ಕೊಟ್ಟಿಲ್ಲವೆಂದು ನೆನಪಿನಲ್ಲಿಟ್ಟು ಕೊಳ್ಳುವುದು ಒಳ್ಳೆಯದು. ಅಪೊಸ್ತಲರು ಆ ದಿನವನ್ನು ಆಚರಿಸಲಿಲ್ಲ. ಆಜ್ಞಾಪಿಸಿಲ್ಲ. ಪೌಲನು ಸಬ್ಬತ್ ದಿನದಲ್ಲಿ ಸಭಾ ಮಂದಿರಗಳಲ್ಲಿ ಪ್ರವೇಶಿಸಿದನು ಆದರೆ ಆರಾಧಿಸಲು ಹೋಗಲಿಲ್ಲ ಹಾಗಾದರೆ ಆತನು ಯಾಕೆ ಹೋದನು? ದೇವರ ವಾಕ್ಯವನ್ನು ಬೋಧಿಸುವುದಕ್ಕೆ. ಆತನ ಉದ್ದೇಶವನ್ನು ಯಹೂದ್ಯರು ಕಂಡುಕೊಂಡ ನಂತರ ಆತನಿಗೆ ದೇವಾಲಯ ಪ್ರವೇಶ ದೊರೆಯದಂತೆ ಮಾಡಿದರು.

ಕ್ಯಾಥೊಲಿಕ್ಕರು ಆರಾಧನೆ ದಿನವನ್ನು ಬದಲಾಯಿಸಿದರು ಎಂದು ಹೇಳುವ ಕೆಲವರಿದ್ದಾರೆ ಬೈಬಲ್‌ನ್ನು ನಾವು ಕೊಟ್ಟೆವೆಂದು ಕ್ಯಾಥೊಲಿಕರು ಅಂದು ಕೊಳ್ಳುತ್ತಾರೆ. ಆದರೆ ಆ ಎರಡೂ ಸುಳ್ಳು. ಕ್ರಿಸ್ತನ ಧರ್ಮಪ್ರಮಾಣ ಕಾಲದಲ್ಲಿರುವವರೆಲ್ಲರೂ ಎಂದಿಗೂ ಸಬ್ಬತ್ ದಿನ ಆಚರಿಸಿದ ಹಾಗೆ ಬೈಬಲ್‌ನಲ್ಲಿ ಎಲ್ಲಿಯೂ ಬೋಧಿಸಿಲ್ಲ. ಚರಿತ್ರೆಯೂ ಕೂಡ ಹಾಗೆ ಹೇಳಿಲ್ಲ.

ಸತ್ಯವಾಕ್ಯವನ್ನು ನಾವು ಸರಿಯಾಗಿ ವಿಭಜಿಸಿ (1ತಿಮೊಥೆ 2:15), ಮೋಶೆ ಧರ್ಮಶಾಸ್ತ್ರಕ್ಕೂ ಕ್ರಿಸ್ತನ ಧರ್ಮಶಾಸ್ತ್ರಕ್ಕೂ ಇರುವ ವ್ಯತ್ಯಾಸವನ್ನು ಗಮನಿಸಿದಾಗ ಮೋಶೆ

ಧರ್ಮಶಾಸ್ತ್ರದೊಂದಿಗೆ ಸಬ್ಬತ್ ದಿನವೂಸಹ ತೆಗೆದು ಹಾಕಲಾಗಿದೆ (2ಕೊರಿಂಥ 3:6–16), ಕ್ರಿಸ್ತನ ಕಾನೂನು ಒಂದು ಹೊಸ ದಿನವನ್ನು ಅಂದರೆ ಭಾನುವಾರವನ್ನು ಆರಾಧನೆ ದಿನವನ್ನಾಗಿ ಪ್ರವೇಶಮಾಡಿದೆ. ಅ.ಕೃ.15:13–19ರವೆಗೆ ಓದಿದರೆ ಅನ್ಯಜನರೊಳಗಿನಿಂದ ಕ್ರೈಸ್ತರಾದವರನ್ನು ಸಬ್ಬತ್ ದಿನದಿಂದಲೂ ಮೋಶೆ ಧರ್ಮಶಾಸ್ತ್ರದಿಂದಲೂ ಪವಿತ್ರಾತ್ಮನು ಬಿಡುಗಡೆ ಮಾಡಿದನೆಂದು ತಿಳಿದು ಕೊಳ್ಳುವಿರಿ.

ಭಾನುವಾರವನ್ನು ಕುರಿತು ವಾಕ್ಯ ಪ್ರಕಾರವಲ್ಲದ ಅನೇಕ ಅಭಿಪ್ರಾಯಗಳನ್ನು ನೀವು ಹೊಂದುವುದಕ್ಕೆ ಮೊದಲು ಕೆಲವು ಸಂಗತಿಗಳನ್ನು ತೋರಿಸುತ್ತಿದ್ದೇನೆ. ಮೊದಲನೇಯದು ವಾರದ ಮೊದಲನೇ ದಿನವು ಕ್ರೈಸ್ತರ ಸಬ್ಬತ್ ದಿನ ಅಲ್ಲ. ಅದು ವಿಶ್ರಾಂತಿ ದಿನವಲ್ಲ. ಆಚರಿಸಬೇಕಾದ ದಿನವೂ ಸಹ ಅಲ್ಲ. ಅದು ಪರಿಶುದ್ಧ ದಿನವೂ ಅಲ್ಲ. ಹಾಗಾದರೆ ಅದು ಏನು? ಅದು ಕ್ರೈಸ್ತರು ಸಭೆಯಾಗಿ ಕೂಡಿಕೊಂಡು ದೇವರನ್ನು ಆರಾಧಿಸುವುದಕ್ಕೆ ಪ್ರತ್ಯೇಕ ಪಡಿಸಲ್ಪಟ್ಟ ಕರ್ತನ ದಿನ. ಹಳೆ ಒಡಂಬಡಿಕೆ ಸಬ್ಬತ್‌ದಿನದೊಂದಿಗೆ ಯಾವುದೇ ಹೋಲಿಕೆಗಳು ಇಲ್ಲ.

ಭಾನುವಾರವನ್ನು ಕುರಿತು ಬೈಬಲ್ ಏನು ಹೇಳುತ್ತಿದೆ ಎಂದು ಗಮನಿಸು,

1. ಭಾನುವಾರದಂದು ಕ್ರಿಸ್ತನು ಸಮಾಧಿಯಿಂದ ಎದ್ದನು (ಮತ್ತಾಯ 28:1–7). ಆತನು ಪುನರುತ್ಥಾನನಾದ ನಂತರ ಭಾನುವಾರದಂದು ತಮ್ಮ ಶಿಷ್ಯರಿಗೆ ಎರಡು ಸಾರಿ ಕಾಣಿಸಿಕೊಂಡನು (ಯೋಹಾನ 20:1, 19,26).

2. ಪವಿತ್ರಾತ್ಮನು ಪಂಚಾಶತ್ತಮ ದಿನದಂದು ಶಿಷ್ಯರಿಗೆ ಬಲವನ್ನು ಅನುಗ್ರಹಿಸಿದನು. ಅದು ಭಾನುವಾರ (ಅ.ಕೃ.2:1–4), ಅದು ನಮಗೆ ಹೇಗೆ ತಿಳಿಯುತ್ತದೆ? ಹೇಗೆಂದರೆ ಪಂಚಶತ್ತಮ ದಿನವು ಯಾವಾಗಲೂ ವಾರದ ಮೊದಲನೇ ದಿನದಲ್ಲಿಯೇ ಬರುತ್ತದೆ.

3. ಮೊಟ್ಟ ಮೊದಲನೇಯ ಸಾರಿ ಸುವಾರ್ತೆಯು ವಾರದ ಮೊದಲನೇ ದಿನದಲ್ಲಿ ಪ್ರಕಟಿಸಲ್ಪಟ್ಟಿತು.

4. ಸಭೆಯು ಭಾನುವಾರದಂದು ಸ್ಥಾಪಿಸಲ್ಪಟ್ಟಿತು (ಅ.ಕೃ2:38–47).

5. ಭಾನುವಾರದಂದು ಶಿಷ್ಯರು ರೊಟ್ಟಿ ಮುರಿಯುವುದಕ್ಕೆ ಕೂಡಿಕೊಂಡರು "ವಾರದ ಮೊದಲನೇ ದಿವಸದಲ್ಲಿ ನಾವು ರೊಟ್ಟಿ ಮುರಿಯುವ ನಿಯಮಕ್ಕಾಗಿ ಕೂಡಿಬಂದಾಗ ಮರುದಿನ ಹೊರಡಬೇಕೆಂದಿದ್ದ ಪೌಲನು ಅವರಿಗೆ ಪ್ರಸಂಗಿಸುತ್ತಾ ಸರಿಹೊತ್ತಿನವರೆಗೂ ಉಪನ್ಯಾಸವನ್ನು ನಡೆಸಿದನು" (ಅ.ಕೃ.20:7).

6. ಭಾನುವಾರ ಕ್ರೈಸ್ತರು ಕಾಣಿಕೆಗಳನ್ನು ಕೊಡಬೇಕೆಂದು ಹೇಳಲ್ಪಟ್ಟಿದೆ. "ದೇವಜನರಿಗೋಸ್ಕರ ಹಣವಸೂಲು ಮಾಡುವುದರ ಕುರಿತು ನಾನು

ಹೇಳುವುದೇನೆಂದರೆ ಗಲಾತ್ಯದ ಸಭೆಗಳಿಗೆ ನಾನು ಹೇಳಿಕೊಟ್ಟ ಕ್ರಮದಂತೆ ನೀವು ಮಾಡಿರಿ. ನಾನು ಬಂದಾಗ ಹಣವಸೂಲು ಮಾಡಬೇಕಾದ ಅವಶ್ಯವಾಗದಂತೆ ನಿಮ್ಮಲ್ಲಿ ಪ್ರತಿಯೊಬ್ಬನು ತನಗೆ ಬಂದ ಸಂಪಾದನೆಯ ಮೇರೆಗೆ ವಾರವಾರದ ಮೊದಲನೆ ದಿನದಲ್ಲಿ ಗಂಟು ಮಾಡಿ ತನ್ನ ಮನೆಯಲ್ಲಿಟ್ಟುಕೊಂಡಿರಬೇಕು" (1ಕೊರಿಂಥ 16:1–2). ಇದು ಬಹಿರಂಗ ಸಮಾವೇಶವೆಂದು ಪೌಲನು ಹೇಳಿದ ಮಾತುಗಳಿಂದ ತಿಳಿದುಕೊಳ್ಳುತ್ತೇವೆ. ಆರಾಧನೆ ದಿನವು ಸಬ್ಬತ್‌ದಿನವಾಗಿದ್ದರೆ ಪೌಲನು ಕ್ರೈಸ್ತರಿಗೆ ಕೇವಲ ಭಾನುವಾರ ಮಾತ್ರ ಕಾಣಿಕೆ ಸಂಗ್ರಹಿಸುವುದಕ್ಕೆ ಕೂಡಿಕೊಳ್ಳಬೇಕೆಂದು ಯಾಕೆ ಹೇಳಿದನು? ಸಬ್ಬತ್ ದಿನವನ್ನು ಇನ್ನೂ ಆಚರಿಸುತ್ತಿರುವವರು ಪೌಲನ ಬೋಧನೆಯನ್ನು ಗ್ರಹಿಸುತ್ತಿಲ್ಲವಾ? ಹಾಗಾದರೆ ಯಾಕೆ ಗ್ರಹಿಸುತ್ತಿಲ್ಲ?

7. ಕ್ರೈಸ್ತರು ಸಭೆಯಾಗಿ ಕೂಡಿಕೊಳ್ಳುವುದನ್ನು ಬಿಟ್ಟುಬಿಡಬಾರದು (ಇಬ್ರಿಯ 10:25). ಯೋಹಾನನು ಆ ದಿನವನ್ನು ಕರ್ತನ ದಿನವೆಂದು ಹೇಳಿದ್ದಾನೆ (ಪ್ರಕಟನೆ 1:10). ಅದು ಆರಾಧನೆ ದಿನ ಕರ್ತನನ್ನು ಹಿಂದೆ ಇಡುವುದಕ್ಕಿಂತ ಮುಂದೆ ಇಡುವ ದಿನವಾಗಿದೆ.

ಇನ್ನೂ ಹಳೆ ಒಡಂಬಡಿಕೆಯನ್ನು ಅನುಸರಿಸುವವರು ರೋಮಾ 7:1–7; 2ಕೊರಿಂಥ 3ನೇ ಅಧ್ಯಾಯ; ಎಫೆಸ 2; ಕೊಲೊಸ್ಸೆ 2; ಇಬ್ರಿಯ 8:7–10 ವಚನಗಳನ್ನು ಮತ್ತೊಂದು ಸಾರಿ ಜಾಗ್ರತೆಯಿಂದ ಓದಿರಿ. ನಾವು ಮೋಶೆ ಮೂಲಕ ಬಂದ ಧರ್ಮಶಾಸ್ತ್ರದ ಕೆಳಗಿಲ್ಲ. ಕ್ರಿಸ್ತನ ಮೂಲಕ ಬಂದ ಹೊಸ ಒಡಂಬಡಿಕೆಯಲ್ಲಿದ್ದೇವೆ ಎಂದು ಗ್ರಹಿಸಬೇಕು. ಆತನ ಕಾನೂನಿನ ಪ್ರಕಾರ ಇರುವ ದಿನ ಆತನನ್ನು ಆರಾಧಿಸಬೇಕು. ಅದಕ್ಕಿಂತ ಕಡಿಮೆ ಇರುವುದಕ್ಕೆ ಕರ್ತನು ಅಂಗೀಕರಿಸುವುದಿಲ್ಲ.

## ೩೦. ಜಾರಿಯಲ್ಲಿರುವುದು ಯಾವ ಒಡಂಬಡಿಕೆ?
## (Which Law is Binding?)

ಬೈಬಲ್ ಎರಡು ಪ್ರಮುಖ ಭಾಗಗಳಾಗಿ ವಿಭಜಿಸಲ್ಪಟ್ಟಿದೆ. ಹಳೆ ಒಡಂಬಡಿಕೆ, ಹೊಸ ಒಡಂಬಡಿಕೆ. ಒಡಂಬಡಿಕೆ ಎಂದರೆ ಶಾಸನ ಅಥವಾ ಕಾನೂನು ಎಂದರ್ಥ. ಇದರಿಂದಾಗಿ ದೇವರು ತನ್ನ ಪ್ರಜೆಗಳಿಗಾಗಿ ಒಂದು ಶಾಸನವನ್ನು ಏರ್ಪಡಿಸಿದನೆಂದು ತಿಳಿಯುತ್ತದೆ. ಆದರೆ ಆತನು ಮತ್ತೊಂದು ಹೊಸ ಶಾಸನವನ್ನು ಏರ್ಪಡಿಸಿ ಮೊದಲನೆಯದನ್ನು ಹಳೆಯದನ್ನಾಗಿ ಮಾಡಿದನು. ಅದನ್ನು ಜಾರಿಯಲ್ಲಿಲ್ಲದಂತೆ ಮಾಡಿದನು ಈ ಎರಡು ಶಾಸನಗಳು ಒಂದೇ ಸಾರಿ ಜಾರಿಯಲ್ಲಿರುವುದಿಲ್ಲವೆಂದು ಗಮನದಲ್ಲಿಟ್ಟುಕೊಳ್ಳಬೇಕು.

ಬೈಬಲ್‌ನ್ನು ಓದುವಾಗ ಹಳೆಯ ಧರ್ಮಶಾಸ್ತ್ರವು ಇಂದು ಜಾರಿಯಲ್ಲಿಲ್ಲವೆಂದು, ಅದು ಕೊಡಲ್ಪಟ್ಟ ಕಾಲದಲ್ಲಾಗಲಿ ನಾವು ಜೀವಿಸಿರಲಿಲ್ಲ ಎಂದು ತಿಳಿಯುತ್ತದೆ. ವಿಮೋಚನಕಾಂಡದಲ್ಲಿ ನೋಡಿದಾಗ ಅದನ್ನು ದೇವರು ಮೋಶೆ ಮೂಲಕ ಇಸ್ರಯೇಲರಿಗೆ ಕೊಟ್ಟನೆಂದು ಗಮನಿಸು (ವಿಮೋಚ 20ನೇ ಅಧ್ಯಾಯ). ಈಗ ಧರ್ಮೋಪದೇಶ ಕಾಂಡದಿಂದ ಸ್ವಲ್ಪ ಓದು. "ಮೋಶೆ ಇಸ್ರಯೇಲರನ್ನು ಕರೆದು ಹೀಗಂದನು– ಇಸ್ರಾಯೇಲರೆ, ನಾನು ಈಗ ನಿಮಗೆ ತಿಳಿಸುವ ಆಜ್ಞಾವಿಧಿಗಳನ್ನು ಕೇಳಿರಿ; ಇವುಗಳನ್ನು ಗ್ರಹಿಸಿಕೊಂಡು ಅನುಸರಿಸಿ ನಡೆಯಬೇಕು. ನಮ್ಮ ದೇವರಾದ ಯೆಹೋವನು ಹೋರೇಬಿನಲ್ಲಿ ನಮ್ಮ ಸಂಗಡ ನಿಬಂಧನೆಯನ್ನು ಮಾಡಿದನು. ಆತನು ನಮ್ಮ ಪೂರ್ವಿಕರ ಸಂಗಡ ಈ ನಿಬಂಧನೆಯನ್ನು ಮಾಡದೆ ಈಗ ಇಲ್ಲಿ ಜೀವದಿಂದ ಇರುವ ನಮ್ಮ ಸಂಗಡಲೇ ಮಾಡಿದನು" (ಧರ್ಮೋಪ5:1–3). ನಂತರ ಆತನು ದಶಾಜ್ಞೆಗಳನ್ನು ಕೊಟ್ಟನು. ಆದ್ದರಿಂದ ಆ ಶಾಸನ ಅಥವಾ ಒಡಂಬಡಿಕೆ ಇಸ್ರಾಯೇಲರಿಗೆ ಅಥವಾ ಯೆಹೂದ್ಯರಿಗೆ ಕೊಡಲ್ಪಟ್ಟಿತ್ತಾಗಲಿ ಅನ್ಯಜನರಿಗಲ್ಲ. ಹಾಗಾದರೆ ಆ ಶಾಸನ ಎಲ್ಲಿಯವರೆಗೆ ಕೆಲಸ ಮಾಡುತ್ತದೆ? ಅದು ಇಂದಿಗೂ ಜಾರಿಯಲ್ಲಿದೆಯಾ? ಪರಿಶೀಲಿಸೋಣ.

ಕ್ರಿಸ್ತನು ಮೋಶೆ ಧರ್ಮಶಾಸ್ತ್ರದ ಪ್ರಕಾರ ಜೀವಿಸಿ ಮರಣಿಸಿದನು. ಅದನ್ನು ಕುರಿತು ಆತನು ಹೀಗೆ ಹೇಳಿದ್ದಾನೆ "ಮೋಶೆ ಧರ್ಮಶಾಸ್ತ್ರವನ್ನಾಗಲಿ ಪ್ರವಾದಿಗಳ ವಚನಗಳನ್ನಾಗಲಿ ತೆಗೆದು ಹಾಕುವುದಕ್ಕೆ ಬಂದೆನೆಂದು ನೆನಸಬೇಡಿರಿ. ತೆಗೆದು ಹಾಕುವುದಕ್ಕೆ ಬಂದಿಲ್ಲ; ನೆರವೇರಿಸುವುದಕ್ಕೆ ಬಂದಿದ್ದೇನೆ. ನಿಮಗೆ ಸತ್ಯವಾಗಿ ಹೇಳುತ್ತೇನೆ– ಆಕಾಶವು ಭೂಮಿಯು ಅಳಿದು ಹೋಗುವ ತನಕ ಧರ್ಮಶಾಸ್ತ್ರವೆಲ್ಲಾ ನೆರವೇರಿದ ಹೊರತು ಅದರೊಳಗಿಂದ ಒಂದು ಸೊನ್ನೆಯಾದರೂ ಒಂದು ಗುಡುಸಾದರೂ ಅಳಿದು ಹೋಗಲಾರದು" (ಮತ್ತಾಯ 5:17–18). ಇದರ ಪ್ರಕಾರ ಧರ್ಮಶಾಸ್ತ್ರ ಎಲ್ಲಾ ಕಾಲಗಳಲ್ಲಿ ಮುಂದುವರಿಯುವುದೆಂದು ಕರ್ತನು ಹೇಳಿದನೆಂದು ಕೆಲವರು ಬಾವಿಸಿದರು. ಆದರೆ ಆ ರೀತಿ ಅಲ್ಲ. ಒಂದು ಒಡಂಬಡಿಕೆಯನ್ನು ಎರಡು ವಿಧವಾಗಿ ನೆರವೇರಿಸಬಹುದು. ಅದನ್ನು ನಾಶಪಡಿಸುವುದರ

ಮೂಲಕ ಅಥವಾ ಅದರಲ್ಲಿರುವ ಷರತ್ತುಗಳನ್ನು (ನಿಯಮಗಳು/ಆಜ್ಞೆಗಳು) ನೆರವೇರಿಸುವುದರ ಮೂಲಕ ಕ್ರಿಸ್ತನು ಹಳೆ ಧರ್ಮಶಾಸ್ತ್ರವನ್ನು ತೆಗೆದು ಹಾಕುವುದಕ್ಕೆ ನಿಶ್ಚಯಿಸಿಕೊಂಡನು. ನಂತರ ಅದು ಸಂಪೂರ್ಣವಾಗಿ ನೆರವೇರುವವರೆಗೆ ಅದರಲ್ಲಿರುವ ಯಾವುದನ್ನೂ ತೆಗೆದು ಹಾಕಲ್ಪಡುವುದಿಲ್ಲವೆಂದು ಆತನು ಹೇಳಿದನು. ಎಲ್ಲಿಯವರೆಗೆ ಧರ್ಮಶಾಸ್ತ್ರವು ನಿಂತಿರುತ್ತದೆ? ಎಲ್ಲವೂ ನೆರವೇರುವ ವರೆಗೆ. ಇದು ಕ್ರಿಸ್ತನ ಎರಡನೇ ಬರೋಣದಲ್ಲಿ ನಡೆಯುವುದಲ್ಲ. ಹೇಗೆಂದರೆ ಆಗ ಸಮಸ್ತವೂ ಲಯವಾಗಿಹೋಗುತ್ತದೆ. ಆದರೆ ಧರ್ಮಶಾಸ್ತ್ರವು ಬೇಗನೆ ನೆರವೇರಿಸಲ್ಪಡುತ್ತದೆ ಎಂದು ಕ್ರಿಸ್ತನು ಮಾತನಾಡಿದನು. ಅದು ಯಾವಾಗ ನಡೆಯಿತು?

ಕ್ರಿಸ್ತನು ಶಿಲುಬೆ ಮೇಲೆ ಮರಣಿಸುವುದಕ್ಕೆ ಮೊದಲು "ತೀರಿತು ಎಂದನು" ಹೇಳಿದನು (ಯೋಹಾನ19:30). ಆತನು ಸತ್ತುಹೋದ ಆ ಸಮಯದಲ್ಲಿಯೇ ದೇವಾಲಯದ ತೆರೆಯು ಮೇಲಿನಿಂದ ಕೆಳಗಿನ ವರಗೆ ಹರಿಯಿತು (ಮತ್ತಾಯ27:51). ಹೀಗೆ ಧರ್ಮಶಾಸ್ತ್ರವು ಸಮಾಪ್ತಿಯಾಯಿತು. ದೇವಾಲಯದ ತೆರೆಯು ಹರಿಯುವುದು ಅದಕ್ಕೆ ಗುರುತಾಗಿ ನಡೆಯಿತು. ಪೌಲನು ಹೀಗೆ ಬರೆದನು "ಆತನು ನಮ್ಮ ಅಪರಾಧಗಳನ್ನೆಲ್ಲಾ ಕ್ಷಮಿಸಿ ನಮ್ಮ ಮೇಲೆ ದೋಷಾರೋಪಣೆ ಮಾಡಿದಂತ ಆಜ್ಞಾರೂಪವಾಗಿದ್ದಂತ ಪತ್ರವನ್ನು ಕೆಡಿಸಿ ಅದನ್ನು ಶಿಲುಬೆಗೆ ಜಡಿದು ಇಲ್ಲದಂತಾಗ ಮಾಡಿದನು" (ಕೊಲೊಸ್ಸೆ2:14). ಆದ್ದರಿಂದ ಕ್ರಿಸ್ತನು ಧರ್ಮಶಾಸ್ತ್ರವನ್ನು ಶಿಲುಬೆಗೆ ಮೊಳೆಯಿಂದ ಜಡಿದು ಇಲ್ಲದಂತಾಗ ಮಾಡಿದನು. "ಧರ್ಮಶಾಸ್ತ್ರವು ಮೋಶೆ ಮುಖಾಂತರ ಕೊಡಲ್ಪಟ್ಟಿತು; ಕೃಪೆಯು ಸತ್ಯವು ಯೇಸು ಕ್ರಿಸ್ತನ ಮುಖಾಂತರ ಬಂದವು" ಯೋಹಾನ1:17) ಎಂದು ಯೋಹಾನನು ಬರೆದಿದ್ದಾನೆ. ಇವೆರಡರ ಮದ್ಯ ಇರುವ ವ್ಯತ್ಯಾಸವನ್ನು ಗಮನಿಸು. ದೇವರೇ ಮೋಶೆ, ಏಲಿಯ, ಕ್ರಿಸ್ತನ ಎದುರಿಗೆ ಈತನು ನನ್ನ ಪ್ರಿಯ ಕುಮಾರನು ಈತನಲ್ಲಿ ನಾನು ಆನಂದಿಸುತ್ತಿದ್ದೇನೆ; "ಈತನ ಮಾತುಗಳನ್ನು ಕೇಳಿರಿ" ಎಂದು ಹೇಳಿದನು (ಮತ್ತಾಯ17:5). "ಪುರಾತನ ಕಾಲದಲ್ಲಿ ನಮ್ಮ ಪಿತೃಗಳ ಸಂಗಡ ಪ್ರವಾದಿಗಳ ಬಾಯಿಂದ ಭಾಗಬಾಗವಾಗಿಯೂ ವಿಧವಿಧವಾಗಿಯೂ ಮಾತಾಡಿದ ದೇವರು ಈ ಅಂತ್ಯ ದಿನಗಳಲ್ಲಿ ನಮ್ಮ ಸಂಗಡ ಮಗನ ಮುಖಾಂತರ ಮಾತಾಡಿದ್ದಾನೆ" (ಇಬ್ರಿಯ 1:1–2).

ಇಬ್ರಿಯ ಪತ್ರಿಕೆ ಇದನ್ನು ವಿವರಿಸುತ್ತದೆ "ಮರಣ ಶಾಸನ ಇರುವಲ್ಲಿ ಅದನ್ನು ಬರೆಯಿಸಿದವನ ಮರಣವು ಪ್ರಸಿದ್ಧವಾಗಿರಬೇಕಷ್ಟೆ. ಮರಣ ಶಾಸನವು ಮರಣವಾದ ಮೇಲೆ ನಡೆಯುವುದೇ ಹೊರತು ಬರೆಯಿಸಿದವನು ಜೀವದಿಂದಿರುವಾಗ ಎಂದಿಗೂ ಸಲ್ಲುವುದಿಲ್ಲ" (ಇಬ್ರಿಯ 9:19–17). ಮತ್ತೆ "ಇಗೋ, ನಿನ್ನ ಚಿತ್ತವನ್ನು ನೆರವೇರಿಸುವುದಕ್ಕೆ ಬಂದಿದ್ದೇನೆ ಎಂದು ಹೇಳಿದ್ದಾನೆ. ಆತನು ಎರಡನೇದನ್ನು ಸ್ಥಾಪಿಸುವುದಕ್ಕಾಗಿ ಮೊದಲನೇದನ್ನು ತೆಗೆದು ಬಿಡುತ್ತಾನೆ. ಯೇಸು ಕ್ರಿಸ್ತನು ಒಂದೇ ಸಾರಿ ದೇಹಸಮರ್ಪಣೆ ಮಾಡಿ ದೇವರ ಚಿತ್ತವನ್ನು ನೆರವೇರಿಸಿದ್ದರಿಂದಲೇ ನಾವು ಶುದ್ಧರಾದೆವು" (ಇಬ್ರಿಯ 10:9–

10). ಆ ಮೊದಲನೇಯದು ಹಳೆ ಒಡಂಬಡಿಕೆ. ಹೊಸದನ್ನು ಪ್ರವೇಶ ಮಾಡುವುದಕ್ಕೆ ಹಳೆಯದನ್ನು ತೆಗೆದು ಹಾಕಿದನು.

2ಕೊರಿಂಥ 3ನೇ ಅಧ್ಯಾಯ ಓದಿದ ನಂತರ ಧರ್ಮಶಾಸ್ತ್ರವು ಇನ್ನೂ ಜಾರಿಯಲ್ಲಿದೆ ಎಂದು ಯಾರು ಅಂದುಕೊಳ್ಳುತ್ತಾರೆ? ಹಳೆ ಒಡಂಬಡಿಕೆ ಮರಣಕ್ಕೆ ಕಾರಣವಾಗುವ ಸೇವೆ. ಹೊಸ ಒಡಂಬಡಿಕೆ ಜೀವಿಸುವಂತೆ ಮಾಡುವ ಆತ್ಮವೆಂದು ಪೌಲನು ಹೇಳಿದ್ದಾನೆ. ಗಲಾತ್ಯ ಪತ್ರಿಕೆಯಲ್ಲಿ ಕ್ರಿಸ್ತನನ್ನು ಬಿಟ್ಟು ತಿರುಗಿ ಧರ್ಮಶಾಸ್ತ್ರದ ಬಳಿಗೆ ಹೋಗುವುದನ್ನು ಬುದ್ಧಿ ಹೀನತೆ ಎಂದು ಆತನು ಬೋಧಿಸಿದ್ದಾನೆ. "ನಿಮ್ಮಲ್ಲಿ ಯಾರಾರು ಕರ್ಮಗಳಿಂದ ನೀತಿವಂತರಾಗ ಬೇಕೆಂದಿರುತ್ತಾರೋ ಅವರು ಕ್ರಿಸ್ತನಿಂದ ಅಗಲಿ ಹೋದರು. ಕೃಪಾಶ್ರಯದೊಳಗಿಂದ ಬಿದ್ದುಹೋದರು" (ಗಲಾತ್ಯ5:4), ಗಲಾತ್ಯ4:21–31 ವಚನಗಳನ್ನು ಸಹ ಓದಿರಿ.

ಆದ್ದರಿಂದ ನಾವು ಮೋಶೆ ಧರ್ಮಶಾಸ್ತ್ರದ ಕೆಳಗೆ ಇಲ್ಲ, ಈಗ ನಾವು ಕ್ರಿಸ್ತನ ಧರ್ಮಶಾಸ್ತ್ರ ಅಥವಾ ಹೊಸ ಒಡಂಬಡಿಕೆಯ ಕೆಳಗೆ ಇದ್ದೇವೆ. ಆದ್ದರಿಂದ ನಾವು ಶಿಲುಬೆಯ ಮೇಲೆ ರಕ್ಷಣೆ ಹೊಂದಿದ ಕಳ್ಳನನ್ನು ನಮ್ಮ ರಕ್ಷಣೆಗೆ ಮಾದರಿಯನ್ನಾಗಿ ಮಾಡಿಕೊಳ್ಳುವುದಿಲ್ಲ. ದಶಮಾಂಶ ಕೊಡುವುದಾಗಲಿ, ಸಂಗೀತ ವಾದ್ಯಗಳನ್ನು ಉಪಯೋಗಿಸುವುದರಲ್ಲಾಗಲಿ, ಸಬ್ಬತ್ ದಿನವಾಗಲಿ ಮುಂತಾದವುಗಳಿಗಾಗಿ ನಾವು ಧರ್ಮಶಾಸ್ತ್ರದ ಬಳಿಗೆ ಹೋಗುವುದಿಲ್ಲ. ಮೋಶೆ ಧರ್ಮಶಾಸ್ತ್ರ ಜಾರಿಯಲ್ಲಿ ಇಲ್ಲದಿರುವುದರಿಂದ ನಾವು ನರಹತ್ಯೆ, ವ್ಯಭಿಚಾರ ಮುಂತಾದವುಗಳನ್ನು ಮಾಡಬೇಕೆಂದು ಅಲ್ಲ. ಅದರಂತೆ ಹೊಸ ಒಡಂಬಡಿಕೆ ಈ ಪಾಪಗಳನ್ನೆಲ್ಲಾ ಮಾನಸಿಕವಾಗಿ ಭೌತಿಕವಾಗಿ ಖಂಡಿಸುತ್ತದೆ.

ಹಳೆಒಡಂಬಡಿಕೆ ದೇವರ ವಾಕ್ಯವಾಗಿದೆಯಾದರೂ ಅದು ಒಂದು ಕಾನೂನಿನ ಹಾಗೆ ಅದು ಜಾರಿಯಲ್ಲಿಲ್ಲ. ನಾವು ಕ್ರಿಸ್ತನ ಶಾಸನದ ಕೆಳಗೆ ಜೀವಿಸುತ್ತೇವೆ. ಆದ್ದರಿಂದ ನಮ್ಮ ನಂಬಿಕೆಗೆ ಆಧಾರನು, ಅದನ್ನು ಮುಂದುವರೆಸುವವನು ಆದ ಕ್ರಿಸ್ತನ ಕಡೆಗೆ ನೋಡುತ್ತಿದ್ದೇವೆ. ಕ್ರಿಸ್ತನು ನಮಗಾಗಿ ಈ ಲೋಕಕ್ಕೆ ಬಂದು ನಿತ್ಯಜೀವದ ನಿರೀಕ್ಷೆಯನ್ನು ಕೊಟ್ಟಾಗ ಧರ್ಮಶಾಸ್ತ್ರದ ಬಳಿಗೆ ಯಾರು ತಿರುಗಿ ಹೋಗುವರು? ನೀನು ಓದುವಾಗ ಪೌಲನ ಸಲಹೆಯನ್ನು ಪಾಲಿಸಿ ವಾಕ್ಯವನ್ನು ಸರಿಯಾಗಿ ವಿಭಜಿಸು (2ತಿಮೊಥೆ 2:15). ಹಾಗೆ ಮಾಡಿದಾಗ ಜಾರಿಯಲ್ಲಿರುವುದು ಯಾವುದೆಂದು ನೀನೆ ತಿಳುದುಕೊಳ್ಳುವಿ.

# 31. ಪವಿತ್ರಾತ್ಮ ವರಗಳ ಅಳತೆಗಳು

## (Measures of the Holy spirit)

ಅದ್ಭುತಗಳು ಇನ್ನೂ ನಡೆಯುತ್ತಿವೆ ಎಂದು ಅನೇಕರು ನಂಬುತ್ತಾರೆ. ಮೊದಲನೇ ಶತಮಾನದಲ್ಲಿ ಅಪೊಸ್ತಲರು ಹೊಂದಿದ ಪವಿತ್ರಾತ್ಮನ ಬಲವು, ಇಂದು ದೇವರ ಮಕ್ಕಳು ಸಹ ಹೊಂದುವರೆಂದು ಬೋಧಿಸುವವರು ಮೇಲೆ ಹೇಳಿದ ಸಿದ್ಧಾಂತವನ್ನು ಪ್ರಕಟಿಸುವರು. ಪವಿತ್ರಾತ್ಮನ ಅಳೆತೆಗಳು (ದಾನಗಳು) ಸರಿಯಾಗಿ ತಿಳಿಯದಿರುವುದರಿಂದ ಈ ಗಲಿಬಿಯೆಲ್ಲವೂ ಉದ್ಭವಿಸಿದೆ.

1. "ಹೇಗೆಂದರೆ ದೇವರು ಯಾರನ್ನು ಕಳುಹಿದ್ದಾನೋ ಆತನಿಗೆ ಆತ್ಮವರವನ್ನು ಅಳತೆ ಮಾಡದೆ ಅನುಗ್ರಹಿಸುವುದರಿಂದ ಆತನು ದೇವರ ಮಾತುಗಳನ್ನೇ ಆಡುತ್ತಾನೆ" (ಯೋಹಾನ 3:34). ಆದ್ದರಿಂದ ಆತನಿಗೆ ಎಲ್ಲವನ್ನು ಮಾಡುವ ಶಕ್ತಿ ಅನುಗ್ರಹಿಸಲ್ಪಟ್ಟಿತು. ಮೂಕರಿಗೆ ಮಾತನಾಡುವಂತೆ, ಕಿವುಡರಿಗೆ ಕೇಳುವಂತೆ, ಜನರ ಗುಂಪುಗಳನ್ನು ಪೋಷಿಸಿದನು, ನೀರಿನ ಮೇಲೆ ನಡೆದನು ಸಮುದ್ರವನ್ನು ಗದರಿಸಿದನು, ಸತ್ತವರನ್ನು ಬದುಕಿಸಿದನು. ಎಲ್ಲಾದಕ್ಕಿಂತ ಅತ್ಯಾಶ್ಚರ್ಯವಾದದ್ದು ಆತನು ಸತ್ತು ಬದುಕಿದನು. ಆದರೆ ಯಾಕೆ? ವಾಕ್ಯವನ್ನು ಸ್ಥಿರಪಡಿಸಿ ನಂಬಿಗಸ್ತರನ್ನಾಗಿ ಮಾಡುವುದಕ್ಕೆ.

2. ಪವಿತ್ರಾತ್ಮನ ಅಭಿಷೇಕವು ಹೊಸ ಒಡಂಬಡಿಕೆಯಲ್ಲಿ ಎರಡು ಸಂದರ್ಭಗಳಲ್ಲಿ ಮಾತ್ರ ನಡೆಯಿತು. ಮೊಟ್ಟ ಮೊದಲು ಅಪೊಸ್ತಲರು ಪವಿತ್ರಾತ್ಮನ ಬಲವನ್ನು ಹೊಂದಿದರು (ಅ.ಕೃ.2ನೇ ಅಧ್ಯಾಯ). ಇದಕ್ಕೆ ಮೊದಲೇ ಅವರನ್ನು ಸರ್ವಸತ್ಯದೊಳಗೆ ನಡೆಸಲು ಸತ್ಯದ ಆತ್ಮನನ್ನು ಕಳುಹಿಸುವೆನೆಂದು ಕ್ರಿಸ್ತನು ಅವರಿಗೆ ವಾಗ್ದಾನ ಮಾಡಿದ್ದನು (ಯೋಹಾನ16:13). ಕ್ರಿಸ್ತನು ಹೊರಟು ಹೋಗುವವನಾಗಿದ್ದನು ಆದರೆ ಅಪೊಸ್ತಲರಿಗೆ ಇನ್ನು ನಡೆಸುವವನು ಅವಶ್ಯವೆಂದು ಗ್ರಹಿಸಿ ಅವರನ್ನು ನಡೆಸುವ ನಿಮಿತ್ತವಾಗಿ ಪವಿತ್ರಾತ್ಮನ ಬಲವನ್ನು ಹೊಂದಿದ ನಂತರ ಇತರ ಭಾಷೆಗಳಲ್ಲಿ ಮಾತನಾಡುವ ಶಕ್ತಿ ಅವರಿಗೆ ದೊರೆಯಿತು. ಅವರು ಕುಂಟರನ್ನು ಸ್ವಸ್ಥಪಡಿಸಿದರು, ರೋಗಿಗಳನ್ನು ಗುಣಪಡಿಸಿದರು ಸತ್ತವರನ್ನು ಎಬ್ಬಿಸಿದರು. ಅದ್ಭುತಗಳನ್ನು ಮಾಡುವಂತೆ ಇತರರ ಮೇಲೆ ಹಸ್ತನಿಕ್ಷೇಪಣೆ ಮಾಡಿದರು. ಅಂತಹ ಶಕ್ತಿಯನ್ನು ಅಪೊಸ್ತಲರು ಹೊಂದಿದ್ದರು.

   ಎರಡನೇಯದಾಗಿ–ಕೊರ್ನೇಲ್ಯನ ಮನೆಯವರು ಪವಿತ್ರಾತ್ಮನ ಬಲವನ್ನು ಹೊಂದಿದರು. ಯೆಹೂದ್ಯರಂತೆ ಅನ್ಯಜನರನ್ನು ಸಹ ದೇವರು ಅಂಗೀಕರಿಸುವನೆಂದು ತಿಳಿಯಪಡಿಸುವುದಕ್ಕೆ ಇದು ನಡೆಯಿತು (ಅ.ಕೃ.10:11).

ಅವರು ಅದನ್ನು ಹೊಂದಿಕೊಂಡು ಅನ್ಯಭಾಷೆಯಲ್ಲಿ (ತಿಳಿಯದಿರುವ ಭಾಷೆ) ಮಾತನಾಡುವುದರ ಮೂಲಕ ಇದನ್ನು ನಿರೂಪಿಸಿದರು. "ನಮ್ಮ ಹಾಗೆಯೇ ಪವಿತ್ರಾತ್ಮ ವರವನ್ನು ಹೊಂದಿದ ಇವರಿಗೆ ನೀರಿನ ದೀಕ್ಷಾಸ್ನಾನವಾಗದಂತೆ ಯಾರಾದರೂ ಅಭ್ಯಂತರ ಮಾಡಾರೇ?" ಎಂದು ಪೇತ್ರನು ಪ್ರಶ್ನಿಸಿದನು (ಅ.ಕೃ.10:47). ಇದನ್ನು ಕುರಿತು ಪೇತ್ರನು ಹೀಗೆ ವರ್ಣಿಸಿದನು, "ನಾನು ಮಾತನಾಡುವುದಕ್ಕೆ ಪ್ರಾರಂಭಿಸಿದಾಗ ಪವಿತ್ರಾತ್ಮವರವು ಮೊದಲು ನಮ್ಮ ಮೇಲೆ ಇಳಿದಂತೆ ಅವರ ಮೇಲೆಯೂ ಇಳಿಯಿತು" (ಅ.ಕೃ.11:15). ನಂಬಿಗಸ್ತರೆಲ್ಲರಂತೆ ಕೊರ್ನೇಲ್ಯನ ಮನೆಯವರು ಪವಿತ್ರಾತ್ಮನ ಬಲವನ್ನು ಹೊಂದಿದರೆಂದು ಪೇತ್ರನು ಹೇಳುತ್ತಿಲ್ಲ ಎಂದು ಗಮನಿಸು. ಆದರೆ ಅವರು ಅಪೊಸ್ತಲರು ಹೊಂದಿದ ರೀತಿಯಲ್ಲಿ ಪವಿತ್ರಾತ್ಮನನ್ನು ಹೊಂದಿದರು.

3. **ಕೈಗಳನ್ನಿಡಲು ಉಂಟಾಗುವ ಪವಿತ್ರಾತ್ಮನ ಅಳತೆಗಳು:** ಮಾಡಬೇಕಾದ ಕೆಲಸ ಹೆಚ್ಚಾಗಿರುವುದರಿಂದಲೂ ಅಪೊಸ್ತಲರು ಕಡಿಮೆ ಇರುವದರಿಂದಲೂ, ಅವರು ಪವಿತ್ರಾತ್ಮನ ಬಲವನ್ನು ಇತರರು ಹೊಂದುವಂತೆ ಅವರ ಮೇಲೆ ಹಸ್ತನಿಕ್ಷೇಪಣೆ ಮಾಡಿದರು. ಮೊದಲು ಏಳು ಜನರ ಮೇಲೆ ಅಪೊಸ್ತಲರು ತಮ್ಮ ಕೈಗಳನ್ನಿಟ್ಟರು (ಅ.ಕೃ.6:6). ಫಿಲಿಪ್ಪನಂತಹ ಸುವಾರ್ತಿಕರು ಸಮಾರ್ಯ ಪ್ರಾಂತ್ಯಕ್ಕೆ ಹೋಗಿ ಅದ್ಭುತಗಳನ್ನು ಮಾಡುವ ಶಕ್ತಿಯನ್ನು ಹೀಗೆ ಹೊಂದಿದರು. ಇದರ ಮೂಲಕ ಅನೇಕರು ಸುವಾರ್ತೆಗೆ ಒಳಗಾದರು. ಆದರೆ ಫಿಲಿಪ್ಪನು ಈ ಶಕ್ತಿಯನ್ನು ಮತ್ತೊಬ್ಬರಿಗೆ ಕೊಡುವುದಕ್ಕೆ ಅವಕಾಶವಿರಲಿಲ್ಲ. ನಂತರ ಅಪೊಸ್ತಲರಾದ ಪೇತ್ರ ಯೋಹಾನರು ಯೆರೂಸಲೇಮಿನಿಂದ ಬಂದು ಅದ್ಭುತಗಳನ್ನು ಮಾಡುವಶಕ್ತಿ ಹೊಂದುವಂತೆ ಜನರ ಮೇಲೆ ಹಸ್ತನಿಕ್ಷೇಪಣೆ ಮಾಡಿದರು (ಕೈಗಳನ್ನಿಟ್ಟರು) (ಅ.ಕೃ.8:14–17).

4. ಸಾಧಾರಣವಾಗಿ ದೊರೆಯುವ ಪವಿತ್ರಾತ್ಮನ ದಾನವನ್ನು ಹೊಂದಿದವರು, ಅಪೊಸ್ತಲರು ಕೈಗಳನ್ನಿಡಲು ಪವಿತ್ರಾತ್ಮನ ಬಲವನ್ನು ಹೊಂದಿದವರು ಬಿಟ್ಟರೆ ಎಲ್ಲರೂ ಪವಿತ್ರಾತ್ಮನ ದಾನವನ್ನು ಸಾಮಾನ್ಯ ಪರಿಮಾಣದಲ್ಲಿ ಹೊಂದಿದರೇ. ಇದನ್ನು ಹೊಂದಿದವರು ಪವಿತ್ರಾತ್ಮನನ್ನು ಹೊಂದುವರಾಗಲಿ ಅದ್ಭುತಗಳನ್ನು ಮಾಡುವ ಶಕ್ತಿಯನ್ನಲ್ಲ. ಪಂಚಾಶತ್ತಮ ದಿನದಂದು ಪೇತ್ರನು "ನಿಮ್ಮ ಪಾಪಗಳು ಪರಿಹಾರವಾಗುವುದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸುಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ. ಆಗ ನೀವು ಪವಿತ್ರಾತ್ಮ ದಾನವನ್ನು ಹೊಂದುವಿರಿ" (ಅ.ಕೃ.2:38) ಎಂದು ಹೇಳಿದನು.

ಪವಿತ್ರಾತ್ಮನ ಬಲವು ಅಪೊಸ್ತಲರಿಗೆ ಮಾತ್ರ ವಾಗ್ದಾನ ಮಾಡಲ್ಪಟ್ಟಿತು. ಕರ್ತನಿಂದ

ಅದು ಅನುಗ್ರಹಿಸಲ್ಪಟ್ಟಿತು, ಅದು ಅವರನ್ನು ಸರ್ವಸತ್ಯದೊಳಗೆ ನಡೆಸಲು, ವಾಕ್ಯವನ್ನು ಸ್ಥಿರಪಡಿಸಲು, ಹೊಸ ಒಡಂಬಡಿಕೆಯನ್ನು ಬರೆಯುವುದರಲ್ಲಿ ನಡೆಸಲು ಸಹಾಯ ಕಾರಿಯಾಗಿ ಕೊಡಲ್ಪಟ್ಟಿತು. ಕೊರ್ನೇಲನ ಮನೆಯವರಾದರೆ ನೀರಿನ ದೀಕ್ಷಾಸ್ನಾನ ಹೊಂದುವುದಕ್ಕೆ ಮುಂಚೆಯೇ ಪವಿತ್ರಾತ್ಮನ ದೀಕ್ಷಾಸ್ನಾನ ಹೊಂದಿದರು.

ಕೈಗಳನ್ನು ಇಡುವುದರ ಮೂಲಕ ಪವಿತ್ರಾತ್ಮನನ್ನು ಹೊಂದುವ ವರವು ಅಪೊಸ್ತಲರಿಗೆ ಮಾತ್ರವೇ ಕೊಡಲ್ಪಟ್ಟಿತ್ತು. ಅಪೊಸ್ತಲರು ಯಾರ ಮೇಲೆ ಕೈಗಳನ್ನಿಟ್ಟರೋ ಅವರು ಮರಣ ಹೊಂದಿದ ನಂತರ ಆತ್ಮ ಸಂಭದವಾದ ಅದ್ಭುತ ಕಾರ್ಯಗಳು ನಿಂತು ಹೋದವು. ಅಷ್ಟರೊಳಗಾಗಲೇ ಹೊಸ ಒಡಂಬಡಿಕೆಯು ಸಂಪೂರ್ಣವಾಗಿ ಬರೆಯಲ್ಪಟ್ಟಿತ್ತು. ಅವರ ಮೂಲಕ ಮನುಷ್ಯನು ಸತ್ಯದಲ್ಲಿ ನಡೆಸುವ ಉದ್ದೇಶಕ್ಕಾಗಿ ಅವುಗಳ ಅವಶ್ಯಕತೆ ಇನ್ನು ಇಲ್ಲದೆ ಹೋಯಿತು (ಯಾಕೋಬ 1:25; 2ತಿಮೊಥೆ 3:16–17).

ಆದರೆ ಈ ದಿನಗಳಲ್ಲಿ ಸಹ ಪವಿತ್ರಾತ್ಮನ ಬಲವನ್ನು (ಶಕ್ತಿಯನ್ನು) ಹೊಂದಿದ್ದೇವೆ ಎಂದು, ಅದ್ಭುತಗಳನ್ನು ಮಾಡುವ ಶಕ್ತಿ ಇದೆ ಎಂದು ಹೇಳುವವರ ಸಂಗತಿ ಏನು? ಅವರು ಮೋಸ ಹೋದವರಾಗಿ, ತಪ್ಪಾಗಿ ನಡೆಸಲ್ಪಟ್ಟ ವಂಚಕರಾಗಿದ್ದಾರೆ. ಅವರು ದೇವರ ಚಿತ್ತದ ಪ್ರಕಾರ ಮಾಡದಿದ್ದಾಗ ಆತ್ಮನು ಅವರನ್ನು ಹೇಗೆ ನಡೆಸುವನು? ಬೈಬಲ್‌ನಲ್ಲಿ ಇಲ್ಲದಿರುವ ಸಭೆಯೊಳಗೆ ಪವಿತ್ರಾತ್ಮನು ಅವರನ್ನು ಹೇಗೆ ನಡೆಸುವನು? ಮಾನವ ಕಲ್ಪಿತ ಹೆಸರುಗಳನ್ನು ಧರಿಸಲು ಅವಕಾಶ ಕೊಡುವನೇ? ಹಾಗೆ ಎಂದಿಗೂ ಇಲ್ಲ. ನಿಜವಾಗಿ ಅವರಿಗೆ ಅದ್ಭುತ ಶಕ್ತಿ ಇರುವುದಾದರೆ ಅಪೊಸ್ತಲರು, ಯೇಸು ಕ್ರಿಸ್ತನು ಮಾಡಿದವುಗಳನ್ನೆಲ್ಲಾ ಮಾಡುವರು. ಅವರು ಜಂಭಕೊಚ್ಚಿಕೊಳ್ಳುವರೇ ಹೊರತು ಮತ್ತೇನನ್ನು ಮಾಡಲಾರರು. ನನ್ನ ಸಹೋದರನೆ, ಅವರ ಸುಳ್ಳು ಬೋಧನೆಗಳಿಗೆ ಒಳಗಾಗಿ ಮೋಸಹೋಗಬೇಡ. ಬೈಬಲ್ ಮಾತ್ರ ನಿನಗೆ ಮಾರ್ಗದರ್ಶಕವಾಗಿರಲಿ.

# ೩೨. ಅನ್ಯ ಭಾಷೆ
## (The Unknown Tongue)

ಅನ್ಯಭಾಷೆಯಲ್ಲಿ ಮಾತನಾಡುವ ಶಕ್ತಿ ನಮಗೂ ಇದೆ ಎಂದು ಹೇಳಿಕೊಳ್ಳುವ ಅನೇಕರು ನಮ್ಮ ಮದ್ಯದಲ್ಲಿ ಇದ್ದಾರೆ. ದೇವರ ಆತ್ಮನು ಅವರ ಮೂಲಕ ಮಾತನಾಡುತ್ತಾನೆಂದು ಹೇಳುವರು. ಅವರು ಮಾತನಾಡುವುದು ಅವರಿಗಾಗಲಿ, ಕೇಳುವವರಿಗಾಗಲಿ ತಿಳಿಯುವುದಿಲ್ಲ ಅದು ದೇವರಿಗೆ ಮಾತ್ರ ತಿಳಿಯುತ್ತದೆ ಎಂದು ಅವರು ಹೇಳುತ್ತಾರೆ. ಅಂತಹದನ್ನು ಬೈಬಲ್ ಎಲ್ಲಿಯೂ ಬೋಧಿಸಿಲ್ಲ ಅಂತವರು ಕೇವಲ ಮೋಸ ಹೋದವರು. ಅವರು ಮಾತನಾಡುವುದು ಅನ್ಯಭಾಷೆಯಲ್ಲ, ಅದು ಯಾವ ಭಾಷೆಯು ಅಲ್ಲ. ಆದರೆ ಅದು ಕೇವಲ ಶಬ್ಧವನ್ನು ಮಾತ್ರಮಾಡುವರು, ಕಿರುಚಿಕೊಳ್ಳುವರು.

ಭಾಷೆಗಳಿಂದ ಮಾತನಾಡುವುದನ್ನು ಕುರಿತು ಬೈಬಲ್ ಹೇಳುತ್ತದೆ (1ಕೊರಿಂಥ 14:2). ಆದರೆ ಮಾತನಾಡುವವನಿಗೆ ಅದು ಅನ್ಯಭಾಷೆ ಆಗದು, ಮಾತನಾಡುವವನಿಗೆ ಅದು ಅರ್ಥವಾಗುತದೆ, ಕೇಳುವವನಿಗೆ ಅದು ಅರ್ಥವಾಗುವುದಿಲ್ಲ. ಆದ್ದರಿಂದ ಅವನಿಗೆ ಇರುವ ಗ್ರಹಿಕೆ ಶೂನ್ಯವಾಗುತ್ತದೆ. ಆದ್ದರಿಂದ ಅವನು ದೇವರೊಂದಿಗೆ ಮಾತನಾಡುವನು, ತನ್ನ ಭಕ್ತಿ ಅಭಿವೃದ್ಧಿಪಡಿಸಿಕೊಳ್ಳುವನು. ಆದರೆ ಕೇಳುವವನಿಗೆ ಅವನು ಹೇಳುವದು ಅರ್ಥವಾಗುವುದಿಲ್ಲ ಹೇಗೆಂದರೆ ಅವನು ಅನ್ಯ ಭಾಷೆಯಲ್ಲಿ ಮಾತನಾಡುತ್ತಾನೆ (1ಕೊರಿಂಥ 14:4).

'ಭಾಷೆ' ಎಂದರೆ ನಾವು ಅರ್ಥ ಮಾಡಿಕೊಳ್ಳುವ ಮಾತುಗಳೆಂದು ನಮಗೆ ತಿಳಿದಿದೆ. ಅದನ್ನು ಪೌಲನು ಹೀಗೆ ಹೇಳಿದ್ದಾನೆ " ಹಾಗೆಯೇ ನೀವೂ ತಿಳಿಯಬಹುದಾದ ಭಾಷೆಯನ್ನೂ ಬಾಯಿಂದ ಆಡದೆ ಹೋದರೆ ನಿಮ್ಮ ಮಾತಿನ ಅರ್ಥ ಹೇಗೆ ತಿಳಿಯುವುದು? ನೀವು ಗಾಳಿಯ ಸಂಗಡ ಮಾತಾಡಿದ ಹಾಗಿರುತ್ತದಷ್ಟೆ" (1ಕೊರಿಂಥ 14:9). "ಯಾಕೆಂದರೆ ವಾಣಿಯನ್ನಾಡುತ್ತಾ ದೇವರನ್ನು ಪ್ರಾರ್ಥಿಸಿದರೆ ನನ್ನಾತ್ಮವು ಪ್ರಾರ್ಥಿಸುವದೇ ಹೊರತು ನನ್ನ ಬುದ್ಧಿ ನಿಷ್ಫಲವಾಗಿರುವುದು ಹಾಗಾದರೇನು? ನಾನು ಆತ್ಮದಿಂದ ಪ್ರಾರ್ಥಿಸುವೆನು, ಬುದ್ಧಿಯಿಂದಲೂ ಪ್ರಾರ್ಥಿಸುವೆನು, ಆತ್ಮದಿಂದ ಹಾಡುವೆನು, ಬುದ್ಧಿಯಿಂದಲೂ ಹಾಡುವೆನು" (1ಕೊರಿಂಥ14:14–15). ಅನ್ಯ ಬಾಷೆಗಳನ್ನು ಕೇಳುತ್ತಿರುವವರಿಗೆ ಅದು ಅನ್ಯ ಮಾತುಗಳಂತೆ ತೋರುತ್ತದೆ. ಅಂತಹ ಸಂದರ್ಭದಲ್ಲಿ ಪೌಲನು ಪ್ರಾರ್ಥನೆ ಮಾಡುವೆನೆಂದು ಹೇಳುತ್ತಿದ್ದಾನೆ. ಆದರೆ ಆತನನ್ನು ಕೇಳುವವರಿಗೆ ಅದು ಅರ್ಥವಾಗುವುದಿಲ್ಲ. ಹಾಡುವುದರಲ್ಲಿ ಸಹ ಇದೇ ಅನ್ವಯಿಸುತ್ತದೆ. ಆದ್ದರಿಂದ ಆತ್ಮದಿಂದ ಬುದ್ಧಿಯಿಂದಲು ಪ್ರಾರ್ಥಿಸುವದಕ್ಕೂ ಹಾಡುವದಕ್ಕೂ ಪೌಲನು ನಿಶ್ಚಯಿಸಿಕೊಂಡನು.

ಮತ್ತೆ ಪೌಲನು ಹೀಗೆ ಹೇಳುತ್ತಾನೆ "ಅನ್ಯ ಭಾಷೆಯವರ ಮೂಲಕವಾಗಿಯೂ

ಪರದೇಶಸ್ಥರ ನಾಲಿಗೆಯಿಂದಲೂ ನಾನು ಈ ಜನರ ಸಂಗಡ ಮಾತಾಡುವೆನು; ಆದರೂ ಅವರು ನನ್ನ ಮಾತಿಗೆ ಕಿವಿ ಕೊಡುವುದಿಲ್ಲವೆಂದು ಕರ್ತನು ಹೇಳುತ್ತಾನೆಂಬದಾಗಿ ಧರ್ಮಶಾಸ್ತ್ರದಲ್ಲಿ ಬರೆದದೆ. ಆದ್ದರಿಂದ ವಾಣಿಗಳನ್ನಾಡುವುದು ನಂಬದವರಿಗೆ ಸೂಚನೆಯಾಗಿದೆಯೇ ಹೊರತು ನಂಬುವವರಿಗೆ ಸೂಚನೆಯಲ್ಲವೆಂದು ನಾವು ತಿಳುಕೊಳ್ಳಬೇಕು" (1ಕೊರಿಂಥ14:21–22). ಮತ್ತು ಪೌಲನು ಹೀಗೆ ಹೇಳುತ್ತಾನೆ "ವಾಣಿಯನ್ನಾಡುವುದಾದರೆ ಇಬ್ಬರು ಅಥವಾ ಅವಶ್ಯಕವಿದ್ದರೆ ಮೂವರಿಗಿಂತ ಹೆಚ್ಚಿಲ್ಲದೆ ಒಬ್ಬೊಬ್ಬರಾಗಿ ಮಾತಾಡಬೇಕು; ಮತ್ತು ಒಬ್ಬನೇ ಅರ್ಥವನ್ನು ಹೇಳಬೇಕು" (1ಕೊರಿಂಥ 14:27–28). ಅನ್ಯಭಾಷೆ ವಿಧ್ಯೆಹೀನರಿಗೆ ಅರ್ಥವಾಗದು. ಸರದಿ ಪ್ರಕಾರ ಮಾತನಾಡಿದ ನಂತರ ಅದರ ಅರ್ಥವನ್ನು ಹೇಳಬೇಕು. ಅರ್ಥವನ್ನು ಹೇಳುವವನು ಇಲ್ಲದಿದ್ದರೆ ಮೌನವಾವಾಗಿ ಇರಬೇಕು. ಇಲ್ಲವೆ ತನ್ನೊಂದಿಗೆ ದೇವರೊಂದಿಗೆ ಮಾತಾಡಿಕೊಳ್ಳಲಿ. ಇನ್ನೊಂದು ಮಾತಿನಲ್ಲಿ ಅವರೊಳಗೆ ಅವರು ಪ್ರಾರ್ಥನೆ ಮಾಡಿಕೊಳ್ಳಲಿ.

ಅನ್ಯಭಾಷೆಗಳಿಂದ ಮಾತನಾಡುವ ಶಕ್ತಿ ಯಾರು ಹೊಂದಿದ್ದರು? ಅಪೊಸ್ತಲರು ಹೊಂದಿದ್ದರು. ಪವಿತಾತ್ಮನ ದೀಕ್ಷಾಸ್ನಾನವನ್ನು ಹೊಂದುವಿರೆಂದು ಯೇಸುಕ್ರಿಸ್ತನು ಅವರಿಗೆ ವಾಗ್ದಾನ ಮಾಡಿದ್ದನು. ಅವರು ಅದನ್ನು ಹೊಂದಿದ ನಂತರ ಅವರು ಅನ್ಯಭಾಷೆಯಲ್ಲಿ ಮಾತನಾಡಿದರು (ಅ.ಕೃ.2:6). ಕೊರ್ನೇಲ್ಯನ ಮನೆಯವರು ಸಹ ಪವಿತ್ರಾತ್ಮನ ದೀಕ್ಷಾಸ್ನಾನ ಹೊಂದಿದರು. ಅನ್ಯಜನರು ಸಹ ಯೆಹೂದ್ಯರಂತೆ ದೇವರ ಅಂಗೀಕಾರಕ್ಕೆ ಯೋಗ್ಯರೆಂದು ನಿರೂಪಿಸುವುದಕ್ಕೆ ಅವರು ಅದನ್ನು ಹೊಂದಿದರು. ಅವರು ಅನ್ಯಭಾಷೆಯಲ್ಲಿ ಮಾತನಾಡಿದರು (ಅ.ಕೃ.10ಅಧ್ಯಾಯ). ಇನ್ನು ಅಪೊಸ್ತಲರು ಕೈಗಳನಿಟ್ಟಾಗ ಭಾಷೆಗಳನ್ನು ಮಾತನಾಡಿದವರಿದ್ದಾರೆ (ಅ.ಕೃ.19:1–7). ಇಂತವರು ಇನ್ನಾರಾದರೂ ಇದ್ದಾರಾ? ಒಂದುವೇಳೆ ಇರುವುದೇ ಆದರೆ ಅವರನ್ನು ಕುರಿತು ಬೈಬಲ್ ಎಲ್ಲಿಯೂ ಹೇಳಿಲ್ಲ. ಆದರೆ ಅವರಿಗೆ ಈ ಶಕ್ತಿ ಯಾಕೆ ಕೊಡಲ್ಪಟ್ಟಿತು? ಅವರು ಈ ಲೋಕದಲ್ಲಿ ಬೇರೆ ಬೇರೆ ದೇಶಗಳಿಗೆ ಹೋಗಿ, ಆ ದೇಶದ ಭಾಷೆಯನ್ನು ಕಲಿಯುವ ಅವಶ್ಯಕತೆ ಇಲ್ಲದೆ, ಒಬ್ಬ ಅನುವಾದಕನ (ಭಾಷಾಂತರ) ಸಹಾಯವಿಲ್ಲದೆ ಸುವಾರ್ತೆಯನ್ನು ಸಾರುವುದಕ್ಕೆ ಈ ಶಕ್ತಿ ಕೊಡಲಾಯಿತು. ಅದು ಎಲ್ಲಿಯವರೆಗೆ ಕೊಡಲ್ಪಟ್ಟಿತ್ತು? ಹೊಸ ಒಡಂಬಡಿಕೆ ಪೂರ್ತಿಯಾಗಿ ಬರೆಲಯಲ್ಪಟ್ಟು ಲೋಕಕ್ಕೆ ಕೊಡುವವರೆಗೆ. ಅದ್ಭುತಗಳು ಸೂಚಕಕ್ರಿಯೆಗಳು ನಿಂತುಹೋಗುವವು ಎಂದು ಪೌಲನು ಹೇಳಿದನು (1ಕೊರಿಂಥ 13:8–10; ಯಾಕೋಬ 1:25). ಆದ್ದರಿಂದ ಅದ್ಭುತ ರೀತಿಯಾಗಿ ಈ ದಿನ ಮಾತನಾಡುವ ಭಾಷೆಗಳು ಇಲ್ಲ. ಅವುಗಳ ಅವಶ್ಯಕತೆಯೂ ಇಲ್ಲವೇ ಇಲ್ಲ. ಪ್ರಪಂಚದಾದ್ಯಂತ ಎಲ್ಲಾ ಭಾಷೆಗಳಲ್ಲಿ ಬೈಬಲ್ ಭಾಷಾಂತರಗೊಂಡಿದೆ.

ಅನ್ಯಭಾಷೆಯಲ್ಲಿ ಇಂದು ಮಾತನಾಡುವವರು ಅನೇಕ ವಿಷಯಗಳನ್ನು ಮರೆತು ಹೋಗುತ್ತಿದ್ದಾರೆ.

1. ಪವಿತ್ರಾತ್ಮನ ದೀಕ್ಷಾಸ್ನಾನ ಅವರಿಗಾಗಿ ವಾಗ್ದಾನ ಮಾಡಲ್ಪಟ್ಟಿಲ್ಲ.

2. ಅಪೊಸ್ತಲರು ಕೈಗಳನ್ನಿಟ್ಟಾಗ ಪವಿತ್ರಾತ್ಮನ ಬಲವನ್ನು ಹೊಂದಬಹುದು. ಆದರೆ ಅಪೊಸ್ತಲರು ಈಗ ಇಲ್ಲ ಸತ್ತುಹೋಗಿದ್ದಾರೆ ಆದ್ದರಿಂದ ಅವರು ಮಾಡಿದ ಕೆಲಸವನ್ನು ಮತ್ತೆ ಯಾರೂ ಮಾಡಲಾರರು.

3. ಭಾಷೆಗಳಿಂದ ಮಾತನಾಡುವದು ಅಂದರೆ ಮತ್ತೊಂದು ಭಾಷೆಯಿಂದ ಮಾತನಾಡುವದೆಂದು ಅರ್ಥ. ಆದರೆ ಅರ್ಥವಿಲ್ಲದ ಶಬ್ಧಗಳನ್ನು ಉಪಯೋಗಿಸುದಲ್ಲ.

4. ಅನ್ಯಭಾಷೆಗಳು, ನಂಬದವರಿಗೆ ಸೂಚನೆಯಾಗಿವೆ. (ಆದರೆ ಈ ದಿನ ನಂಬಿಕೆ ಇರುವ ಸಭೆಯ ಮದ್ಯ ಅವರು ಮಾತನಾಡುವರು...!).

5. ಈ ದಿನ ಮಾತನಾಡುವವರಿಗೆ, ಕೇಳುವವರಿಗೆ ಆ ಭಾಷೆ ಏನೂ ಅರ್ಥವಾಗುವುದಿಲ್ಲ. ಅದನ್ನು ದೇವರು ಹೇಗೆ ಗ್ರಹಿಸಿಕೊಳ್ಳುವನು? ಹೊಸ ಒಡಂಬಡಿಕೆಯ ದಿನಗಳಲ್ಲಿ ಹೀಗೆ ಇಲ್ಲ. ಆದ್ದರಿಂದ ಇಂದಿನ ಜನರಿಗೆ ಅಂದು ಇದ್ದ ಶಕ್ತಿ ಇಂದು ಇಲ್ಲ.

ಅನ್ಯಭಾಷೆಗಳಿಂದ ಮಾತನಾಡುತ್ತೇವೆ ಎಂದು ಹೇಳಿ ಕೊಳ್ಳುವವರು, ಅಪೊಸ್ತಲರು ಪಂಚಶತ್ತಮ ದಿನದಂದು ಮಾತನಾಡಿದಂತೆ ಇತರ ಭಾಷೆಗಳಲ್ಲಿ ಮಾತನಾಡುವುದಿಲ್ಲ. ಅವರ "ಮಹಾ ಬೋಧಕರು" ವಿದೇಶಗಳಿಗೆ ಹೋದಾಗ ಅಲ್ಲಿ ಅವರಿಗೆ ಭಾಷಾಂತರ ಮಾಡುವವರ ಮೂಲಕ ಅವರು ಮಾತನಾಡುವರು. ಆದ್ದರಿಂದ ಇಂದಿನ ಅನ್ಯಭಾಷೆಗಳಿಗೂ ಅಂದಿನ ಅನ್ಯಭಾಷೆಗಳಿಗೂ ಹೋಲಿಕೆ ಇಲ್ಲ.

ಕೊನೆಯದಾಗಿ ಅನೇಕರು ಮೋಸ ಹೋಗುತ್ತಿದ್ದಾರೆಂದು ನಾವು ಗ್ರಹಿಸಿಕೊಳ್ಳಬೇಕು. ಈ ಅಂಶದ ಮೇಲೆ ಸತ್ಯವನ್ನು ಗ್ರಹಿಸಿಕೊಳ್ಳುವುದಕ್ಕಾಗಿ ನಿಮ್ಮ ಬೈಬಲ್ ಅನ್ನು ಚೆನ್ನಾಗಿ ಓದಿರಿ. ಆದರೆ ನನಗೆ ಅವರಿಗಿಲ್ಲದ ಶಕ್ತಿ ಇದೆ ಎಂದು ನಂಬಿ ಮೋಸ ಹೋಗಬೇಡ. ಅಂತಹ ಶಕ್ತಿ ಇಂದಿನ ಮನುಷ್ಯರಿಗೆ ಕೊಡಲ್ಪಟ್ಟಿಲ್ಲ.

# ೩೩. ಮತ ಸಂಬಂದವಾದ ಹೆಸರುಗಳು ಮತ್ತು ಬಿರುದುಗಳು
## (Religious Names and Titles)

ಮನುಷ್ಯನು ಡಾಂಬಿಕನು (ಆಡಂಭರ), ಹೆಸರು, ಸ್ಥಾನ ಮಾನಗಳು, ಪ್ರಖ್ಯಾತಿಯನ್ನು ಆಶಿಸುವವನು, ಪ್ರೀತಿಸುವವನು, ಬಿರುದುಗಳಿಗಾಗಿ, ಅಧಿಕಾರಕ್ಕಾಗಿ ಆತನು ಅನೇಕ ಪ್ರಯತ್ನಗಳನ್ನು ಮಾಡುವನು. ಒಬ್ಬ ಕ್ರೈಸ್ತವನಂತೆ, ಬೋಧಕನಂತೆ ಇರುವುದು ಅವನಿಗೆ ಸಾಕಾಗದು. ಇನ್ನೂ ಹೆಚ್ಚು ಅವನಿಗೆ ಬೇಕು. ಇಂತಹ ಅಭಿಲಾಷೆಯನ್ನು ತೀರಿಸಿಕೊಳ್ಳುವುದಕ್ಕೆ ಮನುಷ್ಯನು ತನಗೆ ಇಷ್ಟ ಬಂದಂತೆ ಹೆಸರನ್ನು, ಬಿರುದುಗಳನ್ನು, ಆಚಾರಗಳನ್ನು, ಕಲ್ಪಿಸುವನು. ಆದ್ದರಿಂದಲೇ ದೇವರೊಂದಿಗೆ ಆರಂಭಿಸಿದ ಹೆಸರುಗಳನ್ನು (ನಾಮವನ್ನು), ಬಿರುದುಗಳನ್ನು, ಪದವಿಗಳನ್ನು ಮನುಷ್ಯರು ಇಟ್ಟುಕೊಳ್ಳುವುದು ಇಂದು ಗಮನಿಸಬಹುದು. ಇಂತಹವುಗಳನ್ನು ಕುರಿತು ದೇವರು ದ್ವೇಷಿಸಿ (ವಿರೋಧಿಸಿ) ಮಾತನಾಡಿದನು. ಅವುಗಳಲ್ಲಿ ಕೆಲವುಗಳನ್ನು ಈಗ ಪರಿಶೀಲಿಸೋಣ.

1. ರೆವರೆಂಡ್: ಇದನ್ನು ಅನೇಕ ಮಂದಿ ಒಂದು ದೊಡ್ಡ ಬಿರುದು ಆಗಿ ಧರಿಸಿಕೊಳ್ಳುತ್ತಾರೆ. ಅದರೊಂದಿಗೆ ಸರಿಹೋಗದಿದ್ದರೆ ಅದಕ್ಕಿಂತಲೂ ಹೆಚ್ಚಿನ ಗೌರವ ಕಲ್ಪಿಸಿ ಕೊಳ್ಳುವುದಕ್ಕೆ "ರೈಟ್ ರೆವರೆಂಡ್" ಎಂದು ಕರೆಯಿಸಿಕೊಳ್ಳುವವರಿದ್ದಾರೆ. ಆದರೆ ಈ ಬಿರುದನ್ನು ಧರಿಸಿಕೊಳ್ಳುವವರಾಗಲಿ, ಅದರ ಮೂಲಕ ಗೌರವಿಸಲ್ಪಡುವವರಿಗೆ "ರೆವರೆಂಡ್" ಎನ್ನುವ ಪದವು ಬೈಬಲ್ ನಲ್ಲಿ ಒಂದೇ ಸಾರಿ ಉಯೋಗಿಸಲ್ಪಟ್ಟಿದೆಂದು, ಅದು ದೇವರಿಗೆ ಮಾತ್ರವೇ ಅನ್ವಯಿಸುತ್ತದೆ ಎನ್ನುವುದನ್ನು ಗ್ರಹಿಸದೇ ಹೋಗಿದ್ದಾರೆ. ದೇವರನ್ನು ಕುರಿತು ದಾವೀದನು ಮಾತನಾಡುತ್ತಾ "ಆತನ ನಾಮವು ಪರಿಶುದ್ಧವೂ ಭಯಂಕರವೂ ಆಗಿದೆ" ಎಂದು ಹೇಳಿದ್ದಾನೆ (ಕೀರ್ತನೆ111:9). ನೀನು ದೇವರ? ನಿನ್ನ ಬೋಧಕನನ್ನು ರೆವರೆಂಡ್ ಎಂದು ಕರೆಯುವ ನಿನ್ನ ಗತಿ ಏನು? ಆತನು ದೇವರ? ಈ ಪದವನ್ನು ಮನುಷ್ಯರಿಗೆ ಉಪಯೋಗಿಸುವವರೆಲ್ಲರಿಗೂ ನಾಚಿಕೆ ಉಂಟಾಗಬೇಕು. ಅದು ದೇವರಿಗೆ ಮಾತ್ರವೇ ಅನ್ವಯಿಸುತ್ತದೆ. ಅದನ್ನು ಆತನಿಂದ ತೆಗೆಯುವುದಕ್ಕೆ ಪ್ರಯತ್ನಿಸಬೇಡ.

2. ಫಾದರ್: ಸಾವಿರಗಟ್ಟಲೆ ಮತಾಧಿಕಾರಿಗಳು (ಗುರು) ಫಾದರ್ ಎಂದು ಕರೆಯಲ್ಪಡುತ್ತಿದ್ದಾರೆ 'ಫಾದರ್' (ತಂದೆ) ಎಂದು ಮಾತ್ರವಲ್ಲ, 'ಹೋಲಿ ಫಾದರ್' (ಪರಿಶುದ್ಧ ತಂದೆ) ಎಂದು ಸಹ ಕರೆಯಲ್ಪಡುತ್ತಿದ್ದಾರೆ ಈ ಬಿರುದನ್ನು ಧರಿಸಿಕೊಂಡವರನ್ನು ಮತ್ತೊಂದು ರೀತಿಯಲ್ಲಿ ಕರೆದರೆ ಅದು ಅಗೌರವ. ಅವರೆಲ್ಲರೂ ಯೇಸು ಹೇಳಿದ ಸಂಗತಿ ಜ್ಞಾಪಕದಲ್ಲಿಟ್ಟುಕೊಳ್ಳಬೇಕು; ಇದಲ್ಲದೆ ಭೂಲೋಕದಲ್ಲಿ ಯಾರನ್ನೂ ನಮ್ಮ ತಂದೆ ಎಂದು ಕರೆಯಬೇಡಿರಿ; ಪರಲೋಕದಲ್ಲಿರುವಾತನೊಬ್ಬನೇ ನಿಮಗೆ ತಂದೆ" (ಮತ್ತಾಯ 23:9). ಇಂತಹ

ಬಿರುದುಗಳನ್ನು ಧರಿಸಿಕೊಳ್ಳುವುದು ದೇವರನ್ನು ವಿರೋಧಿಸುವುದೆಂದು ಅರ್ಥವಾಗುತ್ತದೆ.

3. ಪಾಸ್ಟರ್: ಮತಶಾಖೆಗಳ ಸಂಸ್ಥೆಯವರು ಅವರ ಬೋಧಕರನ್ನು ಪಾಸ್ಟರ್ ಎಂದು ಕರೆಯುತ್ತಾರೆ. ಆ ಬೋಧಕರು ಹಾಗೆಯೇ ಕರೆಯಿಸಿಕೊಳ್ಳುತ್ತಾರೆ. ವಾಕ್ಯವನ್ನು ಓದಿ ನೋಡಿದರೆ ಪಾಸ್ಟರ್ ಎಂಬ ಪದವು ಹೀಗೆ ಉಪಯೋಗಿಸ್ಪಟ್ಟಿದೆ. ಪಾಸ್ಟರ್ ಅಂದರೆ ಸಭೆಯನ್ನು ಕಾಯುವವನು, ಕುರುಬನು ಎಂದು ಅರ್ಥ. ನಾವು ಕಾಯುವವರನ್ನು ಕುರಿತು ಓದುವೆವು ಹೊರತು ಕಾಯುವವನನ್ನು ಕುರಿತು ಬೈಬಲ್‌ನಲ್ಲಿ ಓದುವುದಿಲ್ಲ. ಕಾಯುವವರಾಗಿ ನೇಮಿಸಲ್ಪಟ್ಟರು. 1ತಿಮೊಥೆ 3ರಲ್ಲಿ ಮತ್ತು ತೀತ 1ರಲ್ಲಿ ಪೌಲನು ಹೇಳಿದ ಅರ್ಹತೆಗಳನ್ನು ಸಂಪಾದಿಸಿಕೊಂಡಾಗ ಅವರು ನೇಮಿಸಲ್ಪಟ್ಟರು. ಅವರು ಅಧ್ಯಕ್ಷರೆಂದು (ಸಭಾಧ್ಯಕ್ಷರು), ಹಿರಿಯರು, ಕಾಯುವವರು, ಪ್ರಸ್ಬಿಟರ್ ಎಂದು ಕರೆಯಲ್ಪಟ್ಟರು. ಪ್ರತೀ ಸ್ಥಾನಿಕ ಸಭೆಯಲ್ಲಿ ಒಬ್ಬರಿಗಿಂತಲೂ ಹೆಚ್ಚಿನ ಹಿರಿಯರು ಅಥವಾ ಕಾಯುವವರು ಇದ್ದರು. ಇಂದು ಕ್ರೈಸ್ತರೆಂದು ಹೇಳಿಕೊಳ್ಳುವವರು ಉಪಯೋಗಿಸಿಕೊಳ್ಳುವದು ಬೈಬಲ್ ಪ್ರಕಾರವಲ್ಲದ ಒಂದು ಮತಾಚಾರವಾಗಿದೆ.

4. ಡಾಕ್ಟರ್: ಡಾಕ್ಟರೇಟ್ ಡಿಗ್ರಿ ಬರುವವರೆಗೆ ಯಾರಾದರು ವಿಧ್ಯಾಭ್ಯಾಸ ಮಾಡಿರುವುದಾದರೆ ಆ ಬಿರುದನ್ನು ಮತ ಬಿರುದಾಗಿ ಉಪಯೋಗಿಸುವ ಅವಶ್ಯವಿಲ್ಲ. ಆ ರೀತಿ ಉಪಯೋಗಿಸಿದರೆ ಅದರ ಪ್ರಯೋಜನವನ್ನು ಕಳೆದುಕೊಳ್ಳುತ್ತದೆ. ಘನತೆಯಿಂದ ಅಧಿಕಾರವನ್ನು ಸಂಪಾದಿಸಿಕೊಳ್ಳಬೇಕೆಂಬ ಅಭಿಲಾಷೆಯನ್ನು ಯೇಸು ಕ್ರಿಸ್ತನು ಖಂಡಿಸಿದ್ದಾನೆ (ಮತ್ತಾಯ 20:25–27).

5. ಪೋಪ್: ಬೈಬಲ್‌ನಲ್ಲಿ ಇಲ್ಲದಿರುವ ಬಿರುದು ಇದು. ದೇವರಾಗಲಿ, ಕ್ರಿಸ್ತನಾಗಲಿ, ವಾಕ್ಯವಾಗಲಿ ಯಾರಾದರೂ ಒಬ್ಬ ಮನುಷ್ಯನು ಭೂಮಿಯ ಮೇಲೆ ಸಭೆಗೆ ಶಿರಸ್ಸಾಗಿರಬೇಕೆಂದು ಅವನು ಪೋಪ್ ಎಂಬ ಬಿರುದನ್ನು ಧರಿಸಿಕೊಳ್ಳಬೇಕುಂದು ಬೋಧಿಸುತ್ತಿಲ್ಲ. ಅದು ದೇವರ ಸಂಬಂಧವಾದದ್ದಲ್ಲ. ಕ್ರಿಸ್ತನೇ ಸಭೆಗೆ ಶಿರಸ್ಸಾಗಿದ್ದಾನೆ ಎಂದು ವಾಕ್ಯವು ಹೇಳುತ್ತದೆ. (ಕೊಲೊಸ್ಸೆ 1:18; ಎಫೆಸ 1:22–23). ಒಬ್ಬ ಮನುಷ್ಯನು ಸಭೆಗೆ ಶಿರಸ್ಸನ್ನಾಗಿ ನೇಮಿಸಿದರೆ ಕ್ರಿಸ್ತನು ಜೀವಿಸಿಲ್ಲ, ಮರಣಿಸಿದ್ದಾನೆ ಎಂದು ಅರ್ಥ.

ಮೇಲೆ ಹೇಳಿದ ಬಿರುದುಗಳಲ್ಲದೆ ಇನ್ನೂ ಅನೇಕವಿವೆ, ಅಂತಹ ಬಿರುದುಗಳನ್ನೆಲ್ಲಾ ವಾಕ್ಯವು ನಿಷೇಧಿಸುತ್ತದೆ. ದೇವರ ತಾಯಿ, ಪ್ರೀಸ್ಟ್, ಬಿಷಪ್, ಆರ್ಚ್‌ಬಿಷಪ್, ಪ್ರೆಸಿಡೆಂಟ್, ಪಾಸ್ಟರ್, ಇನ್‌ಚಾರ್ಜ್ ಮುಂತಾದವುಗಳನ್ನು ವಾಕ್ಯವು ನಿಷಧೀಸುತ್ತದೆ. ಈ ಬಿರುದುಗಳೆಲ್ಲವೂ ದೇವರ ಅನುಮತಿ ಇಲ್ಲದೇಯೂ ಮನುಷ್ಯರು ಕಲ್ಪಿಸಿಕೊಂಡಿದ್ದಾರೆ. ಜನರು ಈ ವಿಷಯಗಳನ್ನು

ಯಾಕೆ ಗ್ರಹಿಸುತ್ತಿಲ್ಲ? ದೇವರ ಚಿತ್ತಕ್ಕೆ ವಿರುದ್ಧವಾಗಿ ಯಾಕೆ ನಡೆದುಕೊಳ್ಳಬೇಕು. ಮನುಷ್ಯರು ದೇವರಿಗಿಂತಲೂ ಹೆಚ್ಚಿನ ಘನತೆ ಕೋರುವಲ್ಲಿ ಅವಿಧೇಯತೆ ತೋರಿಸುತ್ತಾ ದೇವರಿಗೆ ಅವಿಧೇಯರಾಗಿ ನಡೆದುಕೊಳ್ಳುತ್ತಿದ್ದಾರೆ.

ಕ್ರೈಸ್ತವ ಲೋಕ ಯಾಕೆ ವಿಭಜನೆಗೊಂಡಿದೆ? ಇದು ಒಂದು ಕಾರಣ. ಐಕ್ಯತೆಗೋಸ್ಕರ ಸಾಮಾನ್ಯ ಮತ ಬೋಧಕರು ಈ ಬಿರುದುಗಳನ್ನು ತ್ಯಜಿಸುವನೆಂದು ನೀನು ಅಂದುಕೊಳ್ಳುತ್ತಿದ್ದಿಯಾ? ಅನೇಕರು ಹಾಗೆ ಮಾಡುವುದಿಲ್ಲ. ಅವರಿಗಿರುವ ಗರ್ವ ಬಹಳ ಹೆಚ್ಚು, ತಮ್ಮನ್ನು ತಾವೇ ಹೆಚ್ಚಾಗಿ ಪ್ರೀತಿಕೊಳ್ಳುತ್ತಿದ್ದಾರೆ. ಇದನ್ನು ಓದುತ್ತಿರುವಾಗ ಪ್ರತಿ ಮತನಾಯಕನು ಅವನು ಧರಿಸಿಕೊಂಡ ಬಿರುದುಗಳನ್ನು ಬೇಗನೇ ಬಿಟ್ಟು ಬಿಡಬೇಕೆಂಬ ಉದ್ದೇಶದಿಂದ ಇದನ್ನು ಬರೆಯುತ್ತಿಲ್ಲ. ಅವರು ಹಾಗೆ ಮಾಡುವುದಿಲ್ಲವೆಂದು ತಿಳಿದಿದೆ. ಆದರೆ ಸತ್ಯವನ್ನು ತಿಳಿಯದವರಿಗೆ ತೋರಿಸುವುದಕ್ಕೆ ಬರೆಯಲ್ಪಟ್ಟಿದೆ. ಈ ಸಂಗತಿಗಳನ್ನು ಆಲೋಚಿಸದೇ ನಿನ್ನ ಜೀವಿತವನ್ನು ನೀನು ಕಳೆಯುತ್ತಾ ಇದ್ದಿ. ವಾಕ್ಯದ ಪ್ರಕಾರ ಇಲ್ಲದ ಈ ಬಿರುದುಗಳನ್ನು ಉಪಯೋಗಿಸುತ್ತಾ ಮೊದಲಿನಿಂದ ಕೊನೆಯುವರೆಗೂ ಕುರುಡರ ಹಿಂದೆ ಕುರುಡುತನದಿಂದ ಹಿಂಬಾಲಿಸುತ್ತಿರಬಹುದು. ಆದ್ದರಿಂದ ನೀನು ಸಾಮಾನ್ಯ ಸದಸ್ಯನಂತೆಯು (Laity), ಅವರು ಯಾಜಕರಂತೆಯೂ (Clergy) ಎಂದು ಅಂದುಕೊಳ್ಳಬಹುದು. ನೀನು ಮಾಡುತ್ತಿರುವುದನ್ನು ಕುರಿತು ಎಚ್ಚರಿಕೆಯಿಂದ ಇರು. ನನ್ನ ಮಾತುಗಳನ್ನು ನೀನು ನಂಬುವ ಅವಶ್ಯಕತೆ ಇಲ್ಲ. ಆದರೆ ಬೈಬಲ್‌ನಲ್ಲಿ ಪರೀಕ್ಷಿಸು, ಅದರಲ್ಲಿ ರೆವರೆಂಡ್ ಪೇತ್ರ ಎಂದು ಆಗಲಿ ಡಾಕ್ಟರ್ ಪೌಲನೆಂದಾಗಲಿ, ಪಾಸ್ಟರ್ ಯೋಹಾನ ಎಂದಾಗಲಿ ಬರೆಯಲ್ಪಟ್ಟಿದೆಯೋ ಏನೋ ಕಂಡುಕೊಳ್ಳು. ಸುವಾರ್ತೆ ಬೋಧಿಸುವವನಾದರು ಫಾದರ್ ಎಂದಾಗಲಿ, ಪೋಪ್ ಎಂದಾಗಲಿ ಕರೆಯಲ್ಪಟ್ಟಿದೆಯೆನೋ ನೋಡು. (Clergy ಮತ್ತು Laity) ಎಂಬ ಪದಗಳು ವಾಕ್ಯದಲ್ಲಿ ಇವೆಯೋ ಗಮನಿಸು. ಹಾಗೆ ನೋಡಿದರೆ ನೀನು ಸತ್ಯವನ್ನು ಖಂಡಿತವಾಗಿ ಕಂಡುಕೊಳ್ಳುವಿ.

ಆದರೆ ಅಂದು ಕ್ರೈಸ್ತರ ನಾಯಕರು ಏನೆಂದು ಕರೆಯಲ್ಪಟ್ಟರು? ಬೋಧಕರು, ಉಪದೇಶಕರು, ಸುವಾರ್ತಿಕರು, ಹಿರಿಯರು, ಸಹೋದರರು, ಎಂದು ಕರೆಯಲ್ಪಟ್ಟರು. ಕರ್ತನ ಸಭೆಯಾದರೆ ಕ್ರಿಸ್ತನ ಹೆಸರನ್ನು ಧರಿಸಿಕೊಂಡಿದೆ. ವಾಕ್ಯದ ಪ್ರಕಾರ ನಡೆದುಕೊಂಡಾಗ ಅದಕ್ಕೆ ವಿರುದ್ಧವಾಗಿ ಇರಬೇಕಾದ ಅವಶ್ಯಕವಿಲ್ಲ. ಸತ್ಯವನ್ನು ಅವಲಂಭಿಸಿದಾಗ ಅಸತ್ಯವನ್ನು ಅನುಸರಿಸಬೇಡ. ಕರ್ತನು ಕೊಟ್ಟ ಹೆಸರುಗಳನ್ನು ಬಿರುದುಗಳನ್ನು ಮಾತ್ರವೇ ಧರಿಸಿಕೊಳ್ಳಿ ಆಗ ಮಾತ್ರವೇ ನಾವು ಆತನಿಗೆ ಯೋಗ್ಯರಾಗಿರುವೆವು.

## ೩೪. ಸ್ವತಂತ್ರ ಬೋಧಕರು ಮತ್ತು ಸಭೆಗಳು (Independent Preachers and Churches)

ಸ್ವತಂತ್ರ ಬೋಧಕರು, ಸಭೆಗಳು ಅನೇಕವಿವೆ. ಇದರಲ್ಲಿ ಅನೇಕರು ಮತಶಾಖೆ (ಡಿನಾಮಿನೇಷನ್)ಗಳವರು. ಉಳಿದವರೆಲ್ಲರು ಸ್ವತಂತ್ರರೆಂದು ಹೇಳಿಕೊಳ್ಳುತ್ತಾರೆ. ಇದರ ಪ್ರಕಾರ ಇವರ ಅಭಿಪ್ರಾಯ ವೇನು? ನಾವು ಯಾವ ಮತಶಾಖೆಗೂ ಸಂಬಂಧಿಸಿದವರಲ್ಲ ಎಂಬುದು ಅವರ ಅಭಿಪ್ರಾಯ. ಬಹುಃಶ ಮೊದಲು ಸಂಬಂಧಪಟ್ಟಿರುವವರಾಗಿರಬಹುದು. ಆದರೆ ಕೆಲವು ಕಾರಣಗಳಿಂದಾಗಿ ಅವರಿಂದ ಬೇರೆಯಾಗಿ ಹೋಗಿದ್ದಾರೆ.

ಅನೇಕ ಸಾರಿ ಡಿನಾಮಿನೇಷನ್‌ಗಳಲ್ಲಿ ಸಿದ್ಧಾಂತ ರೀತಿಯಾದ ಭಿನ್ನಾಭಿಪ್ರಾಯಗಳು ಬರುತ್ತವೆ. ಅಥವಾ ವ್ಯಕ್ತಿಗತವಾಗಿ ಮನಸ್ತಾಪಗಳು ಅಥವಾ ತಪ್ಪುಗಳು ಏಳುವವು, ಅದರಲ್ಲಿರು ಕೆಲವು ವ್ಯಕ್ತಿಗಳು ಮತ್ತೊಂದು ಹೊಸ ಕೆಲಸವನ್ನು ಪ್ರಾರಂಭಿಸುವುದಕ್ಕೆ ಅದರಿಂದ ಬಿಟ್ಟು ಹೋಗಿರಬಹುದು. ಕೆಲವು ಸಾರಿ ಮತಶಾಖೆಗಳ ಬೋಧನೆಗಳಿಂದ, ಆಚಾರಗಳಿಂದ ದೂರವಾಗಿರಲು ಸ್ವತಂತ್ರವಾಗುತ್ತಾರೆ. ನಂತರ ಯಾವ ಗುಂಪಿಗೂ ಸೇರದೇ ಅವರು ಸಂಗ್ರಹಿಸಿದ ಚಂದಾ ಹಣ (ಕಾಣಿಕೆ) ಯಾರಿಗೂ ಲೆಕ್ಕ ಒಪ್ಪಿಸಬೇಕಾದ ಅವಶ್ಯಕತೆ ಇಲ್ಲದೆ ಇರುವ ನಿಮಿತ್ತವಾಗಿ ಸ್ವತಂತ್ರವಾಗಿ ಕೆಲಸವನ್ನ ಪ್ರಾರಂಭಿಸಿ ಅದನ್ನು ನಡೆಸಿ ನಿಯಂತ್ರಣದಲ್ಲಿಟ್ಟುಕೊಂಡು ಅದರ ಮೂಲಕ ತಮ್ಮ ಅಧಿಕಾರವನ್ನು ನಡೆಸುವರು.

ಮುಖ್ಯವಾಗಿ ಭಾರತದಲ್ಲಿ ಸ್ವತಂತ್ರ ಬೋಧಕರು, ಸಭೆಗಳು ಅನೇಕವಿವೆ. ಪ್ರತಿಯೊಬ್ಬನು ಸಂಪೂರ್ಣ ಸುವಾರ್ತಿಕನಾಗಿರಬೇಕೆಂದು ಆಶಿಸುತ್ತಾನೆ. ಪ್ರತಿ ಸುವಾರ್ತಿಕನು ತನ್ನ ಸ್ವಂತ ಗುಂಪನ್ನು ಏರ್ಪಡಿಸಿಕೊಳ್ಳುತ್ತಾನೆ. ಅವರು ಇತರ ಸುವಾರ್ತಿಕರೊಂದಿಗೆ ಸೇರಿ ಕೆಲಸ ಮಾಡುವುದಿಲ್ಲ. ಈ ಪರಿಸ್ಥಿತಿ ಕೇವಲ ಕ್ರೈಸ್ತತ್ವದಲ್ಲಿ ಮಾತ್ರವಲ್ಲ. ಎಲ್ಲಾ ರೀತಿಯ ಮತಗಳಲ್ಲಿ ಇದು ಇದೆ. ಗುರುಗಳೆಂದು, ಸ್ವಾಮಿಗಳೆಂದು ಹೇಳಿಕೊಳ್ಳುವವರ ವಿಷಯವನ್ನು ಆಲೋಚಿಸು. ಬಾಬಗಳೆಂದು ಅವತರಿಸಿದವರ ಬಗ್ಗೆ ಆಲೋಚಿಸು ಪ್ರತಿಯೊಬ್ಬನು ತನ್ನ ಹಿಂಬಾಲಕರನ್ನು ನಡೆಸುವುದಕ್ಕೆ ಪ್ರಯತ್ನಿಸುವನು. ಮನುಷ್ಯನು ಬೇಗನೆ ಸುಲಭವಾಗಿ ಮೋಸ ಹೋಗುತ್ತಾನೆ. ನಿಜಕ್ಕೂ ಮೋಸ ಹೋಗಬೇಕು ಎಂಬ ಆಶೆ ಇದೆ ಎಂಬ ರೀತಿಯಲ್ಲಿ ಮೋಸ ಹೋಗುವರು.

ಬಹುಃಶ ಇದು ನಿನಗೆ ಆಶ್ಚರ್ಯ ಹುಟ್ಟಿಸಬಹುದು. ಬೈಬಲ್‌ನಲ್ಲಿ ಸ್ವತಂತ್ರ ಸಭೆಗಳನ್ನು ಕುರಿತು, ಬೋಧಕರನ್ನು ಕುರಿತು ಕಾಣಿಸುವುದಿಲ್ಲವೆಂದು ನಿನಗೆ ಗೊತ್ತಾ? ಮತಶಾಖೆಯನ್ನು ಕುರಿತು ದೇವರ ವಾಕ್ಯದಲ್ಲಿ ಇಲ್ಲವೇ ಇಲ್ಲ. ಬೇದಗಳನ್ನು ಹುಟ್ಟಿಸುವವರನ್ನು ಕುರಿತು ಅದರಲ್ಲಿ ಓದುತ್ತೇವೆ. ಅಂತಹವರು ಯೇಸು ಕ್ರಿಸ್ತನನ್ನು ಕರ್ತನೆಂದು ಸೇವಿಸುವವರಲ್ಲ. ಆದ್ದರಿಂದ ಅವರನ್ನು ಗುರುತು ಹಿಡಿದು ಅವರನ್ನು ಬಿಟ್ಟು ತೊಲಗಿ ಹೋಗಿರೆಂದು ಬೈಬಲ್ ಬೋಧಿಸುತ್ತದೆ (ರೋಮಾ 16:17). ಸುಳ್ಳು ಬೋಧಕರು,

ಸುಳ್ಳು ಪ್ರವಾದಿಗಳು ದ್ರವ್ಯಾಶೆಯುಳ್ಳವರನ್ನು ಕುರಿತು ಬೈಬಲ್‌ನಲ್ಲಿ ಓದುತ್ತೇವೆ (2ಪೇತ್ರ 2:1; 1ಯೋಹಾನ 4:1; ಯೋಹಾನ 10:12–13).

ಪೌಲನು, ಪೇತ್ರನು ಮುಂತಾದ ಸುವಾರ್ತಿಕರು, ಬೋಧಕರು ತಾವು ಸ್ವತಂತ್ರರೆಂದು ಎಂದಿಗೂ ಎಲ್ಲಿಯೂ ಹೇಳಿಕೊಂಡಿಲ್ಲ. ಅವರು ಒಬ್ಬರನ್ನೊಬ್ಬರು ಎದುರಿಸಲಿಲ್ಲ. ಒಬ್ಬರಿಗೆ ವಿರುದ್ಧವಾಗಿ ಮತ್ತೊಬ್ಬರು ಮಾಡಲಿಲ್ಲ. ಅವರಲ್ಲಿ ಪೈಪೋಟಿ ಇರಲಿಲ್ಲ. ಆದರೆ ಅವರು ಒಂದಾಗಿ ಸೇರಿ ಕೆಲಸ ಮಾಡಿದರು, ಆನಂದಿಸಿದರು, ಶ್ರಮೆಗಳನ್ನು ಅನುಭವಿಸಿದರು (ಅ.ಕೃ.2:8; 1ಕೊರಿಂಥ 12:26).

ಪೇತ್ರನಿಗೆ ಒಂದು ಸಭೆ, ಪೌಲನಿಗೆ ಒಂದು ಸಭೆ, ಯೋಹಾನನಿಗೆ ಇನ್ನೊಂದು ಸಭೆ, ಯಾಕೋಬನಿಗೆ ಮತ್ತೊಂದು ಸಭೆ ಇರುವ ಹಾಗೆ ಬೈಬಲ್‌ನಲ್ಲಿ ಕಾಣಿಸಿವುದಿಲ್ಲ. ಅಪೊಸ್ತಲರಲ್ಲಿ ಯಾರೂ ಸಭೆಯು ತಮ್ಮದೆಂದು ಹೇಳಿಕೊಂಡಿಲ್ಲ. ನಾವು ಕರ್ತನ ಸಭೆಯನ್ನು ಕುರಿತು ಓದಬಹುದು ಅಷ್ಟೇ (ಮತ್ತಾಯ 16:18; ಎಫೆಸ 5:23).

ವಾಕ್ಯವನ್ನು ತೆರೆದು ಓದಿದಾಗ ಒಂದೇ ಒಂದು ಸಭೆ ಇದೆ ಎಂದು ನೀನು ಗಮನಿಸುವಿ (ಎಫೆಸ 4:4; ಕೊಲೊಸ್ಸೆ 1:18). ಅದು ಕ್ರಿಸ್ತನ ಸಭೆ, ಅದರಲ್ಲಿ ಅನೇಕ ಸ್ಥಾನಿಕ ಸಭೆಗಳಿವೆ. ಪ್ರತಿ ಸ್ಥಾನಿಕ ಸಭೆಯಲ್ಲಿ ನೂರಾರು ಸದಸ್ಯರಿದ್ದರು. ಪ್ರತಿ ಸ್ಥಾನಿಕ ಸಭೆಯು ಅದನ್ನು ನಡೆಸುವುದರಲ್ಲಿ ಅದು ತನ್ನ ಸ್ವತಂತ್ರತೆಯನ್ನು ಪಡೆದುಕೊಂಡಿದೆ. ಆ ಸಭೆಗಳು ಒಂದಕ್ಕೊಂದು ವ್ಯತಿರೇಕವಾಗಿ ಕೆಲಸ ಮಾಡುವಂತವುಗಳಲ್ಲ. ಆದರೆ ಅವು ಒಂದಕ್ಕೊಂದು ಸಹವಾಸವನ್ನು ಹೊಂದಿವೆ. ಕರ್ತನ ಕೆಲಸ ಮುಂದೆ ಸಾಗಿಸುವುದಕ್ಕಾಗಿ ಅವು ಕೆಲಸ ಮಾಡುತ್ತವೆ.

ಒಂದು ಸಭೆಯಾಗಲಿ, ಸದಸ್ಯನಿಗಾಗಲಿ, ಸ್ವತಂತ್ರವಾಗುವುದರಲ್ಲಿ ನಿನ್ನನ್ನು ನೀನು ಕರ್ತನಿಂದ, ಆತನ ಸಭೆಯಿಂದ ಸ್ವತಂತ್ರವನ್ನು ಕೋರಿದಂತಾಗುತ್ತದೆ. ಆದ್ದರಿಂದ ದೇವರೊಂದಿಗೆ ಪೈಪೋಟಿಗೆ ಬಂದವನಂತೆ ನೀನಿರುವಿ. ಇದರ ಪ್ರಕಾರ ನೀನು ಆತನೊಂದಿಗೆ ಇರುವುದಕ್ಕಿಂತಲೂ, ಆತನಿಗೆ ವಿರುದ್ಧವಾಗಿ ಇರುವಿ. ಆತನಿಗಾಗಿ ಕೆಲಸ ಮಾಡುವುದಕ್ಕಿಂತಲೂ ಆತನನ್ನು ಎದುರಿಸಿದವನಂತಾಗುವಿ (ಮತ್ತಾಯ 12:30). ನಿಮಗೆ ಬೇಕಾದದ್ದು ಇದೇನಾ? ನಿನ್ನ ಜೀವನೋಪಾದಿ ಇದೆನಾ? ನೀನು ಮಾಡುವ ಕೆಲಸವನ್ನು ದೀರ್ಘವಾಗಿ ಆಲೋಚಿಸು, ಅವಶ್ಯವಿದ್ದಲ್ಲಿ ಬದಲಾವಣೆ ಮಾಡುವುದು ಅವಶ್ಯಕ.

ನೀನು ಸ್ವತಂತ್ರವಾಗಿ ಕೆಲಸ ಮಾಡುವುದು ದೇವರಿಗೆ ಇಷ್ಟವಿಲ್ಲ. ಆದ್ದರಿಂದ ನೀನು ಆತನಿಗೆ ಒಳಗಾಗಿ ಕ್ರೈಸ್ತನಾಗಬೇಕೆಂದು ಆತನು ಆಶಿಸುತ್ತಿದ್ದಾನೆ. ಕ್ರೈಸ್ತರು ಹೇಗೆ ಸ್ವತಂತ್ರರು ಅಲ್ಲವೋ, ಹಾಗೆಯೇ ಸ್ವತಂತ್ರರು ಕ್ರೈಸ್ತರಾಗುವುದಿಲ್ಲ. ನೀನು ಮತಶಾಖೆಗೆ ವಿರುದ್ಧನಾಗಿರುವುದಾದರೆ ಮತ್ತೊಂದು ಶಾಖೆಯನ್ನು ಪ್ರಾರಂಭಿಸಬೇಡ. ಆದರೆ ಕರ್ತನ ಸಭೆಯ ಸದಸ್ಯನಾಗು. ನೀನು ಬೋಧಿಸುವುದಕ್ಕೆ ಆಶಿಸಿದರೆ ಬೋಧಿಸು ಆದರೆ ಸತ್ಯವನ್ನೇ

ಬೋಧಿಸು. (2ತಿಮೋತಿ 4:2).

ನಿನಗೆ ನೀನೆ ನಡೆಸಿಕೊಳ್ಳುವುದಕ್ಕೆ, ಒಂದು ಕ್ರೈಸ್ತ ಸಂಸ್ಥೆಯನ್ನು ಸ್ಥಾಪಿಸುವುದಕ್ಕೆ ಅದರಲ್ಲಿ ಸದಸ್ಯರನ್ನು ಸೇರಿಸುವುದಕ್ಕೆ ನಿನಗೆ ಯಾರು ಅಧಿಕಾರ ಕೊಟ್ಟಿಲ್ಲ. ನಿಮ್ಮ ಸಂಸ್ಥೆ ಸ್ವತಂತ್ರವಾಗಿರಬಹುದು, ಆದರೆ ಅದು ಅಷ್ಟೇ. ಅದರ ಮೂಲಕ ನೀನು ಮತ್ತು ನಿನ್ನನ್ನು ಹಿಂಬಾಲಿಸುವವರು ನಾಶವಾಗುವರು.

ನೀನು ಬೈಬಲ್ ಕಡೆಗೆ ತಿರುಗು. ಪವಿತ್ರವಾದ ಹೊಸ ಒಡಂಬಡಿಕೆ ಕ್ರೈಸ್ತತ್ವವನ್ನು ಕೈಗೊಳ್ಳು. ದೇವರಲ್ಲಿ ನಂಬಿಕೆ ಇಟ್ಟು ಪಾಪಗಳ ವಿಷಯದಲ್ಲಿ ನಿಜವಾದ ಮಾನಸಾಂತರ ಹೊಂದಿ ಕ್ರಿಸ್ತನನ್ನು ಒಪ್ಪಿಕೊಂಡು ಪಾಪ ಕ್ಷಮಾಪಣೆಯ ನಿಮಿತ್ತ ದೀಕ್ಷಾಸ್ನಾನ ಮಾಡಿಸಿಕೊಂಡು ಕರ್ತನಿಗೆ ಒಳಗಾಗು (ಮಾರ್ಕ16:15–16; ಅ.ಕೃ.2;38). ಆಗ ಕರ್ತನು ನಿನ್ನನ್ನು ರಕ್ಷಿಸಿ ತನ್ನ ಸಭೆಯೊಳಗೆ ಸೇರಿಸಿಕೊಳ್ಳುವನು (ಅ.ಕೃ.2:47; 20:28). ಆಗ ನೀನು ಮತಶಾಖೆಗೆ ಸೇರಿದವನಲ್ಲ, ಅಂದರೆ ಕ್ರೈಸ್ತವನಾಗುವಿ (1ಪೇತ್ರ 4:16). ಕ್ರೈಸ್ತವನಾಗಿ ದೇವರ ವಾಕ್ಯವನ್ನು ಬೋಧಿಸಿ, ಉಪದೇಶಿಸಿ ಅನೇಕರನ್ನು ನಿನ್ನಂತೆ ಕ್ರಿಸ್ತನ ಬಳಿಗೆ ನಡೆಸು. ಆಗ ಮಾತ್ರವೇ ನೀನು ನಿಜವಾದ ಕ್ರೈಸ್ತವನಾಗುವಿ.

## ೩೫. ಕ್ರಿಸ್ತನ ಎರಡನೇ ಬರೋಣ.

## (The Second coming of Christ)

ಕ್ರಿಸ್ತನು ಒಂದು ಸಾರಿ ಬಂದನು, ಆದರೆ ಆತನು ಮತ್ತೆ ಬರುವವನಾಗಿದ್ದಾನೆ. ಆತನು ಮೊದಲು ಬಂದನು. ಭವಿಷ್ಯತ್ತಿನಲ್ಲಿ ಆತನು ಮತ್ತೊಂದು ಸಾರಿ ಬರಲಿದ್ದಾನೆ. ಮೊದಲ ಸಾರಿ ಆತನು ಶರೀರದಾರಿಯಾಗಿ ಬಂದನು. ಎರಡನೇ ಸಾರಿ ಮಹಿಮೆಯುಳ್ಳ ಕರ್ತನಾಗಿ ಬರುವನು. ಮೊದಲ ಸಾರಿ ಮಾನವ ರಕ್ಷಕನಾಗಿ ಬಂದನು. ಈಗ ಎರಡನೇ ಸಾರಿ ಮಾನವರಿಗೆ ತೀರ್ಪು ಮಾಡಲು ಬರುವನು. ಆತನು ಹೇಗೆ ತಂದೆಯ ಬಳಿಗೆ ಹೋದನೊ ಹಾಗೆಯೇ ತಿರುಗಿ ತಂದೆಯ ಬಳಿಯಿಂದ ಬರುವನು.

ಕರ್ತನು ತನ್ನ ಶಿಷ್ಯರ ಬಳಿಯಿಂದ ಹೋಗುವುದಕ್ಕಿಂತ ಮೊದಲು ಅವರಿಗೆ ಹೀಗೆ ವಾಗ್ದಾನ ಮಾಡಿದನು. "ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ಧಮಾಡಿದ ಮೇಲೆ ತಿರುಗಿ ಬಂದು ನಿಮ್ಮನ್ನು ಕರಕೊಂಡು ಬಂದು ನನ್ನ ಬಳಿಗೆ ಸೇರಿಸಿಕೊಳ್ಳುವೆನು" (ಯೋಹಾನ 14:3). ಆತನು "ಈ ಮಾತುಗಳನ್ನು ಹೇಳಿದ ಬಳಿಕ ಅವರು ನೋಡುತ್ತಾ ಇದ್ದ ಹಾಗೆ ಆತನು ಏರಿಸಲ್ಪಟ್ಟನು; ಮೋಡವು ಆತನನ್ನು ಕವಿದುಕೊಂಡದ್ದರಿಂದ ಅವರ ಕಣ್ಣಿಗೆ ಮರೆಯಾದನು. ಆತನು ಹೋಗುತ್ತಿರುವಾಗ ಅವರು ಆಕಾಶದ ಕಡೆಗೆ ದೃಷ್ಟಿಸಿ ನೋಡುತ್ತಾ ಇರಲಾಗಿ ಶುಭ್ರ ವಸ್ತ್ರಧಾರಿಗಳಾದ ಇಬ್ಬರು ಪುರಷರು ಫಕ್ಕನೆ ಅವರ ಹತ್ತರ ನಿಂತುಕೊಂಡು– ಗಲಿಲಾಯದವರೇ, ನೀವು ಯಾಕೆ ಆಕಾಶದ ಕಡೆಗೆ ನೋಡುತ್ತಾ ನಿಂತಿದ್ದೀರಿ? ನಿಮ್ಮ ಬಳಿಯಿಂದ ಆಕಾಶದೊಳಕ್ಕೆ ಸೇರಿಸಲ್ಪಟ್ಟಿರುವ ಈ ಯೇಸು ಯಾವ ರೀತಿಯಲ್ಲಿ ಆಕಾಶದೊಳಕ್ಕೆ ಹೋಗಿರುವುದನ್ನು ನೀವು ಕಂಡಿರೋ ಅದೇ ರೀತಿಯಲ್ಲಿ ಬರುವನು ಎಂದು ಹೇಳಿದರು" (ಅ.ಕೃ.1:9–11).

ಕ್ರಿಸ್ತನು ತಿರುಗಿ ಬರುವನೆಂದು, ಬಂದು ತನ್ನ ಶಿಷ್ಯರೊಂದಿಗೆ ಯೆರೂಸಲೇಮಿನಲ್ಲಿದ್ದುಕೊಂಡು ಸಾವಿರ ವರ್ಷ ಪರಿಪಾಲನೆ ಮಾಡುವನೆಂದು ಹೇಳುವವರಿದ್ದಾರೆ. ಆದರೆ ಬೈಬಲ್ ಆ ರೀತಿ ಬೋಧಿಸುತ್ತಿಲ್ಲ. ಯೇಸು ಪರಲೋಕಕ್ಕೆ ಯಾವ ರೀತಿಯಲ್ಲಿ ಹೋದನೋ ಅದೇ ರೀತಿಯಲ್ಲಿ ಆತನು ಬರುವನು ಆದರೆ ಕ್ರಿಸ್ತನು ತನ್ನ ಪಾದಗಳನ್ನು ಭೂಮಿಯ ಮೇಲೆ ಇಡುವನೆಂದು ಬೈಬಲ್‌ನಲ್ಲಿ ಎಲ್ಲಿಯೂ ಬರೆಯಲ್ಪಟ್ಟಿಲ್ಲ. ಆದರೆ ಕ್ರಿಸ್ತನು ಮೇಘಾರೂಢನಾಗಿ ಬರುವನೆಂದು, ಕರ್ತನನ್ನು ಎದುರುಗೊಳ್ಳಲು ನಾವು ಮಧ್ಯಾಕಾಶಕ್ಕೆ ಮೇಘಗಳ ಮೇಲೆ ಹೋಗುವೆವೆಂದು ವಾಕ್ಯವು ಹೇಳುತ್ತದೆ. 1ಥೆಸಲೋನಿಕ 4:13–18ವಚನವನ್ನು ಈಗ ಓದು " ಸಹೋದರರೇ, ನಿದ್ರೆಹೋಗುವವರ ಗತಿ ಏನೆಂದು ನೀವು ತಿಳಿಯದೆ ಇದ್ದು ನಿರೀಕ್ಷೆ ಇಲ್ಲದವರಾದ ಇತರರಂತೆ ದುಃಖಿಸುವುದು ನಮ್ಮ ಮನಸ್ಸಿಗೆ ಒಪ್ಪುವುದಿಲ್ಲ. ಯೇಸು ಸತ್ತು ಜೀವಿತನಾಗಿ ಎದ್ದನೆಂದು ನಾವು ನಂಬಿದ ಮೇಲೆ ಅದರಂತೆ ಯೇಸುವಿನಲ್ಲಿದ್ದುಕೊಂಡು ನಿದ್ರೆಹೋಗುವವರನ್ನು ಸಹ ದೇವರು ಆತನೊಡನೆ ಕರೆದುಕೊಂಡು ಬರುವನೆಂದು

ನಂಬಬೇಕಲ್ಲವೇ. ನಾವು ಕರ್ತನ ಮಾತಿನ ಆಧಾರದಿಂದ ನಿಮಗೆ ಹೇಳುವುದೇನೆಂದರೆ ಕರ್ತನು ಪ್ರತ್ಯಕ್ಷನಾಗುವವರೆಗೂ ಜೀವದಿಂದುಳಿದಿರುವ ನಾವು ನಿದ್ರೆ ಹೋದವರಿಗಿಂತ ಮುಂದಾಗುವುದೇ ಇಲ್ಲ. ಕರ್ತನು ತಾನೇ ಆಜ್ಞಾಘೋಷದೊಡನೆ ಪ್ರಧಾನ ದೂತನ ಶಬ್ದದೊಡನೆಯೂ ದೇವರ ತುತೂರಿ ಧ್ವನಿಯೊಡನೆಯೂ ಆಕಾಶದಿಂದ ಇಳಿದು ಬರುವನು; ಆಗ ಕ್ರಿಸ್ತನಲ್ಲಿರುವ ಸತ್ತವರು ಮೊದಲು ಎದ್ದು ಬರುವರು. ಆ ಮೇಲೆ ಜೀವದಿಂದುಳಿದಿರುವ ನಾವು ಅಂತರಿಕ್ಷದಲ್ಲಿ ಕರ್ತನನ್ನು ಎದುರುಗೊಳ್ಳುವುದಕ್ಕಾಗಿ ಅವರ ಸಂಗಡಲೇ ಮೇಘವಾಹನರಾಗಿ ಫಕ್ಕನೇ ಒಯ್ಯಲ್ಪಡುವೆವು; ಹೀಗಾಗಿ ನಾವು ಸದಾ ಕಾಲವೂ ಕರ್ತನ ಜೊತೆಯಲ್ಲಿರುವೆವು. ಆದಕಾರಣ ಈ ಮಾತುಗಳಿಂದ ಒಬ್ಬರನ್ನೊಬ್ಬರು ಸಂತೈಸಿರಿ".

ಕ್ರಿಸ್ತನು ತಿರುಗಿ ಯಾವಾಗ ಬರುವನು? ಆತನ ಎರಡನೇ ಬರೋಣವನ್ನು ಕುರಿತು ಅನೇಕರು ಭವಿಷ್ಯವನ್ನು ಹೇಳಿದರು. ಆತನು ಬರುವಿಕೆಯ ಸಮಯವನ್ನು ಬೈಬಲ್ ದೃಷ್ಟಾಂತ ರೂಪದಲ್ಲಿ ಪ್ರಕಟಿಸಲ್ಪಟ್ಟಿದೆ ಎಂದು, ಅದರ ಗೂಢ ರಹಸ್ಯಗಳನ್ನು ಅರ್ಥ ಮಾಡಿಕೊಂಡೆವೆಂದು, ಆದ್ದರಿಂದಲೇ ಕರ್ತನ ಬರುವಿಕೆಯ ಸಮಯ ಯಾವಾಗ ಎಂದು ಖಚಿತವಾಗಿ ಹೇಳುವೆವೆಂದು ಕೆಲವರು ಭಾವಿಸುತ್ತಾರೆ. ಅಂತಹ ಜನರು ತಮ್ಮನ್ನು ತಾವೆ ಪರಿಹಾಸ್ಯ ಮಾಡಿಕೊಂಡರು ಇಷ್ಟೇಲ್ಲಾ ಆದರೂ ಆತನು ಇದೇ ಸಮಯದಲ್ಲಿ ಬರುವನೆಂದು ಹೇಳುವವರು ಇನ್ನೂ ಇದ್ದಾರೆ. ಅವರು ಸಹ ವಂಚಕರೆಂದು ಗುರುತಿಸಲ್ಪಡುವರು. ಅಷ್ಟರೊಳಗೆ ಅವರು ಹೆಸರನ್ನು ಸಂಪಾದಿಸಿಕೊಳ್ಳುವರು. ಕೆಲವರು ಅದನ್ನು ನಂಬಿ ಮೋಸ ಹೋಗುವರು. ಇದು ವಿಷಾದಕರ. ಆದರೆ ಕರ್ತನ ಬರುವಿಕೆಯು ಯಾವಾಗ ಎಂದು ತಿಳಿದ ಮನುಷ್ಯನು ಈ ಭೂಮಿಯ ಮೇಲೆ ಇಲ್ಲ. ನಾವು ಯಾಕೆ ಹಾಗೆ ಹೇಳುವೆವು? ಕರ್ತನು ಹೀಗೆ ಹೇಳಿದ್ದಾನೆ "ಇದಲ್ಲದೆ ಆದಿನ ವಿಷಯವೂ ಆ ಗಳಿಗೆಯ ವಿಷಯವೂ ನನ್ನ ತಂದೆಯೊಬ್ಬನಿಗೆ ತಿಳಿಯುವುದೇ ಹೊರತು ಮತ್ತಾರಿಗೂ ತಿಳಿಯದು; ಪರಲೋಕದಲ್ಲಿರುವ ದೂತರಿಗೂ ತಿಳಿಯದು, ಮಗನಿಗೂ ತಿಳಿಯದು"(ಮತ್ತಾಯ 24:36). ದೂತರಿಗಾಗಲಿ ಕ್ರಿಸ್ತನಿಗಾಗಲಿ ತಿಳಿದಿಲ್ಲ, ತಂದೆಗೆ ಮಾತ್ರ ತಿಳಿದಿರುವುದರಿಂದ ನಾನಾಗಲಿ ಬೇರೊಬ್ಬನಾಗಲಿ ಕರ್ತನ ಬರುವಿಕೆಯು ಯಾವಾಗ ಬರುವುದೋ ಹೇಗೆ ಹೇಳಬಹುದು? ಹೇಳಲಾರೆವು.

ಕರ್ತನು ಕಳ್ಳನು ಬರುವಂತೆ ಬರುವನೆಂದು ವಾಕ್ಯವು ಹೇಳುತ್ತದೆ. ಅಂದರೆ ಆತನು ಕಳ್ಳನೆಂದು ಅಲ್ಲ ಆದರೆ ಕಳ್ಳನು ಬರುವಂತೆ ಬರುವನು. ಅಂದರೆ ಆತನು ಊಹಿಸಲಾಗದ ಸಮಯದಲ್ಲಿ ಬರುವನು " ರಾತ್ರಿ ಕಾಲದಲ್ಲಿ ಕಳ್ಳನು ಹೇಗೆಬರುತ್ತಾನೊ ಹಾಗೆಯೇ ಕರ್ತನ ದಿನವು ಬರುವದೆಂದು ನೀವೆ ಚೆನ್ನಾಗಿ ತಿಳಿದಿದ್ದೀರಲ್ಲಾ. ಸಮಧಾನವಾಗಿಯೂ ನಿರ್ಭಯವಾಗಿಯೂ ಇರುತ್ತೇವೆಂದು ಜನರು ಹೇಳುತ್ತಿರುವಾಗಲೇ ಅವರ ಮೇಲೆ ನಾಶನವು ಗರ್ಭಿಣಿಗೆ ಪ್ರಸವವೇದನೆ ಬರುವ ಪ್ರಕಾರ ಬರುವದು; ಅವರು

ಹೇಗೂ ತಪ್ಪಿಸಿಕೊಳ್ಳಲಾರರು. ಆದರೆ ಸಹೋದರರೇ, ಆ ದಿನವು ಕಳ್ಳನಂತೆ ನಿಮ್ಮ ಮೇಲೆ ಬರತಕ್ಕದ್ದಲ್ಲ; ನೀವು ಕತ್ತಲೆಯಲ್ಲಿರುವವರಲ್ಲ" (1ಥೆಸಲೋನಿಕ 5:2–4).

ಕರ್ತನ ಎರಡನೇ ಬರುವಿಕೆಯನ್ನು ಕುರಿತು ನಮಗೆ ತಿಳಿದ ಸಂಗತಿಗಳು ಇನ್ನೂ ಕೆಲವು ಇವೆ. ಉದಾಹರಣೆಗೆ: ಎಲ್ಲರೂ ಆತನನ್ನು ನೋಡುವರು. "ಇಗೋ ಮೇಘಗಳೊಂದಿಗೆ ಬರುತ್ತಾನೆ; ಎಲ್ಲರ ಕಣ್ಣುಗಳು ಆತನನ್ನು ಕಾಣುವವು; ಆತನನ್ನು ಇರಿದವರು ಸಹ ಕಾಣುವರು; ಭೂಮಿಯಲ್ಲಿರುವ ಎಲ್ಲಾ ಕುಲದವರು ಆತನನ್ನು ನೋಡಿ ಎದೆ ಬಡುಕೊಳ್ಳುವರು. ಹೌದು, ಹಾಗೆಯೇ ಆಗುವುದು. ಆಮೇನ್."(ಪ್ರಕಟನೆ 1:7). ನಂತರ ಆಕಾಶವು, ಭೂಮಿಯೂ, ಅದರಲ್ಲಿರುವ ಸಮಸ್ತವೂ ಸುಟ್ಟುಹೋಗುವವು: "ಆದರೂ ಕರ್ತನ ದಿನವು ಕಳ್ಳನು ಬರುವಂತೆ ಬರುತ್ತದೆ. ಆ ದಿನದಲ್ಲಿ ಆಕಾಶ ಮಂಡಲವು ಮಹಾಘೋಷದಿಂದ ಇಲ್ಲದೇ ಹೋಗುವುದು, ಸೂರ್ಯ ಚಂದ್ರ ನಕ್ಷತ್ರಗಳು ಉರಿದು ಲಯವಾಗಿ ಹೋಗುವವು, ಭೂಮಿಯು ಅದರಲ್ಲಿರುವ ಕೆಲಸಗಳು ಸುಟ್ಟುಹೋಗುವವು" (2ಪೇತ್ರ 3:10). ಕರ್ತನು ಪ್ರತಿದಂಡನೆ ಮಾಡಲು ಬರುತ್ತಿದ್ದಾನೆ. "ಯಾವಾಗ ಕೊಡುವನೆಂದರೆ ಯೇಸು ಕರ್ತನು ತನ್ನ ಶಕ್ತಿಯನ್ನು ತೋರ್ಪಡಿಸುವ ದೇವದೂತರಿಂದ ಕೂಡಿದವನಾಗಿ ಉರಿಯುವ ಬೆಂಕಿಯಲ್ಲಿ ಆಕಾಶದಿಂದ ಪ್ರತ್ಯಕ್ಷನಾಗುವ ಕಾಲದಲ್ಲಿ ಅದನ್ನು ಕೊಡುವನು. ಆಗ ನಮ್ಮ ಕರ್ತನಾದ ಯೇಸು ದೇವರನ್ನರಿಯದವರಿಗೂ ತನ್ನ ಸುವಾರ್ತೆಗೆ ಒಳಪಡದವರಿಗೂ ಪ್ರತಿಕಾರವನ್ನು ಸಲ್ಲಿಸುವನು" (2ಥೆಸಲೋನಿಕ 1:7–9).

ಕರ್ತನು ಮತ್ತೆ ಬಂದಾಗ ನೀತಿವಂತರು, ಅನೀತಿವಂತರು ಪುನರುತ್ಥಾನರಾಗುವರು. (ಯೋಹಾನ 5:28–29). ಆತನು ತನ್ನ ವಧುವಿಗಾಗಿ ಅಥವಾ ಸಭೆಗಾಗಿ ಬರುತ್ತಿದ್ದಾನೆ. ಅದು ದೇವರ ರಾಜ್ಯವೆಂದು ಕೂಡ ಕರೆಯಲ್ಪಟ್ಟಿದೆ. ಆದರಿಂದ ಕರ್ತನ ದೂತರು ದುಷ್ಕೃತ್ಯಗಳನ್ನು ನಡೆಸುವವರನ್ನು ಅಗ್ನಿ ಗಂಧಕದೊಳಗೆ ಹಾಕುವರು (ಎಫೆಸ 5:27; ಮತ್ತಾಯ 13:41–43). ಕೊನೆಯದಾಗಿ ಕ್ರಿಸ್ತನು ಈ ಲೋಕಕ್ಕೆ ತೀರ್ಪು ಮಾಡುವುದಕ್ಕೆ ಬರುತ್ತಿದ್ದಾನೆ (ಮತ್ತಾಯ 25ನೇ ಅಧ್ಯಾಯ; ಅ.ಕೃ.17:31; 2ಕೊರಿಂಥ 5:10).

ಹೌದು ಕರ್ತನು ಖಂಡಿತವಾಗಿ ಬರುತ್ತಿದ್ದಾನೆ ಯಾವಾಗ ಎಂದು ನಮಗೆ ತಿಳಿಯದು. ಆದರೆ ಆತನು ಬರುತ್ತಿದ್ದಾನೆ. ನೀನು ಸಿದ್ಧವಾಗಿರುವೆಯಾ? ನೀನು ಸಿದ್ಧಪಡುವ ದಿನವು ಅದು ಈ ದಿನವೇ. ನಾಳೆ ತಡವಾಗುವುದು. ಮತ್ತಾಯ 24:36–39;

## "ಕ್ರಿಸ್ತನ ಸಭೆಗಳೆಲ್ಲಾ ನಿಮ್ಮನ್ನು ವಂದಿಸುತ್ತವೆ"

**ರೋಮಾ 16:16**